# THE BOOK WAS DRENCHED

UNIVERSAL
LIBRARY
OU_200343
UNIVERSAL
LIBRARY

**OSMANIA UNIVERSITY LIBRARY**

Call No. K83 R48R    Accession No K4843

Author [illegible]

Title [illegible] 1951

This book should be returned on or before the date last marked below.

# ರಾಜರ್ಷಿ

★

ಬರೆದವರು :

ಶ್ರೀ ರವೀಂದ್ರನಾಥ ಠಾಕೂರ್.

ಕನ್ನಡಿಸಿದವರು :

ಶ್ರೀಮತಿ ಎಸ್. ಅಂಬುಜಾಕ್ಷಿ.

★

ಪ್ರಕಾಶಕರು :

ಎನ್. ಎಸ್. ವಾಸನ್ ಅಂಡ್ ಕಂಪನಿ,

ಅವಿನ್ಯೂ ರೋಡ್, ಬೆಂಗಳೂರು-2.

ಮೊದಲ ಮುದ್ರಣ–೧೯೫೧

ಹಕ್ಕು ಕಾದಿಡಲಾಗಿದೆ.

Checked 1969

ಬೆಲೆ ರೂ. ೨—೮— ೦

# ಸೂಚನೆ

**ರಾಜರ್ಷಿ**ಯ ವಿಷಯವಾಗಿ ಅಷ್ಟಿಷ್ಟು ವಿವರ ತಿಳಿಸಭೇಕೆಂಬ ಬೇಡಿಕೆಗೆ ಒಳಗಾಗಿರುವೆ. ತಿಳಿಸಬೇಕಾದ್ದು ವಿಶೇಷವೇನೂ ಇಲ್ಲ. ಇದರ ವಿಷಯವಾಗಿ ಹೇಳಬೇಕಾದುದು ಇಷ್ಟೆ. ಇದು ನನಗೆ ಕನಸಿನಲ್ಲಿ ದೊರೆತ ಕಾದಂಬರಿ.

**ಬಾಲಕ**೧ ಪತ್ರಿಕೆಯ ಸಂಪಾದಿಕೆ೨ ಆ ಪತ್ರಿಕೆಯ ಪುಟಗಳಿಗೆ ತಿಂಗಳು ತಿಂಗಳು ಆಹಾರ ಒದಗಿಸುವ ಕೆಲಸದಲ್ಲಿ ನಿಯಮಿಸಿದ್ದರು. ಅದರ ಫಲವಾಗಿ ಅದಕ್ಕೆ ಪೂರ್ತಿ ಆಹಾರ ಒದಗಿಸುವವ ನಾನೊಬ್ಬನೆ ಆದೆ. ಒಂದಿಷ್ಟು ಬಿಡುವು ಸಿಕ್ಕಿದರಾಯಿತು, ಏನು ಬರೆಯುವುದು ಎಂದು ಮನಸ್ಸು ತಳಮಳಗುಟ್ಟುತಿತ್ತು.

**ರಾಜಾನಾರಾಯಣ ಬಾಬುಗಳು**೩ ದೇವಗಡದಲ್ಲಿದ್ದರು. ಅವರನ್ನು ನೋಡಲು ಹೊರಟೆ. ರಾತ್ರಿಗಾಡಿಯಲ್ಲಿನ ದೀಪ ವಿಶ್ರಾಂತಿಗೆ ಅಡ್ಡಿ ಮಾಡುವುದೆಂದು ಅದರ ತಳದ ಹೊದಿಕೆ ಎಳೆದೆ. ಆಂಗ್ಲೋ ಇಂಡಿಯನ್ ಸಹಯಾತ್ರಿಕನ ಮನಸ್ಸು ಅದರಿಂದ ಸಮಾಧಾನಗೊಳ್ಳಲಿಲ್ಲ. ಹೊದಿಕೆ ಸರಿಸಿಬಿಟ್ಟನು. ಎಚ್ಚರವಾಗಿರದೆ ತಪ್ಪದೆಂದು ಭಾವಿಸಿ ಒಂದು ಕಥೆಯ ವಸ್ತುವನ್ನು ಮನಸಿನಲ್ಲಿ ಮೂಡಿಸಿಕೊಳ್ಳಲು ಪ್ರಯತ್ನಿಸಿದೆ. ನಿದ್ರೆ ಕವಿಯಿತು. ಕನಸಿನಲ್ಲಿ ಒಂದು ಕಲ್ಲು ಕಟ್ಟಡದ ದೇವಾಲಯ ಕಂಡೆ. ಎಳೆಯ ಹುಡುಗಿಯನ್ನು ಕರೆದುಕೊಂಡು ತಂದೆ ಪೂಜೆ ಸಲ್ಲಿಸಲು ಬಂದಿರುವ. ಬಿಳಿಯ ಕಲ್ಲಿನ ಮೆಟ್ಟಿಲಮೇಲೆ ಬಲಿಯ ರಕ್ತದ ಕೋಡಿಕಟ್ಟಿ ನಿಂತಿದೆ. ಅವನ್ನು ಕಂಡು ಹುಡುಗಿಯ ಮುಖದಲ್ಲಿ ಅದೆಷ್ಟು ಭಯ, ಅದೆಷ್ಟು ನೋವು. " ಇದೇನು ರಕ್ತ ? ಇದೇನು ರಕ್ತ ? " ಎಂದು ಕರುಣ ಸ್ವರದಲ್ಲಿ

---

೧ ಬಾಲಕ ಪತ್ರಿಕೆ ವಂಗಾಬ್ದ ೧೨೯೨ ವೈಶಾಖ ಮಾಸದಲ್ಲಿ ಮೊದಲು ಪ್ರಕಟವಾದುದು.

೨ ಜ್ಞಾನದಾನಂದಿನೀ ದೇವಿ. ರವೀಂದ್ರರ ದೊಡ್ಡಣ್ಣ ಸತ್ಯೇಂದ್ರನಾಥ ಠಾಕೂರರ ಕುಟುಂಬ.

೩ ರಾಜನಾರಾಯಣ ಬಸು. (ಕ್ರಿ. ಶ. ೧೮೨೬–೧೮೯೯.)

ಬಾರಿಬಾರಿಗೆ ಅಪ್ಪನನ್ನು ಕೇಳಿದಳು. ಅಪ್ಪ ಹೇಗಾದರೂ ಇವಳ ಬಾಯಿ ಮುಚ್ಚಿಸಬೇಕೆಂದು ಪ್ರಯತ್ನಿಸಿದ. ಹುಡುಗಿ ಆಗ ತನ್ನ ಸೆರಗಿನಿಂದ ರಕ್ತ ಒರೆಸತೊಡಗಿದಳು. ಎಚ್ಚೆತ್ತೊಡನೆ ಕಥಾವಸ್ತು ದೊರೆಯಿತೆಂದು ಅಂದುಕೊಂಡೆ. ಈ ಕನಸಿನ ವಿವರವನ್ನು **ಜೀವನಸ್ಮೃತಿ** ೪ ಯಲ್ಲಿ ಹಿಂದೆಯೇ ವಿವರಿಸಿರುವೆ. ಪುನಃ ತಿಳಿಸಬೇಕಾಯಿತು. ವಾಸ್ತವದಲ್ಲಿ **ಪ್ರೇಮದ ಅಹಿಂಸಾಪೂಜೆಯೊಡನೆ ಹಿಂಸ್ರ ಶಕ್ತಿಪೂಜೆಯ ವಿರೋಧ** ಕಥಾವಸ್ತು. ಆದರೆ ಮಾಸಪತ್ರಿಕೆಯ ಹೊಟ್ಟೆಬಾಕ ಬಯಕೆ ಸಾಹಿತ್ಯದ ವಿಧಿಸಂಗತ ಹಸಿವಿನ ಅಳತೆಗೆ ಕಟ್ಟುಬೀಳಬಯಸದು. ವ್ಯಂಜನದ ಪದಸಂಖ್ಯೆ ಹೆಚ್ಚಿಸಬೇಕಾಯಿತು.

ವಸ್ತುತ ಕಾದಂಬರಿ ಹದಿನೈದನೆಯ ಅಧ್ಯಾಯಕ್ಕೆ ಮುಗಿದಿದೆ. ಹೊಲದ ಅಂಚಿನಲ್ಲಿ ವ್ಯವಸಾಯವಾಗಿರದು. ಹುಲುಸೊಪ್ಪಿನಿಂದ ತುಂಬಿ ಪೊದರು ಬೆಳೆದಿರುವದು. ಮಾಸಪತ್ರಿಕೆಗಳ ಅವಿವೇಚನೆಯಿಂದ ಬಹಳ ಮಟ್ಟಿಗೆ ಲೇಖನಿಯ ಜಾತಿ ನಷ್ಟವಾಗುವದು. ಮುಖ್ಯವಾಗಿ ಎಳೆಯ ಮಕ್ಕಳೇ ಓದುಗರೆಂದು ಗುರಿಯಿರುವೆಡೆಯಲ್ಲಿ ಹರಟುವುದರಲ್ಲಿ ಸಂಕೋಚವಿರದು. ಅಲ್ಪವಯಸಿನ ಹುಡುಗರಿಗೂ ಗೌರವಕೊಡಬೇಕೆಂಬ ಸಂಗತಿ ಮಕ್ಕಳ ಸಾಹಿತ್ಯ ಸೃಷ್ಟಿಸುವವರು ಪ್ರಾಯಶಃ ಮರೆಯುವರು. ಸಾಹಿತ್ಯ ರಚನೆಯಲ್ಲಿ ಗುಣಿ ಲೇಖನಿಯು ಜಾಗರೂಕತೆಯಿರದಿದ್ದರೆ ಆ ರಚನೆ ನಾಚಿಕೆಯಿಲ್ಲದೆ ಕ್ಷುದ್ರವಾಗುವದು. ಆಗ ಅದು ವಿಶೇಷತಃ ಮಕ್ಕಳ ಜೀರ್ಣಶಕ್ತಿಗೆ ಅನಾರೋಗ್ಯಕರವಾಗುವದು. ಹಾಲಿಗೆ ಬದಲು ಹಿಟ್ಟು ಕದಡಿದ ನೀರನ್ನು ವ್ಯಾಪಾರದ ನಿಮಿತ್ತ ಬಳಸಬೇಕಾದರೆ ಆಗ ಅದು ಮೋಸ. ಅಂತೂ ವಯಸ್ಕರ ಎಲೆಯಲ್ಲಿ ಬಡಿಸಿದರೂ ಬಡಿಸಬಹುದು. ಅದರಿಂದ ಅವರುಗಳ ರುಚಿಯ ಪರೀಕ್ಷೆಯಾದೀತು. ಆದರೆ ಎಳೆಯ ಮಕ್ಕಳ ನೈವೇದ್ಯಕ್ಕೆ ಒದಗದು. ಖಂಡಿತ ಒದಗದು.

—ರವೀಂದ್ರನಾಥ ಠಾಕೂರ್.

---

೪ ಜೀವನಸ್ಮೃತಿ—'ಬಾಲಕ' ಅಧ್ಯಾಯನೋಡಿ.

ಶ್ರೀ

# ರಾಜರ್ಷಿ

## ೧

ಭುವನೇಶ್ವರೀ ದೇವಾಲಯದ ಕಲ್ಲಿನ ಘಟ್ಟ ಗೋಮತಿ ನದಿಯೊಳಕ್ಕೆ ಹೋಗಿ ಸೇರಿತ್ತು. ತ್ರಿಪುರದ ಮಹಾರಾಜ ಗೋವಿಂದ ಮಾಣಿಕ್ಯ ಬೇಸಿಗೆಯ ಒಂದು ದಿನ ಬೆಳಗ್ಗೆ ಸ್ನಾನಕ್ಕಾಗಿ ಬಂದಿದ್ದ. ಸಂಗಡ ಅವನ ತಮ್ಮ ನಕ್ಷತ್ರರಾಯನೂ ಬಂದಿದ್ದ. ಆ ಸಮಯದಲ್ಲೇ ಚಿಕ್ಕ ಹುಡುಗಿಯೊಬ್ಬಳು ತನ್ನ ಪುಟ್ಟ ತಮ್ಮನೊಡನೆ ಅದೇ ಘಟ್ಟಕ್ಕೆ ಬಂದಳು. ರಾಜನ ಬಟ್ಟೆ ಎಳೆದು "ನೀನು ಯಾರು?" ಎಂದು ಕೇಳಿದಳು. ರಾಜ ಸ್ವಲ್ಪ ನಕ್ಕು "ತಾಯಿ, ನಾ ನಿನ್ನ ಮಗ" ಎಂದ. ಹುಡುಗಿ "ನನಗೆ ಪೂಜೆಗಾಗಿ ಹೂ ಕೊಯ್ದು ಕೊಡು ಮತ್ತೆ!" ಎಂದಳು.

ರಾಜ "ಸರಿ, ನಡೆ" ಎಂದ.

ಮೈಗಾವಲಿನವರು ಬೆಕ್ಕಸ ಬೆರಗಾದರು. ಅವರು "ಮಹರಾಜ, ತಾವೇಕೆ ಹೋಗಬೇಕು. ನಾವು ಕೊಯ್ದು ಕೊಡುವೆವು" ಎಂದರು. "ಇಲ್ಲ, ನನಗೆ ಹೇಳಿದ ಮೇಲೆ ನಾನೇ ಕೊಯ್ದು ಕೊಡುವೆ" ಎಂದು ರಾಜ ಹೇಳಿದ.

ರಾಜ ಆ ಹುಡುಗಿಯ ಮುಖ ದೃಷ್ಟಿಸಿ ನೋಡಿದ. ಆ ದಿನದ ನಿರ್ಮಲ ಉಷೆಯೊಡನೆ ಅವಳ ಮುಖದ ಹೋಲಿಕೆ ಇತ್ತು. ರಾಜನ ಕೈ ಹಿಡಿದು ಅವಳು ದೇವಾಲಯಕ್ಕೆ ಸೇರಿದ್ದ ಹೂದೋಟದಲ್ಲಿ ಓಡಾಡುತ್ತಿದ್ದಾಗ ಸುತ್ತಲೂ ಇದ್ದ ಬಿಳಿಯ ಮಲ್ಲಿಗೆಯಂತೆ ಅವಳ ಸುಂದರವಾದ ಮುಖದಿಂದ ಯಾವುದೋ ಒಂದು ಪರಿಶುದ್ಧವಾದ ತಂಪು ಹೊರ ಹೊಮ್ಮಿ ಬೆಳಗಿನ ಕಾಡಿನಲ್ಲಿ ವ್ಯಾಪಿಸುತ್ತಿತ್ತು. ಪುಟ್ಟ ತಮ್ಮ ಅಕ್ಕನ ಬಟ್ಟೆ ಹಿಡಿದುಕೊಂಡು ಅಕ್ಕನ ಜೊತೆಜೊತೆಯಲ್ಲೇ ಓಡಾಡುತ್ತಿದ್ದ. ಅವನಿಗೆ

ಪರಿಚಯವಿದ್ದವಳು ಅಕ್ಕನೊಬ್ಬಳೆ. ರಾಜನೊಡನೆ ಅವನಿಗೆ ಅಷ್ಟಾಗಿ ಸ್ನೇಹ ಉಂಟಾಗಲಿಲ್ಲ.

ರಾಜ ಹುಡುಗಿಯನ್ನು "ನಿನ್ನ ಹೆಸರೇನಮ್ಮ" ಎಂದು ಕೇಳಿದ.

"ಸಂತೋಷಿ" ಎಂದು ಹುಡುಗಿ ಹೇಳಿದಳು.

ರಾಜ ಹುಡುಗನನ್ನು 'ನಿನ್ನ ಹೆಸರೇನು?' ಎಂದು ಕೇಳಿದ. ಹುಡುಗ ದೊಡ್ಡ ದೊಡ್ಡದಾಗಿ ಕಣ್ಣರಳಿಸಿ ಅಕ್ಕನ ಮುಖ ನೋಡುತ್ತಿದ್ದ. ಉತ್ತರ ಕೊಡಲಿಲ್ಲ.

ಸಂತೋಷಿ ಅವನ ಮೈ ತಡವುತ್ತ 'ನನ್ನ ಹೆಸರು ತಾತ, ಎಂದು ಹೇಳು ತಮ್ಮ' ಎಂದಳು.

ಹುಡುಗ ಅತಿ ಪುಟ್ಟದಾದ ತುಟಿಗಳೆರಡನ್ನೂ ಸ್ವಲ್ಪವಾಗಿ ತೆರೆದು ಗಂಭೀರ ಭಾವದಿಂದ ಅಕ್ಕನ ಮಾತಿನ ಪ್ರತಿಧ್ವನಿಯಂತೆ. "ನನ್ನ ಹೆಸರು ತಾತ" ಎಂದ. ಇಷ್ಟು ಹೇಳಿ ಅಕ್ಕನ ಬಟ್ಟೆಯನ್ನು ಮತ್ತಷ್ಟು ಬಲವಾಗಿ ಹಿಡಿದುಕೊಂಡ.

ಸಂತೋಷಿ ರಾಜನಿಗೆ ವಿವರಿಸಿ ಹೇಳಿದಳು. "ಅವನು ಪುಟ್ಟವನಲ್ಲವೆ. ಆದುದರಿಂದಲೇ ಎಲ್ಲರೂ ಅವನನ್ನು ತಾತ ಎನ್ನುವುದು." ಪುಟ್ಟ ತಮ್ಮನಕಡೆ ತಿರುಗಿ—ಸರಿ. 'ಮಂದಿರ್' ಎಂದು ಹೇಳು ನೋಡೋಣ. ಹುಡುಗ ಅಕ್ಕನ ಕಡೆಗೆ ನೋಡುತ್ತ 'ಲದಂದ' ಎಂದ. ಸಂತೋಷಿ ನಗುತ್ತ "ತಾತ ಮಂದಿರ್ ಎನ್ನಲಾರ. ಲವಂದ ಎನ್ನುತ್ತಾನೆ. ಸರಿ, 'ಕಡಾಯಿ' ಎಂದು ಹೇಳು ನೋಡೋಣ ಎಂದಳು.

ಹುಡುಗ ಗಂಭೀರವಾಗಿ 'ಬಲಾಯಿ' ಎಂದು ಹೇಳಿದ. ಸಂತೋಷಿ ಪುನಃ ನಗುತ್ತ—ತಾತ ನಮ್ಮಂತೆ 'ಕಡಾಯಿ' ಎನ್ನಲಾರ. 'ಬಲಾಯಿ' ಎನ್ನುತ್ತಾನೆ—ಎಂದು ಹೇಳಿ ತಾತನನ್ನು ಅಪ್ಪಿಕೊಂಡು ಮುತ್ತುಕೊಡುತ್ತ ಕೊಡುತ್ತ ಸಾಕುಮಾಡಿದಳು. ತಾತನಿಗೆ ಇದ್ದಕ್ಕಿದ್ದಂತೆ ಅಕ್ಕನ ಇಷ್ಟೊಂದು ನಗು, ಇಷ್ಟೊಂದು ಪ್ರೀತಿಗೆ ಕಾರಣವೇನೆಂದು ತಿಳಿಯಲಿಲ್ಲ. ಅವನು ಸುಮ್ಮನೆ ದೊಡ್ಡದಾಗಿ ಕಣ್ಣುಬಿಟ್ಟು ನೋಡುತ್ತಿದ್ದ. ವಾಸ್ತವವಾಗಿ 'ಮಂದಿರ್' ಹಾಗೂ 'ಕಡಾಯಿ' ಶಬ್ದದ ಉಚ್ಚಾರಣೆಯ ವಿಷಯವಾಗಿ

ತಾತನಲ್ಲಿ ಸಂಪೂರ್ಣ ಕೊರತೆ ಇತ್ತು ಎನ್ನುವುದನ್ನು ಒಪ್ಪದಿರಲು ಸಾಧ್ಯವಿಲ್ಲ. ತಾತನ ವಯಸ್ಸಿನಲ್ಲಿ ಸಂತೋಷಿ ಎಂದೂ ಮಂದಿರವನ್ನು 'ಲದಂದ' ಎನ್ನುತ್ತಿರಲಿಲ್ಲ. ಅವಳು ಮಂದಿರವನ್ನು 'ಪಾಲು' ಎನ್ನುವಳು. ಅವಳು 'ಕಡಾಯಿ' ಯನ್ನು 'ಬಲಾಯಿ' ಎಂದನ್ನುತ್ತಿದ್ದಳೋ ಇಲ್ಲವೋ ತಿಳಿಯದು. ಆದರೆ 'ಕಡಿ'(ಕನಡೆ)ಯನ್ನು 'ಜಯಿ' ಎನ್ನುತ್ತಿದ್ದಳು. ನಿಜವಾಗಿಯೂ ತಾತನ ಇಂತಹ ವಿಚಿತ್ರ ಉಚ್ಚಾರಣೆ ಕೇಳಿ ಅವಳಿಗೆ ಬಹಳ ನಗು ಉಂಟಾಗುತ್ತಿತ್ತು ಎನ್ನುವುದರಲ್ಲಿ ಆಶ್ಚರ್ಯವೇನಿದೆ. ತಾತನ ವಿಷಯವಾಗಿ ನಾನಾ ಘಟನೆಗಳನ್ನು ಅವಳು ರಾಜನಿಗೆ ಹೇಳ ತೊಡಗಿದಳು. ಒಮ್ಮೆ ಮುದುಕನೊಬ್ಬ ಕಂಬಳಿ ಹೊದ್ದುಕೊಂಡು ಬಂದಿದ್ದ ನಂತೆ. ತಾತ ಅವನನ್ನು ಕರಡಿ ಎಂದನಂತೆ. ಇನ್ನೊಮ್ಮೆ ತಾತ ಗಿಡದಲ್ಲಿದ್ದ ಸೀತಾಫಲಗಳನ್ನು ಹಕ್ಕಿ ಎಂದು ತಿಳಿದು ದುಂಡನೆಯ ಎರಡು ಪುಟ್ಟ ಕೈಗಳಿಂದಲೂ ಚಪ್ಪಾಳೆ ತಟ್ಟುತ್ತ ಅವನ್ನು ಓಡಿಸ ಲೆತ್ನಿಸಿದ್ದನಂತೆ. ತಾತ ಸಂತೋಷಿಗಿಂತ ಬಹಳ ಕಿರಿಯವ. ಇದನ್ನು ತಾತನ ಅಕ್ಕ ಬೇಕಾದಷ್ಟು ಉದಾಹರಣೆಗಳ ಮೂಲಕ ಸಂಪೂರ್ಣ ರೂಪದಲ್ಲಿ ಸ್ಪಷ್ಟಪಡಿಸಿದಳು. ತಾತ ತನ್ನ ಬುದ್ಧಿ ಪರಿಚಯದ ಕತೆಯನ್ನು ಸುಮ್ಮನೆ ಅವಿಚಲಿತ ಮನಸಿನಿಂದ ಕೇಳುತ್ತಿದ್ದ. ಅರ್ಥವಾದವ್ವರಲ್ಲಿ ಕೋಪಕ್ಕೆ ಕಾರಣ ಯಾವುದೂ ತೋರಲಿಲ್ಲ. ಈ ರೀತಿಯಲ್ಲಿ ಆ ದಿನದ ಬೆಳಗಿನ ಹೂ ಕೀಳುವಿಕೆ ಕೊನೆಗಂಡಿತು. ಪುಟ್ಟ ಹುಡುಗಿಯ ಮಡಿಲತುಂಬ ಹೂ ತುಂಬಿದಾಗ ರಾಜನಿಗೆ ತನ್ನ ಪೂಜೆ ಮುಗಿದಂತೆ ತೋರಿತು. ಆ ಎರಡು ಸರಳ ಜೀವಿಗಳ ಸ್ನೇಹದ ದೃಶ್ಯ ನೋಡಿ ಈ ಪವಿತ್ರ ಹೃದಯದ ಆಸೆ ತಣಿಯುವಂತೆ ಹೂ ಕಿತ್ತು ಕೊಟ್ಟದ್ದು ಆತನಿಗೆ ದೇವರ ಪೂಜೆಯ ಕೆಲಸ ಮಾಡಿದಂತಿತ್ತು.

೨

ಆ ಮರುದಿನದಿಂದ ನಿದ್ರೆ ತಿಳಿದು ಸೂರ್ಯ ಮೂಡಿದರೂ ರಾಜನಿಗೆ ಬೆಳಗಾಗುತ್ತಿರಲಿಲ್ಲ. ಆ ಪುಟ್ಟ ಅಕ್ಕ ತಮ್ಮ ಇಬ್ಬರನ್ನು ಕಂಡಾಗಲೇ ಅವನಿಗೆ ಬೆಳಗಾಗುತ್ತಿದ್ದುದು. ಪ್ರತಿದಿನ ಅವರುಗಳಿಗೆ ಹೂ ಕೊಯ್ದು ಕೊಟ್ಟ ಬಳಿಕವೇ ಅವನು ಸ್ನಾನ ಮಾಡುವುದು ; ಅಕ್ಕ ತಮ್ಮ ಇಬ್ಬರೂ

ಘಟ್ಟದಲ್ಲಿ ಕುಳಿತು ಅವನ ಸ್ನಾನ ನೋಡುವರು. ಯಾವ ದಿನ ಬೆಳಗ್ಗೆ ಆ ಹುಡುಗ ಹುಡುಗಿಯರಿಬ್ಬರೂ ಬರುತ್ತಿರಲಿಲ್ಲವೊ ಆ ದಿನ ಅವನ ಸಂಧ್ಯಾವಂದನೆ, ಆಹ್ನೀಕಗಳು ಮುಗಿಯುವಂತೆ.

ಸಂತೋಷಿಗೂ ತಾತನಿಗೂ ಅಪ್ಪ ಅಮ್ಮ ಯಾರೂ ಇಲ್ಲ. ಇರುವುದು ಚಿಕ್ಕಪ್ಪನೊಬ್ಬನೆ. ಚಿಕ್ಕಪ್ಪನ ಹೆಸರು ಕೇದಾರೇಶ್ವರ. ಈ ಇಬ್ಬರು ಹುಡುಗ ಹುಡುಗಿಯರೇ ಆತನ ಜೀವನದ ಏಕಮಾತ್ರ ಸುಖ ಹಾಗೂ ಆಧಾರ.

ಒಂದು ವರ್ಷ ಕಳೆಯಿತು. ತಾತ ಈಗ ಮಂದಿರ ಎಂದು ಹೇಳುವಲ್ಲ. ಆದರೆ ಈಗಲೂ ಕಡಾಯಿ ಎನ್ನಲು ಒಲಾಯಿ ಎಂದೇ ಹೇಳುವನು. ಅವನು ಹೆಚ್ಚು ಮಾತನಾಡ. ಗೋಮತಿ ನದೀತೀರದ ನಾಗಲಿಂಗ ಮರದಡಿ ಕಾಲುಚಾಚಿ ಕುಳಿತು ಅವನ ಅಕ್ಕ ಅವನಿಗೆ ಯಾವುದೇ ಕತೆ ಹೇಳಲಿ ಅವನು ಅದನ್ನೇ ಬಿಟ್ಟ ಕಣ್ಣು ಬಿಟ್ಟ ಹಾಗೆ ಮೂಕನಂತೆ ಕೇಳುತಿದ್ದ. ಆ ಕತೆಗೆ ತಲೆ ಬಾಲ ಇರುತ್ತಿರಲಿಲ್ಲ. ಆದರೆ ಅವನಿಗೆ ಏನು ಅರ್ಥವಾಗುತ್ತಿತ್ತು ಎನ್ನುವುದನ್ನು ಅವನೇ ಬಲ್ಲ, ಕತೆ ಕೇಳಿ ಆ ಮರದಡಿಯಲ್ಲಿ ಆ ಸೂರ್ಯನ ಬೆಳಕಿನಲ್ಲಿ ಆ ಬಿಸುಗಾಳಿಯಲ್ಲಿ ಪುಟ್ಟ ಹುಡುಗನೊಬ್ಬನ ಪುಟ್ಟ ಹೃದಯದಲ್ಲಿ ಅದೆಷ್ಟು ಕತೆ, ಅದೆಷ್ಟು ಚಿತ್ರ ಮೂಡುತ್ತಿತ್ತು ಎನ್ನುವುದು ನಮಗೇನುಗೊತ್ತು. ತಾತನು ಬೇರಾವ ಹುಡುಗರೊಡನೆಯೂ ಆಡುತ್ತಿರಲಿಲ್ಲ. ತನ್ನ ಅಕ್ಕನ ಜೊತೆಯಲ್ಲಿ ನೆರಳಿನಂತೆ ಓಡಾಡುತ್ತಿದ್ದ.

ಆಷಾಢ ಮಾಸ. ಬೆಳಗಿನಿಂದಲೂ ಕಾರ್ಮೋಡ ಮುಸುಕಿಕೊಂಡಿರುವುದು. ಇನ್ನೂ ಮಳೆ ಬಿದ್ದಿಲ್ಲ, ಆದರೆ ಮಳೆ ಪ್ರಾರಂಭವಾಗುವ ಸೂಚನೆ ಕಂಡು ಬರುತ್ತಿತ್ತು. ದೂರ ಪ್ರಾಂತದಲ್ಲಿ ಮಳೆ ಹನಿ ತೂರಿ ತಂಗಾಳಿ ಬೀಸುತ್ತಿತ್ತು. ಗೋಮತಿ ನದಿಯ ತೀರದಲ್ಲೂ, ಇಕ್ಕೆಲದ ಕಾಡುಗಳಲ್ಲೂ ಅಂಧಕಾರ ಆಕಾಶದ ನೆರಳು ಬಿದ್ದಿರುವುದು. ಹಿಂದಿನ ರಾತ್ರಿ ಅಮಾವಾಸ್ಯೆ, ಅಂದು ಭುವನೇಶ್ವರೀ ದೇವಿಯ ಪೂಜೆ ನಡೆದಿರುವುದು.

ಹೊತ್ತಿಗೆ ಸರಿಯಾಗಿ ಸಂತೋಷಿ ಮತ್ತು ತಾತನ ಕೈ ಹಿಡಿದುಕೊಂಡು ರಾಜ ಸ್ನಾನಕ್ಕೆ ಬಂದಿರುವನು. ರಕ್ತದ ಕೋಡಿಯ ಗುರುತೊಂದು

ಬಿಳಿಯ ಕಲ್ಲಿನ ಘಟ್ಟದ ಮೆಟ್ಟಿಲ ಮೇಲೆ ಹರಿದು ನೀರಿಗೆ ಹೋಗಿ ಸೇರಿತ್ತು. ಹಿಂದಿನ ರಾತ್ರಿ ನೂರೊಂದು ಕೋಣಗಳ ಬಲಿಯಾಗಿತ್ತಲ್ಲ ಅವುಗಳ ರಕ್ತ.

ಸಂತೋಷಿ ಆ ರಕ್ತದ ಚಿಹ್ನೆ ನೋಡಿದಳು. ಒಂದು ಬಗೆಯ ಸಂಕೋಚದೊಡನೆ ಹಿಂದಕ್ಕೆ ಸರಿದು "ಅಯ್ಯಾ, ಇದೇನು ಗುರುತು?" ಎಂದು ರಾಜನನ್ನು ಕೇಳಿದಳು. "ರಕ್ತದ ಗುರುತಮ್ಮ" ಎಂದು ರಾಜ ಹೇಳಿದ. "ಏಕೆ ಇಷ್ಟೊಂದು ರಕ್ತ?" ಎಂದು ಅವಳು ಕೇಳಿದಳು. ಹೀಗೆ ಒಂದು ಬಗೆಯ ವ್ಯಾಕುಲ ಸ್ವರದಲ್ಲಿ ಹುಡುಗಿ "ಏಕೆ ಇಷ್ಟೊಂದು ರಕ್ತ" ಎಂದು ಕೇಳಲು ರಾಜನ ಹೃದಯದೊಳಗೂ ಕ್ರಮಕ್ರಮವಾಗಿ "ಏಕೆ ಇಷ್ಟೊಂದು ರಕ್ತ" ಎಂಬ ಪ್ರಶ್ನೆ ತೋರಲಾರಂಭಿಸಿತು. ಇದ್ದಕಿದ್ದಂತೆ ಅವನು ಬೆಚ್ಚಿಬಿದ್ದ. ಅನೇಕ ದಿನಗಳಿಂದ ಪ್ರತಿ ಪರ್ವವೂ ರಕ್ತದಕೋಡಿ ನೋಡುತ್ತ ಬಂದಿರುವ. ಪುಟ್ಟ ಹುಡುಗಿಯೊಬ್ಬಳ ಪ್ರಶ್ನೆ ಕೇಳಿ ಅವನ ಮನದಲ್ಲಿ "ಏಕೆ ಇಷ್ಟೊಂದು ರಕ್ತ" ಎಂದು ತೋರ ತೊಡಗಿತು. ಅವನು ಉತ್ತರ ಹೇಳಲು ಮರೆತುಹೋದ. ಅನ್ಯಮನಸ್ಕನಾಗಿ ಸ್ನಾನ ಮಾಡುತ್ತ ಮಾಡುತ್ತ ಈ ಪ್ರಶ್ನೆಯನ್ನೇ ಆಲೋಚಿಸ ತೊಡಗಿದ.

ಸಂತೋಷಿ ನೀರಿನಲ್ಲಿ ಸೆರಗು ನೆನೆಸಿ ಮೆಟ್ಟಿಲಮೇಲೆ ಕುಳಿತು ಸ್ವಲ್ಪ ಸ್ವಲ್ಪವಾಗಿ ರಕ್ತದ ಕಲೆಯನ್ನು ಒರೆಸ ತೊಡಗಿದಳು. ಅವಳೆದುರಿನಲ್ಲಿ ಪುಟ್ಟವೆರಡು ಕೈಗಳಿಂದ ತಾತನೂ ಅದನ್ನೇ ಮಾಡಲಾರಂಭಿಸಿದ. ಸಂತೋಷಿಯ ಸೆರಗು ರಕ್ತದಿಂದ ಕೆಂಪಾಯಿತು. ರಾಜನ ಸ್ನಾನ ಮುಗಿಯುವ ವೇಳೆಗೆ ಅಕ್ಕ ತಮ್ಮ ಇಬ್ಬರೂ ಕಲೆತು ರಕ್ತದ ಕಲೆ ಅಳಿಸಿಬಿಟ್ಟಿದ್ದರು.

ಅಂದು ಮನೆಗೆ ಹಿಂದಿರುಗಿದ ಅನಂತರ ಸಂತೋಷಿಗೆ ಜ್ವರ ಬಂದಿತು. ತಾತ ಪಕ್ಕದಲ್ಲಿ ಕುಳಿತು ಪುಟ್ಟವೆರಡು ಕೈಗಳಿಂದ ಅಕ್ಕನ ಮುಚ್ಚಿದ ಕಣ್ಣೆವೆ ಬಿಚ್ಚಲು ಪ್ರಯತ್ನಿಸಿ ನಡುನಡುವೆ "ಅಕ್ಕ" ಎಂದು ಕರೆಯುತ್ತಿದ್ದ. ಅಕ್ಕ ಬೆದರಿದವಳಂತೆ ಸ್ವಲ್ಪ ಎಚ್ಚರಗೊಳ್ಳುವಳು. ಪುನಃ ಕಣ್ಣು ಮುಚ್ಚಿಕೊಳ್ಳುವಳು. ತಾತ ಬಹಳ ಹೊತ್ತು ತೆಪ್ಪನೆ ಅಕ್ಕನ ಮುಖ ನೋಡುತ್ತ ಕುಳಿತಿದ್ದ. ಯಾವ ಮಾತೂ ಆಡಲಿಲ್ಲ. ಕಡೆಗೆ ಬಹಳ ಹೊತ್ತಿನ ಬಳಿಕ ಮೆಲ್ಲಮೆಲ್ಲನೆ ಅಕ್ಕನ ಕೊರಳನ್ನು ಅಪ್ಪಿಕೊಂಡು ಅವಳ ಮುಖದ ಬಳಿ ಮುಖ ಇಟ್ಟು ನಿಧಾನವಾಗಿ "ಅಕ್ಕ ನೀನು ಏಳುವುದಿಲ್ಲವೆ?" ಎಂದ.

ಸಂತೋಷಿ ಗಾಬರಿಯಿಂದ ಎದ್ದು ತಾತನನ್ನು ಎದೆಗಪ್ಪಿಕೊಂಡು "ಏಕೆ, ಏಳುವದಿಲ್ಲ, ಚಿನ್ನಾ" ಎಂದಳು. ಆದರೆ ಅಕ್ಕನಿಗೆ ಇನ್ನು ಏಳಲು ಸಾಧ್ಯವಿಲ್ಲ. ತಾತನ ಪುಟ್ಟ ಹೃದಯದಲ್ಲಿ ಅತಿಯಾಗಿ ಕತ್ತಲೆ ಕವಿಯಿತು. ತಾತನ ಹಗಲ ಆಟಪಾಟ, ಆನಂದದ ಆಸೆ ಎಲ್ಲವೂ ಸಂಪೂರ್ಣವಾಗಿ ಮಲಿನವಾಯಿತು. ಆಕಾಶದಲ್ಲಿ ಬಹಳ ಕತ್ತಲೆ. ಮನೆಯ ಛಾವಣಿಯ ಮೇಲೆ ಕ್ರಮೇಣ ಮಳೆಯ ಶಬ್ದ ಕೇಳ ತೊಡಗಿರುವದು. ಅಂಗಳದ ಹುಣಿಸೇಮರ ಹನಿಯಿಂದ ನೆನೆಯುತ್ತಿತ್ತು. ಹಾದಿಯಲ್ಲಿ ಹಾದಿಗರಿಲ್ಲ. ಕೇದಾರೇಶ್ವರ ವೈದ್ಯರೊಬ್ಬರನ್ನು ಸಂಗಡ ಕರೆತಂದ. ವೈದ್ಯರು ನಾಡಿ ಹಿಡಿದು ನೋಡಿ ಪರಿಸ್ಥಿತಿ ಉತ್ತಮವಾಗಿಲ್ಲವೆಂದು ತಿಳಿದರು.

ಮರುದಿನ ಸ್ನಾನಕ್ಕಾಗಿ ಬಂದ ರಾಜ ದೇವಾಲಯದಲ್ಲಿ ಅಕ್ಕ ತಮ್ಮ ಇಬ್ಬರೂ ತನ್ನನ್ನು ನಿರೀಕ್ಷಿಸುತ್ತ ಕುಳಿತಿಲ್ಲದಿರುವುದನ್ನು ಕಂಡ. ಈ ಜಡಿ ಮಳೆಯಲ್ಲಿ ಅವರಿಗೆ ಬರಲು ಸಾಧ್ಯವಾಗದಿರಬಹುದು ಎಂದು ಭಾವಿಸಿದ. ಸ್ನಾನ, ತರ್ಪಣ ಮುಗಿಸಿ ಪಲ್ಲಕ್ಕಿ ಏರಿ ಹೊರುವವರಿಗೆ ಕೇದಾರೇಶ್ವರನ ಗುಡಿಸಿಲಿಗೆ ಹೋಗಲು ಅಪ್ಪಣೆ ಮಾಡಿದ. ಪ್ರಾಣಾಪಲಿನವರು ಅಚ್ಚರಿಗೊಂಡರು. ಆದರೆ ರಾಜನ ವಿಷಯದಲ್ಲಿ ಮರು ಮಾತು ಆಡದಾದರು.

ರಾಜನ ಪಲ್ಲಕ್ಕಿ ಅಂಗಳಕ್ಕೆ ಹೋಗಿ ಸೇರುತ್ತಲೇ ಗುಡಿಸಲಲ್ಲಿ ಬಹಳ ಗೊಂದಲವೆದ್ದಿತು. ಆ ಗೊಂದಲದಲ್ಲಿ ರೋಗಿಯ ರೋಗದ ಸಂಗತಿಯನ್ನೇ ಎಲ್ಲರೂ ಮರೆತುಬಿಟ್ಟರು. ತಾತ ಮಾತ್ರ ಅಲುಗಾಡಲಿಲ್ಲ. ಅವನು ಚೇತನವಿಲ್ಲದ ಅಕ್ಕನ ತೊಡೆಯ ಬಳಿ ಕುಳಿತು ಅಕ್ಕನ ಬಟ್ಟೆಯದೊಂದು ಅಂಚನ್ನು ಬಾಯಲ್ಲಿ ತುರುಕಿಕೊಂಡು ತೆಪ್ಪನೆ ನೋಡುತ್ತ ಕುಳಿತಿದ್ದ.

ರಾಜ ಮನೆಯೊಳಕ್ಕೆ ಬರುವುದನ್ನು ನೋಡಿದ ತಾತ 'ಏನಾಗಿದೆ' ಎಂದು ಕೇಳಿದ.

ಉದ್ವಿಗ್ನ ಮನದ ರಾಜ ಯಾವ ಉತ್ತರವನ್ನೂ ಹೇಳಲಿಲ್ಲ. ತಾತ ಕತ್ತು ಅಲ್ಲಾಡಿಸುತ್ತ ಪುನಃ "ಅಕ್ಕನಿಗೆ ನೋವಾಗಿದೆಯೇ?" ಎಂದು ಪ್ರಶ್ನಿಸಿದ.

ಚಿಕ್ಕಪ್ಪ ಕೇದಾರೇಶ್ವರ ಸ್ವಲ್ಪ ಕೋಪಗೊಂಡು 'ಹೌದು' ಎಂದು ಉತ್ತರಕೊಟ್ಟ.

ಕೂಡಲೇ ತಾತ ಅಕ್ಕನ ಒಳಗೆ ಹೋಗಿ ಅಕ್ಕನ ಮುಖ ಎತ್ತಿ ಹಿಡಿಯಲು ಪ್ರಯತ್ನಿಸಿ ಕತ್ತು ಹಿಡಿದುಕೊಂಡು "ಅಕ್ಕ, ನಿನಗೆ ಎಲ್ಲಿ ನೋಯುತ್ತೆ" ಎಂದು ವಿಚಾರಿಸಿದ. ಮನಸ್ಸಿನ ಅಭಿಪ್ರಾಯವಿಷ್ಟೆ.—ಆ ಸ್ಥಳದಲ್ಲಿ ಉಫ್ ಎಂದು ಊದಿ ಕೈಸವರಿ ಅಕ್ಕನ ನೋವನ್ನೆಲ್ಲ ದೂರ ಮಾಡುವೆ—ಎಂದು. ಆದರೆ ಅಕ್ಕ ಯಾವ ಮರುಮಾತೂ ನುಡಿಯದಿರಲು ಅವನಿಗೆ ಇನ್ನು ತಡೆಯಲಾಗಲಿಲ್ಲ. ಎರಡು ಪುಟ್ಟ ತುಟಿಗಳೂ ಹೆಚ್ಚು ಹೆಚ್ಚಾಗಿ ತೆರೆಯ ತೊಡಗಿತು. ದುಗುಡದಿಂದ ಅಳಲಾರಂಭಿಸಿದ—ನೆನ್ನೆಯಿಂದ ಕುಳಿತಿರುವೆ ಏಕೆ. ಒಂದು ಮಾತೂ ಇಲ್ಲ. ತಾತ ಏನು ಮಾಡಿದನೆಂದು ಅವನ ಮೇಲೆ ಇಷ್ಟು ಅನಾದರ—ರಾಜನಿದಿರಿನಲ್ಲಿ ಈ ಬಗೆಯ ವ್ಯವಹಾರ ನೋಡಿ ಕೇದಾರೇಶ್ವರ ಗಾಬರಿ ಬಿದ್ದ. ಅವನು ಕೋಪಗೊಂಡು ಹುಡುಗನನ್ನು ಬೇರೆ ಕೊಠಡಿಗೆ ಕರೆದುಕೊಂಡು ಹೋದ. ಆಗಲೂ ಅಕ್ಕ ಮಾತನಾಡಲಿಲ್ಲ.

ರಾಜವೈದ್ಯರು ಬಂದು ಸಂಶಯ ವ್ಯಕ್ತಪಡಿಸಿ ಹೋದರು. ರಾಜ ಸಂಜೆಯಲ್ಲಿ ಪುನಃ ಸಂತೋಷಿಯನ್ನು ನೋಡಲು ಬಂದ. ಆಗ ಹುಡುಗಿ ಜ್ಞಾನ ತಪ್ಪಿ ಹರಟುತ್ತ "ಅಪ್ಪನಮ್ಮಾ, ಇಷ್ಟೊಂದು ರಕ್ತವೇಕೆ?" ಎನ್ನುತ್ತಿದ್ದಳು.

ರಾಜನೆಂದ—"ಅಮ್ಮಾ ಈ ರಕ್ತದ ಕೋಡಿಯನ್ನು ನಾನು ಅಳಿಸುತ್ತೇನೆ".

ಹುಡುಗಿ—"ಬಾ ತಪ್ಪಾ, ತಾತಾ, ನಾವಿಬ್ಬರೂ ಈ ರಕ್ತ ಅಳಿಸೋಣ" ಎಂದಳು.

"ಬಾ ತಾಯಿ, ನಾನೂ ಅಳಿಸುತ್ತೇನೆ" ಎಂದ ರಾಜ. ಸಂಜೆಯಾದ ಸ್ವಲ್ಪ ಹೊತ್ತಿನಲ್ಲಿ ಸಂತೋಷಿ ಒಮ್ಮೆ ಕಣ್ಣು ಬಿಟ್ಟಿದ್ದು. ಒಮ್ಮೆ ಸುತ್ತಲೂ ನೋಡಿ ಯಾರನ್ನೋ ಹುಡುಕಿದಳು. ಆ ವೇಳೆಗೆ ತಾತ ಬೇರೆ ಕೊಟಡಿಯಲ್ಲಿ ಅತ್ತು ಅತ್ತು ನಿದ್ದೆ ಹೋಗಿದ್ದ. ಯಾರನ್ನೂ ಕಾಣದೆ ಸಂತೋಷಿ ಕಣ್ಣುಮುಚ್ಚಿದಳು. ಪುನಃ ಕಣ್ಣು ಬಿಡಲಿಲ್ಲ. ರಾತ್ರಿ ಎರಡು ಘಂಟೆಯ ವೇಳೆಗೆ ರಾಜನ ತೊಡೆಯಲ್ಲಿ ಸಂತೋಷಿಯ ಪ್ರಾಣ ಹೋಯಿತು.

ಚಿರಕಾಲಕ್ಕಾಗಿ ಸಂತೋಷಿಯನ್ನು ಗುಡಿಸಲಿಂದ ತೆಗೆದುಕೊಂಡು ಹೋದಾಗ ತಾತ ಎಚ್ಚರವಿಲ್ಲದೆ ನಿದ್ರೆ ಮಾಡುತ್ತಿದ್ದ. ಒಂದು ವೇಳೆ ಅವನಿಗೆ ತಿಳಿದಿದ್ದರೆ, ಅಕ್ಕನ ಸಂಗಡ ಪುಟ್ಟ ನೆರಳಿನಂತೆ ಅವನೂ ಹೋಗುತ್ತಿದ್ದನೆಂದು ತೋರುವದು.

೩

ರಾಜನ ಸಭೆ ಸೇರಿರುವದು. ಭುವನೇಶ್ವರೀ ದೇವಾಲಯದ ಪುರೋಹಿತ ಕಾರ್ಯಗೌರವದಿಂದ ರಾಜ ದರ್ಶನಕ್ಕಾಗಿ ಬಂದಿರುವನು.

ಪುರೋಹಿತನ ಹೆಸರು ರಘುಪತಿ. ಈ ದೇಶದಲ್ಲಿ ಪುರೋಹಿತನನ್ನು 'ಚೊಂತಾಯಿ' ಎನ್ನುವರು. ಭುವನೇಶ್ವರೀ ದೇವಿಯ ಪೂಜೆಯ ಹದಿನಾಲ್ಕು ದಿನಗಳ ಬಳಿಕ ನಡುರಾತ್ರಿಯಲ್ಲಿ ಹದಿನಾಲ್ಕು ದೇವತೆಗಳ ಪೂಜೆ ಒಂದು ನಡೆಯುವುದು. ಈ ಪೂಜೆಯ ಕಾಲದಲ್ಲಿ ಒಂದು ಹಗಲು ಎರಡು ರಾತ್ರಿ ಯಾರೂ ಮನೆಯಿಂದ ಹೊರಬರುವಂತಿಲ್ಲ. ರಾಜನೂ ಕೂಡ. ರಾಜನೇನಾದರೂ ಹೊರಗೆ ಬಂದದ್ದೇ ಆದರೆ ಚೊಂತಾಯಿಯ ಬಳಿ ಅವನು ತಪ್ಪುಹಣ ತೆರಬೇಕು. ಈ ಪೂಜೆಯ ರಾತ್ರಿ ದೇವಾಲಯದಲ್ಲಿ ನರಬಲಿ ಆಗುವುದೆಂದು ವದಂತಿ ಇತ್ತು. ಈ ಪೂಜೆಯ ಸಂದರ್ಭದಲ್ಲಿ ಎಲ್ಲಕ್ಕೂ ಮೊದಲಾಗಿ ಬಲಿಯಾಗುವ ಪಶು ಅರಮನೆಯ ದಾನ ಎಂದು ಸ್ವೀಕರಿಸಲಾಗುವದು. ಈ ಬಲಿಪಶುವನ್ನು ಸ್ವೀಕರಿಸುವುದಕ್ಕಾಗಿ ಚೊಂತಾಯಿ ರಾಜನ ಬಳಿಗೆ ಬಂದಿರುವನು. ಪೂಜೆಗೆ ಇನ್ನೂ ಹನ್ನೆರಡು ದಿನಗಳಿವೆ.

"ಈ ವರ್ಷದಿಂದ ದೇವಾಲಯದಲ್ಲಿ ಇನ್ನು ಜೀವ ಬಲಿ ನಡೆಯದು" ಎಂದು ರಾಜ ಹೇಳಿದ. ಸಭೆಯಲ್ಲಿದ್ದ ಜನ ಅವಾಕ್ಕಾಯಿತು. ರಾಜನ ತಮ್ಮ ನಕ್ಷತ್ರರಾಯನ ತಲೆಗೂದಲು ಸಹ ನಿಮಿರೆದ್ದಿತು.

ಚೊಂತಾಯಿ ರಘುಪತಿ ಹೇಳಿದ—ನಾನು ಕನಸು ಕಾಣುತ್ತಿರುವೆನೆ?

ರಾಜ ಮರುನುಡಿ ನುಡಿದ—"ಇಲ್ಲ, ಠಾಕೂರ್ ಇಷ್ಟು ದಿನ ನಾವು ಕನಸು ಕಾಣುತ್ತಿದ್ದೆವು. ಇಂದು ನಮಗೆ ಎಚ್ಚರವಾಯಿತು. ಹುಡುಗಿಯೊಬ್ಬಳ ರೂಪ ತಾಳಿ ತಾಯಿ ನನಗೆ ಕಾಣಿಸಿಕೊಂಡಳು. ಅವಳು

ಕರುಣಾಮಯಿ ಜನನಿಯಾಗಿ ‘ ತಾಯಿ ತನ್ನ ಜೀವದ ರಕ್ತ ಇನ್ನು ನೋಡ ಬಯಸಳು ’ ಎಂದು ಹೇಳಿ ಹೋಗಿರುವಳು.”

ರಘುಪತಿಯೆಂದ—“ ಹಾಗಾದರೆ ತಾಯಿ ಇಷ್ಟು ದಿನಗಳವರೆಗೆ ಜೀವಗಳ ರಕ್ತಪಾನಮಾಡುತ್ತ ಬಂದುದೇಕೆ ? ”

“ ಇಲ್ಲ, ಪಾನಮಾಡಲಿಲ್ಲ. ನೀವೆಲ್ಲ ರಕ್ತಪಾತಮಾಡುತ್ತಿದ್ದಾಗ ಆಕೆ ಮುಖ ತಿರುಗಿಸಿಕೊಂಡಿದ್ದಳು ” ಎಂದು ರಾಜ ಹೇಳಿದ.

ರಘುಪತಿ—“ ರಾಜಕಾರ್ಯವನ್ನು ನೀವು ಚೆನ್ನಾಗಿ ತಿಳಿದಿರುವಿರಿ ಎನ್ನುವುದರಲ್ಲಿ ಸಂದೇಹವಿಲ್ಲ. ಆದರೆ ಪೂಜೆಯ ವಿಷಯವಾಗಿ ನೀವು ಏನೇನನ್ನೂ ಅರಿಯಿರಿ. ಒಂದು ವೇಳೆ ದೇವಿಗೆ ಯಾವುದರಲ್ಲಾದರೂ ಅಸಂತೋಷ ಉಂಟಾದರೆ ನಾನೇ ಮೊದಲು ತಿಳಿದುಕೊಳ್ಳುವೆನಲ್ಲವೆ ” ಎಂದ.

ನಕ್ಷತ್ರರಾಯ ಬಹಳ ಬುದ್ಧಿವಂತನಂತೆ ತಲೆ ಆಲ್ಲಾಡಿಸುತ್ತ ಹೇಳಿದ—“ ಹೌದು, ಇದು ಸರಿಯಾದ ಮಾತು, ದೇವಿಗೆ ಒಂದು ವೇಳೆ ಯಾವುದಲ್ಲಾದರೂ ಅಸಂತೋಷ ಉಂಟಾಗಿದ್ದರೆ ಠಾಕೂರ್ ಮಹಾಶಯರಿಗೆ ಮೊದಲು ಅರಿವಾಗುತ್ತಿತ್ತು ”.

“ ಹೃದಯ ಯಾರಿಗೆ ಕಠಿಣವಾಗಿರುವದೋ ಅವರು ದೇವಿಯ ಮಾತು ಕೇಳಲಾರರು ” ಎಂದು ರಾಜನೆಂದ.

ನಕ್ಷತ್ರರಾಯ ಪುರೋಹಿತನ ಮುಖ ನಿಟ್ಟಿಸಿದ. ಇದರ ಅರ್ಥ ಈ ಮಾತಿಗೆ ಯಾವುದಾದರೊಂದು ಉತ್ತರ ಹೇಳುವುದೆಂದು.

ರಘುಪತಿ ಕಿಡಿಕಿಡಿಯಾದ. “ ಮಹಾರಾಜ್, ನೀವು ಪಾಷಂಡ ನಾಸ್ತಿಕರಂತೆ ಮಾತನಾಡುತ್ತಿರುವಿರಿ ” ಎಂದ.

ನಕ್ಷತ್ರರಾಯ ಮೆಲ್ಲನೆ ಪ್ರತಿಧ್ವನಿಯಂತೆ —“ ಹೌದು, ನಾಸ್ತಿಕರಂತೆ ಮಾತನಾಡುತ್ತಿರುವಿರಿ ” ಎಂದ.

ಗೋವಿಂದಮಾಣಿಕ್ಯ ಕೋಪೋದ್ರಿಕ್ತ ಮೂರ್ತಿ ಪುರೋಹಿತನ ಮುಖದ ಕಡೆ ನಿಟ್ಟಿಸಿ ಹೇಳಿದ—“ ಠಾಕೂರ್, ರಾಜಸಭೆಯಲ್ಲಿ ಕುಳಿತು ನೀವು ವೃಥಾ ಕಾಲಹರಣ ಮಾಡುತಿರುವಿರಿ. ದೇವಾಲಯದ ಕೆಲಸ

ಬೇಕಾದಷ್ಟಿರುವದು. ನೀವು ದೇವಾಲಯಕ್ಕೆ ಹೊರಡಿ. ಹೋಗುವಾಗ ಮಾರ್ಗದಲ್ಲಿ,—ನನ್ನ ರಾಜ್ಯದಲ್ಲಿ ಯಾರು ದೇವತೆಯ ಬಲಿ, ಜೀವಬಲಿ ಕೊಡುವರೋ ಅವರಿಗೆ ದೇಶಭ್ರಷ್ಟ ದಂಡನೆಯಾಗುವದು ಎಂದು—ಪ್ರಚಾರ ಮಾಡಿರಿ."

ಆಗ ರಘುಪತಿ ನಡುನಡುಗುತ್ತ ಎದ್ದು ನಿಂತು ಜನಿವಾರ ನೀವುತ್ತ "ಹಾಗಾದರೆ ನೀನು ನಿರ್ಮೂಲವಾಗಿ ಹೋಗು" ಎಂದ. ನಾಲ್ಕೂ ಕಡೆಯಿಂದ ಹೋ ಹೋ ಎನ್ನುತ್ತ ಸಭಾಸದರು ಪುರೋಹಿತನ ಮೇಲೆ ಬಿದ್ದರು. ರಾಜ ಇಂಗಿತದಿಂದ ಎಲ್ಲರನ್ನೂ ಅಡ್ಡಿಪಡಿಸಿದ. ಎಲ್ಲರೂ ಹಿಂದಕ್ಕೆ ಸರಿದರು.

ರಘುಪತಿ ಹೇಳಲಾರಂಭಿಸಿದ. "ನೀನು ರಾಜ, ನೀನು ಮನಸ್ಸು ಮಾಡಿದರೆ ಪ್ರಜೆಗಳ ಸರ್ವಸ್ವವನ್ನೂ ಅಪಹರಿಸಬಲ್ಲೆ. ಹೀಗೆಂದು ತಿಳಿದು ನೀನು ತಾಯಿಯ ಬಲಿ ಅಪಹರಿಸುವೆಯಲ್ಲವೆ ? ನಿನಗೆ ಸಾಧ್ಯವೇನು ? ತಾಯಿಯ ಸೇವಕ, ನಾನು ರಘುಪತಿ ಇರುವಾಗ ಅದು ಹೇಗೆ ನೀನು ಪೂಜೆಗೆ ಅಡ್ಡಿ ಮಾಡುವೆಯೋ ನೋಡೋಣ."

ಮಂತ್ರಿಗೆ ರಾಜನ ವಿಚಿತ್ರ ಸ್ವಭಾವದ ಪರಿಚಯವಿತ್ತು. ಸಂಕಲ್ಪದಿಂದ ರಾಜನನ್ನು ಶೀಘ್ರದಲ್ಲಿ ಮಾರ್ಪಡಿಸಲು ಸಾಧ್ಯವಿಲ್ಲ ಎಂದು ಆತ ತಿಳಿದಿದ್ದ. ಆತ ಮೆಲ್ಲಮೆಲ್ಲನೆ ಆಡಿದ, "ಮಹಾರಾಜ, ತಮ್ಮ ದಿವಂಗತ ಪಿತೃವರ್ಗ ಒಂದೇ ಸಮನೆ ದೇವಿಯ ಬಳಿ ನಿಯಮಿತ ಬಲಿ ಕೊಡುತ್ತ ಬಂದಿರುವರು. ಎಂದೂ ಇದಕ್ಕೆ ವ್ಯತಿರಿಕ್ತವಾಗಿ ನಡೆದಿಲ್ಲ" ಮಂತ್ರಿ ಸುಮ್ಮನಾದ.

ರಾಜ ತೆಪ್ಪನೆ ಕುಳಿತಿದ್ದ. ಮಂತ್ರಿ—"ಇಂದು, ಇಷ್ಟು ದಿನಗಳ ಬಳಿಕ ತಮ್ಮ ಪಿತೃ ಪುರುಷರಿಂದ ಸ್ಥಾಪಿತವಾದ ಆ ಪ್ರಾಚೀನ ಪೂಜೆಯಲ್ಲಿ ಮಾರ್ಪಾಡು ಮಾಡಿದರೆ ಸ್ವರ್ಗದಲ್ಲಿ ಅವರುಗಳು ಅತೃಪ್ತಿಗೊಳ್ಳುವರು"—ಎಂದ.

ಮಹರಾಜ ಚಿಂತಿಸತೊಡಗಿದ. ನಕ್ಷತ್ರರಾಯ ತಿಳುವಳಿಕೆಯ ಸಹಾಯದಿಂದ—"ಹೌದು, ಸ್ವರ್ಗದಲ್ಲಿ ಅವರುಗಳು ಅತೃಪ್ತಿಪಡುವರು" ಎಂದ.

ಮಂತ್ರಿ ಪುನಃ ವಿವರಿಸಿದ—"ಮಹಾರಾಜ, ಒಂದು ಕೆಲಸ ಮಾಡಿರಿ. ಸಹಸ್ರಬಲಿ ನಡೆಯುವೆಡೆ ಒಂದು ನೂರು ಬಲಿಗೆ ಅಪ್ಪಣೆ ಕೊಡಿ".

ಸಭಾಸವರು ಸಿಡಿಲು ಬಡಿದವರಂತೆ ಮಾತಿಲ್ಲದೆ ನಿಂತಿದ್ದರು. ಗೋವಿಂದ ಮಾಣಿಕ್ಯನೂ ಚಿಂತಿಸಲಾರಂಭಿಸಿದ. ಕುಪಿತ ಪುರೋಹಿತ ಸಾಮರ್ಥ್ಯವಿಲ್ಲದವನಾಗಿ ಸಭೆಯಿಂದ ಎದ್ದು ಹೊರಡಲು ಪ್ರಯತ್ನಿಸಿದ.

ಆ ಸಮಯದಲ್ಲಿ ಹೇಗೋ ಕಾವಲುಗಾರರ ಕೈ ತಪ್ಪಿಸಿಕೊಂಡು ಬರಿಯ ಮೈ ಬರಿಯ ಕಾಲಿನಲ್ಲಿ ಪುಟ್ಟ ಹುಡುಗನೊಬ್ಬ ಸಭೆಯನ್ನು ಪ್ರವೇಶಿಸಿದ. ರಾಜಸಭೆಯ ನಡುವೆ ನಿಂತು ರಾಜನ ಕಡೆಗೆ ದೊಡ್ಡ ದೊಡ್ಡದಾಗಿ ಕಣ್ಣು ತೋರಿಸುತ್ತ "ಅಕ್ಕ ಎಲ್ಲಿ?" ಎಂದು ಪ್ರಶ್ನಿಸಿದ.

ವಿಶಾಲವಾದ ರಾಜಸಭೆ ಇದ್ದಕ್ಕಿದ್ದಂತೆ ನಿಸ್ತಬ್ಧವಾಯಿತು. ವಿಶಾಲ ಭವನದಲ್ಲಿ ಕೇವಲ ಹುಡುಗನೊಬ್ಬನ ಕಂಠಧ್ವನಿ "ಅಕ್ಕ ಎಲ್ಲಿ" ಎಂದು ಪ್ರತಿಧ್ವನಿತವಾಯಿತು.

ಕೂಡಲೇ ರಾಜ ಸಿಂಹಾಸನದಿಂದಿಳಿದು ಹುಡುಗನನ್ನು ತೊಡೆಗೆ ಎತ್ತಿಕೊಂಡು ದೃಢಸ್ವರದಿಂದ "ಇಂದಿನಿಂದ ನನ್ನ ರಾಜ್ಯದಲ್ಲಿ ಪಶುಬಲಿ ನಡೆಯಕೂಡದು. ಇದರ ವಿಷಯವಾಗಿ ಬೇರೆ ಮಾತೇ ಕೂಡದು"— ಎಂದು ಮಂತ್ರಿಗೆ ತಿಳಿಸಿದ.

ಮಂತ್ರಿ "ಅಪ್ಪಣೆ" ಎಂದ.

ತಾತ ರಾಜನನ್ನು ಪ್ರಶ್ನಿಸಿದ—"ನಮ್ಮ ಅಕ್ಕ ಎಲ್ಲಿ?"

"ಅಮ್ಮನ ಹತ್ತಿರ" ಎಂದು ರಾಜ ಉತ್ತರಕೊಟ್ಟ. ತಾತ ಬಹಳ ಹೊತ್ತು ಬಾಯಲ್ಲಿ ಬೆಟ್ಟಿಟ್ಟುಕೊಂಡು ಸುಮ್ಮನಿದ್ದ. ಒಂದು ನೆಲೆ ಸಿಕ್ಕಿತಲ್ಲ ಎಂಬ ಭಾವನೆ ಅವನ ಮನಸಿಗೆ ತೋರಿತು. ಅಂದಿನಿಂದ ರಾಜ ತಾತನನ್ನು ತನ್ನ ಬಳಿಯಲ್ಲೇ ಇರಿಸಿಕೊಂಡ. ಚಿಕ್ಕಪ್ಪ ಕೇದಾರೇಶ್ವರನೂ ರಾಜನ ಬಳಿ ಆಶ್ರಯ ಪಡೆದ.

ಸಭಾಸದರು ತಮ್ಮ ತಮ್ಮಲ್ಲೇ ಹೇಳಿಕೊಳ್ಳತೊಡಗಿದರು. "ಇದು ಅರಾಜಕ ದೇಶವಾಗಿಹೋಯಿತು." ನಾವು ತಿಳಿದಿರುವುದು ಬೌದ್ಧರು

ಮಾತ್ರವೇ ರಕ್ತಪಾತಮಾಡರೆಂದು. ಕಡೆಗೆ ನಮ್ಮ ಹಿಂದುಗಳಲ್ಲೂ ಅದೇ ಪದ್ಧತಿ ಬಂದಿರುವುದಲ್ಲ.

ನಕ್ಷತ್ರರಾಯನೂ ಅವರೆಲ್ಲರ ಅಭಿಪ್ರಾಯಕ್ಕೆ ಸಂಪೂರ್ಣ ಒಪ್ಪಿಗೆ ಇತ್ತು ಹೇಳಿದನು. "ಹೌದು, ಕಡೆಗೆ ಹಿಂದುಗಳಲ್ಲೂ ಅದೇ ಪದ್ಧತಿ ಬಂದಿರುವುದಲ್ಲ—"

"ಅವನತಿಯ ಲಕ್ಷಣ ಇದಕ್ಕಿಂತ ಬೇರೇನು ಬೇಕಾದೀತು. * ಮಗ್ ಜನರಿಗೂ ನಮಗೂ ಭೇದವೇನು?" ಎಂದು ಎಲ್ಲರೂ ಭಾವಿಸಿದರು.

೪

ಭುವನೇಶ್ವರೀ ದೇವಾಲಯದ ಸೇವಕ ಜಯಸಿಂಹ ಜಾತಿಯಲ್ಲಿ ರಜಪೂತಕ್ಷತ್ರಿಯ. ಅವನ ತಂದೆ ಸುಚೇತಸಿಂಹರು ತ್ರಿಪುರದ ಅರಮನೆಯ ಹಳೆಯ ಸೇವಕರಲ್ಲೊಬ್ಬನಾಗಿದ್ದರು. ಸುಚೇತಸಿಂಹರು ಸಾಯುವಾಗ ಜಯಸಿಂಹ ತೀರ ಸಣ್ಣ ಹುಡುಗ. ಈ ಅನಾಥ ಬಾಲಕನನ್ನು ರಾಜ ದೇವಾಲಯದ ಕೆಲಸಕ್ಕೆ ನೇಮಿಸಿದರು. ಜಯಸಿಂಹ ದೇವಾಲಯದ ಪುರೋಹಿತ ರಘುಪತಿಯ ಬಳಿಯಲ್ಲೇ ದೊಡ್ಡವನಾದುದು, ಹಾಗೂ ವಿದ್ಯೆ ಕಲಿತದ್ದು. ಚಿಕ್ಕಂದಿನಿಂದಲೂ ದೇವಾಲಯದಲ್ಲಿ ಬೆಳೆದ ಜಯಸಿಂಹ ದೇವಾಲಯವನ್ನು ಮನೆಯಂತೆ ಪ್ರೀತಿಸುವನು. ದೇವಾಲಯದ ಪ್ರತಿಯೊಂದು ಮೆಟ್ಟಲು, ಪ್ರತಿಯೊಂದು ಕಲ್ಲುಕೂಡ ಅವನಿಗೆ ಪರಿಚಯವಾದದ್ದು. ಅವನಿಗೆ ತಾಯಿ ಇರಲಿಲ್ಲ. ಭುವನೇಶ್ವರಿ ವಿಗ್ರಹವನ್ನು ಅವನು ತಾಯಿಯಂತೆ ಕಾಣುವನು. ವಿಗ್ರಹದ ಎದುರು ಕುಳಿತು ಅವನು ಮಾತನಾಡುವನು. ಅವನಿಗೆ ಏಕಾಂತತೆ ಅರಿವಾಗುತಿರಲಿಲ್ಲ. ಅವನಿಗೆ ಬೇರೆ ಸ್ನೇಹಿತರೂ ಇದ್ದರು. ದೇವಾಲಯದ ಹೂದೋಟದ ಅನೇಕ ಮರಗಳನ್ನು ಅವನು ತನ್ನ ಕೈಯಿಂದಲೇ ಬೆಳಸಿದ್ದ. ಅವನ ಸುತ್ತಲೂ ಪ್ರತಿದಿನವೂ ಅವನ ಮರಗಿಡಗಳು ಬೆಳೆಯುತಿದ್ದುವು. ಬಳ್ಳಿಗಳು ಹಬ್ಬುವವು. ಕೊಂಬೆಗಳಲ್ಲಿ ಹೂ ಅರಳುವುದು. ಕರಿಯ ಬಳ್ಳಿಗಳ ಚಿಗುರುಗಳು ಯೌವನ ಗರ್ವದಿಂದ ಉದ್ಯಾನವನವನ್ನು ತುಂಬಿ ಹರಡು

* ಮಗ್—ಅರಕಾನ್ ಗಡಿಯ ನಿವಾಸಿಗಳು, ಅರಾಜಕ ದೇಶದ ಅನಾಗರಿಕರು.

ವವು. ಆದರೆ ಜಯಸಿಂಹನ ಇವೆಲ್ಲ ಅಂತರಂಗದ ಮಾತು, ಪ್ರೇಮದ ಸುದ್ದಿಯನ್ನು ಯಾರೂ ಅಷ್ಟಾಗಿ ಅರಿಯರು. ತನ್ನ ಅದ್ವಿತೀಯ ಬಲ ಸಾಹಸಗಳಿಗಾಗಿಯೇ ಅವನು ಪ್ರಸಿದ್ಧನಾಗಿದ್ದನು.

ದೇವಾಲಯದ ಕೆಲಸ ಮುಗಿಸಿ ಜಯಸಿಂಹ ಗುಡಿಸಲ ಬಾಗಿಲಲ್ಲಿ ಕುಳಿತಿರುವನು. ಎದುರಿಗೆ ದೇವಾಲಯದ ವನ. ಸಂಜೆಯ ಹೊತ್ತು. ದಟ್ಟವಾದ ಮೋಡಗಳಿಂದ ಮಳೆ ಹೊಯ್ಯುತ್ತಿರುವದು. ಹೊಸ ಮಳೆಯ ನೀರಿನಲ್ಲಿ ಜಯಸಿಂಹನ ಮರಗಿಡಗಳು ಸ್ನಾನಮಾಡುತ್ತಿರುವದು. ಮಳೆ ಹನಿಯ ನೃತ್ಯದಲ್ಲಿ ಎಲೆಎಲೆಯಲ್ಲೂ ಆನಂದ ಉಕ್ಕುತ್ತಿರುವವು. ಮಳೆ ನೀರಿನ ಸಣ್ಣ ಸಣ್ಣ ನೂರಾರು ಕೋಡಿಗಳು ಸುಳಿಸುಳಿಯಾಗಿ ಕಲಕಲ ಎನ್ನುತ್ತ ಗೋಮತಿ ನದಿಗೆ ಹೋಗಿ ಸೇರುತ್ತಿದ್ದುವು. ಜಯಸಿಂಹ ಪರಮಾನಂದದೊಡನೆ ತನ್ನ ಉದ್ಯಾನದ ಕಡೆ ನೋಡುತ್ತ ನೀರವವಾಗಿ ಕುಳಿತಿದ್ದ, ನಾಲ್ಕೂ ಕಡೆ ಮೇಘದ ಸ್ನಿಗ್ಧ ಅಂಧಕಾರ ಮರದ ನೆರಳು, ಪಲ್ಲವಗಳ ಸೊಬಗಿನ ಸಿರಿ, ಕಪ್ಪೆಗಳ ಕೋಲಾಹಲ, ಮಳೆಯ ಅವಿರಳ ಜರ ಜರ ಶಬ್ದ. ಉದ್ಯಾನವನದ ಈ ಬಗೆಯ ಹೊಸ ಮಳೆಯ ಕೋಲಾಹಲ ನೋಡಿ ಅವನ ಜೀವ ಉಬ್ಬುತ್ತಿತ್ತು.

ನೆನೆಯುತ್ತ ನೆನೆಯುತ್ತ ರಘುಪತಿ ಬಂದು ಸೇರಿದ. ಜಯಸಿಂಹ ಅವಸರ ಅವಸರವಾಗಿ ಎದ್ದು ಕಾಲು ತೊಳೆಯಲು ನೀರು ಮತ್ತು ಮಡಿ ಬಟ್ಟೆ ತಂದುಕೊಟ್ಟ.

ರಘುಪತಿ ಕೋಪಗೊಂಡು 'ಯಾರು ನಿನಗೆ ಬಟ್ಟೆ ತರಲು ಹೇಳಿದ್ದು?' ಎಂದು ಹೇಳಿ ಬಟ್ಟೆಗಳನ್ನು ತೆಗೆದು ಕೋಪದಿಂದ ಕೊಠಡಿಯೊಳಕ್ಕೆ ಬಿಸಾಡಿದ.

ಜಯಸಿಂಹ ಕಾಲು ತೊಳೆಯಲು ನೀರು ತಂದು ಮುಂದೆ ನಿಂತ. ರಘುಪತಿ ಕೋಪದ ಸ್ವರದಲ್ಲಿ 'ಸಾಕು, ಸಾಕು, ನಿನ್ನ ನೀರು. ಇಟ್ಟು ಹೋಗು' ಎಂದು ಗುಡುಗಿದ.

ಆಕಸ್ಮಿಕವಾದ ಈ ಬಗೆಯ ವ್ಯವಹಾರದ ಕಾರಣ ಅರಿಯದೆ ಜಯಸಿಂಹ ಅಚ್ಚರಿಗೊಂಡ. ನೆಲದಮೇಲಿಂದ ಬಟ್ಟೆ ಎತ್ತಿ ಮತ್ತೆ ಅದರ

ಸ್ಥಳದಲ್ಲಿಡಲು ಪ್ರಯತ್ನಿಸಿದ. ಪುನಃ ರಘುಪತಿ ಕೋಪಗೊಂಡು ಘರ್ಜಿಸಿದ. "ಇರಲಿ, ಇರಲಿ, ಆ ಬಟ್ಟೆಯನ್ನು ನೀನು ಮುಟ್ಟ ಬೇಕಾಗಿಲ್ಲ." ಹೀಗೆಂದು ತಾನೇ ಹೋಗಿ ಬಟ್ಟೆ ತೆಗೆದುಕೊಂಡುಬಂದು ನೀರಿನಿಂದ ಕಾಲು ತೊಳೆದುಕೊಂಡ.

ಜಯಸಿಂಹ ಮೆಲ್ಲಮೆಲ್ಲನೆ "ಪ್ರಭು, ನಾನೇನು ಅಪರಾಧ ಮಾಡಿದೆ" ಎಂದು ಕೇಳಿದ.

ರಘುಪತಿ ಸ್ವಲ್ಪ ಕಠಿಣ ಸ್ವರದಲ್ಲಿ—ನೀನು ಅಪರಾಧ ಮಾಡಿರುವೆ ಯೆಂದು ಯಾರು ಹೇಳಿದ್ದು—ಎಂದು ನುಡಿದ.

ಜಯಸಿಂಹ ದುಃಖದಿಂದ ಸುಮ್ಮನೆ ಕುಳಿತುಕೊಂಡ. ರಘುಪತಿ ಅಸ್ಥಿರಭಾವದಿಂದ ಗುಡಿಸಲ ಮುಂಭಾಗದಲ್ಲಿ ತಿರುಗಾಡತೊಡಗಿದ. ಈ ವಿಧದಲ್ಲಿ ರಾತ್ರಿ ಬಹಳ ಹೊತ್ತಾಯಿತು. ಮಳೆ ಒಂದೇ ಸಮನೆ ಬೀಳುತ್ತಿತ್ತು. ಕಡೆಗೆ ರಘುಪತಿ ಜಯಸಿಂಹನ ಬೆನ್ನಮೇಲೆ ಕೈಯಿಟ್ಟು ಮೃದು ಸ್ವರದಲ್ಲಿ "ವತ್ಸ, ಮಲಗಲು ಹೋಗು, ಬಹಳ ರಾತ್ರಿಯಾಗಿದೆ" ಎಂದ. ಜಯಸಿಂಹ ರಘುಪತಿಯ ಸ್ನೇಹಸ್ವರದಿಂದ ವಿಚಲಿತನಾಗಿ "ಪ್ರಭು ಮೊದಲು ಮಲಗ ಹೋಗಲಿ, ಆ ಬಳಿಕ ನಾನು ಹೋಗುವೆ" ಎಂದ.

"ನನಗಿನ್ನೂ ಹೊತ್ತಾಗುವುದು. ನೋಡು ಮಗು, ನಿನ್ನ ವಿಷಯ ದಲ್ಲಿ ನಾನು ಇಂದು ಕಠಿಣವಾಗಿ ನಡೆದುಕೊಂಡೆ. ಅನ್ಯಥಾ ಭಾವಿಸಬೇಡ. ನನ್ನ ಮನಸ್ಸು ಸರಿಯಾಗಿರಲಿಲ್ಲ. ವಿಷಯವನ್ನು ವಿವರವಾಗಿ ನಾಳೆ ಬೆಳಗ್ಗೆ ನಿನಗೆ ವಿವರಿಸುವೆ. ಇಂದು ನೀನು ಮಲಗಲು ಹೋಗು" ಎಂದು ರಘುಪತಿ ಹೇಳಿದ.

ಜಯಸಿಂಹ "ಅಪ್ಪಣೆ" ಎಂದು ಮಲಗಲು ಹೋದ. ರಘುಪತಿ ರಾತ್ರಿಯೆಲ್ಲ ಓಡಾಡತೊಡಗಿದ.

ಬೆಳಗ್ಗೆ ಜಯಸಿಂಹ ಗುರುವಿಗೆ ನಮಸ್ಕರಿಸಿ ನಿಂತ. ರಘುಪತಿ— ಜಯಸಿಂಹ, ತಾಯಿಯ ಬಲಿ ನಿಂತು ಹೋಗಿರುವುದು—ಎಂದು ಹೇಳಿದ.

ಜಯಸಿಂಹ ವಿಸ್ಮಿತನಾಗಿ—"ಇದೇನು ಮಾತು ಪ್ರಭು!".

ರಘುಪತಿ—“ ರಾಜನ ಅಪ್ಪಣೆ ಈ ರೀತಿ ”.

ಜಯಸಿಂಹ—“ ಯಾವ ರಾಜ ? ”

ರಘುಪತಿ ಕೋಪಗೊಂಡು—ಇಲ್ಲಿ ಇನ್ನೆಷ್ಟು ಜನ ರಾಜರಿರುವರು. ಮಹರಾಜ ಗೋವಿಂದ ಮಾಣಿಕ್ಯ ಅಪ್ಪಣೆ ಮಾಡಿರುವನು. ದೇವಾಲಯ ದಲ್ಲಿ ಜೀವ ಬಲಿ ಕೊಡದಂತೆ—ಎಂದು ಹೇಳಿದ.

ಜಯಸಿಂಹ—ನರಬಲಿ ?

ರಘುಪತಿ—ಓಃ, ಏನು ಸಂಕಟ, ನಾನು ಹೇಳುತ್ತಿರುವದು ಜೀವಬಲಿ ಯೆಂದು, ನೀನು ನರಬಲಿ ? ಎಂದು ಕೇಳುತ್ತಿರುವೆ.

ಜಯಸಿಂಹ—ಯಾವ ಜೀವಬಲಿಯೂ ಕೂಡದೆ ?

ರಘುಪತಿ—ಕೂಡದು.

ಜಯಸಿಂಹ—ಮಹಾರಾಜ ಗೋವಿಂದ ಮಾಣಿಕ್ಯರು ಈ ರೀತಿ ಅಪ್ಪಣೆ ಮಾಡಿರುವರೆ ?

ರಘುಪತಿ—ಹೌದು ! ಇದನ್ನು ಅದೆಷ್ಟು ಸಲ ಹೇಳಲಿ.

ಜಯಸಿಂಹ—ಬಹಳ ಹೊತ್ತು ಏನನ್ನೂ ಹೇಳಲಿಲ್ಲ. ಕೇವಲ ತನ್ನ ಮನದಲ್ಲೇ ಹೇಳಿಕೊಳ್ಳ ತೊಡಗಿದ. “ ಮಹಾರಾಜ ಗೋವಿಂದ ಮಾಣಿಕ್ಯ !” ಗೋವಿಂದ ಮಾಣಿಕ್ಯನನ್ನು ಜಯಸಿಂಹ ಚಿಕ್ಕಂದಿನಿಂದಲೂ ದೇವತೆಯೆಂದೇ ತಿಳಿದಿದ್ದ. ಆಕಾಶದ ಪೂರ್ಣ ಚಂದ್ರನ ವಿಷಯದಲ್ಲಿ ಮಕ್ಕಳ ಮನೋಭಾವ ಯಾವ ಬಗೆಯಲ್ಲಿರುವದೋ ಹಾಗೆ ಗೋವಿಂದ ಮಾಣಿಕ್ಯನ ವಿಷಯದಲ್ಲಿ ಜಯಸಿಂಹನ ಮನೋಭಾವ. ಗೋವಿಂದ ಮಾಣಿಕ್ಯನ ಪ್ರಶಾಂತಸುಂದರ ಮುಖ ನೋಡಿ ಜಯಸಿಂಹ ಪ್ರಾಣ ತ್ಯಾಗ ಮಾಡಬಲ್ಲ.

ರಘುಪತಿ—ಇದಕ್ಕೆ ಒಂದಲ್ಲ ಒಂದು ಪ್ರತಿವಿಧಾನ ಮಾಡಬೇಕಾಗು ವದು—ಎಂದ.

“ ಖಂಡಿತವಾಗಿ, ನಾನು ಮಹರಾಜರ ಬಳಿ ಹೋಗುವೆ, ಅವರಲ್ಲಿ ವಿನಯುವಾಗಿ ಹೇಳುವೆ ”—ಎಂದ ಜಯಸಿಂಹ.

ರಘುಪತಿ—“ ಆ ಮಾತು ವ್ಯರ್ಥ ”

ಜಯಸಿಂಹ “ ಹಾಗಾದರೆ ಮಾಡುವುದೇನು ? ”.

ರಘುಪತಿ ಕ್ಷಣಕಾಲ ಚಿಂತಿಸಿ ಹೀಗೆಂದ—ಅದನ್ನು ನಾಳೆ ಹೇಳುವೆ. ನಾಳೆ ಬೆಳಗ್ಗೆ ನೀನು ಯುವರಾಜ ನಕ್ಷತ್ರರಾಯನ ಬಳಿಗೆ ಹೋಗಿ ಅವನು ರಹಸ್ಯವಾಗಿ ನನ್ನನ್ನು ಬಂದು ಕಾಣಲು ಹೇಳು—ಎಂದ.

೫

ಮರುದಿನ ಬೆಳಗ್ಗೆ ನಕ್ಷತ್ರರಾಯ ಬಂದು ರಘುಪತಿಗೆ ನಮಸ್ಕಾರ ಮಾಡಿ—‘ ಠಾಕೂರ್ ಏನಪ್ಪಣೆ ’ ಎಂದು ಕೇಳಿದ.

ರಘುಪತಿ—“ ನಿನಗೆ ದೇವಿಯ ಅಪ್ಪಣೆ ಇದೆ. ಮೊದಲು ತಾಯಿಗೆ ವಂದಿಸಲು ಹೋಗೋಣ.”

ಇಬ್ಬರೂ ದೇವಾಲಯಕ್ಕೆ ಹೋದರು. ಸಂಗಡವೆ ಜಯಸಿಂಹನೂ ಹೊರಟ. ನಕ್ಷತ್ರರಾಯ ಭುವನೇಶ್ವರೀ ವಿಗ್ರಹದ ಎದುರಿನಲ್ಲಿ ಸಾಷ್ಟಾಂಗ ನಮಸ್ಕಾರಮಾಡಿದ. ರಘುಪತಿ ನಕ್ಷತ್ರರಾಯನಿಗೆ—“ ಕುಮಾರ, ನೀನು ರಾಜನಾಗುವೆ ” ಎಂದು ಹೇಳಿದ.

ನಕ್ಷತ್ರರಾಯ—“ ನಾನು ರಾಜನಾಗುವೆನೆ ? ಠಾಕೂರ್ ಮಹಾಶಯರು ಹೇಳುವುದು ಸರಿಯಲ್ಲ.” ಹೀಗೆಂದು ನಕ್ಷತ್ರರಾಯ ಬಹಳವಾಗಿ ನಗಲಾರಂಭಿಸಿದ.

ರಘುಪತಿ ಹೇಳಿದ—“ ನಾನು ಹೇಳುತ್ತಿರುವೆ. ನೀನು ದೊರೆಯಾಗುವೆ ”.

ನಕ್ಷತ್ರರಾಯನೆಂದ—ನೀವು ಹೇಳುವಿರಿ, ನಾನು ರಾಜನಾಗುವೆನೆಂದು—ಎಂದು ಹೇಳಿ ರಘುಪತಿಯ ಮುಖ ನಿಟ್ಟಿಸಿದ.

ರಘುಪತಿ—ನಾನೇನು ಸುಳ್ಳು ಹೇಳುತ್ತಿರುವೆನೇನು ?

ನಕ್ಷತ್ರರಾಯ—ನೀವು ಸುಳ್ಳಾಡುವಿರೇನು ? ಅದು ಹೇಗೆ ಸಾಧ್ಯ ನೋಡಿ, ಠಾಕೂರ್ ಮಹಾಶಯ, ನೆನ್ನೆ ನಾನು ಕಪ್ಪೆಯ ಕನಸುಕಂಡೆ. ಸರಿ ಕನಸಿನಲ್ಲಿ ಕಪ್ಪೆ ಕಂಡರೆ ಏನಾಗುವುದು ಹೇಳಿ ಕೇಳೋಣ—ಎಂದ.

ರಘುಪತಿ—ನಗು ತಡೆದುಕೊಂಡು—"ಯಾವ ತರಹದ ಕಪ್ಪೆ. ಅದರ ಹಣೆಯಲ್ಲಿ ಮಚ್ಚೆಯಿತ್ತೆ?" ಎಂದ.

ನಕ್ಷತ್ರರಾಯ ಹೆಮ್ಮೆಯೊಡನೆ "ಅದರ ಹಣೆಯಲ್ಲಿ ಚಿಹ್ನೆಯಿಲ್ಲದೆ ಇರುವುದೇನು. ಚಿಹ್ನೆ ಇಲ್ಲದೆ ಮತ್ತೆ" ಎಂದ.

ರಘುಪತಿ—"ಸರಿ! ಹಾಗಾದರೆ ನಿನಗೆ ಪಟ್ಟಾಭಿಷೇಕಯೋಗ"

ನಕ್ಷತ್ರರಾಯ—ಹಾಗಾದರೆ ನನಗೆ ಪಟ್ಟಾಭಿಷೇಕಯೋಗ. ನನಗೆ ಪಟ್ಟ ಸಿಕ್ಕುವುದೆಂದು ನೀವು ಹೇಳುತ್ತಿರುವಿರಿ. ಒಂದು ವೇಳೆ ಆಗದಿದ್ದರೋ —ಎಂದ.

"ನನ್ನ ಮಾತು ಸುಳ್ಳಾಗುವುದೆ? ಹಾಗೆನ್ನುವೆಯಾ?" ಎಂದು ರಘುಪತಿ ಕೇಳಿದ.

ನಕ್ಷತ್ರರಾಯ ಹೇಳಿದ—"ಇಲ್ಲ, ಇಲ್ಲ, ಆ ಮಾತು ನಡೆಯದು. ನನಗೆ ಪಟ್ಟಾಭಿಷೇಕ ನಡೆಯುವುದೆಂದು ನೀವು ಹೇಗೆ ಹೇಳುವಿರಿ. ಯೋಚಿಸಿನೋಡೋಣ. ಒಂದು ವೇಳೆ ನಡೆಯದಿದ್ದರೆ, ದೇವರ ದಯೆಯಿಂದ ಹೀಗಾಗದಿದ್ದರೋ?"

ರಘುಪತಿ—"ಇಲ್ಲ, ಇಲ್ಲ, ಇದು ಖಂಡಿತ ಅನ್ಯಥಾ ಆಗದು."

ನಕ್ಷತ್ರರಾಯ—"ಅನ್ಯಥಾ ಆಗದೆ. ಇದು ಅನ್ಯಥಾ ಆಗದೆಂದು ನೀವು ಹೇಳುವಿರಿ. ನೋಡಿ. ಠಾಕೂರ್ ಮಹಾಶಯ, ನಾನು ರಾಜನಾದರೆ ನಿಮ್ಮನ್ನು ಮಂತ್ರಿಯನ್ನಾಗಿ ಮಾಡುವೆ".

ರಘುಪತಿ—ಮಂತ್ರಿಪದವಿಯನ್ನು ನಾನು ಕಾಲಿನಿಂದ ನೂಕುವೆ.

ನಕ್ಷತ್ರರಾಯ—ಉದಾರ ಭಾವದಿಂದ "ಒಳ್ಳೆಯದು. ಜಯಸಿಂಹನನ್ನು ಮಂತ್ರಿಯನ್ನಾಗಿ ಮಾಡುವೆ" ಎಂದ.

ರಘುಪತಿ—ಆ ಮಾತು ಹಿಂದಿನಿಂದ ಆಗಲಿ. ರಾಜನಾಗುವ ಮೊದಲು ಏನು ಮಾಡಬೇಕು ಎನ್ನುವುದನ್ನು ಮೊದಲು ಕೇಳು. ತಾಯಿ ರಾಜರಕ್ತ ಬಯಸುವಳು. ಸ್ವಪ್ನದಲ್ಲಿ ನನಗೆ ಹೀಗೆ ಅಪ್ಪಣೆ ಆಗಿರುವದು.

“ ತಾಯಿ ರಾಜರಕ್ತ ಬಯಸುವಳು. ಸ್ವಪ್ನದಲ್ಲಿ ನಿಮಗೆ ಈ ರೀತಿ ಅಪ್ಪಣೆಯಾಗಿರುವದು. ಇದು ಸರಿಯಾದ ಮಾತು ”—ಎಂದ ನಕ್ಷತ್ರರಾಯ.

ರಘುಪತಿ—“ ನೀನು ಗೋವಿಂದಮಾಣಿಕ್ಯನ ರಕ್ತ ತರಬೇಕು ”.

ನಕ್ಷತ್ರರಾಯ ಸ್ವಲ್ಪ ಬೆರಗಾಗಿ ನಿಂತ. ಈ ಮಾತು ಅಷ್ಟಾಗಿ ಸರಿ ಎಂದು ತೋರಲಿಲ್ಲ.

ರಘುಪತಿ ತೀವ್ರಸ್ವರದಲ್ಲಿ—ಇದ್ದಕ್ಕಿದ್ದಂತೆ ಭ್ರಾತೃಸ್ನೇಹ ಉಂಟಾಗಿಲ್ಲವಲ್ಲ—ಎಂದ.

ನಕ್ಷತ್ರರಾಯ ಒಣನಗೆ ನಕ್ಕು—ಹ್ಹ ಹ್ಹ ಹ್ಹ ಭ್ರಾತೃಸ್ನೇಹ, ಏನೇ ಆಗಲಿ ಚೆನ್ನಾಗಿ ಹೇಳಿದಿರಿ ಠಾಕೂರ್ ಮಹಾಶಯ. ಭ್ರಾತೃಸ್ನೇಹ ! ಇಂಥ ನಗೆಯ ಮಾತು, ಇಂತಹ ಅಪಹಾಸ್ಯದ ಮಾತು ಬೇರೊಂದಿಲ್ಲ. ಭ್ರಾತೃಸ್ನೇಹ, ಎಂತಹ ನಂಬಿಕೆಯ ಮಾತು—ಆದರೆ ನಕ್ಷತ್ರರಾಯನ ಹೃದಯದಲ್ಲಿ ಭ್ರಾತೃಸ್ನೇಹ ಎಚ್ಚೆತ್ತಿರುವುದು, ಅದನ್ನು ನಕ್ಕು ಹಾರಿಸುವ ಸಾಮರ್ಥ್ಯ ಇಲ್ಲ, ಎನ್ನುವುದನ್ನು ಅಂತರ್ಯಾಮಿಯೇ ಬಲ್ಲ.

“ ಹಾಗಾದರೆ ಏನು ಮಾಡುವೆ ಹೇಳು ” ಎಂದು ರಘುಪತಿ ಕೇಳಿದ.

ನಕ್ಷತ್ರರಾಯನೆಂದ—ಏನು ಮಾಡಲಿ ಹೇಳಿ.

ರಘುಪತಿ—ಹೇಳುವುದನ್ನು ಗಮನವಿಟ್ಟು ಕೇಳು, ನೀನು ಗೋವಿಂದಮಾಣಿಕ್ಯನ ರಕ್ತವನ್ನು ತಾಯಿಯ ಕಾಣಿಕೆಯಾಗಿ ತರಬೇಕು.

ನಕ್ಷತ್ರರಾಯ ಮಂತ್ರದಂತೆ—ಗೋವಿಂದ ಮಾಣಿಕ್ಯನ ರಕ್ತವನ್ನು ತಾಯಿಯ ಕಾಣಿಕೆಯಾಗಿ ತರಬೇಕು.

ರಘುಪತಿ ಅತಿ ತಿರಸ್ಕಾರದೊಡನೆ ಹೇಳಿದ—“ ಇಲ್ಲ, ನಿನ್ನಿಂದ ಏನೂ ಸಾಧ್ಯವಾಗದು.”

ನಕ್ಷತ್ರರಾಯನೆಂದ—ಏಕೆ ಆಗದು, ಹೇಳಿದಂತೆ ಆಗುವುದು. ನೀವು ಅಪ್ಪಣೆಮಾಡುತ್ತಿರುವಿರಿ ?

ರಘುಪತಿ—“ ಹೌದು, ನಾನು ಅಪ್ಪಣೆಮಾಡುವೆ ”.

ನಕ್ಷತ್ರರಾಯ—“ ಏನು ಅಪ್ಪಣೆಮಾಡುವಿರಿ ”.

ರಘುಪತಿ ಕೋಪಗೊಂಡು ಹೇಳಿದ—“ ತಾಯಿಯ ಇಚ್ಛೆ, ಅವಳು ರಾಜರಕ್ತ ಕಾಣಬಯಸುವಳು. ನೀನು ಗೋವಿಂದ ಮಾಣಿಕ್ಯನ ರಕ್ತ ತೋರಿಸಿ ಅವಳ ಇಚ್ಛೆ ಪೂರ್ತಿಗೊಳಿಸಬೇಕು. ಇದೇ ನನ್ನ ಆಜ್ಞೆ.”

ನಕ್ಷತ್ರರಾಯ—“ ನಾನು ಈ ಕ್ಷಣ ಹೋಗಿ ಫತೇಖಾನನನ್ನು ಈ ಕೆಲಸಕ್ಕೆ ನಿಯಮಿಸುವೆ.”

ರಘುಪತಿ—ಹಾಗಾಗದು, ಬೇರೆ ಯಾರಿಗೂ ಇದರ ಅನುಸ್ವಾರ ವಿಸರ್ಗ ತಿಳಿಸಕೂಡದು. ಕೇವಲ ಜಯಸಿಂಹನನ್ನು ನಿನ್ನ ಸಹಾಯಕ್ಕೆ ನಿಯಮಿಸುವೆ. ನಾಳೆ ಬೆಳಗ್ಗೆ ಬಂದು ಯಾವ ಉಪಾಯದ ಮೂಲಕ ಈ ಕಾರ್ಯ ಸಾಧಿಸಬೇಕು ಎಂಬುದನ್ನು ತಿಳಿಸುವೆ.

ನಕ್ಷತ್ರರಾಯ ರಘುಪತಿಯ ಕೈಯಿಂದ ಪಾರಾಗಿ ನೆಮ್ಮದಿ ಹೊಂದಿದ. ಸಾಧ್ಯವಾದಷ್ಟು ಬೇಗ ಹೊರಗೆ ನಡೆದುಬಿಟ್ಟ.

೬

ನಕ್ಷತ್ರರಾಯ ಹೋದ ಬಳಿಕ ಜಯಸಿಂಹನೆಂದ—“ ಗುರುದೇವ, ಇಂಥ ಭಯಾನಕ ಮಾತು ಎಂದೂ ಕೇಳಿಲ್ಲ. ನೀವು ತಾಯಿಯ ಸಮ್ಮುಖದಲ್ಲಿ ಸೋದರನಿಂದ ಸೋದರನ ಹತ್ಯೆಯ ವಿಚಾರ ಮಾಡಿದಿರಿ. ಇಲ್ಲಿ ನಿಂತು ನಾನೂ ಅದನ್ನು ಕೇಳಬೇಕಾಯಿತು.

ರಘುಪತಿ—“ ಬೇರೆ ಉಪಾಯವೇನಿದೆ ಹೇಳು.”

ಜಯಸಿಂಹ—“ ಉಪಾಯ ! ಯಾವ ಉಪಾಯ ”

ರಘುಪತಿ—ನೀನೂ ನಕ್ಷತ್ರರಾಯನಂತೆ ಆದೆಯೆಂದು ತೋರುವುದು. ಹಾಗಾದರೆ ಇಷ್ಟು ಹೊತ್ತು ಕೇಳಿದ್ದೇನು ?

ಜಯಸಿಂಹ—ಯಾವುದನ್ನು ಕೇಳಿದೆನೋ ಅದು ಕೇಳಲು ಯೋಗ್ಯವಾದುದಲ್ಲ. ಅದನ್ನು ಕೇಳಿದರೆ ಪಾಪ ಬರುವದು.

ರಘುಪತಿ—ಪಾಪ ಪುಣ್ಯಗಳನ್ನು ನೀನೇನು ಬಲ್ಲೆ ?

ಜಯುಸಿಂಹ—ಇಷ್ಟುಕಾಲ ನಿಮ್ಮ ಬಳಿ ಶಿಕ್ಷಣಪಡೆದು ಪಾಪ ಪುಣ್ಯದ ವಿವರ ತಿಳಿಯದೇನು?

ರಘುಪತಿ—ಕೇಳು ಮಗು, ನಿನಗೆ ಪಾಪ ಪುಣ್ಯ ಇಲ್ಲದಂತಹ ಇನ್ನೊಂದು ಪಾಠ ಕಲಿಸುವೆ. ತಂದೆಯಾರು, ಸೋದರನಾರು, ಯಾರಿಗೆ ಯಾರು. ಹತ್ಯೆ ಒಂದು ವೇಳೆ ಪಾಪವಾದರೆ ಎಲ್ಲ ಹತ್ಯೆಯೂ ಸಮಾನ; ಆದರೆ ಹತ್ಯೆ ಪಾಪ ಎಂದು ಹೇಳಿದವರಾರು. ಪ್ರತಿ ದಿನವೂ ಹತ್ಯೆ ನಡೆಯುವದು. ಕೆಲವರು ತಲೆಯಮೇಲೆ ಬಂಡೆ ಬಿದ್ದು ಸಾಯುವರು. ಕೆಲವರು ಪ್ರವಾಹದಲ್ಲಿ ಮುಳುಗಿ ಸಾಯುವರು. ಕೆಲವರು ಮಹಾಮಾರಿಗೆ ತುತ್ತಾಗಿ ಸಾಯುವರು. ಕೆಲವರು ಮನುಷ್ಯರ ಚೂರಿಯ ಇರಿತಕ್ಕೆ ಸಿಕ್ಕಿ ಸಾಯುವರು. ಅವೆಷ್ಟು ಇರುವೆಗಳು ಪ್ರತಿನಿತ್ಯ ನಮ್ಮ ಕಾಲ ತುಳಿತಕ್ಕೆ ಸಿಕ್ಕಿ ಸಾಯುವವು. ನಾವು ಅವುಗಳಿಗಿಂತ ಅಷ್ಟೊಂದು ದೊಡ್ಡವರೇನು? ಈ ಎಲ್ಲ ಕ್ಷುದ್ರ ಪ್ರಾಣಿಗಳ ಹುಟ್ಟು-ಸಾವು ಆಟವೇನೂ ಅಲ್ಲ, ಮಹಾ ಶಕ್ತಿಯ ಮಾಯೆಯೂ ಅಲ್ಲ. ಕಾಲರೂಪಿಣಿ ಮಹಾಮಾಯೆಯ ಬಳಿ ಪ್ರತಿ ದಿನ ಹೀಗೆ ಅವೆಷ್ಟು ಕೋಟಿ ಪ್ರಾಣಿಗಳ ಬಲಿದಾನ ನಡೆಯುವದು. ಜಗದ ನಾಲ್ಕೂ ದಿಕ್ಕಿನಿಂದ ಜೀವರಕ್ತದ ಹೊಳೆ ಆಕೆಯ ದೊಡ್ಡ ಬಾಯಿಗೆ ಬಂದು ಧುಮುಕುತಿರುವವು. ನಾನೂ ಆ ರಕ್ತದ ಹೊಳೆಗೆ ಕೇವಲ ಒಂದು ಹನಿ ಕೂಡಿಸುವೆ. ತನ್ನ ಬಲಿಯನ್ನು ಆಕೆ ತಾನೇ ಒಂದು ಕಾಲಕ್ಕೆ ಸ್ವೀಕರಿಸುವಳು. ನಾನು ಕೇವಲ ನಡುವೆ ನಿಂತ ಸಾಧನ ಮಾತ್ರ.

ಆಗ ಜಯಸಿಂಹ ವಿಗ್ರಹದ ಕಡೆಗೆ ತಿರುಗಿ ಹೇಳತೊಡಗಿದ. "ಇದಕ್ಕಾಗಿಯೇನು ಎಲ್ಲರೂ ನಿನ್ನನ್ನು ತಾಯಿ ಎನ್ನುವದು. ತಾಯೆ! ನೀನು ಇಷ್ಟು ಪಾಷಾಣಿಯೆ! ರಾಕ್ಷಸೀ, ಸಮಸ್ತ ಜಗತ್ತಿನಿಂದ ರಕ್ತ ಸುರಿಸಿ ತಂದು ಹೊಟ್ಟೆ ತುಂಬಿಕೊಳ್ಳುವುದಕ್ಕಾಗಿಯೆ ನೀನು ಆ ಉದ್ದವಾದ ನಾಲಿಗೆ ಹೊರಕ್ಕೆ ಚಾಚಿಕೊಂಡಿರುವುದು? ಸ್ನೇಹ, ಪ್ರೇಮ, ಧರ್ಮ, ಸೌಂದರ್ಯ ಧರ್ಮ ಎಲ್ಲವೂ ಮಿಥ್ಯೆ; ಕೇವಲ ನಿನ್ನ ಅನಂತ ರಕ್ತದಾಹ ಮಾತ್ರ ಸತ್ಯ. ನಿನ್ನ ಹೊಟ್ಟೆ ತುಂಬುವುದಕ್ಕಾಗಿಯೆ ಮನುಷ್ಯ ಮನುಷ್ಯನ ಕತ್ತಿಗೆ ಚೂರಿ ಚುಚ್ಚುವುದು, ಸೋದರ ಸೋದರನನ್ನು ಕೊಲೆಮಾಡುವದು, ತಂದೆ ಮಗ

ಹೊಡೆದಾಡುವದು! ಕಠಿಣೆ, ಸತ್ಯ ಸತ್ಯವಾಗಿಯೂ ನಿನಗೆ ಈ ಇಷ್ಟ ಇರುವು ದಾದರೆ ಮೇಘ ರಕ್ತವರ್ಷಣ ಕರೆಯದಿರುವುದೇಕೆ? ಕರುಣಾರೂಪಿಣಿ, ನದಿ ರಕ್ತದ ಹೊಳೆಯಾಗಿ ರಕ್ತಸಮುದ್ರಕ್ಕೆ ಹೋಗಿ ಸೇರದಿರುವುದೇಕೆ! ಇಲ್ಲ ತಾಯಿ, ನೀನು ಸ್ಪಷ್ಟವಾಗಿ ಹೇಳು—ಈ ಶಿಕ್ಷಣ ಮಿಥ್ಯೆ, ಈ ಶಾಸ್ತ್ರ ಮಿಥ್ಯೆ, ನನ್ನ ತಾಯಿಯನ್ನು ತಾಯಿ ಎನ್ನರು, ಮಕ್ಕಳ ರಕ್ತಕ್ಕಾಗಿ ದಾಹ ಗೊಂಡಿರುವ ರಾಕ್ಷಸಿ ಎನ್ನುವರು. ಈ ಮಾತನ್ನು ನಾನು ಸಹಿಸಲಾರೆ— ಜಯಸಿಂಹನ ಕಣ್ಣುಗಳಿಂದ ನೀರು ಹರಿಯ ತೊಡಗಿತು. ಅವನು ತನ್ನ ವಿಷಯವಾಗಿ ತಾನೇ ಚಿಂತಿಸಲಾರಂಭಿಸಿದ. ಇಷ್ಟೊಂದು ಸಂಗತಿ ಹಿಂದೆಂದೂ ಅವನ ಮನಸ್ಸಿಗೆ ತೋರಿರಲಿಲ್ಲ. ರಘುಪತಿ ಅವನಿಗೆ ಹೊಸ ಶಾಸ್ತ್ರಪಾಠ ಹೇಳಿಕೊಡದಿದ್ದರೆ ಅವನ ಮನದಲ್ಲಿ ಎಂದಿಗೂ ಇಷ್ಟೊಂದು ವಿಚಾರ ಹೊರ ಬರುತ್ತಿರಲಿಲ್ಲ.

ರಘುಪತಿ ಕಿರುನಗೆ ನಕ್ಕು ಹೇಳಿದ—"ಹಾಗಾದರೆ ಬಲಿದಾನದ ವಿಷಯವನ್ನು ಸಂಪೂರ್ಣವಾಗಿ ಬಿಡಬೇಕಾದೀತು.

ಜಯಸಿಂಹ ಚಿಕ್ಕಂದಿನಿಂದಲೂ ಪ್ರತಿನಿತ್ಯ ಬಲಿದಾನ ನೋಡುತ್ತ ಬಂದಿರುವನು. ಇದರಿಂದ ದೇವಾಲಯದಲ್ಲಿ ಯಾವುದೇ ಬಲಿದಾನ ಯಾವಕಾಲದಲ್ಲಾದರೂ ನಿಲ್ಲಬೇಕಾದೀತು ಅಥವಾ ನಿಲ್ಲುವುದು ಯುಕ್ತ ಎಂಬ ಮಾತು ಯಾವ ಬಗೆಯಲ್ಲೂ ಅವನ ಮನದಲ್ಲಿ ಮೂಡಿರಲಿಲ್ಲ. ಅಷ್ಟೇಕೆ ಈ ಮಾತು ನೆನೆದರೇ ಅವನ ಹೃದಯಕ್ಕೆ ನೋವು ಉಂಟಾ ಗುವದು. ಇದರಿಂದಲೇ ರಘುಪತಿಯ ಮಾತಿಗೆ ಉತ್ತರವಾಗಿ ಜಯ ಸಿಂಹ —"ಅದು ಬೇರೆ ಮಾತು. ಅದಕ್ಕೆ ಯಾವುದೋ ಅರ್ಥ ಇರುವುದು. ಅದರಲ್ಲಿ ಯಾವ ಪಾಪವೂ ಇಲ್ಲ. ಆದರೆ ಹೀಗೆಂದು ಸೋದರ ಸೋದರನನ್ನು ಕೊಲೆಮಾಡುವುದೆ! ಹೀಗೆಂದು ಮಹಾರಾಜ ಗೋವಿಂದ ಮಾಣಿಕ್ಯನನ್ನು! ಪ್ರಭು, ನಿಮ್ಮ ಕಾಲು ಹಿಡಿದು ಬೇಡಿಕೊಳ್ಳುವೆ. ನನ್ನನ್ನು ಮೋಸಗೊಳಿಸಬೇಡಿ, ಸತ್ಯವಾಗಿಯೂ ತಾಯಿ ಸ್ವಪ್ನದಲ್ಲಿ ರಾಜರಕ್ತ ಇಲ್ಲದೆ ಅವಳಿಗೆ ತೃಪ್ತಿಯಾಗದು ಎಂದುಹೇಳಿರುವಳೆ?" ಎಂದು ಕೇಳಿದ.

ರಘುಪತಿ ಕ್ಷಣಕಾಲ ಸುಮ್ಮನಿದ್ದು ಹೇಳಿದ—“ ಸತ್ಯವಲ್ಲದೆ ಮಿಥ್ಯೆ ಹೇಳುವೆನೆ ? ನಿನಗೆ ನನ್ನಲ್ಲಿ ಅನುಮಾನವೆ ? ”

ಜಯಸಿಂಹ ರಘುಪತಿಯ ಪಾದಧೂಳಿ ತೆಗೆದುಕೊಂಡು ಹೇಳಿದ— “ ಗುರುದೇವನ ವಿಷಯದಲ್ಲಿ ನನ್ನ ನಂಬಿಕೆ ಶಿಥಿಲವಾಗಿಲ್ಲ, ಆದರೆ ನಕ್ಷತ್ರ ರಾಯನೂ ರಾಜಕುಲದಲ್ಲಿ ಹುಟ್ಟಿರುವನಲ್ಲ.”

ರಘುಪತಿ ಹೇಳಿದ—“ ದೇವತೆಯ ಸ್ವಪ್ನ ಇಂಗಿತಮಾತ್ರ. ಎಲ್ಲ ಮಾತೂ ಕೇಳದು, ಹೆಚ್ಚು ಭಾಗ ಊಹಿಸಿಕೊಳ್ಳಬೇಕು. ಗೋವಿಂದ ಮಾಣಿಕ್ಯನ ವಿಷಯದಲ್ಲಿ ದೇವಿ ಅಪ್ರಸನ್ನಳಾಗಿರುವುದು ಸ್ಪಷ್ಟವಾಗಿ ಕಾಣುತ್ತಿರುವುದು, ಅಸಂತೋಷಕ್ಕೆ ಸಂಪೂರ್ಣ ಕಾರಣವೂ ಹುಟ್ಟಿರುವದು. ಅದರಿಂದಲೇ ದೇವಿ ರಾಜರಕ್ತ ಬಯಸಿರುವದು. ಇವರಿಂದಲೇ ಅದು ಗೋವಿಂದ ಮಾಣಿಕ್ಯನ ರಕ್ತ ಎಂದು ಅರ್ಥಮಾಡಿಕೊಳ್ಳಬೇಕು.”

“ ಅದು ಸತ್ಯವಾದರೆ ನಾನೇ ರಾಜರಕ್ತ ತರುವೆ—ನಕ್ಷತ್ರರಾಯ ನನ್ನು ಪಾಪದಲ್ಲಿ ಮುಳುಗಿಸಬೇಡಿ ” ಎಂದು ಜಯಸಿಂಹ ಹೇಳಿದ.

ರಘುಪತಿ—“ ದೇವಿಯ ಅಪ್ಪಣೆ ನಡೆಸುವುದರಲ್ಲಿ ಯಾವ ಪಾಪವೂ ಇಲ್ಲ.”

ಜಯಸಿಂಹ—ಪುಣ್ಯ ಇದೆಯಲ್ಲವೆ ಪ್ರಭು, ಆ ಪುಣ್ಯ ನಾನೇ ಗಳಿಸಿಕೊಳ್ಳುವೆ.

“ ಹಾಗಾದರೆ ನಿಜವಾಗಿಯೂ ಹೇಳುವೆಯ ಮಗು, ನಾನು ನಿನ್ನನ್ನು ಬಾಲ್ಯದಿಂದಲೂ ಮಗನಿಗಿಂತ ಹೆಚ್ಚು ಮಮತೆಯಿಂದ, ಪ್ರಾಣಕ್ಕಿಂತಲೂ ಅಧಿಕವಾಗಿ ಪ್ರೀತಿಸಿ ಕಾಪಾಡುತ್ತ ಬಂದಿರುವೆ, ನಾನು ನಿನ್ನನ್ನು ಕಳೆದುಕೊಳ್ಳಲಾರೆ. ನಕ್ಷತ್ರರಾಯ ಗೋವಿಂದ ಮಾಣಿಕ್ಯನನ್ನು ಕೊಂದು ರಾಜನಾದರೆ ಅವನನ್ನು ಯಾರೂ ಏನೂ ಹೇಳರು—ಆದರೆ ನೀನು ರಾಜನ ಮೈಮೇಲೆ ಕೈ ಇಟ್ಟದ್ದೇ ಆದರೆ ಪುನಃ ನಾನು ನಿನ್ನನ್ನು ಪಡೆಯುವೆನೆ ? ” ಎಂದು ರಘುಪತಿ ಹೇಳಿದ.

ಜಯಸಿಂಹನೆಂದ—ನನ್ನ ಮೇಲಣ ಪ್ರೀತಿಯಿಂದಲೆ! ತಂದೆಯೇ ನಾನು ಕ್ಷುದ್ರ. ನನ್ನ ಪ್ರೀತಿಯಿಂದ ನೀನು ಒಂದು ಇರುವೆಗೂ ಹಿಂಸೆ

ಮಾಡಲಾರೆ. ನನ್ನ ಮೇಲಣ ಪ್ರೀತಿಯಿಂದ ನೀನು ಪಾಪದಲ್ಲಿ ಮುಳುಗುವೆಯಾದರೆ ನಿನ್ನ ಆ ಪ್ರೀತಿಯನ್ನು ನಾನು ಹೆಚ್ಚು ದಿನ ಅನುಭವಿಸಲಾರೆ. ಆ ಪ್ರೀತಿಯ ಪರಿಣಾಮ ಎಂದೂ ಒಳ್ಳೆಯದಾಗದು.

ರಘುಪತಿ ಅಸಸರದಿಂದ—"ಸರಿ, ಸರಿ, ಆ ಮಾತು ಮುಂದೆ ಆಗುವದು. ನಾಳೆ ನಕ್ಷತ್ರರಾಯ ಬಂದರೆ ಯಾವುದಾದರೂ ಒಂದು ತೀರ್ಮಾನವಾಗುವದು" ಎಂದ.

"ನಾನೇ ರಾಜರಕ್ತ ತರುವೆ. ತಾಯ ಹೆಸರಿನಲ್ಲಿ, ಗುರುದೇವನ ಹೆಸರಿನಲ್ಲಿ ಭ್ರಾತೃಹತ್ಯೆ ನಡೆಯಗೊಡೆ" ಎಂದು ಜಯಸಿಂಹ ಮನದಲ್ಲೇ ಸಂಕಲ್ಪಿಸಿಕೊಂಡ.

೭

ಜಯಸಿಂಹನಿಗೆ ಆ ರಾತ್ರಿಯೆಲ್ಲ ನಿದ್ರೆ ಬರಲಿಲ್ಲ. ಗುರುವಿನೊಡನೆ ಯಾವ ವಿಷಯವಾಗಿ ಆಲೋಚನೆ ನಡೆದಿತ್ತೊ ಅದಕ್ಕೆ ಕೊಂಬೆ ಕವಲಗಳು ಹುಟ್ಟತೊಡಗಿದವು. ಹಲವು ಸಂದರ್ಭಗಳಲ್ಲಿ ಆರಂಭ ನಮ್ಮ ಅಧೀನ. ಮುಕ್ತಾಯ ನಮ್ಮ ಅಧೀನವಲ್ಲ. ಚಿಂತೆಯ ವಿಷಯದಲ್ಲೂ ಇದೇ ಮಾತು. ಜಯಸಿಂಹನ ಮನದಲ್ಲಿ ತಡೆಯಲಾರದ ವೇಗದಲ್ಲಿ ಮೂಡುತ್ತಿದ್ದ ಎಲ್ಲ ವಿಷಯಗಳೂ ಅವನ ಆಶೈಶವ ನಂಬಿಕೆಯ ತಳದಲ್ಲಿ ಒಂದೇ ಸಮನಾಗಿ ಪೆಟ್ಟು ಕೊಡಲಾರಂಭಿಸಿದವು. ಜಯಸಿಂಹ ಅತಿಯಾಗಿ ಕೊರಗತೊಡಗಿದ.

ಆದರೆ ಕೆಟ್ಟ ಕನಸಿನಂತೆ ಚಿಂತೆ ಯಾವ ಬಗೆಯಲ್ಲೂ ಶಾಂತವಾಗಲು ಇಷ್ಟಪಡಲಿಲ್ಲ. ಯಾವ ದೇವಿಯನ್ನು ಜಯಸಿಂಹ ಇಷ್ಟು ದಿನ ತಾಯಿಯೆಂದು ತಿಳಿದಿದ್ದನೋ ಆ ತಾಯಿತನವನ್ನು ಗುರುದೇವ ಇಂದು ಅಪಹರಿಸಿದ್ದೇಕೆ? ಅದೇಕೆ ಅವಳನ್ನು ಹೃದಯಹೀನ ಶಕ್ತಿ ಎಂದು ಟೀಕಿಸಿದ್ದು. ಶಕ್ತಿಯ ಸಂತೋಷವಾದರೂ ಯಾವುದು, ಅಸಂತೋಷ ಯಾವುದು, ಶಕ್ತಿಯ ಕಣ್ಣು ಎಲ್ಲಿ, ಕಿವಿ ಎಲ್ಲಿ, ಶಕ್ತಿಯೇನೋ ಮಹಾರಥವಂತೆ ತನ್ನ ಸಹಸ್ರಾರು ಚಕ್ರಗಳ ಅಡಿಯಲ್ಲಿ ಜಗತ್ತನ್ನು ನುಚ್ಚು ನುರಿಯಾಗಿ ಮಾಡುತ್ತ ಘರಘರ ಶಬ್ದದಿಂದ ಹೋಗುತ್ತಿರುವದು; ಅದನ್ನು ಹಿಂಬಾಲಿಸಿ ಹೋಗು

ವವರು ಯಾರು, ಅದರ ತಳದಲ್ಲಿ ಬಿದ್ದು ಪುಡಿ ಪುಡಿಯಾಗುವವರು ಯಾರು, ಅದರ ಮೇಲೇರಿ ಉತ್ಸವ ಮಾಡುವವರು ಯಾರು, ಅದರ ತಳದಲ್ಲಿ ಬಿದ್ದು ಆರ್ತನಾದ ಮಾಡುತ್ತಿರುವವರು ಯಾರು, ಅದು ಅವರ ವಿಷಯ ಏನು ಬಲ್ಲದು. ಸಾರಥಿಗಳ್ಯಾರೂ ಇಲ್ಲವೇನು? ಜಗದ ಅರಿಯುವ ಅಪಾಯ ಅಂಜುಗುಳಿ ಪ್ರಾಣಿಗಳ ರಕ್ತದ ಹೊಳೆ ಹರಿಸಿ ಕಾಲರೂಪಿಣೀ ಶಕ್ತಿಯ ದಾಹ ತಣಿಸುವುದೇ ನಮ್ಮ ವ್ರತವೇನು? ಏಕೆ? ಅವಳು ತನ್ನ ಕೆಲಸವನ್ನು ತಾನೇ ನಡೆಸಿ ಕೊಳ್ಳುತಿರುವಳಲ್ಲ—ಅವಶವಾದ ಕ್ರಮವಿದೆ. ಮಹಾಮಾರಿ ಉರಿಮಾರಿಗಳಿವೆ. ಸರ್ಗವು ಮಾನವಹೃದಯದಲ್ಲಿರುವ ಹಿಂಸೆ ಇರುವದು. ಅವಳಿಗೆ ಕ್ಷುದ್ರರಾದ ನಮ್ಮಗಳ ಅಗತ್ಯವೇನು?

ಆ ಮರುದಿನ ಆದ ಪ್ರಭಾತ ಅತಿ ಮನೋಹರ ಪ್ರಭಾತ. ಮಳೆ ಕೊನೆಗಂಡಿತ್ತು. ಪೂರ್ವದಿಕ್ಕಿನಲ್ಲಿ ಮೋಡ ಇರಲಿಲ್ಲ. ಸೂರ್ಯಕಿರಣ ಮಳೆಯ ನೀರಿನಲ್ಲಿ ಸ್ನಾನಮಾಡಿ ರಮಣೀಯವಾಗಿತ್ತು. ಮಳೆಹನಿ ಮತ್ತು ಸೂರ್ಯ ಕಿರಣ ಇವೆರಡೂ ದಶದಿಕ್ಕುಗಳನ್ನು ಕುಣಿಸುತಿದ್ದುವು. ಶುಭ್ರ ಆನಂದದ ಬೆಳಗು ಬಾನಿನಲ್ಲೂ ಭೂಮಿಯಲ್ಲೂ ಅವನಿಯಲ್ಲೂ ಅರಳಿದ ಬಿಳಿಯ ತಾವರೆಯಂತೆ ಸುಸ್ಪಷ್ಟವಾಗಿ ಹರಡಿತ್ತು. ನೀಲ ಆಕಾಶದಲ್ಲಿ ಹದ್ದು ತೇಲಿಕೊಂಡು ಹೋಗುತ್ತಿತ್ತು. ಕಾಮನಬಿಲ್ಲ ತೋರಣದ ಅಡಿಯಿಂದ ಕೊಕ್ಕರೆಗಳ ಸಾಲು ಹಾರಿ ಹೋಗುತ್ತಿತ್ತು. ಅಳಿಲು ಮಂಗಗಳು ಮರದಿಂದ ಮರಕ್ಕೆ ನೆಗೆದಾಡುತಿದ್ದುವು. ಒಂದೆರಡು ಅಂಜುಕುಳಿ ಮೊಲಗಳು ಎಚ್ಚರಿಕೆಯಿಂದ ಪೊದರಿನಿಂದ ಹೊರಗೆ ಬಂದು ಮತ್ತೆ ಮರೆ ಹುಡುಕುತಿದ್ದುವು. ಆಡಿನಮರಿಗಳು ಅತಿ ದುರ್ಗಮ ಬೆಟ್ಟ ಹತ್ತಿ ಹುಲ್ಲು ಕಿತ್ತು ತಿನ್ನುತಿದ್ದುವು. ಹಸುಗಳು ಇಂದು ಮನಸಿನ ಸಂತೋಷದಿಂದ ಮೈದಾನದಲ್ಲೆಲ್ಲ ಗುಂಪು ಗುಂಪಾಗಿ ಮಲಗಿದ್ದುವು. ಗೊಲ್ಲರು ಹಾಡು ಹೇಳುತ್ತಿದ್ದರು. ಕಂಕುಳಲ್ಲಿ ಕೊಡವಿದ್ದ ತಾಯಿಯರ ಸೆರಗು ಹಿಡಿದು ಇಂದು ಹುಡುಗ ಹುಡುಗಿಯರು ಹೊರಗೆ ಬಂದಿರುವರು. ಮುದುಕರು ಪೂಜೆಗಾಗಿ ಹೂ ಕೊಯ್ಯುತ್ತಿರುವರು. ಸ್ನಾನಕ್ಕಾಗಿ ಇಂದು ನದಿಯಲ್ಲಿ ಅನೇಕ ಜನ ಕೂಡಿರುವರು. ಅವರೆಲ್ಲ ಕಲಕಲನೆ ಮಾತನಾಡುತ್ತಿರುವರು. ನದಿಯ ಕಲಕಲ ಧ್ವನಿಗೂ ವಿರಾಮವಿಲ್ಲ. ಆಷಾಢದ ಬೆಳಗಿನ ಈ ಜೀವಂತ ಆನಂದಮಯಿ

ಭೂಮಿಯನ್ನು ನಿಟ್ಟಿಸಿ ನಿಟ್ಟುಸಿರು ಬಿಟ್ಟು ಜಯಸಿಂಹ ದೇವಾಲಯವನ್ನು ಪ್ರವೇಶಿಸಿದ.

ಜಯಸಿಂಹ ವಿಗ್ರಹದ ಕಡೆ ತಿರುಗಿ ಕೈಮುಗಿಯುತ್ತ ಹೇಳಿದ. ಅದೇಕೆ ತಾಯಿ, ಇಂದು ಇಷ್ಟೊಂದು ಅಪ್ರಸನ್ನತೆ ಏಕೆ, ಒಂದು ದಿನ ನಿನ್ನ ಜೀವದ ರಕ್ತ ನೀನು ನೋಡಲಾಗಲಿಲ್ಲವೆಂದು ಇಷ್ಟು ಮುನಿಸೆ! ನನ್ನ ಹೃದಯದೊಳಗೆ ನಿಟ್ಟಿಸಿ ನೋಡು, ಸ್ವಲ್ಪವಾದರೂ ಭಕ್ತಿಯ ಅಭಾವ ಕಾಣುವುದೆ? ಭಕ್ತನ ಹೃದಯ ದೊರೆತರೆ ನಿನಗೆ ತೃಪ್ತಿಯಾಗದೆ, ನಿರಪರಾಧಿಯ ರಕ್ತವೇ ಬೇಕೆ? ಒಳ್ಳೆಯದು ತಾಯಿ, ಸತ್ಯವಾಗಿ ಹೇಳು. ಪುಣ್ಯಶರೀರಿ ಗೋವಿಂದಮಾಣಿಕ್ಯನನ್ನು ಜಗತ್ತಿನಿಂದ ಕಣ್ಮರೆಮಾಡಿ ಇಲ್ಲಿ ರಾಕ್ಷಸ ರಾಜ್ಯ ಸ್ಥಾಪಿಸುವುದೇ ನಿನ್ನ ಅಭಿಪ್ರಾಯವೆ? ಸತ್ಯವಾಗಿಯೂ ರಾಜರಕ್ತ ಬಯಸುವೆಯಾ? ನಿನ್ನ ಬಾಯಿಂದ ಉತ್ತರ ಕೇಳದೆ ನಾನೆಂದೂ ರಾಜಹತ್ಯೆ ನಡೆಯಗೊಡೆ, ನಾನದನ್ನು ತಡೆಯುವೆ, ಹೇಳು ಇದೆಯೆ? ಇಲ್ಲವೆ?

ಕೂಡಲೆ ಜನಹೀನ ದೇವಾಲಯದಲ್ಲಿ "ಇದೆ" ಎಂಬ ಧ್ವನಿ ಉಂಟಾಯಿತು.

ಜಯಸಿಂಹ ಭಯಗ್ರಸ್ತನಾಗಿ ಹಿಂದಿರುಗಿ ನೋಡಿದ. ಯಾರೂ ಕಂಡು ಬರಲಿಲ್ಲ. ನೆರಳಿನಂತೆ ಯಾವುದೋ ಒಂದು ನಡುಗಿದಂತೆ ಮನಕ್ಕೆ ಭಾಸವಾಯಿತು. ದನಿಕೇಳಿದೊಡನೆ ಇದು ತನ್ನ ಗುರುವಿನ ದನಿಯೆಂದು ಅವನ ಮನಸಿಗನಿಸಿತು. ಬಳಿಕ ತಾಯಿ ತನ್ನ ಗುರುವಿನ ಕೊರಲ ದನಿಯಲ್ಲಿ ತನಗೆ ಅಪ್ಪಣೆಮಾಡಿರಬಹುದು ಎಂದು ತೀರ್ಮಾನಿಸಿಕೊಂಡ. ಅವನ ಮೈ ರೋಮಾಂಚಿತವಾಯಿತು. ಅವನು ವಿಗ್ರಹಕ್ಕೆ ನೆಲಮುಟ್ಟಿ ನಮಸ್ಕಾರಮಾಡಿ ಆಯುಧಸಹಿತ ಹೊರಹೊರಟ.

## ೮

ಗೋಮತಿ ನದಿಯ ದಕ್ಷಿಣದಿಕ್ಕಿನ ಒಂದು ಸ್ಥಳದಲ್ಲಿ ದಿಣ್ಣೆ ಅತಿ ಎತ್ತರವಾಗಿರುವದು. ಮಳೆಯಧಾರೆ ಹಾಗೂ ಸಣ್ಣವುಟ್ಟ ಕೋಡಿಗಳು ಈ ಎತ್ತರವಾದ ಭೂಮಿಯನ್ನು ನಾನಾಕೊರಕಲು ಹಳ್ಳಗಳಾಗಿ ಸೀಳಿರುವದು.

ಇದಕ್ಕೆ ಸ್ವಲ್ಪ ದೂರದಲ್ಲಿ ಪ್ರಾಯಃ ಅರ್ಧಚಂದ್ರಾಕಾರದಲ್ಲಿ ದೊಡ್ಡದೊಡ್ಡ ಸಾಲವೃಕ್ಷಗಳೂ ಸೀಗೆಮರಗಳೂ ಈ ನೂರಾರು ಸೀಳಿನ ಭೂಭಾಗವನ್ನು ಸುತ್ತಿಕೊಂಡಿರುವುದು. ಆದರೆ ನಡುವಿನ ಈ ನೆಲದ ನಡುವೆ ದೊಡ್ಡಮರ ಯಾವುದೂ ಇರುವುದಿಲ್ಲ. ಅಲ್ಲಲ್ಲಿ ದಿಣ್ಣೆಗಳಮೇಲೆ ಚಿಕ್ಕಚಿಕ್ಕ ಸಾಲವೃಕ್ಷ ಗಳು ಬೆಳೆಯಲಾರದೆ ಸುಮ್ಮನೆ ಬಾಗಿ ಕರ್ರಗೆ ನಿಂತಿರುವವು. ಬೇಕಾದಷ್ಟು ಕಲ್ಲುಗಳು ಹರಡಿಕೊಂಡಿತ್ತು. ಒಂದಡಿ ಎರಡಡಿಯ ನಿರ್ಮಲ ಸಣ್ಣ ಜಲಪ್ರವಾಹಗಳು ಅವೆಷ್ಟೋ ನೂರಾರು ಡೊಂಕುಡೊಂಕಾದ ಮಾರ್ಗದಲ್ಲಿ ಸುತ್ತಿ ಬಳಸಿ ಒಂದಾಗಿ ಸೇರಿ, ಬೇರೆಯಾಗಿ ನದಿಯಲ್ಲಿ ಹೋಗಿ ಬೀಳು ತ್ತಿದ್ದುವು.

ಈ ಸ್ಥಳ ಅತಿ ನಿರ್ಜನವಾದುದು. ಇಲ್ಲಿಯ ಆಕಾಶ ಮರಗಳಿಂದ ಮರೆಯಾಗಿರುವುದಿಲ್ಲ. ಇಲ್ಲಿಂದ ಗೋಮತಿ ನದಿ ಹಾಗೂ ಆಚೆಯ ದಡದ ವಿಚಿತ್ರಬಣ್ಣಗಳ ಬೆಳೆಪೊಲಗಳು ಬಹಳ ದೂರದವರೆಗೆ ಕಾಣುವವು. ಪ್ರತಿದಿನ ಬೆಳಗ್ಗೆ ರಾಜ ಗೋವಿಂದಮಾಣಿಕ್ಯ ತಿರುಗಾಡಲು ಈ ಸ್ಥಳಕ್ಕೆ ಬರುವನು. ಸಂಗಡ ಸಂಗಡಿಗರಾಗಲಿ ಕಾವಲಿನವರಾಗಲಿ ಬಾರರು. ಬೆಸ್ತರು ಆಗಾಗ ಗೋಮತಿಯಲ್ಲಿ ಮೀನುಹಿಡಿಯಲು ಬಂದು ದೂರದಿಂದ ತಮ್ಮ ಸೌಮ್ಯ ಮೂರ್ತಿ ರಾಜ ಯೋಗಿಯಂತೆ ಸ್ಥಿರಭಾವದಿಂದ ಕಣ್ಮುಚ್ಚಿ ಕುಳಿತಿರುವುದನ್ನು ನೋಡುವರು. ಅವನ ಮುಖದಲ್ಲಿ ಕಾಣುವದು ಬೆಳಗಿನ ಜ್ಯೋತಿಯೋ ಅಥವಾ ಅವನ ಆತ್ಮಜ್ಯೋತಿಯೋ ಎನ್ನುವದು ಅರಿವಾಗದು. ಇತ್ತೀಚೆಗೆ ಮಳೆಯ ದಿನಗಳಲ್ಲಿ ಪ್ರತಿದಿನ ಇಲ್ಲಿಗೆ ಬರಲಾಗುತ್ತಿರಲಿಲ್ಲ. ಆದರೆ ಮಳೆ ನಿಂತು ಬರುವ ದಿನಗಳಲ್ಲಿ ಪುಟ್ಟ ತಾತನನ್ನು ಸಂಗಡ ಕರೆತರುವನು.

ಈಗ ತಾತನನ್ನು ತಾತ ಎನ್ನಲು ಮನಬಾರದು. ಯಾರೊಬ್ಬಳ ಬಾಯಲ್ಲಿ 'ತಾತಾ' ಸಂಬೋಧನೆ ಹೃದಯಂಗಮವಾಗಿತ್ತೋ ಅವಳೀಗ ಇಲ್ಲ. ಓದುಗರಿಗೆ ತಾತಾ ಶಬ್ದಕ್ಕೆ ಅರ್ಥವಿಲ್ಲ. ಆದರೆ ಸಂತೋಷಿ ಬೆಳಗಿನ ಹೊತ್ತು ಸಾಲವೃಕ್ಷದ ಮರೆಯಲ್ಲಿ ಅವಿತು ತನ್ನ ತೀಕ್ಷ್ಣ ಮಧುರ ಕಂಠದಲ್ಲಿ ತಾತಾ ಎಂದು ಕೂಗುವಳು. ಅದಕ್ಕೆ ಉತ್ತರವಾಗಿ ಮರಮರದಲ್ಲೂ ಮಡಿವಾಳ ಹಕ್ಕಿ ಕೂಗುವದು. ಕಾಡಿನ ದೂರದಿಂದ ಪ್ರತಿಧ್ವನಿ ಮರಳಿ ಬರುವದು.

ಆಗ ಆ ತಾತ ಸಂಬೋಧನೆ ಹುಡುಗಿಯೊಬ್ಬಳ ಪುಟ್ಟ ಹೃದಯದ ಅತಿ ಕೋಮಲ ಸ್ನೇಹದ ಗೂಡಿನಿಂದ ಹೊರಬಂದು ಹಕ್ಕಿಯಂತೆ ಸ್ವರ್ಗದ ಕಡೆಗೆ ಹಾರಿಹೋಗುವದು. ಆಗ ಆ ಒಂದು ಸ್ನೇಹಪೂರ್ಣ ಮಧುರ ಸಂಬೋಧನೆ ಬೆಳಗಿನ ಹಕ್ಕಿಗಳ ಗುಂಪಿನ ಗಾನವನ್ನು ಮೀರಿಸುವದು, ಬೆಳಗಿನ ಪ್ರಕೃತಿಯ ಆನಂದಮಯ ಸೌಂದರ್ಯದೊಡನೆ ಪುಟ್ಟ ಹುಡುಗಿಯೊಬ್ಬಳ ಆನಂದಮಯ ಸ್ನೇಹದ ಮಿಳಿತ ಕಾಣಬರುವದು. ಈಗ ಆ ಹುಡುಗಿಯಿಲ್ಲ— ಹುಡುಗನಿರುವನು. ಆದರೆ ತಾತ ಅಲ್ಲ. ಹುಡುಗನೆಂದರೆ ಈ ಜಗತ್ತಿನಲ್ಲಿ ಸಹಸ್ರ ಜನರಿಗೆ ಸಹಸ್ರರೀತಿಯಲ್ಲಿ ಉಂಟು. ಆದರೆ ತಾತ ಕೇವಲ ಆ ಹುಡುಗಿಯವನಷ್ಟೆ. ಮಹಾರಾಜ ಗೋವಿಂದ ಮಾಣಿಕ್ಯ ಈ ಹುಡುಗ ನನ್ನು 'ಧ್ರುವ' ಎಂದು ಕರೆಯುವನು. ನಾವೂ ಹಾಗೆಯೇ ಕರೆಯೋಣ.

ಮೊದಲು ಮಹಾರಾಜ ಒಂಟಿಯಾಗಿ ಬರುತಿದ್ದ. ಈಗ ಸಂಗಡ ಧ್ರುವನನ್ನು ಕರೆತರುವನು. ಹುಡುಗನ ಪವಿತ್ರ ಸರಳಮುಖಕಾಂತಿಯಲ್ಲಿ ಅವನು ದೇವಲೋಕದ ಕಾಂತಿಯನ್ನು ಕಾಣುವನು. ಮಧ್ಯಾಹ್ನದಲ್ಲಿ ಸಂಸಾರದ ಜಂಜಾಟಗಳ ನಡುವೆ ರಾಜ ಪ್ರವೇಶಿಸಿದಾಗ ಬುದ್ಧಿವಂತರಾದ ವೃದ್ಧಮಂತ್ರಿಗಳು ಅವನನ್ನು ಬಳಸಿ ನಿಂತು ಅವನಿಗೆ ಮಂತ್ರಾಲೋಚನೆ ಹೇಳುವರು—ಬೆಳಗಾದರೆ ಮಾತ್ರ ಒಂದು ಮಗು ಅವನನ್ನು ಸಂಸಾರದಾಚೆ ಕರೆದೊಯ್ಯುವದು. ಅವನ ದೊಡ್ಡದೊಡ್ಡ ಎರಡು ನೀರವ ಕಣ್ಣುಗಳ ಮುಂದೆ ಸಾವಿರಾರು ಸಾಂಸಾರಿಕ ವಿಷಯಗಳು ಕಣ್ಮರೆಯಾಗುವವು. ಮಗುವಿನ ಕೈಹಿಡಿದು ಮಹಾರಾಜ ಇಡೀ ಜಗತ್ತಿನ ನಡುವೆ ಅನಂತದ ಕಡೆಗ ಹರಡಿರುವ ಉದಾರ ಸರಳ ವಿಶಾಲ ರಾಜಮಾರ್ಗದಲ್ಲಿ ಹೋಗಿ ನಿಲ್ಲುವನು. ಅಲ್ಲಿ ಅನಂತ ಸುನೀಲ ಆಕಾಶದ ಚಂದ್ರಸೂರ್ಯರ ಕೆಳಗಿರುವ ವಿಶ್ವಬ್ರಹ್ಮಾಂಡದ ಮಹಾಸಭೆ ಕಾಣಿಸುವದು. ಭೂಲೋಕ, ದೇವಲೋಕ, ಸ್ವರ್ಗಲೋಕ, ಸಪ್ತಲೋಕಗಳ ಸಂಗೀತದ ನಾದ ಕೇಳಿಸುವದು. ಅಲ್ಲಿ ಸರಳ ಮಾರ್ಗದಲ್ಲಿ ಎಲ್ಲವೂ ಸರಳ, ಸಹಜ, ಸುಂದರವಾಗಿ ತೋರುವದು. ಸುಮ್ಮನೆ ಮುಂದುವರಿಯಲು ಉತ್ಸಾಹವಾಗುವದು. ಅತಿಯಾದ ಆಲೋಚನೆ, ಚಿಂತೆ, ಅಸುಖ, ಅಶಾಂತಿ ಇವು ದೂರವಾಗುವವು. ಮಹಾರಾಜ ಆ ಬೆಳಗಿನಲ್ಲಿ ನಿರ್ಜನ ಕಾಡಿನಲ್ಲಿ ನದೀ ತೀರದಲ್ಲಿ ತೆರೆದ ಆಕಾಶದಡಿಯಲ್ಲಿ

ಹುಡುಗನೊಬ್ಬನ ಪ್ರೇಮದಲ್ಲಿ ತಲ್ಲೀನನಾಗಿ ಎಲ್ಲೆಯಿಲ್ಲದ ಪ್ರೇಮ ಸಮುದ್ರದ ದಾರಿ ಕಾಣುವನು.

ಗೋವಿಂದ ಮಾಣಿಕ್ಯ ಧ್ರುವನನ್ನು ತೊಡೆಯಮೇಲೆ ಕುಳ್ಳಿರಿಸಿ ಕೊಂಡು ಅವನಿಗೆ ಧ್ರುವೋಪಾಖ್ಯಾನ ಹೇಳುವನು, ಅವನು ಎಲ್ಲವನ್ನೂ ತಿಳಿದುಕೊಳ್ಳುವನು ಎನ್ನುವಂತಿಲ್ಲ. ಆದರೆ ಧ್ರುವನ ಬಾಯಿಂದ ಅರ್ಧರ್ಧ ಮಾತಿನಲ್ಲಿ ಈ ಧ್ರುವೋಪಾಖ್ಯಾನವನ್ನು ಪುನಃ ಕೇಳುವ ಇಷ್ಟ ರಾಜನಿಗೆ.

ಕತೆ ಕೇಳುತ್ತಕೇಳುತ್ತ ಧ್ರುವ ಹೇಳಿದ "ನಾನು ಕಾಡಿಗೆ ಹೋಗುವೆ."

ರಾಜ "ಕಾಡಿಗೆ ಏತಕ್ಕೆ ಹೋಗುವೆ" ಎಂದು ಕೇಳಿದ.

ಧ್ರುವ—"ಹರಿಯನ್ನು ನೋಡಲು"

ರಾಜ. "ನಾವು ಕಾಡಿಗೇ ಬಂದಿರುವೆವು. ಹರಿಯನ್ನು ನೋಡಲೇ ಬಂದಿರುವದು"

ಧ್ರುವ—ಹರಿ ಎಲ್ಲಿ?

ರಾಜ—ಇಲ್ಲೇ ಇರುವನು.

"ಅಕ್ಕ ಎಲ್ಲಿ?" ಎಂದು ಧ್ರುವ ಕೇಳಿದ. ಹೀಗೆಂದು ಎದ್ದು ನಿಂತು ಹಿಂದಿರುಗಿ ನೋಡಿದ—ಮೊದಲಿನಂತೆ ಅಕ್ಕ ಹಿಂದಿನಿಂದ ಬಂದು ಇದ್ದಕ್ಕಿದ್ದಂತೆ ಅವನ ಕಣ್ಣುಮುಚ್ಚಲು ಬರುವಳು ಎಂದು ಅವನ ಮನಸ್ಸಿಗೆ ತೋರಿತು— ಯಾರನ್ನೂ ಕಾಣದೆ ಕತ್ತು ಬಗ್ಗಿಸಿ ಕಣ್ಣೆತ್ತಿ "ಅಕ್ಕ ಎಲ್ಲಿ" ಎಂದು ವಿಚಾರಿಸಿದ.

"ಹರಿ ನಿನ್ನ ಅಕ್ಕನನ್ನು ಕರೆದುಕೊಂಡು ಹೋಗಿರುವನು" ಎಂದು ರಾಜ ಹೇಳಿದ.

ಧ್ರುವ—"ಹರಿ ಎಲ್ಲಿ?" ಎಂದ.

ರಾಜ—"ಅವನನ್ನು ಕರೆ, ಮಗು, ನಿನಗೆ ಆ ಶ್ಲೋಕ ಹೇಳಿ ಕೊಟ್ಟಿರುವೆನಲ್ಲ ಅದನ್ನು ಹೇಳು" ಎಂದ.

ಧ್ರುವ ಬಳುಕುತ್ತ ಬಳುಕುತ್ತ ಹೇಳತೊಡಗಿದ—

ಹರಿ! ನಿನ್ನ ಕರೆವನೋ, ಒಂಟಿ ಬಾಲಕ
ಕತ್ತಲ ಕಾಡಿನಲಿ ಅಲೆಯುವನೋ
ಕಗ್ಗತ್ತಲಲಿ ಕಣ್ಣೀರಿನಲಿ
ಅರಸಿಯೂ ದಾರಿಗಾಣದಿದೆಯೋ—

ಸದಾ ಏನಮಾಡಲಿ, ಏನಮಾಡಲಿ ಎಂಬ ಚಿಂತೆಯೋ—
ಎಂದು ಒಂದೀತೋ ಕಾಲಮೃತ್ಯು
ಎಂದು ಅಂಜಿ ಹರಿಹರಿ ಎಂದು ಕರೆಯುವೆನೋ.
ಹರಿಯ ಬಿಟ್ಟರೆ ಅನ್ಯರಿಲ್ಲವೂ ಗತಿ—

ಕಣ್ಣೀರು ವ್ಯರ್ಥವಾಗದೋ
ಎಲ್ಲ ನಿನ್ನನು ಭಕ್ತವತ್ಸಲನೆನುವರೋ
ಆ ಆಶೆಯನೆ ಮನದಿ ಆಧಾರ ಮಾಡಿಕೊಂಡಿಹೆನೋ
ಅದರಿಂದಲೆ ನಾ ಬದುಕಿರುವೆನಯ್ಯಾ—

ಕತ್ತಲಲಿ ತೋರುವದು ನಿನ್ನ ಕಣ್ಣ ತಾರಗೆಯಯ್ಯಾ
ನಿನ್ನ ಭಕ್ತರಿಂದೂ ದಾರಿ ತಪ್ಪರಯ್ಯಾ—
ಧ್ರುವ ನಿನ್ನ ಒಯುಸುವ. ನೀ ಧ್ರುವ ತಾರಗೆಯಯ್ಯಾ
ಇನ್ನಾರ ಬಳಿ ಹೋಗಲಯ್ಯಾ—".

ರ. ಲ. ಡ. ದಗಳನ್ನು ಅದಲು ಬದಲು ಮಾಡಿ ಅರ್ಧಮಾತನ್ನು ಬಾಯಲ್ಲೇ ಉಳಿಸಿಕೊಂಡು ಅರ್ಧಮಾತನ್ನು ಉಚ್ಚರಿಸಿ, ಧ್ರುವ ಬಳುಕುತ್ತ ಬಳುಕುತ್ತ ಸುಧಾಮಯಸ್ವರದಲ್ಲಿ ಈ ಕೀರ್ತನೆ ಒಪ್ಪಿಸಿದ. ಇದನ್ನು ಕೇಳಿ ರಾಜನಪ್ರಾಣ ಆನಂದದಲ್ಲಿ ಮುಳುಗಿತು. ಪ್ರಭಾತ ಇಮ್ಮಡಿ ಮಧುರ ವಾಯಿತು. ನಾಲ್ಕೂಕಡೆ ನದಿ ಕಾಡು ಗಿಡಬಳ್ಳಿ ನಗತೊಡಗಿತು. ಹೊಂಬಣ್ಣದಿಂದ ಕೂಡಿದ ನೀಲಾಕಾಶದಲ್ಲಿ ಅವನು ಯಾರದೋ ಎಣೆಯಿಲ್ಲದ ಸುಂದರ ನಗೆಮೊಗದ ಕಾಂತಿಯನ್ನು ಕಾಣುವನು. ಧ್ರುವ ಅವನ ತೊಡೆಯಲ್ಲಿದ್ದಂತೆ ಅವನನ್ನು ಯಾರೋ ಬಾಹುಪಾಶದಿಂದ ತೊಡೆಗೆ

ಎತ್ತಿಕೊಂಡರು. ಅವನು ತನ್ನನ್ನು, ತನ್ನ ಸುತ್ತಮುತ್ತಲ ಸಕಲವನ್ನು, ವಿಶ್ವಚರಾಚರವನ್ನು ಯಾರದೋ ತೊಡೆಯಮೇಲೆ ಕಾಣತೊಡಗಿದ. ಅವನ ಆನಂದ ಹಾಗೂ ಪ್ರೇಮ ಸೂರ್ಯಕಿರಣದಂತೆ ದಶದಿಕ್ಕುಗಳಲ್ಲೂ ಹರಡಿ ಆಕಾಶವನ್ನು ತುಂಬಿತು.

ಇಂಥ ವೇಳೆಯಲ್ಲಿ ಸಶಸ್ತ್ರ ಜಯಸಿಂಹ ಗುಹೆಯ ದಾರಿಯಿಂದ ಒಮ್ಮೆಗೇ ರಾಜನ ಎದುರು ಬಂದು ನಿಂತ.

ರಾಜ ಅವನಕಡೆ ಎರಡು ಕೈಗಳನ್ನೂ ಚಾಚಿ—ಬಾ ಜಯಸಿಂಹ, ಬಾ—ಎಂದ. ರಾಜ ಆಗ ಮಗುವಿನೊಡನೆ ಸೇರಿ ಮಗು ಆಗಿದ್ದ, ಅವನ ರಾಜಮರ್ಯಾದೆ ಅದೆಲ್ಲೋ.

ಜಯಸಿಂಹ ರಾಜನಿಗೆ ನೆಲಮುಟ್ಟಿ ನಮಸ್ಕರಿಸಿ. "ಮಹರಾಜ್, ಒಂದು ಅರಿಕೆ ಇದೆ" ಎಂದು ಹೇಳಿದ.

ರಾಜ "ಏನು ಹೇಳು" ಎಂದು ಕೇಳಿದ.

ಜಯಸಿಂಹ—ತಾಯಿ ನಿಮ್ಮ ವಿಷಯದಲ್ಲಿ ಅಪ್ರಸನ್ನಳಾಗಿರುವಳು.

ರಾಜ—"ಏಕೆ, ನಾನು ಅವಳಿಗೆ ಅಸಂತೋಷವಾಗುವಂತಹ ಯಾವ ಕೆಲಸಮಾಡಿದೆ?"

ಜಯಸಿಂಹ—ಮಹಾರಾಜ್, ದೇವಿಯ ಬಲಿ ನಿಲ್ಲಿಸಿ ದೇವಿಯ ಪೂಜೆಗೆ ಅಡ್ಡಿಮಾಡಿರುವಿರಿ.

ರಾಜ—"ಏಕೆ, ಜಯಸಿಂಹ, ಏಕೆ, ಈ ಹಿಂಸೆಯ ದುರಾಶೆ. ತಾಯ ತೊಡೆಯಲ್ಲಿ ಸಂತಾನದ ರಕ್ತಪಾತಮಾಡಿ ನೀನು ತಾಯನ್ನು ಪ್ರಸನ್ನಗೊಳಿಸಲು ಆಶಿಸುವೆಯಾ!"

ಜಯಸಿಂಹ—"ಏಕೆ, ಮಹಾರಾಜ, ಶಾಸ್ತ್ರದಲ್ಲಿ ಬಲಿವಿಧಾನ ಇವೆಯಲ್ಲ."

"ಶಾಸ್ತ್ರದ ಸರಿಯಾದ ನಿಯಮನ್ನು ಯಾರು ಪಾಲಿಸುವರು. ತಮ್ಮ ಸ್ವಭಾವಕ್ಕೆ ಅನುಗುಣವಾಗಿ ಎಲ್ಲರೂ ಶಾಸ್ತ್ರಕ್ಕೆ ವ್ಯಾಖ್ಯಾನಮಾಡುವರು. ದೇವಿಯ ಎದುರಿಗೆ ಬಲಿಯ ಮಾಂಸಯುಕ್ತ ರಕ್ತವನ್ನು ಮೈಗೆ ಲೇಪಿಸಿ

ಕೊಂಡು ಎಲ್ಲರೂ ಉದ್ವೇಗ ಚೀತ್ಕಾರದಿಂದ, ಭೀಷಣ ಉತ್ಸಾಹದಿಂದ ಪ್ರಾಂಗಣದಲ್ಲಿ ನೃತ್ಯಮಾಡುವಾಗ ಅವರುಗಳು ತಾಯಿಯ ಪೂಜೆಮಾಡದೆ ಅವರುಗಳ ಹೃದಯದಲ್ಲಿದೆಯಲ್ಲ ಆ ಹಿಂಸಾ ರಾಕ್ಷಸಿ; ಆ ರಾಕ್ಷಸಿಯ ಪೂಜೆಮಾಡುವರು. ಹಿಂಸೆಯ ಬಳಿ ಬಲಿದಾನ ಕೊಡುವುದು ಶಾಸ್ತ್ರದ ನಿಯಮವಲ್ಲ, ಹಿಂಸೆಯನ್ನು ಬಲಿ ಕೊಡುವುದೆ ಶಾಸ್ತ್ರದ ನಿಯಮ?".

ಜಯಸಿಂಹ ಬಹಳ ಹೊತ್ತು ಮೂಕನಾಗಿದ್ದ. ಕಳೆದ ರಾತ್ರಿಯಿಂದ ಅವನ ಮನದಲ್ಲೂ ಈ ಬಗೆಯ ಅನೇಕ ಸಂಗತಿಗಳು ಅಲ್ಲೋಲ ಕಲ್ಲೋಲ ವಾಗುತ್ತಿದ್ದುವು. ಕಡೆಗೆ—"ನಾನು ತಾಯ ಬಳಿ ಕೇಳಿದೆ. ಈ ವಿಷಯದಲ್ಲಿ ಬೇರಾವ ಸಂಶಯವೂ ಇರುವುದಿಲ್ಲ. ಅವಳು ಸ್ವತಃ ಹೇಳಿದಳು. ಅವಳಿಗೆ ಮಹಾರಾಜರ ರಕ್ತ ಬೇಕಂತೆ" ಎಂದು ಹೇಳಿದ. ಹೀಗೆಂದು ಜಯಸಿಂಹ ದೇವಾಲಯದಲ್ಲಿ ಬೆಳಗ್ಗೆ ನಡೆದ ಘಟನೆಯನ್ನೆಲ್ಲ ರಾಜನಿಗೆ ವಿವರಿಸಿದ.

ರಾಜ ನಕ್ಕು ಹೇಳಿದ—"ಇದು ತಾಯಿಯ ಅಪ್ಪಣೆಯಲ್ಲ. ಇದು ರಘುಪತಿಯ ಅಪ್ಪಣೆ. ರಘುಪತಿಯೇ ಮರೆಯಿಂದ ನಿನ್ನ ಮಾತಿಗೆ ಉತ್ತರಹೇಳಿದ್ದು."

ರಾಜನ ಬಾಯಲ್ಲಿ ಈ ಮಾತು ಕೇಳಿ ಜಯಸಿಂಹ ಒಮ್ಮೆಗೇ ಬೆವರಿದ. ಅವನ ಮನದಲ್ಲೂ ಈ ರೀತಿಯ ಸಂಶಯ ಒಮ್ಮೆ ಮಿಂಚಿನಂತೆ ತೋರಿತ್ತು. ಆದರೆ ಹಿಂದೆಯೇ ವಿದ್ಯುತ್ತಿನಂತೆ ಮಾಯವಾಯಿತು. ರಾಜನ ಮಾತಿನಿಂದ ಆ ಸಂದೇಹ ಪುನಃ ಜೀವ ಪಡೆಯಿತು.

ಜಯಸಿಂಹ ಅತ್ಯಂತ ವ್ಯಾಕುಲದಿಂದ ನುಡಿದ "ಇಲ್ಲ, ಮಹಾರಾಜ, ನನ್ನನ್ನು ಕ್ರಮಕ್ರಮವಾಗಿ ಸಂಶಯದಿಂದ ಸಂಶಯಾಂತರಕ್ಕೆ ಒಯ್ಯಬೇಡಿ. ನನ್ನನ್ನು ತೀರದಿಂದ ಸಮುದ್ರಕ್ಕೆ ಒದ್ದು ನೂಕಬೇಡಿ. ನಿಮ್ಮ ಮಾತಿನಿಂದ ನನ್ನ ನಾಲ್ಕೂ ಕಡೆ ಕತ್ತಲೆ ಕವಿಯುತ್ತಿರುವದು. ನನಗಿದ್ದ ಭಕ್ತಿ, ನಂಬಿಕೆ ಹಾಗೆಯೇ ಇರಲ್ಲಿ. ಅದರ ಮಾರ್ಪಾಡಿಗಾಗಿ ಈ ಮಂಜಿನ ತೆರೆ ನನಗೆ ಬೇಕಿಲ್ಲ. ತಾಯ ಅಪ್ಪಣೆಯೇ ಆಗಲಿ ಅಥವಾ ಗುರುವಿನ ಅಪ್ಪಣೆಯೇ ಆಗಲಿ, ಎರಡೂ ಒಂದೆ. ನಾನು ನೆರವೇರಿಸುವೆ—ಹೀಗೆ ಹೇಳಿ ವೇಗವಾಗಿ

ಎದ್ದು ತನ್ನ ಕತ್ತಿ ಹಿರಿದ. ಕತ್ತಿ ಬಿಸಿಲಿನ ಕಿರಣಗಳಿಂದ ಮಿಂಚಿನಂತೆ ಥಳ ಥಳಿಸಿತು. ಇದನ್ನು ನೋಡಿ ಧ್ರುವ ಗಟ್ಟಿಯಾಗಿ ಅಳತೊಡಗಿದ. ಅವನು ತನ್ನ ಪುಟ್ಟವೆರಡು ಕೈಗಳಿಂದ ರಾಜನನ್ನು ಹಿಡಿದುಕೊಂಡು ರಾಜನನ್ನು ಸಾಧ್ಯ ವಾದಷ್ಟು ಮರೆಮಾಡಿಕೊಂಡ. ರಾಜ ಜಯಸಿಂಹನ ಕಡೆ ಗಮನವಿಡದೆ ಧ್ರುವನನ್ನು ಎದೆಗೆ ಅಪ್ಪಿಕೊಂಡ.

ಜಯಸಿಂಹ ಕತ್ತಿಯನ್ನು ದೂರವಾಗಿ ಎಸೆದ. ಧ್ರುವನ ಬೆನ್ನಲ್ಲಿ ಕೈಯಿಟ್ಟು ಹೇಳಿದ. "ಏನೂ ಭಯವಿಲ್ಲ ಮಗು, ಏನೂ ಭಯವಿಲ್ಲ, ನಾನು ಇದೊ ಹೊರಟೆ, ನೀನು ಈ ಹಿರಿಯ ಆಶ್ರಯದಲ್ಲಿರು. ಈ ವಿಶಾಲ ವಕ್ಷದಲ್ಲಿ ಕಂಗೊಳಿಸು—ನಿನ್ನನ್ನು ಯಾರೂ ಅಗಲಿಸಲಾರರು" ಹೀಗೆಂದು ರಾಜನಿಗೆ ನಮಸ್ಕಾರಮಾಡಿ ಹೊರಡಲನುವಾದ.

ಇದ್ದಕ್ಕಿದ್ದಂತೆ ಏನನ್ನೋ ಭಾವಿಸಿಕೊಂಡು ಹಿಂದಿರುಗಿ ಹೇಳಿದ— "ಮಹಾರಾಜರಿಗೆ ಎಚ್ಚರಿಕೆ ಕೊಡುವೆ, ನಿಮ್ಮ ಸೋದರ ನಕ್ಷತ್ರರಾಯ ನಿಮ್ಮ ವಿನಾಶಕ್ಕಾಗಿ ಕೈ ಹಾಕಿರುವನು. ಆಷಾಢಮಾಸದ ಇಪ್ಪತ್ತೊಂಭತ್ತ ನೆಯ ದಿನಾಂಕ, ಹದಿನಾಲ್ಕು ದೇವತೆಗಳ ಪೂಜೆಯ ರಾತ್ರಿ ನೀವು ಎಚ್ಚರಿಕೆ ಯಿಂದಿರಬೇಕು."

ರಾಜ ನಗುತ್ತ—"ನಕ್ಷತ್ರ ಯಾವ ರೀತಿಯಲ್ಲೂ ನನ್ನನ್ನು ವಧೆ ಮಾಡಲಾರ. ಅವನು ನನ್ನನ್ನು ಪ್ರೀತಿಸುವನು" ಎಂದು ಹೇಳಿದ.

ಜಯಸಿಂಹ ಅಪ್ಪಣೆ ಪಡೆದು ಹೊರಟ.

ರಾಜ ಧ್ರುವನ ಕಡೆ ನೋಡುತ್ತ ಭಕ್ತಿ ಭಾವದಿಂದ ಹೇಳಿದ— "ಇಂದು ರಕ್ತ ಪಾತದಿಂದ ಭೂಮಿಯನ್ನು ಕಾಪಾಡಿದ್ದು ನೀನು. ಈ ಉದ್ದೇಶದಿಂದಲೇ ನಿನ್ನ ಅಕ್ಕ ನಿನ್ನನ್ನು ಇಟ್ಟು ಹೋಗಿರುವಳು." ಹೀಗೆ ಹೇಳಿ ಧ್ರುವನ ಕಣ್ಣೀರುಕೂಡಿದ ಕೆನ್ನೆಗಳೆರಡನ್ನೂ ಒರೆಸಿದ.

ಧ್ರುವ ಗಂಭೀರವಾಣಿಯಲ್ಲಿ—"ಅಕ್ಕ ಎಲ್ಲಿ" ಎಂದು ಕೇಳಿದ. ಈ ವೇಳೆಯಲ್ಲಿ ಮೋಡ ಬಂದು ಸೂರ್ಯನನ್ನು ಮರೆಮಾಡಿಕೊಂಡಿತು. ನದಿಯಮೇಲೆ ಕರಿಯ ನೆರಳು ಬಿತ್ತು. ದೂರದ ಕಾಡು ಮೋಡದಂತೆಯೇ

ಕಷ್ಟವಾಯಿತು. ಮಳೆ ಬರುವ ಸೂಚನೆ ನೋಡಿ ರಾಜ ಅರಮನೆಗೆ ಹಿಂದಿರುಗಿದ.

೬

ದೇವಾಲಯ ಅಷ್ಟೇನೂ ದೂರ ಅಲ್ಲ. ಆದರೆ ಜಯಸಿಂಹ ಜನ ಹೀನ ನದೀ ತೀರದಲ್ಲಿ ಬಹಳವಾಗಿ ಅಲೆದಾಡಿ ಮೆಲ್ಲಮೆಲ್ಲನೆ ದೇವಾಲಯದ ಕಡೆ ಕಾಲು ತಿರುಗಿಸಿದ. ಅವನ ಮನದಲ್ಲಿ ಅನೇಕ ಚಿಂತೆಗಳು ಮೂಡ ಲಾರಂಭಿಸಿದವು. ಒಂದು ಸ್ಥಳದಲ್ಲಿ ನದಿಯ ತೀರದಲ್ಲಿ ಮರದಡಿ ಕುಳಿತ. ಎರಡು ಕೈಗಳಿಂದಲೂ ಮುಖ ಮುಚ್ಚಿಕೊಂಡು ಚಿಂತಿಸತೊಡಗಿದ. ಒಂದು ಕೆಲಸಮಾಡಿ ಮುಗಿಸಿರುವೆನಾದರೂ ಸಂಶಯಹೋಗಿಲ್ಲ. ಇನ್ನು ನನ್ನ ಸಂಶಯ ತೀರಿಸುವವರು ಯಾರು. ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು ಎನ್ನುವುದನ್ನು ನನಗೆ ಹೇಳುವವರು ಯಾರು. ಜಗದ ಸಹಸ್ರ ಕೋಟಿ ಮಾರ್ಗಗಳ ಪ್ರವಾಹದಲ್ಲಿ ನಿಂತು ಯಾರನ್ನು ವಿಚಾರಿಸಲಿ. ಯಾವುದು ಸರಿಯಾದ ಮಾರ್ಗ. ವಿಶಾಲವಾದ ಬಯಲಿನಲ್ಲಿ ನಾನು ಕುರುಡನಾಗಿ ಒಂಟಿಯಾಗಿ ನಿಂತಿರುವೆ, ಇಂದು ನನ್ನ ಊರುಗೋಲು ಮುರಿದುಹೋಯಿತು.

ಜಯಸಿಂಹ ಎದ್ದಾಗ ಮಳೆ ಬೀಳಲು ಆರಂಭವಾಗಿತ್ತು. ಮಳೆಯಲ್ಲಿ ನೆನೆಯುತ್ತ ನೆನೆಯುತ್ತ ದೇವಾಲಯದತ್ತ ನಡೆದ. ಅಸಂಖ್ಯ ಜನ ಕೋಲಾಹಲ ಮಾಡುತ್ತ ಮಾಡುತ್ತ ದೇವಾಲಯದ ಕಡೆಯಿಂದ ಬರುವುದನ್ನು ನೋಡಿದ.

ಮುದುಕನೊಬ್ಬ ಹೇಳುತ್ತಿದ್ದ—“ಅಪ್ಪ-ತಾತಂದಿರ ಕಾಲದಿಂದ ಇದು ನಡೆದುಬಂದಿದೆ ಎಂದು ಬಲ್ಲೆಯೊ; ಇಂದು ರಾಜನ ಬುದ್ಧಿ ಅವರೆಲ್ಲರನ್ನೂ ಮೀರಿಸಿತೇನು?”.

ಯುವಕನೊಬ್ಬ “ಇನ್ನು ದೇವಾಲಯಕ್ಕೆ ಬರಲು ಮನಸ್ಸೇ ಬರುವುದಿಲ್ಲ. ಪೂಜೆಯಲ್ಲಿ ಆ ವೈಭವವಿಲ್ಲ” ಎಂದ.

“ಇದು ನವಾಬರ ರಾಜ್ಯವಾಗಿಹೋಯಿತು” ಎಂದು ಯಾರೋ ಹೇಳುತ್ತಿದ್ದರು. ಅವರ ಭಾವನೆ ಇಷ್ಟೆ, ಬಲಿದಾನದ ವಿಷಯದಲ್ಲಿ ಸಂಶಯ

ತೋರಬೇಕಾದರೆ ಒಬ್ಬ ಮುಸಲ್ಮಾನನಿಂದಲೇ ಸಾಧ್ಯ; ಆದರೆ ಒಬ್ಬ ಹಿಂದು ವಿನ ಮನದಲ್ಲಿ ತೋರುವದು ಅತ್ಯಾಶ್ಚರ್ಯ.

ಹೆಂಗಸರು "ಈ ರಾಜ್ಯಕ್ಕೆ ಮಂಗಳವಾಗದು" ಎಂದು ಆಡಿಕೊಳ್ಳ ತೊಡಗಿದರು.

"ಪುರೋಹಿತ ಠಾಕೂರರು ಹೇಳಿರುವರಲ್ಲ, ಮೂರು ತಿಂಗಳೊಳಗೆ ಈ ದೇಶ ಮಹಾ ಮಾರಿಯಿಂದ ಹಾಳಾಗುವುದೆಂದು. ತಾಯಿ ಸ್ವಪ್ನದಲ್ಲಿ ಹೇಳಿದಳಂತೆ" ಎಂದು ಒಬ್ಬಾತ ಹೇಳಿದ.

ಹಾರು ಹೇಳಿದ—"ಅದೇ ನೋಡಿದಿರಲ್ಲವೆ. ಮೊಧೊ ಒಂದೂವರೆ ವರ್ಷದಿಂದ ರೋಗದಲ್ಲಿ ನರಳುತ್ತ ಬದುಕಿದ್ದ. ಬಲಿ ನಿಂತಕೂಡಲೆ ಸತ್ತು ಹೋದನಲ್ಲ."

ಕ್ಷಾಂತ—ಅಷ್ಟೇಕೆ, ನನ್ನ ಷಡ್ಡಕನ ತಮ್ಮ ಇರಲಿಲ್ಲವೆ. ಅವನು ಸಾಯುವನೆಂದು ಯಾರು ತಿಳಿದಿದ್ದರು. ಮೂರು ದಿನದ ಜ್ವರ. ವೈದ್ಯರ ಕಷಾಯ ಕುಡಿಯುತ್ತಿದ್ದಂತೆಯೇ ಕಣ್ಣುಗುಡ್ಡೆ ಮೇಲಾಯಿತು—ಎಂದ. ಷಡ್ಡಕನ ತಮ್ಮನ ಶೋಕದಲ್ಲಿ ಹಾಗೂ ರಾಜ್ಯದ ಅನಂಗಳ ನಿರೀಕ್ಷಣೆಯಲ್ಲಿ ಕ್ಷಾಂತ ವ್ಯಾಕುಲಪಡಲಾರಂಭಿಸಿದ.

ತೀನ್‌ಕೌಡಿಯೆಂಬ—"ಆ ದಿನದ ಆ ಮಥುರ್‌ಹಾಟೆಯ ಸಂತೆಯಲ್ಲಿ ಬೆಂಕಿ ಬಿತ್ತು. ಒಂದು ಗುಡಿಸಲೂ ಉಳಿಯಲಿಲ್ಲ."

ರೈತ ಚಿಂತಾಮಣಿ ತನ್ನ ಜೊತೆ ರೈತನೊಬ್ಬನಿಗೆ—ಇಷ್ಟೆಲ್ಲ ಮಾತಿನಿಂದೇನು? ಈ ವರ್ಷದ ಬೆಳೆಯಲ್ಲಿ ಎಷ್ಟು ಬೆಳೆ ಇಳಿದಿದೆ ನೋಡಿದೆಯಾ. ಯಾವ ವರ್ಷವೂ ಹೀಗಾಗಿರಲಿಲ್ಲ. ಈ ವರ್ಷ ರೈತರ ಹಣೆಯಲ್ಲಿ ಏನು ಬರೆದಿದೆಯೋ ಯಾರು ಬಲ್ಲರು—ಎಂದ.

ಬಲಿದಾನ ನಿಂತಮೇಲೂ ಅದಕ್ಕೆ ಮೊದಲೂ ಯಾರ್ಯಾರಿಗೆ ಏನೇನು ಕಷ್ಟ ಸಂಭವಿಸಿದೆಯೋ ಅದಕ್ಕೆಲ್ಲ ಒಂದೇ ಒಂದು ನಿರ್ದಿಷ್ಟ ಕಾರಣ ಎಲ್ಲರ ಅಭಿಪ್ರಾಯದಲ್ಲೂ ಈ ಬಲಿದಾನ ನಿಂತುಹೋದದ್ದೇ. ಈ ದೇಶ ಬಿಟ್ಟು ಹೋದರೆ ಮಾತ್ರ ಒಳ್ಳೆಯದಾದೀತು ಎಂದು ಎಲ್ಲರೂ ಅಭಿಪ್ರಾಯ

ಪಟ್ಟರು. ಈ ಅಭಿಪ್ರಾಯದಲ್ಲಿ ಎಳ್ಳಷ್ಟು ಬದಲಾವಣೆಯಾಗದಿದ್ದರೂ ಎಲ್ಲರೂ ದೇಶದಲ್ಲೇ ವಾಸಿಸತೊಡಗಿದರು.

ಜಯಸಿಂಹ ಅನ್ಯಮನಸ್ಕನಾಗಿದ್ದ— ಇವರುಗಳನ್ನು ಗಮನಿಸದೆ ಅವನು ದೇವಾಲಯವನ್ನು ಪ್ರವೇಶಿಸಿದ. ಪೂಜೆ ಮುಗಿಸಿ ರಘುಪತಿ ದೇವಾಲಯದ ಹೊರಗೆ ಕುಳಿತಿದ್ದುದನ್ನು ಕಂಡ.

ವೇಗವಾಗಿ ನಡೆದು ರಘುಪತಿಯ ಬಳಿಗೆ ಹೋಗಿ ಜಯಸಿಂಹ ವ್ಯಾಕುಲ ಹಾಗೂ ವ್ಯಥ ಸ್ವರದಲ್ಲಿ ಆತನನ್ನು—" ಗುರುದೇವ, ತಾಯಿಯ ಅಪ್ಪಣೆ ಸ್ವೀಕರಿಸಲು ಇಂದು ಬೆಳಗ್ಗೆ ನಾನು ತಾಯಿಯನ್ನು ಪ್ರಶ್ನಿಸಿದಾಗ, ನೀವೇಕೆ ಅದಕ್ಕೆ ಉತ್ತರ ಕೊಟ್ಟಿರಿ ? " ಎಂದು ಪ್ರಶ್ನಿಸಿದ.

ರಘುಪತಿ ಸ್ವಲ್ಪ ಹಿಂದುಮುಂದು ನೋಡಿ " ತಾಯಿ ನನ್ನ ಮೂಲಕವಾಗಿಯೇ ಅಪ್ಪಣೆಯನ್ನು ಪ್ರಚಾರಮಾಡುತ್ತಿರುವಳು. ಅವಳು ತನ್ನ ಬಾಯಿಂದ ಏನೂ ಹೇಳಳು " ಎಂದ.

" ನೀವು ಎದುರಿನಲ್ಲಿ ನಿಂತು ಏಕೆ ಹೇಳಲಿಲ್ಲ. ಮರೆಯಲ್ಲಿ ನಿಂತು ನನ್ನನ್ನು ಮೋಸಗೊಳಿಸಲು ಕಾರಣವೇನು ? " ಎಂದು ಜಯಸಿಂಹ ವಿಚಾರಿಸಿದ.

ರಘುಪತಿ ರೋಷಗೊಂಡು —" ನಿಲ್ಲಿಸು, ನಾನು ಯಾವ ಯೋಚನೆಯಿಂದ ಯಾವ ಕೆಲಸಮಾಡಿದೆನೆಂದು ನೀನು ಹೇಗೆ ಅರಿಯುವೆ. ಹರಟೆಮಲ್ಲನಂತೆ ಬಾಯಿಗೆ ಬಂದಂತೆ ಹರಟಬೇಡ. ನಾನು ಏನು ಹೇಳುವೆನೋ ಅದನ್ನು ನೀನು ಸುಮ್ಮನೆ ಪಾಲಿಸಬೇಕು. ಯಾವ ಪ್ರಶ್ನೆಯನ್ನೂ ಕೇಳಕೂಡದು " ಎಂದ.

ಜಯಸಿಂಹ ತೆಪ್ಪನಿದ್ದ. ಅವನ ಸಂಶಯ ಹೆಚ್ಚಾಯಿತೆ ಹೊರತು ಕಡಮೆಯಾಗಲಿಲ್ಲ. ಕ್ಷಣ ಕಾಲದ ಬಳಿಕ " ಇಂದು ಬೆಳಗ್ಗೆ ನಾನು ತಾಯ ಬಳಿ ಸಂಕಲ್ಪಮಾಡಿರುವೆ. —ಅವಳು ತನ್ನ ಬಾಯಿಂದ ನನಗೆ ಅಪ್ಪಣೆ ಮಾಡದಿದ್ದರೆ ನಾನು ಎಂದೆಂದಿಗೂ ರಾಜಹತ್ಯೆಗೆ ಎಡೆಗೊಡೆ. ಅದಕ್ಕೆ ಅಡ್ಡಿಯಾಗುವೆ—ಎಂದು. ತಾಯಿ ಅಪ್ಪಣೆ ಮಾಡಲಿಲ್ಲವೆಂದು ಅರಿತಾಗ

ಮಹಾರಾಜರ ಹತ್ತಿರ ನಕ್ಷತ್ರರಾಯನ ಸಂಕಲ್ಪವನ್ನು ಬಹಿರಂಗ ಪಡಿಸ ಬೇಕಾಯಿತು. ಅವರನ್ನು ಎಚ್ಚರಗೊಳಿಸಿರುವೆ" ಎಂದನು.

ರಘುಪತಿ ಕ್ಷಣಹೊತ್ತು ಮೌನವಾಗಿ ಕುಳಿತಿದ್ದ—ಉಕ್ಕಿ ಬರುತ್ತಿದ್ದ ಕೋಪವನ್ನು ಅಡಗಿಸಿಕೊಂಡು ದೃಢಸ್ವರದಲ್ಲಿ "ದೇವಾಲಯದೊಳಕ್ಕೆ ನಡೆ" ಎಂದ.

ಇಬ್ಬರೂ ದೇವಾಲಯದೊಳಕ್ಕೆ ಹೋದರು.

ರಘುಪತಿ ಹೇಳಿದ—ತಾಯಿಯ ಕಾಲುಮುಟ್ಟಿ ಪ್ರತಿಜ್ಞೆಮಾಡು. 'ಆಷಾಢದ ಇಬ್ಬತ್ತೊಂಭತ್ತನೆಯ ದಿನಾಂಕದೊಳಗೆ ನಾನು ರಾಜರಕ್ತ ತಂದು ಈ ಪಾದಗಳಿಗೆ ಕಾಣಿಕೆಯಾಗಿ ಒಪ್ಪಿಸುವೆ' ಎಂದು ಹೇಳು.

ಜಯಸಿಂಹ ತಲೆಬಗ್ಗಿಸಿಕೊಂಡು ಸ್ವಲ್ಪಕಾಲ ಮೂಕನಂತಿದ್ದ. ಬಳಿಕ ಒಮ್ಮೆ ಗುರುವಿನ ಕಡೆಯೂ ಒಮ್ಮೆವಿಗ್ರಹದ ಕಡೆಯೂ ನೋಡಿದ. ವಿಗ್ರಹ ಮುಟ್ಟಿ ಮೆಲ್ಲಮೆಲ್ಲನೆ ಹೇಳಿದ. "ಆಷಾಢದ ಇಬ್ಬತ್ತೊಂಭತ್ತನೆಯ ದಿನಾಂಕದೊಳಗೆ ನಾನು ರಾಜರಕ್ತತಂದು ಈ ಪಾದಗಳಿಗೆ ಕಾಣಿಕೆ ಒಪ್ಪಿಸುವೆ—"

## ೧೦

ಅರಮನೆಗೆ ಹಿಂದಿರುಗಿ ಮಹಾರಾಜ ನಿಯಮಿತ ರಾಜಕಾರ್ಯ ಗಳನ್ನು ಸಾಂಗವಾಗಿ ಮುಗಿಸಿದ. ಬೆಳಗಿನ ಸೂರ್ಯನಕಾಂತಿ ಮರೆಯಾಗಿ ರುವದು. ಮೇಘದ ನೆರಳಿನಿಂದ ಹಗಲು ಕತ್ತಲಾಗುತಿತ್ತು. ಮಹಾರಾಜ ಅತ್ಯಂತ ಅನ್ಯಮನಸ್ಕನಾಗಿರುವನು. ಇತರ ದಿನಗಳಲ್ಲಿ ನಕ್ಷತ್ರರಾಯ ರಾಜಸಭೆಯಲ್ಲಿ ಎದುರಿಗಿರುತಿದ್ದ. ಇಂದು ಅವನು ಎದುರಿಗಿರಲಿಲ್ಲ ರಾಜ ಅವನಿಗೆ ಕರೆ ಕಳುಹಿದ. ತನ್ನ ಮೈ ಚೆನ್ನಾಗಿಲ್ಲವೆಂದು ಅವನು ಉತ್ತರ ಹೇಳಿ ಕಳುಹಿಸಿದ. ಸ್ವತಃ ರಾಜ ನಕ್ಷತ್ರರಾಯನ ಕೊಠಡಿಗೆ ಹೋಗಿ ಸೇರಿದ. ನಕ್ಷತ್ರ ತಲೆಯೆತ್ತಿ ರಾಜನನ್ನು ನೋಡಲಾರದಾದ. ಒಂದು ಬರೆದಕಾಗದ ತೆಗೆದುಕೊಂಡು ಓದುವುದರಲ್ಲಿ ಮಗ್ನನಾಗಿರುವನಂತೆ ನಟಿಸಿದ. ರಾಜ "ನಕ್ಷತ್ರ, ನಿನಗೇನು ಅಸ್ವಸ್ಥತೆ?" ಎಂದು ಕೇಳಿದ.

ನಕ್ಷತ್ರ ಕಾಗದದ ಆ ಪ್ಯೆ ಈ ಪ್ಯೆ ಹೊರಳಿಸಿ ಕೈ ಬೆರಳು ನೋಡಿ ಕೊಳ್ಳುತ್ತ ಹೇಳಿದ —" ಅಸ್ವಸ್ಥತೆಯೆ? ಇಲ್ಲ, ಅಸ್ವಸ್ಥತೆ ಏನೂ ಇಲ್ಲ. ಸ್ವಲ್ಪ ಕೆಲಸ ಇತ್ತು. ಹೌದು ಹೌದು. ಅಸ್ವಸ್ಥತೆಯೂ ಆಗಿತ್ತು. ಹೆಚ್ಚು ಕಡಮೆ ಅಸ್ವಸ್ಥತೆಯಂತೆಯೇ —"

ನಕ್ಷತ್ರರಾಯ ಸಂಪೂರ್ಣವಾಗಿ ಎದೆಗುಂದಿದವನಾದ. ಗೋವಿಂದ ಮಾಣಿಕ್ಯ ಅತಿಯಾದ ದುಃಖದಿಂದ ನಕ್ಷತ್ರರಾಯನನ್ನು ನೋಡುತಿದ್ದ. ಅವನು ಆಲೋಚಿಸತೊಡಗಿದ — ಅಯ್ಯೋ! ಸ್ನೇಹದ ಗೂಡಿನೊಳಗೂ ಹಿಂಸೆ ಹೊಕ್ಕಿರುವುದು. ಅದು ಹಾವಿನಂತೆ ಅಡಗಿಕೊಳ್ಳಲಾಶಿಸುವದು, ಮುಖತೋರಿಸ ಬಯಸದು. ನಮ್ಮ ಕಾಡಿನಲ್ಲಿ ಹಿಂಸ್ರ ಜಂತುಗಳು ಅಷ್ಟಾಗಿ ಇರುವುದಿಲ್ಲ. ಕಡೆಗೆ ಮನುಷ್ಯ ಮನುಷ್ಯನಿಗೆ ಹೆದರಬೇಕೆ. ಸೋದರನೂ ಸೋದರನ ಬಳಿಗೆ ಹೋಗಿ ಸಂಕೋಚವಿಲ್ಲದೆ ಕೂರಲಾರ. ಈ ಪ್ರಪಂಚ ದಲ್ಲಿ ಹಿಂಸೆಯು ದುರಾಶೆಯೇ ಇಷ್ಟೊಂದು ಹಿರಿಯದಾಗಿರುವದು. ಸ್ನೇಹಕ್ಕೂ ಪ್ರೇಮಕ್ಕೂ ಎಲ್ಲಿಯೂ ಎಡೆಯಿಲ್ಲವಾಯಿತು! ಇವನು ನನ್ನ ತಮ್ಮ, ಇವನೊಡನೆ ಪ್ರತಿದಿನ ಒಂದೇ ಮನೆಯಲ್ಲಿ ವಾಸಮಾಡಿರುವೆ. ನಗು ನಗುತ್ತ ಮಾತುಕತೆಯಾಡಿರುವೆ. ಇವನೂ ನನ್ನ ಮಗ್ಗುಲಲ್ಲಿ ಕುಳಿತು ಮನ ದಲ್ಲೆ ಕತ್ತಿ ಮಸೆಯುತ್ತಿರುವನು. ಆಗ ಗೋವಿಂದಮಾಣಿಕ್ಯನಿಗೆ ಜಗತ್ತು ಹಿಂಸ್ರಜಂತುಗಳಿಂದ ಕೂಡಿದ ಅಡವಿಯಂತೆ ತೋರಲಾರಂಭಿಸಿತು. ಗಾಢಾಂಧಕಾರದ ನಡುವೆ ನಾಲ್ಕು ದಿಕ್ಕಿನಲ್ಲೂ ಬರಿಯ ಹಲ್ಲು ಮತ್ತು ಉಗುರಿನ ಹೊಳಪನ್ನು ನಿಟ್ಟಿಸಿದ. ನಿಟ್ಟುಸಿರು ಬಿಟ್ಟು ಮಹಾರಾಜ ತನ್ನಲ್ಲಿ ಹೇಳಿಕೊಂಡ — ಈ ಸ್ನೇಹ-ಪ್ರೇಮಹೀನ ಹಣಾಹಣಿ ರಾಜ್ಯದಲ್ಲಿ ಬದುಕಿದ್ದು ನಾನು ನನ್ನ ಸ್ವಜಾತಿಯ, ನನ್ನ ತಮ್ಮನ ಮನದಲ್ಲಿ ಸುಮ್ಮನೆ ದುರಾಶೆ ಹಾಗೂ ದ್ವೇಷದ ಬೆಂಕಿ ಉರಿಸುತ್ತಿರುವೆ. ನನ್ನ ಸಿಂಹಾಸನದ ನಾಲ್ಕೂ ಕಡೆ ನನ್ನ ಪ್ರಾಣಾಧಿಕ ಬಂಧುಗಳು ನನ್ನ ಕಡೆ ನೋಡಿ ಒಳಗೊಳಗೆ ಮುಖ ಕೊಂಕಿಸುವರು, ಹಲ್ಲು ಹಲ್ಲು ಕಡಿಯುವರು. ಸರಪಳಿಯಲ್ಲಿ ಕಟ್ಟಿದ ಭಯಂಕರ ನಾಯಿಯಂತೆ ನಾಲ್ಕುಕಡೆಯಿಂದ ನನ್ನ ಮೇಲೆ ಹಾರಿ ಬೀಳಲು ಸಮಯ ಹುಡುಕುತ್ತಿರುವರು. ಇದಕ್ಕಿಂತ ಇವರೆಲ್ಲರ ರಕ್ತದಾಹ ತಣಿಸಿ

ಇಲ್ಲಿಂದ ಕಣ್ಮರೆಯಾಗುವುದು ಒಳ್ಳೆಯದು. ಬೆಳಗ್ಗೆ ಆಕಾಶದಲ್ಲಿ ಗೋವಿಂದ ಮಾಣಿಕ್ಯ ಕಂಡಿದ್ದ ಪ್ರೇಮದ ಸುಖಕಾಂತಿ ಅದೆಲ್ಲಿಯೋ ಕಣ್ಮರೆಯಾಯಿತು.

ಮಹಾರಾಜ ಎದ್ದು ನಿಂತು ಗಂಭೀರ ಸ್ವರದಲ್ಲಿ "ನಕ್ಷತ್ರ–ಇಂದು ಮಧ್ಯಾಹ್ನ ಗೋಮತಿ ತೀರದ ನಿರ್ಜನ ಅರಣ್ಯಕ್ಕೆ ನಾವಿಬ್ಬರೂ ತಿರುಗಾಡಲು ಹೋಗೋಣ" ಎಂದ.

ರಾಜನ ಈ ಗಂಭೀರವಾದ ಆಜ್ಞಾವಾಣಿಗೆ ಪ್ರತಿಯಾಗಿ ನಕ್ಷತ್ರನ ಬಾಯಿಂದ ಮಾತು ಹೊರಡಲಿಲ್ಲ. ಆದರೆ ಹೆದರಿಕೆ ಸಂಶಯಗಳಿಂದ ಅವನ ಮನಸ್ಸು ವ್ಯಾಕುಲಪಡತೊಡಗಿತು. ಅವನ ಮನದಲ್ಲಿ, ಮಹಾರಾಜ ಇಷ್ಟು ಹೊತ್ತು ಸ್ಥಿರನವಾಗಿ ಎರಡು ಕಣ್ಣುಗಳನ್ನು ತನ್ನ ಮನದ ಕಡೆಗೆ ತಿರುಗಿಸಿ ಕುಳಿತಿದ್ದ–ಅಲ್ಲಿ ಕತ್ತಲ ಸುಳಿಯನಡುವೆ ಚಿಂತೆಗಳು ಕೀಟದಂತೆ ಕಿರಕಿರನೆ ಕೊರೆಯುತ್ತಿದ್ದುವು. ಇದ್ದಕ್ಕಿದ್ದಂತೆ ಅವು ಬೆಳಕನ್ನು ಕಂಡು ಹೆದರಿಕೆಯಿಂದ ಹೊರಬಿದ್ದಿರುವವು ಎಂದು ಭಾವಿಸಿಕೊಂಡ. ಹೆದಹೆದರುತ್ತ ನಕ್ಷತ್ರರಾಯ ರಾಜನ ಮುಖದತ್ತ ಒಮ್ಮೆ ದಿಟ್ಟಿಸಿದ–ನೋಡಿದ, ಅವನ ಮುಖದಲ್ಲಿ ಕೇವಲ ಆಳವಾದ ದುಃಖದ ಶಾಂತಿ ಭಾಸ, ಅಲ್ಲಿ ರೋಷದ ಎಳೆಯೂ ಇರುವುದಿಲ್ಲ. ಮಾನವ ಹೃದಯದ ಕಠಿಣ ಕ್ರೌರ್ಯವನ್ನು ಕಂಡ ಬಳಿಯ ಸುಗಭೀರಶೋಕ ಅವನ ಮನದಲ್ಲಿ ಬೆಳಗುತಿತ್ತು.

ಹೊತ್ತು ಇಳಿಯುತ್ತ ಬಂದಿತ್ತು. ಆಗಲೂ ಮೋಡ ಕವಿದಿತ್ತು. ನಕ್ಷತ್ರರಾಯನನ್ನು ಸಂಗಡ ಕರೆದುಕೊಂಡು ಮಹಾರಾಜ ಕಾಲುನಡಿಗೆಯಲ್ಲಿ ಕಾಡಿನ ಕಡೆಗೆ ಹೊರಟ. ಸಂಜೆಯಾಗಲು ಇನ್ನೂ ಹೊತ್ತಿರುವದು. ಆದರೆ ಮೋಡ ಕವಿದಿದ್ದರಿಂದ ಕತ್ತಲೆಯಾಗಿ ಸಂಜೆಯಂತೆ ತೋರುತ್ತಿತ್ತು. ಕಾಗೆಗಳು ಕಾಡಿನೊಳಕ್ಕೆ ಮರಳಿಬಂದು ಒಂದೇ ಸಮನೆ ಚೀತ್ಕಾರ ಮಾಡುತಿದ್ದುವು. ಒಂದೆರಡು ಹದ್ದುಗಳು ಮಾತ್ರ ಇನ್ನೂ ಆಕಾಶದಲ್ಲಿ ತೇಲಾಡುತ್ತಿದ್ದುವು. ಇಬ್ಬರು ಸೋದರರೂ ನಿರ್ಜನಕಾಡನ್ನು ಪ್ರವೇಶಿಸಿವಾಗ ನಕ್ಷತ್ರರಾಯನ ಮೈ ಚುಮುಚುಮುಗುಟ್ಟಲಾರಂಭಿಸಿತು. ದೊಡ್ಡದೊಡ್ಡ ಹಳೆಯ ಮರಗಳು ಬಿಳಲು ಬಿಟ್ಟು ನಿಂತಿರುವವು. ಅವು ಯಾವ ಮಾತೂ ಆಡವು. ಆದರೆ ನಿಶ್ಶಬ್ದವಾಗಿ ಕೀಟಗಳ ನಡಿಗೆಯ ಸದ್ದನ್ನೂ ಕೇಳುತಿ

ದ್ದುವು. ಅವು ಸುಮ್ಮನೆ ತಮ್ಮ ನೆರಳ ಕಡೆ, ಅಡಿಯ ಅಂಧಕಾರದ ಕಡೆ ಎವೆಯಿಕ್ಕದೆ ನೋಡುತಿದ್ದುವು. ಅರಣ್ಯದ ಆ ಜಟಿಲ ರಹಸ್ಯದೊಳಗೆ ಕಾಲಿಡಲು ನಕ್ಷತ್ರರಾಯನ ಕಾಲು ಮುಂದುವರಿಯುತ್ತಿರಲಿಲ್ಲ. ನಾಲ್ಕೂಕಡೆ ಸುಗಭೀರ ನೀರವತೆಯ ಹುಚ್ಚು ನೋಡಿ ಎದೆ ನಡುಗಲಾರಂಭಿಸಿತು; ನಕ್ಷತ್ರರಾಯನಿಗೆ ಅತಿಸಂದೇಹ ಹಾಗೂ ಭಯವುಂಟಾಗಿಯಿತ್ತು; ಭಯಂಕರ ಅದೃಷ್ಟದಂತೆ ಮಾತಿಲ್ಲದೆ ರಾಜ ಈ ಸಂಜೆಯ ಹೊತ್ತಿನಲ್ಲಿ ಈ ಜಗತ್ತಿನ ತಳದಿಂದ ಅವನನ್ನು ಎಲ್ಲಿಗೋ ಕರೆದೊಯ್ಯುತಿರುವನು. ಸ್ವಲ್ಪವೂ ಜಾಡು ದೊರೆಯಲಿಲ್ಲ. ಖಂಡಿತ ರಾಜನ ಕೈಗೆ ಸಿಕ್ಕಿಬಿದ್ದಿರುವೆ. ಕಠಿಣಶಿಕ್ಷೆ ಕೊಡುವುದಕ್ಕಾಗಿಯೇ ರಾಜ ತನ್ನನ್ನು ಈ ಕಾಡಿಗೆ ಕರೆತಂದಿರುವದು ಎಂದು ತೀರ್ಮಾನಿಸಿಕೊಂಡ. ನಕ್ಷತ್ರರಾಯನಿಗೆ ಒಂದೇ ಉಸುರಿಗೆ ಓಡಲು ಅವಕಾಶ ದೊರೆತರೆ ಬದುಕಿಯಾನು, ಆದರೆ ಯಾರೋ ಅವನನ್ನು ಕೈಕಾಲು ಕಟ್ಟಿ ಎಳೆದೊಯ್ಯುತಿರುವಂತೆ ಭಾಸವಾಯಿತು. ಯಾವ ಬಗೆಯಲ್ಲೂ ರಕ್ಷಣೆ ಇಲ್ಲ.

ಕಾಡಿನೊಳಗೆ ಎಷ್ಟೆಷ್ಟೋ ಬರಿಯ ಸ್ಥಳಗಳು. ಒಂದು ಸ್ವಾಭಾವಿಕ ಜಲಾಶಯದಂತಿರುವದು. ಮಳೆಗಾಲದಲ್ಲಿ ಅವರಲ್ಲಿ. ನೀರು ತುಂಬುವದು. ಆ ಜಲಾಶಯದ ದಡದಲ್ಲಿ ಇದ್ದಕ್ಕಿದ್ದಂತೆ ಹಿಂದಿರುಗಿ ನಿಂತು ರಾಜ "ನಿಲ್ಲು" ಎಂದ.

ನಕ್ಷತ್ರರಾಯ ಬೆದರಿನಿಂತ. ರಾಜನ ಆಜ್ಞೆಕೇಳಿ ಆ ಮುಹೂರ್ತದಲ್ಲೆ ಕಾಲಪ್ರವಾಹ ನಿಂತಂತೆ ಭಾಸವಾಯಿತು. ಆ ಮುಹೂರ್ತದಲ್ಲೆ ಕಾಡಿನ ಮರಗಳು ನಿಂತಲ್ಲೆ ಬಾಗಿನಿಂತಂತೆ ಆಯಿತು. ಕೆಳಗಿನ ಭೂಮಿ, ಮೇಲಿನ ಆಕಾಶ ನಿಟ್ಟುಸಿರು ನಿಲ್ಲಿಸಿ ಸ್ತಬ್ಧವಾಗಿ ನೋಡುತಿರುವಂತಿತ್ತು. ಕಾಗೆಯ ಕೋಲಾಹಲ ನಿಂತಿತ್ತು. ಕಾಡಿನಲ್ಲಿ ಶಬ್ದವೆನ್ನುವುದು ಇರಲಿಲ್ಲ. ಕೇವಲ ಆ 'ನಿಲ್ಲು' ಶಬ್ದ ಮಿಂಚಿನ ಪ್ರವಾಹದಂತೆ ವೃಕ್ಷದಿಂದ, ವೃಕ್ಷಾಂತರದಿಂದ, ಕೊಂಬೆಯಿಂದ ಕೊಂಬೆಗೆ ಹರಿಯಲಾರಂಭಿಸಿತು. ಕಾಡಿನ ಪ್ರತಿ ಎಲೆಯೂ ಆ ಶಬ್ದಕಂಪನಕ್ಕೆ ಜರ್‌ಜರ್ ಎನ್ನತೊಡಗಿತು. ನಕ್ಷತ್ರರಾಯನೂ ಮರದಂತೆ ಚಲನೆಯಿಲ್ಲದೆ ನಿಂತಿದ್ದ.

ರಾಜ ನಕ್ಷತ್ರರಾಯನ ಮುಖದ ಕಡೆ ಮರ್ಮಭೇದಿ ಸ್ಥಿರವಿಷಣ್ಣ ದೃಷ್ಟಿಬೀರುತ್ತ ಪ್ರಶಾಂತ ಗಂಭೀರ ಸ್ವರದಲ್ಲಿ ಮೆಲ್ಲಮೆಲ್ಲನೆ ಹೇಳಿದ— "ನಕ್ಷತ್ರ, ನೀನು ನನ್ನನ್ನು ಕೊಲ್ಲಬೇಕೆಂದಿರುವೆಯಾ ?"

ನಕ್ಷತ್ರ ಸಿಡಿಲು ಬಡಿದವನಂತೆ ನಿಂತಿದ್ದ—ಉತ್ತರಹೇಳಲು ಪ್ರಯತ್ನ ಮಾಡಲಾಗಲಿಲ್ಲ.

ರಾಜನೆಂದ-ಏಕೆ ಕೊಲ್ಲುವೆ ತಮ್ಮ, ರಾಜತ್ವವೆಂದರೆ ಚಿನ್ನದ ಸಿಂಹಾಸನ, ವಜ್ರದ ಕಿರೀಟ ಹಾಗೂ ಶ್ವೇತಛತ್ರವೆಂದು ನೀನು ಭಾವಿಸಿರುವೆಯೇನು ? ಈ ಕಿರೀಟ, ಈ ಶ್ವೇತಛತ್ರ, ಈ ರಾಜದಂಡದ ಭಾರ ಎಷ್ಟೆಂದು ಬಲ್ಲೆಯಾ ? ನೂರಾರು ಸಾವಿರ ಜನದ ಚಿಂತೆ ಈ ವಜ್ರಕಿರೀಟದಿಂದ ಮರೆಯಾಗಿ ಹುದುಗಿರುವುದು. ರಾಜ್ಯ ಬೇಕಾದರೆ ಸಾವಿರಾರು ಜನದ ದುಃಖವನ್ನು ನಿನ್ನ ದುಃಖವೆಂದು ಸ್ವೀಕರಿಸು. ಸಾವಿರಾರು ಜನದ ವಿಪತ್ತನ್ನು ನಿನ್ನವಿಪತ್ತೆಂದು ವರಿಸು. ಸಾವಿರಾರು ಜನರ ದಾರಿದ್ರ್ಯವನ್ನು ನಿನ್ನದೆಂದು ಹೆಗಲುಕೊಡು. ಯಾವನು ಇದನ್ನೆಲ್ಲ ಮಾಡುವನೋ ಅವನೇ ರಾಜ. ಅವನು ಆಶ್ರಮದಲ್ಲಿರಲಿ, ಅರಮನೆಯಲ್ಲಿರಲಿ, ಯಾವ ವ್ಯಕ್ತಿ ಎಲ್ಲ ಜನರನ್ನೂ ತನ್ನವರೆಂದು ತಿಳಿಯುವನೋ ಅವನೇ ಎಲ್ಲರವನು. ಯಾವನು ಜಗದ ದುಃಖ ದೂರಮಾಡುವನೋ ಅವನೇ ಜಗತ್ತಿನ ರಾಜ. ಯಾವಾತ ಜಗದರಕ್ತ ಹಾಗೂ ಐಶ್ವರ್ಯವನ್ನು ಕಸಿದುಕೊಳ್ಳುವನೋ ಅವನು ಲೂಟಿಗಾರ. ಸಾವಿರಾರು ನಿರ್ಭಾಗ್ಯರ ಕಣ್ಣೀರು ಅವನ ತಲೆಯ ಮೇಲೆ ಹಗಲಿರುಳೂ ಸುರಿಯುತಿರುವುದು. ಆ ಅಭಿಶಾಪಧಾರೆಯಿಂದ ಯಾವ ಶ್ವೇತಛತ್ರಿಯೂ ಅವನನ್ನು ಕಾಪಾಡಲಾರದು. ಅವನ ಅತುಲ ರಾಜ ಭೋಗದ ನಡುವೆ ನೂರಾರು ಹಸಿದ ಜೀವಿಗಳ ಹಸಿವು ಮರೆಯಾಗಿರುವುದು. ಅನಾಥರ ದಾರಿದ್ರ್ಯವನ್ನು ಕರಗಿಸಿ ಅವನು ಚಿನ್ನದ ತೊಡಿಗೆ ತೊಡುವನು. ಅವನ ನೆಲಮುಟ್ಟುವ ರಾಜವಸ್ತ್ರದ ನಡುವೆ ನೂರಾರು ಶೀತಪೀಡಿತ ಜೀವಿಗಳ ಹಳೆಯ ಹರುಕು ಚಿಂದಿ ಹುದುಗಿರುವದು. ರಾಜನನ್ನು ಕೊಂದರೆ ರಾಜತ್ವಸಿಕ್ಕದು. ತಮ್ಮ, ಜಗವನ್ನು ವಶಪಡಿಸಿಕೊಂಡರೆ ರಾಜ್ಯ ದೊರೆಯುವದು !

ಗೋವಿಂದಮಾಣಿಕ್ಯ ನಿಲ್ಲಿಸಿದ–ಸುತ್ತಲೂ ಗಾಢ ನೀರವತೆ ವಿರಾಜಿಸ ತೊಡಗಿತು. ನಕ್ಷತ್ರರಾಯ ತಲೆಬಗ್ಗಿಸಿ ಮೂಕನಂತಿದ್ದ.

ಮಹಾರಾಜ ಒರೆಯಿಂದ ಕತ್ತಿಎಳೆದ. ನಕ್ಷತ್ರರಾಯನ ಎದುರಿಗೆ ಹಿಡಿದು “ತಮ್ಮಾ, ಇಲ್ಲಿ ಯಾರೂ ಇಲ್ಲ, ಸಾಕ್ಷಿ ಇಲ್ಲ, ಯಾರೂ ಇಲ್ಲ. ಸೋದರನೆದೆಯಲ್ಲಿ ಸೋದರ ಕತ್ತಿ ತಿವಿಯಬೇಕಾದರೆ ಅದಕ್ಕೆ ಸ್ಥಳ ಇದೇ. ಇದೇ ಸಮಯ. ಇಲ್ಲಿ ಯಾರೂ ನಿನ್ನನ್ನು ತಡೆಯರು. ಯಾರೂ ನಿನ್ನನ್ನು ನಿಂದಿಸರು. ನಿನ್ನ ನರದಲ್ಲೂ ನನ್ನ ನರದಲ್ಲೂ ಹರಿಯುತ್ತಿರುವುದು ಒಂದೇ ರಕ್ತ. ಒಬ್ಬ ತಂದೆಯ, ಒಬ್ಬ ತಾತನ ರಕ್ತ. ನೀನು ಆ ರಕ್ತ ಚೆಲ್ಲ ಬೇಕಾದರೆ ಚೆಲ್ಲು, ಆದರೆ ಮನುಷ್ಯರು ವಾಸಿಸುವ ಸ್ಥಳದಲ್ಲಿ ಮಾಡಬೇಡ. ಕಾರಣ, ಎಲ್ಲಿ ಈ ರಕ್ತದ ಹನಿ ಬೀಳುವದೋ, ಅಲ್ಲಿ ಕಣ್ಣಿಗೆ ಕಾಣದೆ ಸೋದರಿಕೆಯ ಪವಿತ್ರ ಬಂಧನ ಸಡಿಲವಾಗುವದು. ಪಾಪದ ಕೊನೆ ಎಲ್ಲೆಂದು ಬಲ್ಲವರಾರು. ಪಾಪದ ಒಂದು ಬೀಜ ಬಿದ್ದ ಕಡೆ ನೋಡ ನೋಡುತ್ತ ರಹಸ್ಯದಲ್ಲಿ ಹೇಗೋ ಸಹಸ್ರಮರಗಳು ಹುಟ್ಟುವವು. ಯಾವ ಬಗೆಯಲ್ಲೋ ಸ್ವಲ್ಪ ಸ್ವಲ್ಪವಾಗಿ ಅತಿಸುಂದರ ಮಾನವ ಸಮಾಜ ಕಾಡಾಗಿ ಮಾರ್ಪಡುವದು. ಇದನ್ನು ಯಾರು ತಿಳಿಯ ಬಲ್ಲರು. ಅಷ್ಟೇ ಅಲ್ಲ, ಊರು ಕೇರಿಗಳಲ್ಲಿ ನಿಶ್ಚಿಂತಮನದಿಂದ ಅತಿ ಪ್ರೀತಿಯಿಂದ ಸೋದರ ಸೋದರರು ಕೊರಳಲ್ಲಿ ಕೊರಳಿಟ್ಟುಕೊಂಡಿರುವರು. ಆ ಸೋದರರ ಗೂಡಿನೊಳಗೆ ಸೋದರನ ರಕ್ತ ಚೆಲ್ಲಬೇಡ. ಇದರಿಂದಲೆ ಇಂದು ನಿನ್ನನ್ನು ಕಾಡಿಗೆ ಕರೆತಂದೆ.

ಹೀಗೆ ಹೇಳಿದ ರಾಜ ನಕ್ಷತ್ರರಾಯನ ಕೈಗೆ ಕತ್ತಿಕೊಟ್ಟನು. ನಕ್ಷತ್ರ ರಾಯನ ಕೈಯಿಂದ ಕತ್ತಿ ಕೆಳಗೆ ಬಿತ್ತು. ನಕ್ಷತ್ರರಾಯ ಎರಡು ಕೈಗಳಿಂ ದಲೂ ಮುಖಮುಚ್ಚಿ ಅಳುತ್ತ ಗದ್ಗದ ಧ್ವನಿಯಲ್ಲಿ “ಅಣ್ಣ ನಾನು ತಪ್ಪಿತಸ್ಥನಲ್ಲ–ಈ ಮಾತು ಎಂದಿಗೂ ನನ್ನ ಮನದಲ್ಲಿ ಮೂಡಿಲ್ಲ”–ಎಂದ.

ರಾಜ ಅವನನ್ನು ಆಲಿಂಗಿಸಿಕೊಂಡು ಹೇಳಿದ—ನಾನದನ್ನು ಬಲ್ಲೆ. ಎಂದಾದರೂ ನೀನು ನನಗೆ ಘಾಯಮಾಡುವೆಯಾ. ನಾಲ್ಕಾರು ಜನ ನಿನಗೆ ಕೆಟ್ಟಮಾರ್ಗ ಹೇಳಿಕೊಟ್ಟಿರಬೇಕು.

“ ರಘುಪತಿಯೊಬ್ಬನೆ ನನಗೆ ಈ ಉಪದೇಶ ಮಾಡಿದ್ದು ” ಎಂದು ನಕ್ಷತ್ರರಾಯ ಹೇಳಿದ.

ರಾಜ ಹೇಳಿದ—“ ರಘುಪತಿಯಿಂದ ದೂರವಾಗಿರು ”

ನಕ್ಷತ್ರರಾಯನೆಂದ—“ ಎಲ್ಲಿ ಹೋಗಲಿ ಹೇಳು. ನಾನಿಲ್ಲಿರಲು ಬಯಸುವುದಿಲ್ಲ. ನಾನು ಇಲ್ಲಿಂದ—ರಘುಪತಿಯ ಹತ್ತಿರದಿಂದ ಓಡಿಹೋಗಬೇಕು.”

“ ನೀನು ನನ್ನ ಬಳಿಯಲ್ಲೇ ಇರು. ಇನ್ನೆಲ್ಲಿಗೂ ಹೋಗಬೇಕಾಗಿಲ್ಲ. ರಘುಪತಿ ನಿನ್ನನ್ನೇನು ಮಾಡಬಲ್ಲ ” ಎಂದು ರಾಜ ಹೇಳಿದ.

ನಕ್ಷತ್ರರಾಯ ರಾಜನ ಕೈಯನ್ನು ಬಲವಾಗಿ ಹಿಡಿದುಕೊಂಡ. ರಘುಪತಿ ತನ್ನನ್ನು ಎಳೆದೊಯ್ಯುವನೆಂಬ ಹೆದರಿಕೆಯಾಗಿತ್ತು.

೧೧

ನಕ್ಷತ್ರರಾಯ ರಾಜನ ಕೈಹಿಡಿದುಕೊಂಡು ಅರಮನೆಗೆ ಹಿಂದಿರುಗಿ ಬರುತ್ತಿದ್ದಾಗಲೂ ಆಕಾಶದಿಂದ ಅಲ್ಪಸ್ವಲ್ಪ ಬೆಳಕು ಬರುತ್ತಿತ್ತು. ಆದರೆ ಕಾಡಭೂಮಿಯಲ್ಲಿ ಗಾಡಾಂಧಕಾರ ಹರಡಿತ್ತು. ಕತ್ತಲೆಯ ಪ್ರವಾಹ ಹರಿದು ಬರುತ್ತಿತ್ತು. ಗಿಡಮರಗಳ ತಲೆಮಾತ್ರ ಮೇಲೆ ಕಾಣುತ್ತಿತ್ತು. ಕ್ರಮೇಣ ಅವೂ ಮುಳುಗಿಹೋಗುತ್ತ ಬಂದವು. ಆಗ ಅಂಧಕಾರ ಪೂರ್ಣವಾಗಿ ಭೂಮಿಯೂ ಆಕಾಶವೂ ಒಂದಾಯಿತು.

ರಾಜ ಅರಮನೆಯ ಕಡೆಗೆ ಹೋಗದೆ ದೇವಾಲಯದ ಕಡೆಗೆ ಹೋದ. ದೇವಾಲಯದ ಸಂಜೆ ಆರತಿ ಮುಗಿಸಿ ದೀಪವೊಂದನ್ನು ಉರಿಸಿಕೊಂಡು ರಘುಪತಿಯೂ ಜಯಸಿಂಹನೂ ಗುಡಿಸಲಲ್ಲಿ ಕುಳಿತಿದ್ದರು. ಇಬ್ಬರೂ ನೀರವವಾಗಿ ತಮ್ಮ ತಮ್ಮ ಯೋಚನೆಯಲ್ಲಿರುವರು. ದೀಪದ ಮುಸುಕು ಬೆಳಕಿನಲ್ಲಿ ಅವರಿಬ್ಬರ ಮುಖದ ಅಂಧಕಾರಮಾತ್ರ ಕಾಣಿಸುತ್ತಿತ್ತು. ನಕ್ಷತ್ರರಾಯ ರಘುಪತಿಯನ್ನು ನೋಡಿ ಮುಖಮೇಲಕ್ಕೆ ಎತ್ತದಾದ. ರಾಜನ ನೆರಳಲ್ಲಿ ನಿಂತ. ನೆಲನೋಡುತ್ತ ನಿಂತಿದ್ದ ರಾಜ ಅವನನ್ನು ಪಕ್ಕಕ್ಕೆ ಎಳೆದುಕೊಂಡು ಗಟ್ಟಿಯಾಗಿ ಅವನ ಕೈಹಿಡಿದು ನಿಲ್ಲಿಸಿಕೊಂಡ. ನೆಟ್ಟನೋಟದಿಂದ ರಘುಪತಿಯ ಮುಖವನ್ನೊಮ್ಮೆ ನಿಟ್ಟಿಸಿದ. ರಘುಪತಿ

ಕ್ರೂರದೃಷ್ಟಿಯಿಂದ ನಕ್ಷತ್ರರಾಯನನ್ನು ದೃಷ್ಟಿಸಿದ. ಕಡೆಗೆ ರಾಜ ರಘುಪತಿಗೆ ನಮಸ್ಕಾರ ಮಾಡಿದ. ನಕ್ಷತ್ರರಾಯನೂ ಅವನನ್ನು ಅನುಕರಿಸಿದ.—ರಘುಪತಿ ನಮಸ್ಕಾರ ಸ್ವೀಕರಿಸಿ ಗಂಭೀರಸ್ವರದಲ್ಲಿ "ಜಯವಾಗಲಿ—ರಾಜ್ಯ ಕ್ಷೇಮವೆ?" ಎಂದ. ರಾಜ ಸ್ವಲ್ಪ ಸಿಥಾಸಿಸಿ—ಠಾಕೂರ್ ಆಶಿರ್ವದಿಸಿರಿ, ರಾಜ್ಯಕ್ಕೆ ಕೇಡು ಬರದಿರಲಿ. ಈ ರಾಜ್ಯದಲ್ಲಿ ತಾಯಿಯ ಎಲ್ಲ ಮಕ್ಕಳೂ ಸದ್ಭಾವದಿಂದ, ಪ್ರೇಮದಿಂದ ಕೂಡಿ ಬಾಳುತ್ತಿರುವರು. ಈ ರಾಜ್ಯದಲ್ಲಿ ಸೋದರನ ಬಳಿಯಿಂದ ಸೋದರನನ್ನು ಯಾರೂ ಎಳೆದೊಯ್ಯದಿರಲಿ. ಪ್ರೇಮ ಇರುವ ಕಡೆ ಯಾರೂ ಹಿಂಸೆಯನ್ನು ಸ್ಥಾಪಿಸದಿರಲಿ. ರಾಜ್ಯಕ್ಕೆ ಕೇಡು ಒರುವ ಸೂಚನೆ ಕಂಡು ಬರುತ್ತಿದೆ. ಪಾಪ—ಸಂಕಲ್ಪದ ತಿಕ್ಕಾಟದಲ್ಲಿ ಕಾಡುಗಿಚ್ಚು ಉರಿದೆದ್ದೀತು—ನಿವಾರಿಸಿರಿ. ಶಾಂತಿಯ ಮಳೆಗರೆಯಿರಿ. ಭೂಮಿಯನ್ನು ತಣ್ಣಗೆ ಮಾಡಿರಿ.

ರಘುಪತಿ—"ದೇವತೆಯ ಕೋಪಾಗ್ನಿ ಉರಿದೆದ್ದರೆ ಅದನ್ನು ಯಾರು ತಡೆಯುವರು. ಒಬ್ಬ ಅಪರಾಧಿಗಾಗಿ ಸಾವಿರಾರು ನಿರಪರಾಧಿಗಳು ಆ ಉರಿಯಲ್ಲಿ ಬೂದಿಯಾಗುವರು—" ಎಂದು ಹೇಳಿದ.

ರಾಜನೆಂದ—"ಅದೇ ಭಯವೆ. ಅದಕ್ಕಾಗಿಯೆ ಹೆದರುವದು. ಆ ವಿಷಯ ತಿಳಿದಿದ್ದೂ ಯಾರೂ ಅರಿಯರೇಕೆ. ಈ ರಾಜ್ಯದಲ್ಲಿ ದೇವತೆಯ ಹೆಸರು ಹೇಳಿ ದೇವತೆಯ ನಿಯಮ ಮೀರುತ್ತಿರುವದು ನಿಮಗೆ ತಿಳಿಯದೆ. ಅದೇ ಕೇಡಿನ ಹೆದರಿಕೆಯಿಂದ ಇಂದು ಸಂಜೆ ಇಲ್ಲಿಗೆ ಬಂದಿರುವದು. ಇಲ್ಲಿ ಪಾಪದ ಬೀಜ ನೆಟ್ಟು ನನ್ನ ಈ ಧನಧಾನ್ಯ ತುಂಬಿದ ನೆಮ್ಮದಿಯ ರಾಜ್ಯದಲ್ಲಿ ದೇವತೆಯ ಸಿಡಿಲ ಮಳೆ ಕರೆಯ ಬೇಡಿರಿ. ನಿಮಗೆ ಈ ಮಾತು ತಿಳಿಸಿ ಹೋಗುತ್ತೇನೆ. ಈ ಸಂಗತಿ ಹೇಳುವುದಕ್ಕಾಗಿಯೇ ಇಂದು ನಾನು ಬಂದಿರುವೆ!—ಹೀಗೆಂದು ಮಹಾರಾಜ ರಘುಪತಿಯ ಮುಖದ ಮೇಲೆ ತನ್ನ ಮರ್ಮಭೇದಿಯಾದ ದೃಷ್ಟಿಬೀರಿದ. ರಾಜನ ದೃಢ ಗಂಭೀರ ಸ್ವರ ತಡೆದ ಬಿರುಗಾಳಿಯಂತೆ ಗುಡಿಸಲೊಳಗೆ ಕಂಪಿಸತೊಡಗಿತು. ರಘುಪತಿ ಒಂದು ಮಾತೂ ಆಡಲಿಲ್ಲ. ಜನಿವಾರ ಹಿಡಿದು ನೀವತೊಡಗಿದ. ರಾಜ ನಮಸ್ಕಾರ ಮಾಡಿ ನಕ್ಷತ್ರರಾಯನ ಕೈ ಹಿಡಿದು ಹೊರಹೊರಟ. ಸಂಗಡ ಜಯಸಿಂಹನೂ

ಹೊರಬಿದ್ದ. ಮನೆಯೊಳಗೆ ಒಂದೇ ಒಂದು ದೀಪ, ರಘುಪತಿ ಹಾಗೂ ರಘುಪತಿಯ ನೆರಳು ಉಳಿದಿತ್ತು.

ಆಗ ಆಕಾಶದಲ್ಲಿ ಬೆಳಕು ಮಾಯವಾಗಿತ್ತು. ನಕ್ಷತ್ರಗಳು ಮೇಘದೊಳಗೆ ಮುಳುಗಿದ್ದುವು. ಆಕಾಶದ ಮೂಲೆಮೂಲೆಯಲ್ಲೂ ಅಂಧಕಾರ. ಮೂಡಲ ಗಾಳಿಯಲ್ಲಿ ಆ ಕಗ್ಗತ್ತಲೆಯಲ್ಲಿ ಎಲ್ಲಿಂದಲೋ ಕದಂಬದ ಹೂವಿನ ಕಂಪು ಬೀಸುತ್ತಿತ್ತು. ಹಾಗೂ ಅಡವಿಯ ಮರ್ಮರ ಶಬ್ದ ಕೇಳಿ ಬರುತ್ತಿತ್ತು. ಆಲೋಚನೆಯಲ್ಲಿ ಮುಳುಗಿ ಪರಿಚಿತವಾದ ಮಾರ್ಗದಲ್ಲಿ ರಾಜ ನಡೆಯುತ್ತಿದ್ದ. ಇದ್ದಕ್ಕಿದ್ದಂತೆ ಹಿಂದಿನಿಂದ ' ಮಹಾರಾಜ ' ಎಂದು ಯಾರೋ ಕೂಗುವದು ಕೇಳಿಸಿತು.

ರಾಜ ಹಿಂದಿರುಗಿ ಪ್ರಶ್ನಿಸಿದ. "ಯಾರು ನೀನು." ಪರಿಚಿತ ಧ್ವನಿ? " ನಾನು ನಿಮ್ಮ ಅಧಮಸೇವಕ ಪ್ರಭು. ನಿಮ್ಮನ್ನು ಹೊರತು ನನಗೆ ಯಾರೂ ಇಲ್ಲ. ನೀವು ನಿಮ್ಮ ಕಿರಿಯ ತಮ್ಮನ ಕೈಹಿಡಿದು ಕತ್ತಲೆಯಲ್ಲಿ ಹೋಗುತ್ತಿರುವಂತೆ ನನ್ನ ಕೈಯನ್ನೂ ಹಿಡಿದುಕೊಳ್ಳಿ. ನನ್ನನ್ನು ಸಂಗಡ ಕರೆದೊಯ್ಯಿರಿ. ನಾನು ಕಗ್ಗತ್ತಲೆಯಲ್ಲಿ ಬಿದ್ದಿರುವೆ. ಯಾವುದರಿಂದ ಒಳ್ಳೆಯದು, ಯಾವುದರಿಂದ ಕೆಟ್ಟದು ಎಂದು ನನಗೆ ಸ್ವಲ್ಪವೂ ತಿಳಿಯದು. ಒಮ್ಮೆ ನಾನು ಬಲಕ್ಕೆ ತಿರುಗುವೆ. ಇನ್ನೊಮ್ಮೆ ಎಡಕ್ಕೆ ತಿರುಗುವೆ. ನನಗೆ ಗುರಿ ಎನ್ನುವದಿಲ್ಲ." ಎಂದು ಹೇಳಿತು. ಆ ಕತ್ತಲೆಯಲ್ಲಿ ಕಣ್ಣೀರು ಸುರಿಯಲಾರಂಭಿಸಿತು. ಅದನ್ನು ಯಾರೂ ಕಾಣಲಿಲ್ಲ. ಉದ್ವೇಗದಿಂದ ಕೂಡಿದ್ದ ಜಯಸಿಂಹನ ತೋಯ್ದುಸ್ವರ ನಡುಗುತ್ತನಡುಗುತ್ತ ರಾಜನ ಕಿವಿ ಸೇರುತ್ತಿತ್ತು. ನಿಶ್ಶಬ್ದ ನೀರವ ಅಂಧಕಾರ. ರಾಜ ಜಯಸಿಂಹನ ಕೈಹಿಡಿದು ಹೇಳಿದ—" ನಡೆ—ನನ್ನೊಡನೆ ಅರಮನೆಗೆ ನಡೆ."

## ೧೨

ಮರುದಿನ ಜಯಸಿಂಹ ದೇವಾಲಯಕ್ಕೆ ಮರಳಿ ಬಂದಾಗ ಪೂಜೆಯ ಹೊತ್ತು ಮೀರಿಹೋಗಿತ್ತು. ರಘುಪತಿ ಬಾಡಿದ ಮುಖದಿಂದ ಒಂಟಿಯಾಗಿ ಕುಳಿತಿರುವನು. ಇದಕ್ಕೆ ಮುಂಚೆ ಎಂದೂ ಹೀಗೆ ನಿಯಮಭಂಗವಾಗಿರಲಿಲ್ಲ.

ಜಯಸಿಂಹ ಬಂದು ಗುರುವಿನ ಬಳಿಗೆ ಹೋಗದೆ ತನ್ನ ಹೂದೋಟಕ್ಕೆ ಹೋದ. ತನ್ನ ಗಿಡಮರಗಳ ಮಧ್ಯೆ ಹೋಗಿ ಕುಳಿತ. ಅವು ಅವನ ಸುತ್ತಲೂ ಅಲುಗಲಾರಂಭಿಸಿದವು. ಕಂಪಿಸತೊಡಗಿದವು. ನೆರಳು ಕುಣಿಸಲು ಮೊದಲಿಟ್ಟವು. ಅವನ ಸುತ್ತಲೂ ಹೂವಿನಿಂದ ಕೂಡಿದ ಎಲೆಗಳ ರಾಶಿ. ನೆರಳುತುಂಬಿದ ಸುಕೋಮಲ ಸ್ನೇಹದ ಮುಸುಕು, ಸುಮಧುರ ಕರೆ. ಪ್ರಕೃತಿಯ ಪ್ರೀತಿಪೂರ್ಣ ಆಲಿಂಗನ, ಎಲ್ಲವೂ ನಿರೀಕ್ಷಿಸುತ್ತಿವೆ. ಮಾತಿನಿಂದ ವಿಚಾರಿಸವು. ಚಿಂತೆಗೆ ಅಡ್ಡಿ ಮಾಡವು. ನೋಡಿದರೆ ನೋಡುವವು. ಮಾತಾಡಿಸಿದರೆ ಮಾತನಾಡುವವು. ಈ ಮೂಕ ಉಪಚಾರದಲ್ಲಿ ಪ್ರಕೃತಿಯ ಈ ಅಂತಃಪುರದಲ್ಲಿ ಕುಳಿತು ಜಯಸಿಂಹ ಆಲೋಚಿಸತೊಡಗಿದ. ರಾಜ ಅವನಿಗೆ ಮಾಡಿದ್ದ ಉಪದೇಶವನ್ನೆಲ್ಲ ಮೇಲಿಂದಮೇಲೆ ಮನದಲ್ಲೆ ಆಲೋಚಿಸತೊಡಗಿದ.

ಹೀಗಿರುವಾಗ ಮೆಲ್ಲಮೆಲ್ಲನೆ ರಘುಪತಿ ಬಂದು ಅವನ ಬೆನ್ನಲ್ಲಿ ಕೈಯಿಟ್ಟ. ಜಯಸಿಂಹ ಬೆದರಿದ. ರಘುಪತಿ ಅವನ ಪಕ್ಕದಲ್ಲಿ ಕುಳಿತ. ಜಯಸಿಂಹನ ಮುಖ ನೋಡಿ ಕಂಪಿತ ಸ್ವರದಲ್ಲಿ—ಮಗು, ನೀನೇಕೆ ಹೀಗಿರುವೆ, ನಾನು ನಿನಗೇನು ಮಾಡಿದೆನೆಂದು ನೀನು ಸ್ವಲ್ಪಸ್ವಲ್ಪವಾಗಿ ನನ್ನಿಂದ ದೂರ ಹೋಗುತ್ತಿರುವೆ—ಎಂದು ಹೇಳಿದ.

ಜಯಸಿಂಹ ಏನನ್ನೋ ಹೇಳಲು ಪ್ರಯತ್ನಿಸಿದ. ರಘುಪತಿ ಅಡ್ಡಿಯಾಗಿ ಹೇಳತೊಡಗಿದ. "ಒಂದು ಕ್ಷಣ ಹೊತ್ತಾದರೂ ನನ್ನ ಸ್ನೇಹ ದಲ್ಲಿ ಕೊರತೆಯನ್ನು ಅನುಭವಿಸಿರುವೆಯಾ?" ನಾನು ನಿನ್ನ ಬಳಿ ಏನಾದರೂ ತಪ್ಪುಮಾಡಿರುವೆನೆ. ಜಯಸಿಂಹ, ಒಂದು ವೇಳೆ ಹಾಗೆ ಮಾಡಿದ್ದರೆ ನಾನು ನಿನ್ನ ಗುರು. ನಿನ್ನ ತಂದೆಯ ಸಮಾನ. ನಾನು ನಿನ್ನಲ್ಲಿ ಕ್ಷಮೆಬೇಡುವೆ. ನನ್ನನ್ನು ಕ್ಷಮಿಸು.

ಜಯಸಿಂಹ ಸಿಡಿಲು ಬಡಿದವನಂತೆ ಬೆಚ್ಚಿ ಬಿದ್ದ. ಗುರುವಿನ ಕಾಲು ಹಿಡಿದು ನಡುಗುವ ದನಿಯಲ್ಲಿ "ಓ ತಂದೆ, ನನಗೇನೂ ತಿಳಿಯದು. ನಾನೇನನ್ನೂ ತಿಳಿದು ಕೊಳ್ಳಲಾರೆ. ನಾನು ಎತ್ತ ಹೋಗುತ್ತಿರುವೆನೆಂಬು ದನ್ನೂ ಅರಿಯಲಾರೆ—" ಎಂದ.

ರಘುಪತಿ ಜಯಸಿಂಹನ ಕೈಹಿಡಿದುಕೊಂಡು ಹೇಳಿದ "ಮಗು ನಾನು ನಿನ್ನನ್ನು ಬಾಲ್ಯದಿಂದಲೂ ತಾಯಿಯಂತೆ ಸ್ನೇಹದಿಂದ ಕಾಪಾಡಿರುವೆ. ತಂದೆಗೂ ಮಿಗಿಲಾಗಿ ಶ್ರಮಪಟ್ಟು ಶಾಸ್ತ್ರಶಿಕ್ಷಣ ಕೊಟ್ಟಿರುವೆ. ನಿನ್ನಲ್ಲಿ ಸಂಪೂರ್ಣ ನಂಬಿಕೆಯಿಟ್ಟು ಗೆಳೆಯನಂತೆ ನಿನ್ನನ್ನು ನನ್ನ ಎಲ್ಲ ಅಂತರಂಗ ವಿಷಯದಲ್ಲೂ ಸಂಗಡಿಗನಂತೆ ಮಾಡಿಕೊಂಡಿರುವೆ. ಇಂದು ನಿನ್ನನ್ನು ನನ್ನ ಬಳಿಯಿಂದ ದೂರ ಸೆಳೆಯುತ್ತಿರುವವರು ಯಾರು? ಇಷ್ಟು ದಿನಗಳ ಸ್ನೇಹ ಮಮತೆಗಳ ಬಂಧನ ಕಿತ್ತು ಒಗೆಯುತ್ತಿರುವವರು ಯಾರು? ನಿನ್ನ ಮೇಲೆ ನನಗಿರುವ ದೇವದತ್ತ ಅಧಿಕಾರವಿದೆಯಲ್ಲ, ಆ ಪವಿತ್ರ ಅಧಿಕಾರವನ್ನು ಯಾರು ಕಸಿಯುತ್ತಿರುವರು? ಹೇಳು, ಮಗೂ, ಆ ಮಹಾಪಾತಕನ ಹೆಸರು ಹೇಳು.—"

"ಪ್ರಭು, ನಿಮ್ಮ ಹತ್ತಿರದಿಂದ ಯಾರೂ ನನ್ನನ್ನು ಅಗಲಿಸಲಿಲ್ಲ. ನೀವೇ ನನ್ನನ್ನು ದೂರಮಾಡುತ್ತಿರುವಿರಿ. ನಾನು ಮನೆಯೊಳಗಿದ್ದೆ. ನೀವು ಇದ್ದಕ್ಕಿದ್ದಂತೆ ನನ್ನನ್ನು ನಡುಬೀದಿಗೆ ತಳ್ಳಿದಿರಿ. ನೀವೆ ಹೇಳಿದಿರಿ.— ತಂದೆಯಾರು? ತಾಯಿ ಯಾರು?, ಅಣ್ಣ ಯಾರು—ಎಂದು ನೀವೇ ಹೇಳಿದಿರಿ. ಯಾರನ್ನು ತಾಯಿಯೆಂದು ತಿಳಿದಿದ್ದೆನೋ ಅವಳನ್ನು ನೀವು ಶಕ್ತಿ ಎಂದು ಹೇಳಿದಿರಿ. ಎಲ್ಲಿ ಯಾರು ಹಿಂಸೆಮಾಡುವರೊ, ಎಲ್ಲಿ ಯಾರು ರಕ್ತಪಾತ ಮಾಡುವರೊ, ಎಲ್ಲಿ ಅಣ್ಣತಮ್ಮಂದಿರು ಜಗಳವಾಡುವರೊ, ಎಲ್ಲಿ ಇಬ್ಬರು ಮನುಷ್ಯರು ಹೊಡೆದಾಡುವರೊ, ಆ ಸ್ಥಳದಲ್ಲೇ ಈ ದಾಹಶಕ್ತಿ ರಕ್ತದಾಸೆಯಿಂದ ತನ್ನ ತಲೆಯೋಡನ್ನು ಹಿಡಿದು ನಿಂತಿರುವದು. ತಾಯ ತೊಡೆಯಿಂದ ನನ್ನನ್ನು ನೀವು ರಾಕ್ಷಸಿಯ ದೇಶಕ್ಕೆ ಏಕೆ ನೂಕಿದಿರಿ." ಎಂದು ಜಯಸಿಂಹ ಹೇಳಿದ.

ರಘುಪತಿ ಬಹಳ ಹೊತ್ತು ಬೆರಗಾಗಿ ಕುಳಿತಿದ್ದ. ಕಡೆಗೆ ನಿಟ್ಟುಸಿರು ಬಿಟ್ಟು ಹೇಳಿದ. "ಹಾಗಾದರೆ ನೀನು ಸ್ವತಂತ್ರನಾದೆ. ಬಂಧಮುಕ್ತನಾದೆ. ನಿನ್ನ ಮೇಲಿದ್ದ ನನ್ನೆಲ್ಲ ಅಧಿಕಾರವನ್ನೂ ನಾನು ಹಿಂದಕ್ಕೆ ತೆಗೆದುಕೊಳ್ಳುವೆ. ಅದರಿಂದ ನಿನಗೆ ಸುಖ ಲಭಿಸುವುದಾದರೆ ನೀನು ಸುಖಿಯಾಗು." ಇಷ್ಟು ಹೇಳಿ ಎಳಲೆತ್ನಿಸಿದ.

ಜಯಸಿಂಹ ಅವನ ಕಾಲು ಹಿಡಿದುಕೊಂಡು "ಇಲ್ಲ, ಇಲ್ಲ, ಪ್ರಭು. ನೀವು ನನ್ನನ್ನು ತ್ಯಾಗಮಾಡಿದರೂ ನಾನು ನಿಮ್ಮನ್ನು ಬಿಡಲಾರೆ. ನಾನು ಇದ್ದೇ ಇರುವೆ. ನಿಮ್ಮ ಕಾಲ ಬಳಿಯಲ್ಲೇ ಇರುವೆ. ನಿಮಗೆ ತೋರಿದಂತೆ ಮಾಡುವೆ. ನಿಮ್ಮ ದಾರಿ ಹೊರತು ನನಗೆ ಬೇರೆ ದಾರಿ ಇಲ್ಲ" ಎಂದ.

ಕೂಡಲೆ ರಘುಪತಿ ಜಯಸಿಂಹನನ್ನು ಎದೆಗಪ್ಪಿಕೊಂಡ. ಅವನ ಕಣ್ಣೀರು ಸುರಿದು ಜಯಸಿಂಹನ ಭುಜ ಒದ್ದೆಯಾಯಿತು.

೧೩

ದೇವಾಲಯದಲ್ಲಿ ಅನೇಕ ಮಂದಿ ನೆರೆದಿದ್ದರು. ಬಹಳ ಗದ್ದಲ ನಡೆಯುತ್ತಿತ್ತು. ರಘುಪತಿ ಗದ್ಗದ ಕಂಠದಿಂದ "ನೀವೆಲ್ಲ ಏಕೆ ಬಂದಿರುವಿರಿ?" ಎಂದು ವಿಚಾರಿಸಿದ. ಅವರೆಲ್ಲ ಬೇರೆ ಬೇರೆ ದನಿಯಲ್ಲಿ "ನಾವೆಲ್ಲರೂ ತಾಯಿಯ ದರ್ಶನಕ್ಕಾಗಿ ಬಂದಿರುವೆವು" ಎಂದರು.

ರಘುಪತಿಯೆಂದ—"ತಾಯಿ ಎಲ್ಲಿ? ತಾಯಿ ಈ ರಾಜ್ಯದಿಂದ ಹೊರಟುಹೋದಳು. ನೀವುಗಳು ತಾಯಿಯನ್ನು ಇಟ್ಟುಕೊಳ್ಳಲಾರದೆ ಹೋದಿರಿ. ಆಕೆ ಹೊರಟುಹೋದಳು."

ಬಹಳ ಕೋಲಾಹಲವೆದ್ದಿತು—ನಾನಾ ದಿಕ್ಕಿನಿಂದ ನಾನಾ ಮಾತು ಕೇಳತೊಡಗಿತು.

"ಇದೆಂತಹ ಮಾತು ಠಾಕೂರ್—"

"ನಾವೆಲ್ಲ ಏನಪರಾಧಮಾಡಿದೆವು ಠಾಕೂರ್?"

"ತಾಯಿ ಇನ್ನಾವ ಬಗೆಯಲ್ಲೂ ಪ್ರಸನ್ನಳಾಗಳೆ?"

"ನಮ್ಮ ಅಣ್ಣನ ಮಗನಿಗೆ ಖಾಯಿಲೆಯಾಗಿತ್ತು. ಅದರಿಂದ ಇತ್ತೀಚೆಗೆ ನಾನು ಅರ್ಚನೆಮಾಡಿಸಲು ಬರಲಿಲ್ಲ." ಅವನ ಅಲಕ್ಷ್ಯ ಸಹಿಸದೆ ತಾಯಿ ದೇಶ ಬಿಟ್ಟಳೆಂದು ಆತನ ಬಲವಾದ ನಂಬಿಕೆ.

ನಮ್ಮವೆರಡು ಮೇಕೆಯ ಮರಿಗಳನ್ನು ದೇವಿಗೆ ಕೊಡಬೇಕೆಂದು ಸಂಕಲ್ಪಿಸಿದ್ದೆ, ಬಹಳ ದೂರವಾದ್ದರಿಂದ ಬರಲಾಗಲಿಲ್ಲ—ಎರಡು ಮೇಕೆಮರಿ

ಗಳನ್ನು ಕೊಡಲು ಸಾವಕಾಶವಾದ್ದರಿಂದ ರಾಜ್ಯಕ್ಕೆ ಕೇಡು ಒದಗಿತು. ಇದನ್ನು ನೆನೆದು ಆತ ವ್ಯಾಕುಲಪಡಲಾರಂಭಿಸಿದ.

ಗೋವರ್ಧನ ತಾಯಿಗೆ ಮುಡುಪುಕಟ್ಟಿದ್ದ. ಹರಕೆ ಸಲ್ಲಿಸಲಿಲ್ಲವೆಂದು ತಾಯಿಯೂ ತಕ್ಕಂತೆ ಆತನಿಗೆ ಶಾಸ್ತಿ ವಿಧಿಸಿದಳು. ಅವನ ಪ್ಲೀಹ ಹಿರಿದಾಗಿ ಉಬ್ಬಿಹೋಗಿರುವದು. ಆರು ತಿಂಗಳಿಂದ ಇನ್ನೂ ಹಾಸಿಗೆ ಬಿಟ್ಟು ಎದ್ದಿಲ್ಲ. ಗೋವರ್ಧನ ತನ್ನ ಪ್ಲೀಹ ಉಬ್ಬುವಿಕೆಯೊಡನೆ ಬೆಂಕಿಯಲ್ಲಿ ಬೀಳಲಿ. ತಾಯಿ ದೇಶದಲ್ಲಿರಲಿ. ಆತ ಮನದಲ್ಲೇ ಈರೀತಿ ಪ್ರಾರ್ಥಿಸಿಕೊಂಡ. ಎಲ್ಲರೂ ನಿರ್ಭಾಗ್ಯ ಗೋವರ್ಧನನ ಪ್ಲೀಹ ಮತ್ತಷ್ಟು ದೊಡ್ಡದಾಗಲೆಂದು ಬಯಸಿದರು.

ಗುಂಪಿನಲ್ಲಿ ಒಬ್ಬ ಎತ್ತರದವನಿದ್ದ. ಆತ ಎಲ್ಲರನ್ನೂ ಗದರಿಸಿ ಸದ್ದಡಗಿಸಿದ ಮತ್ತು ರಘುಪತಿಗೆ ಕೈಮುಗಿಯುತ್ತ ಹೇಳಿದ—"ಠಾಕೂರ್ ತಾಯಿ ಏಕೆ ಹೊರಟುಹೋದಳು. ನಾವೇನು ಅಪರಾಧ ಮಾಡಿದೆವು?"

"ತಾಯಿಗಾಗಿ ಒಂದು ಹನಿ ರಕ್ತವನ್ನು ನೀವುಗಳು ಕೊಡಲಾರದೆ ಹೋದಿರಿ. ಇದೇ ನಿಮ್ಮ ಭಕ್ತಿಯೇನು!" ಎಂದು ರಘುಪತಿ ಕೇಳಿದ.

ಎಲ್ಲರೂ ಸುಮ್ಮನಿದ್ದರು. ಕಡೆಗೆ ಮಾತು ಏಳತೊಡಗಿತು. ಅಸ್ಪಷ್ಟ ಸ್ವರದಲ್ಲಿ ಯಾರು ಯಾರೋ ಹೇಳಿದರು—"ರಾಜನ ತಡೆ, ನಾವೇನು ಮಾಡುವುದು?"

ಜಯಸಿಂಹ ಕಲ್ಲುವಿಗ್ರಹದಂತೆ ಅಲುಗದೆ ಕುಳಿತಿದ್ದ. "ತಾಯಿಯ ತಡೆ" ಈ ಮಾತು ಮಿಂಚಿನ ವೇಗದಲ್ಲಿ ಅವನ ನಾಲಿಗೆಯ ತುದಿಗೆ ಬಂದಿತ್ತು. ಆದರೆ ಅವನು ತನ್ನನ್ನು ಅಡಗಿಸಿಕೊಂಡ. ಒಂದು ಮಾತೂ ಆಡಲಿಲ್ಲ.

ರಘುಪತಿ ತೀಕ್ಷ್ಣ ಸ್ವರದಲ್ಲಿ ಹೇಳತೊಡಗಿದ—ರಾಜ ಯಾರು? ತಾಯ ಸಿಂಹಾಸನ ರಾಜನ ಸಿಂಹಾಸನಕ್ಕೂ ಕಡೆಯೆ? ಹಾಗಾದರೆ ತಾಯಿಯಿಲ್ಲದೆ ದೇಶದಲ್ಲಿ ನಿಮ್ಮ ರಾಜನನ್ನ ಇಟ್ಟುಕೊಳ್ಳಿರಿ. ನೀವು ಇರಿ. ನಿಮ್ಮನ್ನು ಯಾರು ಕಾಪಾಡುವರೆಂದು ನೋಡೋಣ.

ಜನದ ನಡುವೆ ಗೊಣ ಗೊಣ ಧ್ವನಿ ಎದ್ದಿತು. ಎಲ್ಲರೂ ಎಚ್ಚರಿಕೆಯಿಂದ ಮಾತನಾಡತೊಡಗಿದರು.

ರಘುಪತಿ ಎದ್ದು ನಿಂತು—“ರಾಜನನ್ನ ಹಿರಿಯವನೆಂದು ನಿಮ್ಮ ತಾಯಿಯನ್ನು ನೀವು ರಾಜ್ಯದಿಂದ ಅಪಮಾನಮಾಡಿ ಓಡಿಸಿದಿರಿ! ಸುಖವಾಗಿ ಇರುವೆವೆಂದು ತಿಳಿಯಬೇಡಿರಿ. ಇನ್ನು ಮೂರು ವರ್ಷದ ಅನಂತರ ಇಷ್ಟು ದೊಡ್ಡ ರಾಜ್ಯದಲ್ಲಿ ನಿಮ್ಮ ಮನೆಮಠದ ಗುರುತೂ ಇರಲಾರದು. ನಿಮ್ಮ ವಂಶದಲ್ಲಿ ದೀವಿಗೆ ಹಚ್ಚಲು ಯಾರೂ ಉಳಿಯರು” ಎಂದು ಹೇಳಿದ.

ಜನಸಮುದ್ರದ ಗೊಣಗಾಟದ ಶಬ್ದ ಕ್ರಮೇಣ ಹೆಚ್ಚಾಗತೊಡಗಿತು. ಕ್ರಮೇಣ ಜನವೂ ಹೆಚ್ಚುತಿತ್ತು. ಅದೇ ಎತ್ತರದಾತ ಕೈ ಮುಗಿಯುತ್ತ ರಘುಪತಿಯನ್ನು ಕೇಳಿದ—“ಮಕ್ಕಳು ಒಂದು ವೇಳೆ ತಪ್ಪು ಮಾಡಿದರೆ ತಾಯಿ ಅವರನ್ನು ಶಿಕ್ಷಿಸುವಳು. ಆದರೆ ತಾಯಿ ಮಕ್ಕಳನ್ನು ಸಂಪೂರ್ಣವಾಗಿ ಕೈಬಿಟ್ಟು ಹೋಗುವುದು ಸಾಧ್ಯವೆ! ಪ್ರಭು, ಏನುಮಾಡಿದರೆ ತಾಯಿ ಮರಳುವಳು ಹೇಳಿ.”

“ನಿಮ್ಮ ಈ ದೊರೆ ರಾಜ್ಯಬಿಟ್ಟು ಹೊರಗೆಹೋದ ದಿನ ತಾಯಿ ಈ ರಾಜ್ಯಕ್ಕೆ ಮತ್ತೆಕಾಲಿಡುವಳು” ಎಂದು ರಘುಪತಿ ಹೇಳಿದ.

ಈ ಮಾತು ಕೇಳಿ ಜನರ ಗೊಣಗಾಟ ಹಠಾತ್ತಾಗಿ ನಿಂತಿತು. ಕೂಡಲೆ ನಾಲ್ಕೂಕಡೆ ಸುಗಭೀರ ಮೌನ ಮುಸುಕಿಟ್ಟಿತು. ಕಡೆಗೆ ಒಬ್ಬರು ಮತ್ತೊಬ್ಬರ ಮುಖ ನೋಡ ತೊಡಗಿದರು. ಯಾರ ಬಾಯಿಂದಲೂ ಮಾತು ಹೊರಡದಾಯಿತು.

ರಘುಪತಿ ಮೇಘಗಂಭೀರ ಸ್ವರದಲ್ಲಿ “ಹಾಗಾದರೆ ನೀವು ನೋಡುವಿರೇನು! ಬನ್ನಿ. ನನ್ನೊಡನೆ ಬನ್ನಿ, ಬಹಳ ದೂರದಿಂದ ಬಹಳ ಆಸೆಯಿಂದ ನೀವುಗಳು ತಾಯಿಯ ದರ್ಶನಕ್ಕೆ ಬಂದಿರುವಿರಿ.—ನಡೆಯಿರಿ, ಒಮ್ಮೆ ದೇವಾಲಯಕ್ಕೆ ನಡೆಯಿರಿ.” ಎಂದ.

ಎಲ್ಲರೂ ಹೆದರಿಕೆಯಿಂದ ದೇವಾಲಯದ ಪ್ರಾಂಗಣಕ್ಕೆ ಬಂದು ಸೇರಿದರು. ದೇವಾಲಯದ ಬಾಗಿಲು ಮುಚ್ಚಿತ್ತು. ರಘುಪತಿ ಮೆಲ್ಲಮೆಲ್ಲನೆ ಬಾಗಿಲು ತೆರೆದ.

ಕ್ಷಣಕಾಲ ಯಾರ ಬಾಯಲ್ಲೂ ಮಾತು ಹೊರಡಲಿಲ್ಲ. ವಿಗ್ರಹದ ಮುಖ ಕಾಣುತಿರಲಿಲ್ಲ. ವಿಗ್ರಹದ ಹಿಂಭಾಗ| ದರ್ಶಕರ ಕಡೆಗೆ ಇತ್ತು. ತಾಯಿ ವಿಮುಖಳಾಗಿರುವಳು. ಕೂಡಲೆ ಜನದ ನಡುವೆ ಅಳುವ ಧ್ವನಿ ಎದ್ದಿತು. "ಒಮ್ಮೆ ತಿರುಗಿ ನಿಲ್ಲು ತಾಯಿ. ನಾವೇನು ತಪ್ಪು ಮಾಡಿದೆವು." ನಾಲ್ಕೂಕಡೆ "ತಾಯಿ ಎಲ್ಲಿ. ತಾಯಿ ಎಲ್ಲಿ." ಎಂಬ ಸದ್ದು ಮೂಡಿತು. ವಿಗ್ರಹ ಕಲ್ಲಾದ್ದರಿಂದ ತಿರುಗಲಿಲ್ಲ. ಅನೇಕರು ಮೂರ್ಛೆ ಹೋದರು. ಮಕ್ಕಳು ಏನೂ ಅರಿಯದೆ ಅಳತೊಡಗಿದರು. ಮುದುಕರು ತಾಯನ್ನು ಕಳೆದುಕೊಂಡ ಚಿಕ್ಕಮಕ್ಕಳಂತೆ "ಅಮ್ಮಾ, ಅಮ್ಮಾ," ಎಂದು ಕೂಗ ತೊಡಗಿದರು. ಹೆಂಗಸರ ಮೇಲ್ಮುಸುಕು ಓರೆಯಾಯಿತು. ಸೆರಗು ಜಾರಿ ಬಿತ್ತು. ಅವರು ಎದೆ ಎದೆ ಬಡಿದುಕೊಳ್ಳಲಾರಂಭಿಸಿದರು. ಯುವಕರು ನಡುಗುವ ಮೆಲ್ದನಿಯಲ್ಲಿ ಹೇಳಲಾರಂಭಿಸಿದರು. "ತಾಯಿ, ನಾವು ನಿನ್ನನ್ನು ಹಿಂದಕ್ಕೆ ಕರೆತರುವೆವು. ನಾವು ನಿನ್ನನ್ನು ಬಿಡೆವು."

ಹುಚ್ಚನೊಬ್ಬ—ನಮ್ಮವ್ವಾ, ಕಲ್ಲ ಮಗಳೇ
ಮಕ್ಕಳ ಕಣ್ಣೆತ್ತಿ ನೋಡೆಯಾ" ಎಂದು ಹಾಡಿದ.

ದೇವಾಲಯದ ಬಾಗಿಲಲ್ಲಿ ನಿಂತು ಇಡೀ ರಾಜ್ಯ ತಾಯಿ, ತಾಯಿ, ಎಂದು ಗೋಳಾಡತೊಡಗಿತು. ಆದರೆ ವಿಗ್ರಹ ತಿರುಗಲಿಲ್ಲ. ಮಧ್ಯಾಹ್ನದ ಸೂರ್ಯ ಪ್ರಭಾವಶಾಲಿಯಾದ. ಪ್ರಾಂಗಣದಲ್ಲಿ ಹಸಿದ ಜನಗಳ ಗೊಳಾಟ ನಿಲ್ಲಲಿಲ್ಲ.

ಆಗ ಜಯಸಿಂಹ ಕಂಪಿತ ನಡಗೆಯಲ್ಲಿ ಬಂದು "ಪ್ರಭು, ನಾನು ಒಂದು ಮಾತೂ ಹೇಳಕೂಡದೆ"—ಎಂದ

ರಘುಪತಿ "ಇಲ್ಲ—ಒಂದು ಮಾತೂ ಹೇಳಕೂಡದು"—ಎಂದ.

ಜಯಸಿಂಹ ಕೇಳಿದ—ಸಂದೇಹಕ್ಕೆ ಕಾರಣವೇ ಇಲ್ಲವೇನು."

ರಘುಪತಿ ದೃಢಸ್ವರದಲ್ಲಿ "ಇಲ್ಲ" ಎಂದ.

ಜಯಸಿಂಹ ಮುಷ್ಟಿ ಬಿಗಿದು ಹಿಡಿದು ದೃಢಸ್ವರದಲ್ಲಿ "ಎಲ್ಲವನ್ನೂ ನಂಬಲೇನು?" ಎಂದ.

ರಘುಪತಿ ಜಯಸಿಂಹನನ್ನು ಅತಿಕ್ರೂರ ನೋಟದಿಂದ ನುಡುತ್ತ "ಹೌದು" ಎಂದ.

"ನನ್ನ ಎದೆ ಒಡೆದು ಹೋಗುತ್ತಿದೆ" ಎಂದು ಜಯಸಿಂಹ ಎದೆಯ ಮೇಲೆ ಕೈಯಿಟ್ಟುಹೇಳಿದ. ಅವನು ಜನರ ನಡುವೆ ಹಾಯ್ದು ಹೊರಗೆ ಹೋದ.

೧೪

ಅದರ ಮರುದಿನ ಆಷಾಢದ ಇಪ್ಪತ್ತೊಂಬತ್ತನೆಯ ದಿನಾಂಕ. ಅಂದು ರಾತ್ರಿ ಹದಿನಾಲ್ಕು ದೇವತೆಗಳ ಪೂಜೆ. ಬೆಳಗ್ಗೆ ಹನೆಯ ತೋಪಿನ ಹಿಂಬದಿಯಲ್ಲಿ ಸೂರ್ಯ ಮೇಲೆದ್ದಾಗ ಪೂರ್ವದಿಕ್ಕಿನಲ್ಲಿ ಮೋಡ ಇರಲಿಲ್ಲ. ಹೊಂಗಿರಣಗಳಿಂದ ಹೊಳೆಯುತ್ತಿದ್ದ ಆನಂದಮಗ್ನವಾದ ಅರಣ್ಯದೊಳ ಹೊಕ್ಕು ಜಯಸಿಂಹ ಕುಳಿತಾಗ ಅವನಿಗೆ ಹಿಂದಿನ ಘಟನೆಗಳೆಲ್ಲ ನೆನಪಾದವು. ಇದೇ ಕಾಡಿನ ನಡುವೆ, ಇದೇ ಕಲ್ಲು ದೇವಾಲಯದ ಕಲ್ಲು ಸೋಪಾನದಲ್ಲಿ, ಇದೇ ಗೋಮತಿ ತೀರದ ಆ ದೊಡ್ಡ ಆಲದ ಮರದಡಿ ಆ ನೆರಳಿನಿಂದ ಸುತ್ತುವರಿದ ಕೆರೆಯುರುಗಿನಲ್ಲಿ ಕಳೆದ ಅವನ ಬಾಲ್ಯಕಾಲ ಸುಮಧುರ ಸ್ವಪ್ನದಂತೆ ಜ್ಞಾಪಕಕ್ಕೆ ಬಂದಿತು. ಆ ಎಲ್ಲ ಸುಂದರ ದೃಶ್ಯವೂ ಅವನ ಬಾಲ್ಯವನ್ನು ಸ್ನೇಹದೊಡನೆ ಬಳಸಿ ನಿಂತಿದ್ದರೆ ಇಂದು ಅವನು ನಗುತ್ತಿದ್ದ. ಅವನು ಪುನಃ ಅವುಗಳನ್ನು ಆಹ್ವಾನಿಸುತ್ತಿದ್ದ. ಆದರೆ "ನಾನು ಮನೆಯಿಂದ ಹೊರಕ್ಕೆ ಬಂದಿರುವೆ, ನಾನು ಅಗಲಿಕೆ ಪಡೆದಿರುವೆ, ಇನ್ನು ನಾ ಮರಳಿ ಹೋಗೆ" ಎಂದು ಅವನ ಮನಸ್ಸು ನುಡಿಯುತಿತ್ತು. ಬಿಳಿಯಕಲ್ಲಿನ ದೇವಾಲಯದ ಮೇಲೆ ಸೂರ್ಯಕಿರಣ ಬಂದು ಬಿದ್ದಿರುವದು. ಮತ್ತು ಅವನ ಎಡಭಾಗದ ಗೋಡೆಯಮೇಲೆ ಬಕುಳ ಮರದ ಕೊಂಬೆಯು ಅಲುಗಾಡುವ ನೆರಳು ಬಿದ್ದಿರುವದು. ಚಿಕ್ಕಂದಿನಲ್ಲಿ ಈ ಕಲ್ಲುದೇವಾಲಯು ಸಜೀವದಂತೆ ತೋರುತಿದ್ದಾಗ ಈ ಸೋಪಾನದ ಮೇಲೆ ಒಂಟಿಯಾಗಿ ಕುಳಿತು ಆಡುತಿದ್ದಾಗ, ಇದೇ ಸೋಪಾನದಲ್ಲಿ ಸಂಗಡಿಗನ ಸಹವಾಸ ಅನುಭವಿಸುತಿದ್ದ. ಈ ದಿನ ಬೆಳಗಿನ ಸೂರ್ಯಕಿರಣದಲ್ಲಿ ದೇವಾಲಯವನ್ನು ಹಿಂದಿನಂತೆ ಸಜೀವವನ್ನಾಗೂ, ತನ್ನ ಸೋಪಾನಗಳನ್ನು ಹಾಗೆಯೇ ಬಾಲ್ಯ ನೋಟದಿಂದ ನೋಡತೊಡಗಿದ. ದೇವಾಲಯದ ಒಳಗಿದ್ದ ತಾಯಿ ಈ

ದಿನ ಪುನಃ ತಾಯಿಯಂತೆ ತೋರಲಾರಂಭಿಸಿದಳು. ಆದರೆ ಆತ್ಮಗೌರವ ದಿಂದ ಅವನ ಹೃದಯ ಉಕ್ಕಿ ಬಂದಿತು. ಅವನ ಎರಡು ಕಣ್ಣುಗಳೂ ತುಂಬಿ ಕಣ್ಣೀರು ಸುರಿಯತೊಡಗಿತು.

ರಘುಪತಿ ಬರುವುದನ್ನು ಕಂಡು ಜಯಸಿಂಹ ಕಣ್ಣೀರು ಒರೆಸಿಕೊಂಡ. ಗುರುವಿಗೆ ನಮಸ್ಕರಿಸಿ ಎದ್ದು ನಿಂತ. ಇಂದು ಪೂಜೆಯ ದಿನ. ತಾಯಿಯ ಕಾಲುಮುಟ್ಟಿ ಯಾವ ಪ್ರತಿಜ್ಞೆಮಾಡಿದೆಯೆನ್ನುವುದು ನೆನಪಿದೆಯೆ ? ಎಂದು ರಘುಪತಿ ಕೇಳಿದ.

ಜಯಸಿಂಹ ‘ ಇದೆ ’ ಎಂದ.

ರಘುಪತಿ—ಪ್ರತಿಜ್ಞೆ ನೆರವೇರಿಸುವೆಯಾ ?

ಜಯಸಿಂಹ—ನೆರವೇರಿಸುವೆ.

ರಘುಪತಿ—ನೋಡು ಮಗು ಎಚ್ಚರಿಕೆಯಿಂದ ಕೆಲಸಮಾಡು. ವಿಪತ್ತಿನ ಹೆದರಿಕೆಯಿದೆ. ನಾನು ನಿನ್ನ ರಕ್ಷಣೆಮಾಡುವುದಕ್ಕಾಗಿಯೇ ಪ್ರಜೆಗಳನ್ನು ರಾಜನ ವಿರುದ್ಧವಾಗಿ ಉದ್ರೇಕಗೊಳಿಸಿರುವೆ.

ಜಯಸಿಂಹ ಸುಮ್ಮನೆ ರಘುಪತಿಯ ಮುಖ ನಿಟ್ಟಿಸಿ ನೋಡುತ್ತಿದ್ದ. ಉತ್ತರವೇನೂ ಕೊಡಲಿಲ್ಲ. ರಘುಪತಿ ಅವನ ನೆತ್ತಿಯಲ್ಲಿ ಕೈಯಿಟ್ಟು ಹೇಳಿದ—“ ನನ್ನ ಆಶಿರ್ವಾದದಿಂದ ನೀನು ನಿರ್ವಿಘ್ನವಾಗಿ ನಿನ್ನ ಕೆಲಸ ಈಡೇರಿಸಬಲ್ಲೆ. ತಾಯಿಯ ಅಪ್ಪಣೆ ನೆರವೇರಿಸಬಲ್ಲೆ ” ಎಂದು ಹೇಳಿ ಹೊರಟುಹೋದ.

ಮಧ್ಯಾಹ್ನ ಒಂದು ಕೋಣೆಯಲ್ಲಿ ಕುಳಿತು ರಾಜ ಧ್ರುವನೊಡನೆ ಆಟ ವಾಡುತ್ತಿದ್ದ. ಧ್ರುವನ ಹೇಳಿಕೆಯಂತೆ ಒಮ್ಮೆ ತಲೆಯ ಕಿರೀಟ ಕಳಚುವನು. ಇನ್ನೊಮ್ಮೆ ಧರಿಸುವನು. ಧ್ರುವ ಮಹಾರಾಜನ ಈ ಸ್ಥಿತಿ ನೋಡಿ ನಕ್ಕು ನಕ್ಕು ಉರುಳಾಡುವನು. ರಾಜ ಕಿರುನಗೆ ನಕ್ಕುಹೇಳಿದ. “ ನಾನು ಅಭ್ಯಾಸ ಮಾಡುತ್ತಿದ್ದೇನೆ. ಅವನ ಅಪ್ಪಣೆಯಂತೆ ಈ ಕಿರೀಟವನ್ನು ಎಷ್ಟು ಸುಲಭವಾಗಿ ಧರಿಸಿದೆನೋ ಅಷ್ಟು ಸುಲಭವಾಗಿ ಕಳಚಲಾರೆ. ಕಿರೀಟ ಧರಿಸುವುದು ಕಷ್ಟ. ಆದರೆ ಕಿರೀಟ ತ್ಯಾಗಮಾಡುವದು ಇನ್ನೂ ಕಷ್ಟ.

ಧ್ರುವನ ಮನದಲ್ಲಿ ಕೂಡಲೆ ಒಂದು ಯೋಚನೆ ಹೊಳೆಯಿತು.—ಕ್ಷಣಕಾಲ ರಾಜನಮುಖನೋಡಿ ಬಾಯಲ್ಲಿ ಬೆರಳಿಟ್ಟುಕೊಂಡು ಹೇಳಿದ, " ನೀನು ಆಜ " ರಾಜ ಶಬ್ದದ ' ರ ' ಅಕ್ಷರ ಸಂಪೂರ್ಣವಾಗಿ ಖಾಡಸಹಿತ ಲೋಪಮಾಡಿದನಾದರೂ ಧ್ರುವನ ಮನದಲ್ಲಿ ಎಳ್ಳಷ್ಟೂ ಪಶ್ಚಾತ್ತಾಪ ಹುಟ್ಟಲಿಲ್ಲ. ರಾಜನ ಎದುರಿಗೆ ರಾಜನನ್ನು ' ಆಜ ' ಎಂದು ಹೇಳಿ ಅವನು ಸಂಪೂರ್ಣವಾಗಿ ಆತ್ಮಾನಂದ ಗಳಿಸಿದ. ರಾಜ ಧ್ರುವನ ಈ ತುಂಟತನ ಸಹಿಸಲಾರದೆ ಹೇಳಿದ—" ನೀನು ಆಜ "

ಧ್ರುವ ನೀನು " ಆಜ " ಎಂದ.

ಈ ವಿಷಯದಲ್ಲಿ ವಿವಾದ ಕಡೆಗಾಣಲಿಲ್ಲ. ಯಾವ ಕಡೆಯಲ್ಲೂ ಯಾವ ಪ್ರಮಾಣವೂ ಇರಲಿಲ್ಲ. ವಿವಾದ ಬರಿಯ ವೈಬಲದಿಂದ. ಕಡೆಗೆ ರಾಜ ತನ್ನ ಕಿರೀಟ ತೆಗೆದು ಧ್ರುವನ ತಲೆಗೆ ಹಾಕಿದ. ಆಗ ಧ್ರುವನಿಗೆ ಮುಂದೆ ಮಾತನಾಡುವ ಸಾಮರ್ಥ್ಯ ಆಗಲಿಲ್ಲ. ಸಂಪೂರ್ಣವಾಗಿ ಸೋತು ಹೋದ. ಧ್ರುವನ ಮುಖದ ಅರ್ಧಭಾಗ ಆ ಕಿರೀಟದಲ್ಲಿ ಮುಳುಗಿ ಹೋಯಿತು. ಕಿರೀಟಧರಿಸಿದ್ದ ದಪ್ಪತಲೆ ಅಲ್ಲಾಡಿಸುತ್ತ ಧ್ರುವ ಕಿರೀಟ ಇಲ್ಲದ ರಾಜನಿಗೆ " ಒಂದು ಕತೆ ಹೇಳು " ಎಂದು ಅಪ್ಪಣೆ ಮಾಡಿದ.

" ಯಾವ ಕತೆ ಹೇಳಲಿ ? " ಎಂದು ರಾಜ ಕೇಳಿದ.

ಧ್ರುವ " ಅಕ್ಕನ ಕತೆ ಹೇಳು " ಎಂದ. ಕತೆಯೆಂದರೆ ಧ್ರುವ ಅಕ್ಕನ ಕತೆಯೆಂದೇ ತಿಳಿದಿದ್ದುದು. ಅಕ್ಕ ಹೇಳುತ್ತಿದ್ದ ಕತೆಬಿಟ್ಟರೆ ಜಗದಲ್ಲಿ ಬೇರೆ ಕತೆಯೇ ಇಲ್ಲ ಎಂದು ಅವನ ಭಾವನೆ."

ಆಗ ರಾಜ ಒಂದು ದೊಡ್ಡ ಪೌರಾಣಿಕ ಕತೆಹೇಳತೊಡಗಿದ. ಅವನು ಹೇಳುತ್ತಹೋದ. " ಹಿರಣ್ಯಕಶಿಪು ಎಂಬ ರಾಜನಿದ್ದ—"

ರಾಜ ಎನ್ನಲು ಧ್ರುವ ' ನಾನು ಆಜ ' ಎಂದು ಹೇಳಿದ. ದೊಡ್ಡ ದೊಗಳೆ ಕಿರೀಟದ ಬಲದಿಂದ ಅವನು ಹಿರಣ್ಯಕಶಿಪುವಿನ ರಾಜಪದವಿಯನ್ನು ಸ್ವಲ್ಪವೂ ಒಪ್ಪಿಕೊಳ್ಳಲಿಲ್ಲ.

ಪ್ರಿಯ ನುಡಿಯುವ ಸಭಾಸದನಂತೆ ಗೋವಿಂದಮಾಣಿಕ್ಯ ಆ ಕಿರೀಟ ಧರಿಸಿದ ಮಗುವನ್ನು ಸಂತುಷ್ಟಗೊಳಿಸುವುದಕ್ಕಾಗಿ—" ನೀನೂ ಆಜ, ಆವನೂ ಆಜ " ಎಂದ.

ಧ್ರುವ ಅದಕ್ಕೂ ಅಸಮ್ಮತಿ ವ್ಯಕ್ತಪಡಿಸಿ " ಇಲ್ಲ, ನಾನು ಆಜ " ಎಂದು ಹೇಳಿದ.

ಕಡೆಗೆ ಮಹಾರಾಜ—" ಹಿರಣ್ಯಕಶಿಪು ರಾಜ ಅಲ್ಲ. ಅವನು ಆಕ್ಷಸ " ಎಂದಾಗ ಧ್ರುವ ಅದನ್ನು ವಿರೋಧಿಸುವಂತೆ ಕಾಣಬರಲಿಲ್ಲ.

ಇಂಥ ವೇಳೆಯಲ್ಲಿ ನಕ್ಷತ್ರರಾಯ ಕೊಠಡಿಯೊಳಕ್ಕೆ ಬಂದ. " ರಾಜ ಕಾರ್ಯಕ್ಕಾಗಿ ಮಹಾರಾಜರು ನನ್ನನ್ನು ಕರೆದರೆಂದು ಕೇಳಿದೆ. ಅಪ್ಪಣೆ ಯನ್ನು ಎದುರು ನೋಡುತ್ತಿರುವೆ "—ಎಂದ.

ರಾಜನೆಂದ—" ಇನ್ನು ಸ್ವಲ್ಪಕಾಲ ಎದುರು ನೋಡು. ಕತೆಮುಗಿಸಿ ಬಿಡುತ್ತೇನೆ." ಹೀಗೆಂದು ಕತೆಯನ್ನು ಕಡೆಯವರೆಗೆ ಹೇಳಿ ಮುಗಿಸಿದ. " ಆಕ್ಕಸ ದುಷ್ಟ. " ಕತೆಕೇಳಿ ಸಂಕ್ಷೇಪವಾಗಿ ಧ್ರುವ ಹೀಗೆ ಅಭಿಪ್ರಾಯ ವ್ಯಕ್ತಪಡಿಸಿದ.

ಧ್ರುವನ ತಲೆಯಮೇಲೆ ಕಿರೀಟ ನೋಡಿದ ನಕ್ಷತ್ರರಾಯನಿಗೆ ಅದು ಸರಿದೋರಲಿಲ್ಲ. ನಕ್ಷತ್ರರಾಯನ ನೋಟ ತನ್ನ ಕಡೆಗಿರುವುದನ್ನು ಕಂಡು ಧ್ರುವ ಗಂಭೀರಭಾವದಿಂದ " ನಾನು ಆಜ " ಎಂದು ಹೇಳಿದ.

ನಕ್ಷತ್ರ ಹೇಳಿದ—" ಛಿ ಹಾಗೆನ್ನ ಬಾರದು." ಹೀಗೆಂದು ಧ್ರುವನ ತಲೆಯಿಂದ ಕಿರೀಟ ತೆಗೆದು ರಾಜನ ಕೈಗೆ ಕೊಡಲು ಪ್ರಯತ್ನಿಸಿದ. ಧ್ರುವ ಕಸಿದುಕೊಳ್ಳುವ ಸೂಚನೆ ನೋಡಿ ನಿಜವಾದ ರಾಜನಂತೆ ಬೊಬ್ಬೆಯಿಟ್ಟ. ಗೋವಿಂದಮಾಣಿಕ್ಯ ಆ ವಿಪತ್ತಿನಿಂದ ಅವನನ್ನು ಉದ್ಧಾರಮಾಡಿದ. ನಕ್ಷತ್ರನನ್ನು ಅಡ್ಡಿಪಡಿಸಿದ.

ಕಡೆಗೆ ಗೋವಿಂದಮಾಣಿಕ್ಯ ನಕ್ಷತ್ರರಾಯನಿಗೆ ಹೇಳಿದ " ರಘುಪತಿ ಠಾಕೂರರು ಸುಳ್ಳು ಉಪಾಯದಿಂದ ಪ್ರಜೆಗಳ ಅಸಂತೋಷವನ್ನು ಉದ್ರೇಕಗೊಳಿಸಿರುವರೆಂದು ಕೇಳಿದೆ. ನೀನು ಸ್ವತಃ ಪಟ್ಟಣದೊಳಕ್ಕೆ

ಹೋಗಿ ಈ ವಿಷಯ ವಿಚಾರಿಸಿ ಬಾ ಮತ್ತು ಸತ್ಯಾಸತ್ಯಗಳನ್ನು ತಿಳಿದು ಬಂದು ನನಗೆ ಹೇಳು.”

“ಅಪ್ಪಣೆ” ಎಂದ ನಕ್ಷತ್ರರಾಯ. ಹೀಗೆ ಹೇಳಿ ಹೊರಟು ಹೋದ. ಆದರೆ ಧ್ರುವನ ತಲೆಯಲ್ಲಿ ಕಿರೀಟ ಇದ್ದದ್ದು ಅವನಿಗೆ ಸ್ವಲ್ಪವೂ ಸರಿಬೀಳಲಿಲ್ಲ.

ಕಾವಲುಗಾರ ಬಂದು “ಪುರೋಹಿತ ಠಾಕೂರರ ಆಳು ಜಯಸಿಂಹ ದರ್ಶನಕ್ಕಾಗಿ ಬಾಗಿಲಲ್ಲಿ ಕಾದಿರುವನು” ಎಂದು ತಿಳಿಸಿದ.

ರಾಜ ಜಯಸಿಂಹನ ಬರುವಿಕೆಗೆ ಒಪ್ಪಿಗೆ ಕೊಟ್ಟ.

ಜಯಸಿಂಹ ಮಹಾರಾಜನಿಗೆ ನಮಸ್ಕಾರಮಾಡಿ ಕೈಮುಗಿದು ಹೇಳಿದ. “ಮಹಾರಾಜ, ನಾನು ಬಹಳ ದೂರದೇಶಕ್ಕೆ ಹೊರಟಿರುವೆ. ನೀವು ನನ್ನ ರಾಜ, ನನ್ನ ಗುರು. ನಿಮ್ಮ ಆಶೀರ್ವಾದ ಪಡೆಯಲು ಬಂದಿರುವೆ.”

“ಎಲ್ಲಿಗೆ ಹೋಗುತ್ತೀಯೆ, ಜಯಸಿಂಹ” ಎಂದು ರಾಜ ಪ್ರಶ್ನಿಸಿದ.

“ಗೊತ್ತಿಲ್ಲ. ಮಹಾರಾಜ, ಎಲ್ಲಿಗೆ ಎಂದು ಯಾರೂ ಹೇಳಲಾರರು.” ಎಂದು ಜಯಸಿಂಹ ಹೇಳಿದ. ರಾಜ ಮಾತನಾಡಲು ಪ್ರಯತ್ನಿಸಿದ್ದನ್ನು ಕಂಡ ಜಯಸಿಂಹ “ತಡೆಯ ಬೇಡಿ, ಮಹಾರಾಜ, ನೀವು ಅಡ್ಡಿಮಾಡಿದರೆ ನನ್ನ ಯಾತ್ರೆ ಒಳ್ಳೆಯದಾಗದು. ಆಶೀರ್ವಾದ ಮಾಡಿ. ಇಲ್ಲಿ ನನಗಿರುವ ಸಂಶಯಗಳೆಲ್ಲ ಅಲ್ಲಿ ದೂರವಾಗುವವು. ಇಲ್ಲಿಯ ಮೋಡ ಅಲ್ಲಿ ಚದುರಿ ಹೋಗುವುದು. ನಿಮ್ಮಂತಹ ರಾಜನ ರಾಜ್ಯಕ್ಕೆ ಹೋಗುವೆ. ಶಾಂತಿಗಾಗಿ” ಎಂದು ಹೇಳಿದ.

“ಯಾವಾಗ ಹೋಗುವೆ?” ಎಂದು ರಾಜ ಪ್ರಶ್ನಿಸಿದ.

“ಈ ದಿನ ಸಂಜೆಗೆ” ಎಂದು ಜಯಸಿಂಹ ರಾಜನಿಗೆ ನಮಸ್ಕರಿಸಿ ಆತನ ಪಾದಧೂಳಿತೆಗೆದುಕೊಂಡ. ರಾಜನ ಕಾಲಿನ ಮೇಲೆ ಎರಡು ಹನಿ ಕಣ್ಣೀರು ಬಿತ್ತು.

ಜಯಸಿಂಹ ಮೇಲೆದ್ದು ಹೊರಡಲು ಸಿದ್ಧನಾದಾಗ ಧ್ರುವ ಮೆಲ್ಲ ಮೆಲ್ಲನೆ ಹೋಗಿ ಅವನ ಬಟ್ಟೆಹಿಡಿದೆಳದು “ನೀನು ಹೋಗಬೇಡ” ಎಂದ.

ಜಯಸಿಂಹ ನಕ್ಕು ಹಿಂದಿರುಗಿ ನಿಂತ—ಧ್ರುವನನ್ನು ತೊಡೆಗೆ ಎತ್ತಿಕೊಂಡು ಅವನಿಗೆ ಮುತ್ತಿಟ್ಟು ಹೇಳಿದ "ಯಾರ ಹತ್ತಿರ ಇರಲಿ. ಮಗು, ನನಗೆ ಯಾರಿದ್ದಾರೆ."

"ನಾನು ಆಜ" ಎಂದು ಧ್ರುವ ಹೇಳಿದ.

ಜಯಸಿಂಹ—"ನೀನು ರಾಜಾಧಿರಾಜ, ನೀನು ಎಲ್ಲರನ್ನೂ ಬಂಧಿಸಿಟ್ಟಿರುವೆ" ಎಂದು ಹೇಳಿದ. ಧ್ರುವನನ್ನು ತೊಡೆಯಿಂದ ಇಳಿಸಿ ಜಯಸಿಂಹ ಕೊಠಡಿಯಿಂದ ಹೊರಹೊರಟ. ಮಹಾರಾಜ ಗಂಭೀರ ಮುಖದಿಂದ ಬಹಳ ಹೊತ್ತು ಚಿಂತಿಸತೊಡಗಿದ.

## ೧೫

ಚತುರ್ದಶಿ ತಿಥಿ. ಮೋಡವೂ ಮುಸುಕಿದೆ. ಚಂದ್ರನೂ ಹುಟ್ಟಿದ್ದಾನೆ. ಆಕಾಶದಲ್ಲಿ ಅಲ್ಲಲ್ಲಿ ಬೆಳಕು, ಅಲ್ಲಲ್ಲಿ ಕತ್ತಲೆ. ಆಗಾಗ ಚಂದ್ರ ಹೊರಬರುತ್ತಿದ್ದ. ಆಗಾಗ ಮರೆಯಾಗುತ್ತಿದ್ದ. ಗೋಮತಿ ತೀರದ ಕಾಡುಗಳು ಚಂದ್ರನ ಕಡೆ ನೋಡುತ್ತ ಅವನ ಗಾಢಾಂಧಕಾರ ಮರ್ಮ ಭೇದಮಾಡುತ್ತ ಆಗಾಗ ನಿಟ್ಟುಸಿರುಬಿಡುತಿದ್ದುವು.

ಈ ದಿನ ರಾತ್ರಿ ಜನ ಬೀದಿಗೆ ಬರುವಂತಿಲ್ಲ. ರಾತ್ರಿಯಲ್ಲಿ ಬೀದಿಗೆ ಬರುವವರಾದರೂ ಯಾರು. ಆದರೆ ತಡೆ ಆಜ್ಞೆ ಇರುವುದರಿಂದ ಬೀದಿಯ ನಿರ್ಜನತೆ ಇಂದು ಮತ್ತಷ್ಟು ಗಭೀರವಾಗಿರುವದು. ಪಟ್ಟಣಿಗರೆಲ್ಲರೂ ತಮ್ಮ ತಮ್ಮ ಮನೆಯ ದೀಪವಾರಿಸಿ ಬಾಗಿಲು ಮುಚ್ಚಿಕೊಂಡಿರುವರು. ಬೀದಿಯಲ್ಲಿ ಕಾವಲುಗಾರರೂ ಇಲ್ಲ. ಈ ದಿನ ಕಳ್ಳರೂ ಬೀದಿಗೆ ಬಂದಿಲ್ಲ. ಶ್ಮಶಾನದಲ್ಲಿ ಹೆಣ ಸುಡಬೇಕಾದವರೂ ಹೆಣವನ್ನು ಮನೆಯಲ್ಲಿಟ್ಟುಕೊಂಡು ಬೆಳಗಿನ ನಿರೀಕ್ಷಣೆಯಲ್ಲಿದ್ದರು. ಪ್ರಸವವೇದನೆಯಲ್ಲಿದ್ದವರ ಮನೆಯವರು ಸೂಲಗಿತ್ತಿಯನ್ನು ಕರೆಯುವುದಕ್ಕೂ ಹೊರಗೆ ಬರಲಿಲ್ಲ. ಹಾದಿಯರುಗಿನ ಮರದಡಿ ಮಲಗುತ್ತಿದ್ದ ಭಿಕ್ಷುಕರು ಈ ದಿನ ಕುಟುಂಬಸ್ಥರ ದನದ ಕೊಟ್ಟಿಗೆಯಲ್ಲಿ ಆಶ್ರಯ ಪಡೆದುಕೊಂಡರು.

ಆ ರಾತ್ರಿ ನಾಯಿ-ನರಿಗಳು ಬೀದಿ ಬೀದಿಯಲ್ಲಿ ಓಡಾಡುತ್ತಿದ್ದುವು. ಒಂದೆರಡು ಚಿರತೆಗಳು ಗೃಹಸ್ಥರ ಬಾಗಿಲಿಗೆ ಬಂದು ಇಣುಕು ಹಾಕಿದವು.

ಮನುಷ್ಯರಲ್ಲಿ ಒಬ್ಬನೇ ಒಬ್ಬ ಇಂದು ಮನೆಯಿಂದ ಹೊರಗಿರುವನು— ಬೇರೆ ಮನುಷ್ಯರಿಲ್ಲ. ಅವನು ಒಂದು ಚೂರಿಯನ್ನು ತೆಗೆದು ನದೀ ತೀರದ ಕಲ್ಲಿನ ಮೇಲೆ ಸಾಣೆ ಹಿಡಿಯುತ್ತಿದ್ದ. ಹಾಗೂ ಅನ್ಯಮನಸ್ಕನಾಗಿ ಏನನ್ನೋ ಯೋಚಿಸುತ್ತಿದ್ದ. ಚೂರಿಯಲ್ಲಿ ಸಾಕಷ್ಟು ಹರಿತ ಇತ್ತು. ಆದರೆ ಚೂರಿಯ ಜೊತೆ ಜೊತೆಯಲ್ಲಿ ಚಿಂತನೆಗೂ ಸಾಣೆ ಕೊಡುತ್ತಿರುವುದಾಗಿ ಅವನು ತಿಳಿದಿದ್ದ. ಆದರಿಂದಲೆ ಅವನ ಸಾಣೆ ಹಿಡಿಯುವಿಕೆ ಇನ್ನೂ ಮುಗಿಯುತ್ತಿರಲಿಲ್ಲ. ಕಲ್ಲಿನ ತಿಕ್ಕಾಟದಿಂದ ಹರಿತವಾದ ಚೂರಿ ಹಿಸ್ ಹಿಸ್ ಶಬ್ದಮಾಡುತ್ತ ಹಿಂಸೆಯ ಲಾಲಸೆಯಲ್ಲಿ ಬಿಸಿಯಾಗುತ್ತಿತ್ತು. ಕತ್ತಲ ನಡುವೆ ಕತ್ತಲ ಹೊಳೆ ಹರಿದುಹೋಗುತ್ತಿತ್ತು. ಪ್ರಪಂಚದ ಮೇಲಿಂದ ಅಂಧಕಾರ ರಾತ್ರಿಯ ಜಾವ ಹೊಳೆಯಾಗಿ ಹರಿದು ಸಾಗುತಿತ್ತು. ಆಕಾಶದ ಮೇಲಿಂದ ಅಂಧಕಾರ ಘನಮೇಘದ ಪ್ರವಾಹವಾಗಿ ಹರಿದು ಹೋಗುತಿತ್ತು.

ಕಡೆಗೆ ಧಾರಾಕಾರವಾಗಿ ಮಳೆ ಹೊಯ್ಯಲು ಪ್ರಾರಂಭಿಸಿದಾಗ ಜಯಸಿಂಹನಿಗೆ ಪ್ರಜ್ಞೆಯುಂಟಾಯಿತು. ಕಾದ ಚೂರಿಯನ್ನು ಒರೆಯೊಳಕ್ಕೆ ಹಾಕಿ ಎದ್ದು ನಿಂತ. ಪೂಜೆಯ ಕಾಲ ಸಮಾಪಿಸುತ್ತಿತ್ತು. ಅವನ ಪ್ರತಿಜ್ಞೆಯ ಮಾತು ನೆನಪಾಯಿತು. ಇನ್ನು ಒಂದು ಕ್ಷಣ ನಿಧಾನಿಸಿದರೂ ನಡೆಯುವಂತಿಲ್ಲ.

ಇಂದು ದೇವಾಲಯ ಸಹಸ್ರಾರು ದೀಪಗಳಿಂದ ಬೆಳಗುತಿರುವದು. ಹದಿಮೂರು ದೇವತೆಗಳ ನಡುವೆ ಕಾಳಿ ಎದ್ದು ನಿಂತು ಹೊಸ ರಕ್ತಕ್ಕಾಗಿ ನಾಲಗೆ ನೀಡಿರುವಳು. ದೇವಾಲಯದ ಆಳುಗಳನ್ನು ಬೀಳ್ಕೊಟ್ಟು ಹದಿನಾಲ್ಕನೆಯ ದೇವಿಯ ವಿಗ್ರಹವನ್ನು ಎದುರಿಗಿಟ್ಟುಕೊಂಡು ರಘುಪತಿ ಒಂಟಿಯಾಗಿ ದೇವಾಲಯದಲ್ಲಿ ಕುಳಿತಿರುವನು. ಅವನೆದುರಿನಲ್ಲಿ ಒಂದು ಉದ್ದವಾದ ಕತ್ತಿ, ಮಿಂಚಿನಂತೆ ಹೊಳೆವ ಕತ್ತಿ ದೀಪದ ಬೆಳಕಿನಲ್ಲಿ ಪ್ರಕಾಶಮಾನವಾಗಿ ಶಾಶ್ವತ ಮಿಂಚಿನಂತೆ ದೇವಿಯ ಅಪ್ಪಣೆಗಾಗಿ ಕಾಯುತ್ತಿರುವದು.

ಅರ್ಧರಾತ್ರಿಯ ಪೂಜೆ. ಹೊತ್ತು ಹತ್ತಿರಕ್ಕೆ ಬಂದಿತ್ತು. ರಘುಪತಿ ಅತಿ ಅಸ್ಥಿರ ಮನಸಿನಿಂದ ಜಯಸಿಂಹನಿಗಾಗಿ ಕಾಯುತ್ತಿರುವನು.

ಇದ್ದಕಿದ್ದಂತೆ ಬಿರುಗಾಳಿಯಂತೆ ಗಾಳಿಯೆದ್ದು ಧಾರಾಕಾರವಾಗಿ ಮಳೆ ಸುರಿಯತೊಡಗಿತು. ಗಾಳಿಗೆ ದೇವಾಲಯದ ಸಾವಿರಾರು ದೀಪದುರಿ ಕಂಪಿಸತೊಡಗಿತು. ಹೊಳೆಯುವ ಕತ್ತಿಯಮೇಲೆ ಮಿಂಚು ಕುಣಿಯ ಲಾರಂಭಿಸಿತು. ಹದಿನಾಲ್ಕು ದೇವತೆಗಳ ಹಾಗೂ ರಘುಪತಿಯ ನೆರಳು ಜೀವಂತವಾಗಿ ದೀಪದುರಿಯ ಕುಣಿತದ ತಾಳತಾಳಕ್ಕೂ ದೇವಾಲಯದ ಗೋಡೆಯಲ್ಲೆಲ್ಲ ನರ್ತಿಸತೊಡಗಿತು. ಒಂದು ಮನುಷ್ಯನ ತಲೆಬುರುಡೆ ಮಳೆಗಾಳಿಗೆ ಗರ್‌ಗರ್ ಉರುಳತೊಡಗಿತು. ದೇವಾಲಯದೊಳಕ್ಕೆ ಒಂದೆರಡು ಚಕ್ಕಳದ ಹಕ್ಕಿಗಳು ಬಂದು ಒಣ ಎಲೆಯಂತೆ ಹಾರಾಡಲಾರಂ ಭಿಸಿದವು—ಕೆಳಗಡೆ ಅವುಗಳ ನೆರಳು ಹಾರಾಡತೊಡಗಿತು.

ಎರಡು ಜಾವವಾಯಿತು. ಮೊದಲು ಹತ್ತಿರ, ಬಳಿಕ ದೂರ ದೂರಾಂ ತರದಲ್ಲಿ ನರಿ ಊಳೆಯಿಟ್ಟಿತು. ಮಳೆಗಾಳಿಯೂ ಅವುಗಳೊಡನೆ ಬೆರೆತು ಹ್ಹೊ ಹ್ಹೋ ಎಂದು ಅಳಲಾರಂಭಿಸಿತು. ಪೂಜೆಯ ಹೊತ್ತು ಬಂದಿತು.

ರಘುಪತಿ ಅನುಂಗಳ ನಿರೀಕ್ಷೆಯಿಂದ ಅತಿಯಾಗಿ ಅಳುಕುತ್ತಿದ್ದ.

ಆ ವೇಳೆಯಲ್ಲಿ ಜೀವಂತ ಮಳೆಗಾಳಿಯ ಮಿಂಚಿನಂತೆ ಜಯಸಿಂಹ ರಾತ್ರಿಯ ಕತ್ತಲೆಯಿಂದ ಇದ್ದಕ್ಕಿದ್ದಂತೆ ದೇವಾಲಯದ ಬೆಳಕಿನ ನಡುವೆ ಪ್ರವೇಶಿಸಿದ. ತುಂಬು ಹೊದಿಕೆಯಿಂದ ದೇಹ ಮುಚ್ಚಿತ್ತು. ಇಡೀ ದೇಹದಿಂದ ಮಳೆನೀರು ಸುರಿಯುತ್ತಿತ್ತು. ನಿಟ್ಟುಸಿರು ವೇಗವಾಗಿ ಬರು ತಿತ್ತು. ಕಣ್ಣುಗುಡ್ಡೆಯಲ್ಲಿ ಬೆಂಕಿಯ ಕಿಡಿ ಉರಿಯುತ್ತಿತ್ತು.

ರಘುಪತಿ ಅವನನ್ನು ಹಿಡಿದುಕೊಂಡು ಕಿವಿಯಲ್ಲಿ ಬಾಯಿಟ್ಟು "ರಾಜರಕ್ತ ತಂದಿರುವೆಯಾ" ಎಂದು ಕೇಳಿದ.

ಜಯಸಿಂಹ ಅವನ ಕೈ ತೆಗೆಯುತ್ತ ಗಟ್ಟಿಯಾಗಿ ಹೇಳಿದ—"ತಂದಿ ದ್ದೇನೆ. ರಾಜರಕ್ತ ತಂದಿದ್ದೇನೆ. ನೀವು ಹಿಂದಕ್ಕೆ ನಿಲ್ಲಿ. ನಾನು ದೇವಿಗೆ ಅರ್ಪಿಸುತ್ತೇನೆ." ಶಬ್ದದಿಂದ ದೇವಾಲಯ ಕಂಪಿಸಿತು.

ಕಾಳಿ ವಿಗ್ರಹದ ಎದುರಿಗೆ ನಿಂತು ಹೇಳತೊಡಗಿದ. "ಸತ್ಯ ವಾಗಿಯೂ ನೀನು ರಾಜರಕ್ತಕ್ಕೆ ಆಸೆ ಪಡುವೆಯಾ ತಾಯಿ! ರಾಜರಕ್ತ ಇಲ್ಲದೆ ನಿನ್ನ ದಾಹ ತಣಿಯದೆ! ಹುಟ್ಟಿದಾರಭ್ಯ ನಾನು ನಿನ್ನನ್ನೆ ತಾಯಿ

ಯೆಂದು ಕರೆಯುತಿದ್ದೆ. ನಾನು ನಿನ್ನ ಸೇವೆಯನ್ನೆ ಮಾಡಿದೆ. ನಾನು ಇನ್ನಾರಕಡೆಯೂ ನೋಡಲಿಲ್ಲ. ನಾನು ರಜಪೂತ, ಕ್ಷತ್ರಿಯ, ನನ್ನ ತಾತ ರಾಜರಾಗಿದ್ದರು. ನನ್ನ ತಾಯಿಯ ವಂಶದವರು ಇಂದಿಗೂ ರಾಜ್ಯ ಆಳುತ್ತಿರುವರು. ಇದೋ ತೆಗೆದುಕೊ ನಿನ್ನ ಸಂತಾನದ ರಕ್ತ. ಇದೋ ನಿನ್ನ ರಾಜರಕ್ತ ತೆಗೆದುಕೊ," ಮೈಮೇಲಿಂದ ಹೊದಿಕೆ ಜಾರಿತು. ಸೊಂಟ ದಲ್ಲಿಷ್ಟ ಚೂರಿಯನ್ನು ಹೊರಗೆ ತೆಗೆದ. ಮಿಂಚು ಮಿಂಚಿತು—ಎವೆಯಿಕ್ಕು ವುದರಲ್ಲಿ ಆ ಚೂರಿ ಬುಡದವರೆಗೆ ಅವನ ಹೃದಯದೊಳಕ್ಕೆ ಚುಚ್ಚಿ ಕೊಂಡಿತು. ಮೃತ್ಯುವಿನ ಕ್ರೂರ ನಾಲಗೆ ಅವನ ಹೃದಯವನ್ನು ಸೀಳಿತು. ವಿಗ್ರಹದ ಕಾಲಬಳಿ ಬಿದ್ದ. ಕಲ್ಲುವಿಗ್ರಹ ಅಲುಗಲಿಲ್ಲ.

ರಘುಪತಿ ಚೀತ್ಕಾರಮಾಡಿದ—ಜಯಸಿಂಹನನ್ನು ಎತ್ತಲು ಪ್ರಯತ್ನಿಸಿದ. ಎತ್ತಲು ಸಾಧ್ಯವಾಗಲಿಲ್ಲ. ಅವನ ನಿರ್ಜೀವ ದೇಹದ ಮೇಲೆ ಬಿದ್ದು ಹೊರಳಿದ. ರಕ್ತ ಹೊರಹೊಮ್ಮಿ ದೇವಾಲಯದ ಬಿಳಿಯ ಕಲ್ಲಿನ ಮೇಲೆ ಹರಿಯಲಾರಂಭಿಸಿತು. ಕ್ರಮೇಣ ದೀಪಗಳು ಒಂದೊಂದಾಗಿ ಆರಿದವು. ಕತ್ತಲೆಯಲ್ಲಿ ಸಮಸ್ತ ರಾತ್ರಿಯೂ ಒಂದು ಪ್ರಾಣಿಯ ನಿಟ್ಟುಸಿರಿನ ಸದ್ದು ಕೇಳಬಂದಿತು. ರಾತ್ರಿ ಮೂರನೆಯ ಜಾವದವೇಳೆಗೆ ಮಳೆ ನಿಂತು ನಾಲ್ಕು ಕಡೆ ಸದ್ದಡಗಿತು. ರಾತ್ರಿ ನಾಲ್ಕನೆಯ ಜಾವದ ವೇಳೆಗೆ ಮೋಡದ ಸಂದಿನೊಳಗಿನಿಂದ ಚಂದ್ರನ ಬೆಳಕು ಮಂದಿರದೊಳಕ್ಕೆ ಪ್ರವೇಶಿಸಿತು. ಚಂದ್ರನ ಬೆಳಕು ಜಯಸಿಂಹನ ಬಿಳುಚಿಕೊಂಡ ಮುಖದಮೇಲೆ ಬಿದ್ದಿತು. ಹದಿನಾಲ್ಕು ದೇವತೆಗಳೂ ತಲೆದೆಸೆಯಲ್ಲಿ ನಿಂತು ಅವನನ್ನೇ ನೋಡುತಿದ್ದುವು. ಬೆಳಗ್ಗೆ ವನದಿಂದ ಹಕ್ಕಿಗಳು ಕೂಗಿದಾಗ ರಘುಪತಿ ಮೃತದೇಹ ಬಿಟ್ಟು ಎದ್ದುಹೋದ.

## ೧೬

ರಾಜನ ಅಪ್ಪಣೆಯಂತೆ ಪ್ರಜೆಗಳ ಅಸಂತೋಷದ ಕಾರಣ ತಿಳಿಯುವುದಕ್ಕಾಗಿ ನಕ್ಷತ್ರರಾಯ ಸ್ವತಃ ಬೆಳಗಿನ ಹೊತ್ತು ಹೊರಹೊರಟಿದ್ದ. ದೇವಾಲಯದಲ್ಲಿ ಏನುಮಾಡಬಹುದು ಎನ್ನುವುದೆ ಅವನ ಯೋಚನೆ. ರಘುಪತಿಯ ಕೈಗೆ ಸಿಕ್ಕಿಬಿದ್ದರೆ ಅವನು ಎದೆಗುಂದುವನು. ಧೈರ್ಯ

ಉಳಿಸಿಕೊಳ್ಳಲಾರ. ರಘುಪತಿಯ ಎದುರಿಗೆ ಹೋಗಲು ಅವನಿಗೆ ಸ್ವಲ್ಪವೂ ಇಷ್ಟವಿಲ್ಲ. ಇದರಿಂದಲೆ ಅವನು, ರಘುಪತಿಯ ಕಣ್ಣಿಗೆ ಬೀಳದೆ ರಹಸ್ಯವಾಗಿ ಜಯಸಿಂಹನ ಕೋಣೆಗೆ ಹೋಗಿ ಅವನಿಂದ ವಿವರವಾಗಿ ವಿಷಯ ತಿಳಿದುಕೊಳ್ಳುವುದೆಂದು ಯೋಚಿಸಿದ.

ನಕ್ಷತ್ರರಾಯ ಮೆಲ್ಲಮೆಲ್ಲನೆ ಜಯಸಿಂಹನ ಕೋಣೆಯೊಳಕ್ಕೆ ಬಂದ. ಬಂದಕೂಡಲೆ ಹಿಂದಿರುಗಲು ಸಾಧ್ಯವಾದರೆ ಬದುಕಿಕೊಳ್ಳಬಹುದು ಎಂದು ನಿಶ್ಚಯಿಸಿದ. ಜಯಸಿಂಹನ ಪುಸ್ತಕ ಅವನ ಬಟ್ಟೆಬರೆ, ಅವನ ಕೋಣೆಯ ಅಲಂಕಾರಗಳೆಲ್ಲ ನಾಲ್ಕೂಕಡೆ ಚೆಲ್ಲಾಪಿಲ್ಲಿಯಾಗಿ ಬಿದ್ದಿರುವುದನ್ನು ನೋಡಿದ. ಜಯಸಿಂಹ ಇಲ್ಲ. ರಘುಪತಿಯ ಕೆಂಗಣ್ಣು ಬೆಂಕಿಯಂತೆ ಉರಿಯುತಿತ್ತು. ಅವನ ಕೂದಲು ಕೆದರಿಹೋಗಿತ್ತು. ಅವನು ನಕ್ಷತ್ರರಾಯನನ್ನು ಕಾಣುತ್ತಲೆ ಗಟ್ಟಿಯಾಗಿ ಅವನ ಕೈ ಹಿಡಿದುಕೊಂಡ. ಬಲವಂತವಾಗಿ ಅವನನ್ನು ನೆಲದಲ್ಲಿ ಕುಳ್ಳಿರಿಸಿದ. ನಕ್ಷತ್ರರಾಯನ ಪ್ರಾಣ ಹೋದಂತಾಯಿತು. ರಘುಪತಿ ತನ್ನ ಕಿಡಿಗಣ್ಣಿಂದ ನಕ್ಷತ್ರರಾಯನ ಮರ್ಮಸ್ಥಾನದವರೆಗೂ ಸುಟ್ಟುಹಾಕಿ ಹುಚ್ಚನಂತೆ—"ರಕ್ತ ಎಲ್ಲಿ ?" ಎಂದು ಕೇಳಿದ. ನಕ್ಷತ್ರರಾಯನ ಹೃದಯದಲ್ಲಿ ರಕ್ತದ ಅಲೆ ಏಳಲಾರಂಭಿಸಿತು. ಬಾಯಿಂದ ಮಾತು ಹೊರಡಲಿಲ್ಲ.

ರಘುಪತಿ ಗಟ್ಟಿಯಾಗಿ "ನಿನ್ನ ಪ್ರತಿಜ್ಞೆ ಏನಾಯಿತು ? ರಕ್ತ ಎಲ್ಲಿ ?" ಎಂದು ಕೇಳಿದ.

ನಕ್ಷತ್ರರಾಯ ಕೈ ಆಡಿಸಿದ. ಕಾಲು ಅಲುಗಿಸಿದ. ಎಡಕ್ಕೆ ಸರಿದು ಕುಳಿತ. ಬಟ್ಟೆಯ ಅಂಚು ಹಿಡಿದು ಎಳೆಯತೊಡಗಿದ. ಅವನಿಗೆ ಬೆವರು ಸುರಿಯಲಾರಂಭಿಸಿತು. ಅವನು ಒಣಗಿದ ಗಂಟಲಿನಲ್ಲಿ—ಠಾಕೂರ್ ! ಎಂದ.

ರಘುಪತಿ ಹೇಳಿದ—"ಈ ಸಲ ತಾಯಿ ಸ್ವತಃ ಖಡ್ಗ ಎತ್ತಿದಾಳೆ. ಈ ಸಲ ನಾಲ್ಕು ದಿಕ್ಕಿನಲ್ಲಿ ರಕ್ತದ ಹೊಳೆ ಹರಿಯುತ್ತೆ. ಈ ಸಾರಿ ನಿಮ್ಮ ವಂಶದಲ್ಲಿ ಒಂದು ಹನಿ ರಕ್ತ ಉಳಿಯುವುದಿಲ್ಲ. ಆಗ ನೋಡೋಣ ನಕ್ಷತ್ರರಾಯನ ಭ್ರಾತೃವಾತ್ಸಲ್ಯವನ್ನು"

" ಭ್ರಾತೃವಾತ್ಸಲ್ಯ ! ಹ್ಹಹ್ಹಹ್ಹ ! ಠಾಕೂರ್ "—ನಕ್ಷತ್ರರಾಯನ ನಗು ಇನ್ನು ಹೊರಬರಲಿಲ್ಲ, ಗಂಟಲು-ಒಣಗಿತು.

ರಘುಪತಿಯೆಂದ " ನನಗೆ ಗೋವಿಂದಮಾಣಿಕ್ಯನ ರಕ್ತಬೇಕಿಲ್ಲ. ಪ್ರಪಂಚದಲ್ಲಿ ಗೋವಿಂದಮಾಣಿಕ್ಯನಿಗೆ ಯಾರು ಪ್ರಾಣಕ್ಕಿಂತ ಹೆಚ್ಚು ಪ್ರಿಯರೊ ಅವರನ್ನೇ ನಾನು ಕೇಳುವದು. ಅವರ ರಕ್ತವನ್ನು ನಾನು ಗೋವಿಂದಮಾಣಿಕ್ಯನ ಮೈಗೆ ಒಳಿಯ ಬೇಕೆಂದಿರುವೆ.—ಅವನ ಎದೆ ರಕ್ತ ವರ್ಣವಾಗುವದು. ಆ ರಕ್ತದ ಚಿಹ್ನೆಯಾವ ಬಗೆಯಲ್ಲೂ ಅಳಿದುಹೋಗದು. ಇದೋ ನೋಡು. ದೃಷ್ಟಿಸಿ ನೋಡು—ಹೀಗೆಂದು ಮೇಲು ವಸ್ತ್ರ ತೆಗೆದ— ಅವನ ಮೈರಕ್ತದಿಂದ ತೋಯ್ದಿತ್ತು. " ಅವನ ಎದೆಯನ್ನು ತುಂಬಿ ವಿರಾಜಿಸುವವರು ಯಾರು? ಅವನು ನೀನೇನು—" ಹೀಗೆಂದು ಹುಲಿಹಾಯುವ ಮೊದಲು ಹೆದರಿದ ಜಿಂಕೆಯ ಮರಿಯಕಡೆ ಒಂದು ನೋಟ ನೋಡುವಂತೆ ರಘುಪತಿ ನಕ್ಷತ್ರರಾಯನ ಕಡೆ ನೋಡಿದ.

ನಕ್ಷತ್ರರಾಯ ಆತುರದಿಂದ " ಅಲ್ಲ, ನಾನಲ್ಲ " ಎಂದ. ಆದರೆ ಹೇಗೂ ರಘುಪತಿಯು ಹಿಡಿತ ಬಿಡಿಸಿಕೊಳ್ಳಲಾರದೆ ಹೋದ.

ರಘುಪತಿಯೆಂದ—" ಹಾಗಾದರೆ ಅವನು ಯಾರು ಹೇಳು "

ನಕ್ಷತ್ರರಾಯ—" ಅವನು ಧ್ರುವ " ಎಂದ.

" ಧ್ರುವ ಯಾರು ? "

" ಅವನೊಬ್ಬ ಮಗು."

" ನಾ ಬಲ್ಲೆ, ಅವನನ್ನು ಬಲ್ಲೆ. ರಾಜನಿಗೆ ಸ್ವಂತಮಕ್ಕಳಿಲ್ಲ. ಅವನನ್ನೆ ಮಗನಂತೆ ಕಾಪಾಡುತ್ತಿರುವರು. ಸ್ವಂತಮಕ್ಕಳನ್ನು ಜನ ಹೇಗೆ ಪ್ರೀತಿಸುವರೋ ನಾನರಿಯೆ. ಆದರೆ ಸಾಕುಮಗನನ್ನ ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುವರೆಂದು ನಾನು ಬಲ್ಲೆ. ತನ್ನಎಲ್ಲ ಸಂಪತ್ತಿಗಿಂತಲೂ ರಾಜನಿಗೆ ಅವನ ಸುಖ ಹೆಚ್ಚಾಗಿ ತೋರುವದು. ತನ್ನ ತಲೆಯಲ್ಲಿರುವ ಕಿರೀಟಕ್ಕಿಂತ ಅವನ ತಲೆಯಲ್ಲಿ ಕಿರೀಟ ಕಂಡಾಗಲೆ ರಾಜನಿಗೆ ಅತ್ಯಾನಂದ " ಎಂದು ರಘುಪತಿ ಹೇಳಿದ.

ನಕ್ಷತ್ರರಾಯ ಆಶ್ಚರ್ಯದಿಂದ ಹೇಳಿದ—ಸರಿಯಾದ ಮಾತು."

" ಸರಿಯಾದ ಮಾತಲ್ಲದೆ ಏನು, ರಾಜ ಅವನನ್ನು ಎಲ್ಲಿಯವರೆಗೆ ಪ್ರೀತಿಸುವನೋ ನಾನರಿಯೆ. ನನಗದು ಅರ್ಥವಾಗದು. ನನಗೂ ಅವನೇ ಬೇಕು " ಎಂದು ರಘುಪತಿ ಹೇಳಿದ.

ನಕ್ಷತ್ರರಾಯ ಹೂಗುಟ್ಟಿ ರಘುಪತಿಯನ್ನೇ ನೋಡುತಿದ್ದ. ತನಗೆ ತಾನೆ—" ಅವನನ್ನೆ ಬಯಸುವದು " ಎಂದುಕೊಂಡ.

ರಘುಪತಿ—" ಅವನನ್ನು ತರಲೇಬೇಕು.—ಇಂದೇ ತರಬೇಕು. ಇಂದು ರಾತ್ರಿಯೇ ಬೇಕು."

ನಕ್ಷತ್ರರಾಯ ಪ್ರತಿ ಧ್ವನಿಯಂತೆ " ಇಂದು ರಾತ್ರಿಯೇ ಬೇಕು " ಎಂದ.

ನಕ್ಷತ್ರರಾಯನ ಮುಖವನ್ನು ಕ್ಷಣಕಾಲನಿಟ್ಟಿಸಿ ಸ್ವರತಗ್ಗಿಸಿ " ಈ ಮಗುವೇ ನಿನ್ನ ಶತ್ರು, ಗೊತ್ತೆ? ನೀನು ರಾಜವಂಶದಲ್ಲಿ ಹುಟ್ಟಿರುವೆ. ಎಲ್ಲಿಯದೋ ಒಂದು ಅಜ್ಞಾತ ಕುಲಶೀಲ ಮಗು ನಿನ್ನ ತಲೆಯಿಂದ ಕಿರೀಟ ಕಸಿದುಕೊಳ್ಳಲು ಬಂದಿದೆಯೆಂದು ಬಲ್ಲೆಯಷ್ಟೆ. ಯಾವ ಸಿಂಹಾಸನ ನಿನಗಾಗಿ ನಿರೀಕ್ಷಿಸುತಿತ್ತೋ ಆ ಸಿಂಹಾಸನದಮೇಲೆ ಅವನಿಗೆ ಸ್ಥಳ ನಿರ್ದಿಷ್ಟವಾಗಿ ರುವದು. ಎರಡು ಕಣ್ಣಿದ್ದು ಅದನ್ನು ಕಾಣುತ್ತಿಲ್ಲವೆ." ಎಂದು ರಘುಪತಿ ಕೇಳಿದ.

ನಕ್ಷತ್ರರಾಯನಿಗೆ ಈ ಮಾತು ಹೊಸದೇನೂ ಅಲ್ಲ. ಅವನೂ ಹಿಂದೆಲ್ಲ ಇದೇ ರೀತಿ ಚಿಂತಿಸಿದ್ದ. ಗರ್ವದಿಂದ " ಇನ್ನೇನು ಹೇಳುವದು ಠಾಕೂರ್. ನಾನಿದನ್ನು ನೋಡಿಲ್ಲವೇನು? " ಎಂದ.

ರಘುಪತಿಯೆಂದ—" ಹಾಗಾದರೆ ಇನ್ನೇನು. ಹಾಗಾದರೆ ನನಗೆ ತಂದುಕೊಡು. ನಿನ್ನ ಸಿಂಹಾಸನದ ಅಡ್ಡಿಯನ್ನು ದೂರಮಾಡುವೆ. ಇನ್ನು ಕೆಲವು ಜಾವಗಳನ್ನು ಹೇಗೋ ಕಳೆಯುವೆ. ಆ ಮೇಲೆ—ನೀನು ಯಾವಾಗ ತರುತ್ತೀಯೆ?—"

ನಕ್ಷತ್ರರಾಯ—ಈ ದಿನ ಸಂಜೆಗೆ. ಕತ್ತಲಾದಮೇಲೆ.

ಜನಿವಾರ ಮುಟ್ಟಿ ರಘುಪತಿ ಹೇಳಿದ—" ಒಂದು ವೇಳೆ ಕರೆತರ ದಿದ್ದರೆ ಬ್ರಾಹ್ಮಣನ ಶಾಪ ತಟ್ಟುವದು. ಹಾಗಾದಲ್ಲಿ ಯಾವ ಬಾಯಿಂದ

ನೀನು ಪ್ರತಿಜ್ಞೆಮಾಡಿ ನೆರವೇರಿಸದಿರುವೆಯೋ, ಮೂರು ರಾತ್ರಿ ಕಳೆಯುವು ದರಲ್ಲಿ ಆ ಬಾಯ ಮಾಂಸವನ್ನು ಗಿಡಗ ಕಿತ್ತುತಿನ್ನುವದು."

ಇದನ್ನು ಕೇಳಿ ನಕ್ಷತ್ರರಾಯ ಬೆದರಿ ಬಾಯಮೇಲೆ ಕೈಇಟ್ಟುಕೊಂಡ. —ಕೋಮಲ ಮಾಂಸದ ಮೇಲೆ ಗಿಡಗದ ಕೊಕ್ಕು ಬೀಳುವುದೆನ್ನುವ ಕಲ್ಪನೆಯೂ ಅವನಿಗೆ ಅತಿ ಅಸಹನೀಯವಾಯಿತು. ರಘುಪತಿಗೆ ನಮಸ್ಕರಿಸಿ ಅವನು ಅವಸರ ಅವಸರವಾಗಿ ಬೀಳ್ಕೊಂಡ. ಆ ಮನೆಯಿಂದ ಗಾಳಿ ಬೆಳಕು ಹಾಗೂ ಜನ ಕೋಲಾಹಲದ ನಡುವೆ ಹೋಗಿ ನಕ್ಷತ್ರ ರಾಯ ಪುನರ್ಜೀವ ಪಡೆದ.

## ೧೭

ಆ ದಿನ ಸಂಜೆ ನಕ್ಷತ್ರರಾಯನನ್ನು ನೋಡಿದ ಧ್ರುವ "ಚಿಕ್ಕಪ್ಪ" ಎನ್ನುತ್ತ ಓಡಿಬಂದು ಎರಡು ಪುಟ್ಟ ಕೈಗಳನ್ನೂ ಅವನ ಕೊರಳಿಗೆ ಸುತ್ತಿ ಬಿಗಿದುಕೊಂಡು ಅವನ ಕೆನ್ನೆಯಲ್ಲಿ ಕೆನ್ನೆಯಿಟ್ಟು ಮುಖಕ್ಕೆ ಮುಖ ಸೇರಿ ಸಿಟ್ಟ. ಮೆಲ್ಲಮೆಲ್ಲನೆ "ಚಿಕ್ಕಪ್ಪ" ಎಂದ.

"ಛಿ ಹಾಗೆನ್ನಬೇಡ, ನಾನು ನಿನ್ನ ಚಿಕ್ಕಪ್ಪ ಅಲ್ಲ" ಎಂದ ನಕ್ಷತ್ರ. ಧ್ರುವ ಇಷ್ಟು ದಿನಗಳೂ ಅವನನ್ನು ಚಿಕ್ಕಪ್ಪ ಎಂದೆ ಕರೆಯುತ್ತಿದ್ದ. ಇದ್ದಕ್ಕಿದ್ದಂತೆ ಇಂದು ಅದ್ದಿಯನ್ನು ಕೇಳಿ ಅವನಿಗೆ ಬಹಳ ಆಶ್ಚರ್ಯ ಆಯಿತು. ಗಂಭೀರ ಭಾವದಿಂದ ತೆಪ್ಪನೆ ಕುಳಿತಿದ್ದ. ಆ ಬಳಿಕ ನಕ್ಷತ್ರನ ಮುಖದ ಕಡೆ ದೊಡ್ಡದೊಡ್ಡದಾಗಿ ನೋಡುತ್ತ "ನೀನು ಯಾರು" ಎಂದು ಕೇಳಿದ.

ನಕ್ಷತ್ರರಾಯನೆಂದ—"ನಾ ನಿನ್ನ ಚಿಕ್ಕಪ್ಪನಲ್ಲ"

ಇದನ್ನು ಕೇಳಿ ಧ್ರುವನಿಗೆ ಬಹಳ ನಗು ಬಂತು. ಇಷ್ಟು ದೊಡ್ಡ ಅಸಂಭವ ಸಂಗತಿಯನ್ನು ಅವನು ಈ ಮೊದಲು ಎಂದೂ ಕೇಳಿರಲಿಲ್ಲ. ಅವನು ನಗುತ್ತ "ನೀನು ಚಿಕ್ಕಪ್ಪ" ಎಂದ. ನಕ್ಷತ್ರ ಆಕ್ಷೇಪಣೆ ಮಾಡಿ ದಷ್ಟೂ ಅವನು "ನೀನು ಚಿಕ್ಕಪ್ಪ" ಎನ್ನತೊಡಗಿದ. ಅಷ್ಟಷ್ಟೂ ಅವನ ನಗು ಉಕ್ಕತೊಡಗಿತು. ಅವನು ನಕ್ಷತ್ರರಾಯನನ್ನು ಚಿಕ್ಕಪ್ಪ

ಎನ್ನುತ್ತ ರೇಗಿಸತೊಡಗಿದ. ನಕ್ಷತ್ರ “ ಧ್ರುವ, ನಿನ್ನ ಅಕ್ಕನನ್ನು ನೋಡು ವೆಯಾ ? ” ಎಂದ.

ಧ್ರುವ ಆತುರದಿಂದ ನಕ್ಷತ್ರನ ಕೊರಳು ಬಿಟ್ಟು ಎದ್ದುನಿಂತು “ ಅಕ್ಕ ಎಲ್ಲಿ ? ” ಎಂದು ಕೇಳಿದ.

“ ಅಮ್ಮನ ಹತ್ತಿರ ” ಎಂದ ನಕ್ಷತ್ರ.

ಧ್ರುವ—“ ಅಮ್ಮ ಎಲ್ಲಿ ? ”

ನಕ್ಷತ್ರ—ಅಮ್ಮ ಅಲ್ಲೊಂದು ಕಡೆ ಇದಾಳೆ. ನಾನು ನಿನ್ನನ್ನು ಅಲ್ಲಿಗೆ ಕರೆದುಕೊಂಡುಹೋಗುತ್ತೇನೆ.

ಧ್ರುವ—ಕೈ ಚಪ್ಪಾಳೆ ತಟ್ಟುತ್ತ ಪ್ರಶ್ನಿಸಿದ “ ಯಾವಾಗ ಕರೆದು ಕೊಂಡು ಹೋಗುವೆ, ಚಿಕ್ಕಪ್ಪ ? ”

ನಕ್ಷತ್ರ —“ ಈಗಲೆ.”

ಧ್ರುವ ಆನಂದದಿಂದ ಕೇಕೆಹಾಕುತ್ತ ನಕ್ಷತ್ರರಾಯನ ಕತ್ತನ್ನು ಬಲವಾಗಿ ಬಿಗಿದು ಹಿಡಿದುಕೊಂಡ. ನಕ್ಷತ್ರ ಅವನನ್ನ ಕಂಕುಳಿಗೆತ್ತಿ ಕೊಂಡು ಮೇಲುವಸ್ತ್ರದಲ್ಲಿ ಮರೆಮಾಡಿಕೊಂಡು ಗುಪ್ತದ್ವಾರದಿಂದ ಹೊರಕ್ಕೆ ನಡೆದ.

ಈ ದಿನ ರಾತ್ರಿಯೂ ಜನ ತಿರುಗಾಡುವಂತಿಲ್ಲ. ಇದರಿಂದ ಬೀದಿ ಯಲ್ಲಿ ಕಾವಲುಗಾರರಿಲ್ಲ. ಆಕಾಶದಲ್ಲಿ ಪೂರ್ಣ ಚಂದ್ರ.

ದೇವಾಲಯಕ್ಕೆ ಹೋಗಿ ನಕ್ಷತ್ರರಾಯ ಧ್ರುವನನ್ನು ರಘುಪತಿಯ ಕೈಗೊಪ್ಪಿಸಲು ಸಿದ್ಧನಾದ. ರಘುಪತಿಯನ್ನು ಕಂಡು ಧ್ರುವ ಗಟ್ಟಿಯಾಗಿ ನಕ್ಷತ್ರರಾಯನನ್ನು ಬಿಗಿದಪ್ಪಿದ. ಯಾವ ಬಗೆಯಲ್ಲೂ ಬಿಡಲು ಇಷ್ಟ ಪಡಲಿಲ್ಲ. ರಘುಪತಿ ಅವನನ್ನು ಬಲವಂತವಾಗಿ ಎಳೆದುಕೊಂಡ. ಧ್ರುವ “ ಚಿಕ್ಕಪ್ಪಾ ” ಎಂದು ಅಳತೊಡಗಿದ. ನಕ್ಷತ್ರರಾಯನ ಕಣ್ಣಿನಲ್ಲೂ ನೀರೂರಿತು. ಆದರೆ ರಘುಪತಿಯ ಎದುರಿಗೆ ತನ್ನ ಹೃದಯ ದೌರ್ಬಲ್ಯ ತೋರಿಸಿಕೊಳ್ಳಲು ಅವನಿಗೆ ಬಹಳ ನಾಚಿಕೆಯೆನಿಸಿತು. ಪಾಷಾಣ ಮೂರ್ತಿಯಂತೆ ತನ್ನನ್ನು ತೋರ್ಪಡಿಸಿಕೊಂಡ. ಆಗ ಧ್ರುವ ಅಳುತ್ತ

ಅಳುತ್ತ "ಅಕ್ಕ, ಅಕ್ಕ" ಎಂದು ಕರೆಯತೊಡಗಿದ. ಅಕ್ಕ ಬರಲಿಲ್ಲ. ರಘುಪತಿ ಗುಡಿಗಿನಂತೆ ಒಂದು ಬೆದರಿಕೆ ಹಾಕಿದ. ಭಯದಿಂದ ಧ್ರುವನ ಅಳು ಅಡಗಿತು. ಅವನ ಹೃದಯ ಮಾತ್ರ ಉಕ್ಕಿ ಉಕ್ಕಿ ಬರುತ್ತಿತ್ತು. ಅಳು ತಡೆದು ತಡೆದು ಬರುತ್ತಿತ್ತು. ಹದಿನಾಲ್ಕು ದೇವತೆಗಳೂ ನೋಡುತ್ತಿದ್ದುವು.

ಗೋವಿಂದಮಾಣಿಕ್ಯ ರಾತ್ರಿ ಸ್ವಪ್ನದಲ್ಲಿ ಅಳು ಕೇಳಿ ಎಚ್ಚೆತ್ತು ಇದ್ದಕ್ಕಿದ್ದಂತೆ ತನ್ನ ಕಿಟಕಿಯ ಕೆಳಗೆ ಯಾರೋ ವ್ಯಾಕುಲಧ್ವನಿಯಲ್ಲಿ 'ಮಹಾರಾಜ! ಮಹಾರಾಜ!' ಎಂದು ಕೂಗುತ್ತಿರುವುದನ್ನು ಕೇಳಿದ.

ರಾಜ ಕೂಡಲೆ ಎದ್ದುಹೋಗಿ ನೋಡಿದ. ಧ್ರುವನ ಚಿಕ್ಕಪ್ಪ ಕೇದಾರೇಶ್ವರ. "ಏನಾಗಿದೆ" ಎಂದು ವಿಚಾರಿಸಿದ.

"ಮಹಾರಾಜ, ನನ್ನ ಧ್ರುವ ಎಲ್ಲಿ ?" ಎಂದು ಕೇದಾರೇಶ್ವರ ಕೇಳಿದ.

ರಾಜ "ಏಕೆ, ಅವನ ಹಾಸಿಗೆಯಲ್ಲಿಲ್ಲವೆ ?" ಎಂದು ಕೇಳಿದ.

"ಇಲ್ಲ"—ಕೇದಾರೇಶ್ವರ ಹೇಳತೊಡಗಿದ. "ಮಧ್ಯಾಹ್ನದಿಂದ ಧ್ರುವನನ್ನು ಕಾಣದೆ ವಿಚಾರಿಸಿದ್ದರಲ್ಲಿ ಯುವರಾಜ ನಕ್ಷತ್ರರಾಯನ ಆಳು 'ಧ್ರುವ ಅಂತಃಪುರದಲ್ಲಿ ಯುವರಾಜರ ಹತ್ತಿರ ಇದಾನೆ' ಎಂದು ಹೇಳಿದ. ಇದನ್ನು ಕೇಳಿ ನಾನು ನಿಶ್ಚಿಂತನಾಗಿದ್ದೆ. ರಾತ್ರಿ ಬಹಳ ಹೊತ್ತಾದುದರಿಂದ ನನಗೆ ಹೆದರಿಕೆ ಆಯಿತು. ವಿಚಾರಿಸಿ ನೋಡಿದ್ದರಲ್ಲಿ ಯುವರಾಜ ನಕ್ಷತ್ರ ರಾಯ ಅರಮನೆಯಲ್ಲಿ ಇಲ್ಲವೆಂದು ತಿಳಿಯಿತು. ನಾನು ಮಹಾರಾಜರ ದರ್ಶನಕ್ಕಾಗಿ ಬಹಳವಾಗಿ ಪ್ರಯತ್ನಿಸಿದೆ. ಆದರೆ ಕಾವಲುಗಾರರು ಏನು ಮಾಡಿಯೂ ನನ್ನ ಮಾತನ್ನು ಒಪ್ಪಲಿಲ್ಲ. ಇದರಿಂದ ಕಿಟಕಿಯ ಕೆಳಗಡೆ ಮಹಾರಾಜರನ್ನು ಕೂಗಿದ್ದು. ತಮ್ಮ ನಿದ್ರೆ ಕೆಡಿಸಿದೆ. ನನ್ನ ಈ ಅಪರಾಧ ವನ್ನು ಕ್ಷಮಿಸಬೇಕು"—

ರಾಜನ ಮನದಲ್ಲಿ ಭಾವನೆಯೊಂದು ಮಿಂಚಿನಂತೆ ಹೊಳೆಯಿತು. ಅವನು ನಾಲ್ಕು ಜನ ಕಾವಲುಗಾರರನ್ನು ಕೂಗಿ "ಆಯುಧ ಸಮೇತ ನನ್ನನ್ನು ಹಿಂಬಾಲಿಸಿರಿ" ಎಂದು ಹೇಳಿದ. ಒಬ್ಬ "ಮಹಾರಾಜ್, ಈ ರಾತ್ರಿ ಬೀದಿಯಲ್ಲಿ ಹೋಗಕೂಡದು" ಎಂದ.

ರಾಜ "ನಾನು ಅಪ್ಪಣೆಮಾಡುತ್ತೇನೆ" ಎಂದ.

ಕೇದಾರೇಶ್ವರನೂ ಸಂಗಡಹೋಗಲು ಸಿದ್ಧನಾದ. ರಾಜ ಅವನನ್ನು ಹಿಂದಿರುಗಿ ಹೋಗುವಂತೆ ಹೇಳಿದ. ಜನಹೀನ ಮಾರ್ಗದಲ್ಲಿ ಚಂದ್ರನ ಬೆಳಕಿನಲ್ಲಿ ರಾಜ ದೇವಾಲಯದ ಕಡೆಗೆ ಹೊರಟ.

ದೇವಾಲಯದ ಬಾಗಿಲು ತೆರೆದು ನೋಡಿದಾಗ ಕತ್ತಿಯನ್ನು ಎದುರಿಗಿಟ್ಟುಕೊಂಡು ನಕ್ಷತ್ರನೂ ರಘುಪತಿಯೂ ಮದ್ಯಪಾನ ಮಾಡುತ್ತಿದ್ದರು. ಬೆಳಕು ಅಷ್ಟಾಗಿ ಇಲ್ಲ. ಒಂದು ಹಣತೆ ಮಾತ್ರ ಉರಿಯುತಿತ್ತು. ಧ್ರುವ ಎಲ್ಲಿ! ಧ್ರುವ ಕಾಳೀ ವಿಗ್ರಹದ ಕಾಲಬಳಿ ಮಲಗಿ ನಿದ್ದೆಮಾಡುತಿದ್ದ. ಅವನ ಕೆನ್ನೆಯ ಕಣ್ಣೀರ ಗುರುತು ಒಣಗಿಹೋಗಿತ್ತು. ತುಟಿಗಳೆರಡೂ ಸ್ವಲ್ಪವಾಗಿ ತೆರೆದಿತ್ತು. ಮುಖದಲ್ಲಿ ಭಯವಿಲ್ಲ. ಯೋಚನೆಯಿಲ್ಲ—ಅದು ಕಲ್ಲು ಹಾಸಿಗೆಯಲ್ಲ, ಅವನು ಅಕ್ಕನ ತೊಡೆಯಲ್ಲಿ ಮಲಗಿದಂತಿತ್ತು.

ಮದ್ಯಪಾನಮಾಡಿ ನಕ್ಷತ್ರನ ಜೀವ ಹಿಗ್ಗಿತ್ತು. ಆದರೆ ರಘುಪತಿ ಸ್ಥಿರವಾಗಿ ಕುಳಿತು ಪೂಜೆಯ ಲಗ್ನ ನಿರೀಕ್ಷಿಸುತಿದ್ದ. ನಕ್ಷತ್ರನ ಮಾತಿನ ಕಡೆಗೆ ಸ್ವಲ್ಪವೂ ಕಿವಿಗೊಡುತ್ತಿರಲಿಲ್ಲ. ನಕ್ಷತ್ರ ಹೇಳುತ್ತಿದ್ದ—"ಠಾಕೂರ್, ನಿಮಗೆ ಒಳಗೊಳಗೆ ಭಯವಾಗುತ್ತಿದೆ. ನಾನೂ ಹೆದರುವೆನೆಂದು ನೀವು ತಿಳಿದಿರುವಿರಿ. ಆದರೆ ಭಯವಿಲ್ಲ ಠಾಕೂರ್, ಏಕೆ ಭಯ, ಯಾವ ಭಯ, ನಾನು ನಿಮ್ಮನ್ನು ಕಾಪಾಡುವೆ. ನಾನು ರಾಜನಿಗೆ ಹೆದರುವೆನೆಂದು ನೀವು ತಿಳಿದಿರುವಿರೇನು? ನಾನು ಶಹಸೂಜನಿಗೂ ಹೆದರೆ. ಶಹಜಹಾನನಿಗೂ ಹೆದರೆ. ಠಾಕೂರ್—ನೀವೇಕೆ ಹೇಳಲಿಲ್ಲ. ನಾನು ರಾಜನನ್ನು ಹಿಡಿದುಕೊಂಡು ಬರುತ್ತಿದ್ದೆ. ದೇವಿಯನ್ನು ತೃಪ್ತಿಪಡಿಸಬಹುದಾಗಿತ್ತು. ಇಷ್ಟುದ್ದದ ಹುಡುಗನಲ್ಲಿ ಎಷ್ಟು ರಕ್ತ ಇದ್ದೀತು".

ಇಂತಹ ವೇಳೆಯಲ್ಲಿ ಇದ್ದಕ್ಕಿದ್ದಂತೆ ದೇವಾಲಯದ ಗೋಡೆಯಮೇಲೆ ನೆರಳು ಬಿತ್ತು. ನಕ್ಷತ್ರರಾಯ ಹಿಂದಿರುಗಿ ನೋಡಿದ. ರಾಜ. ಹೆದರಿಕೆಯ ನಡುವೆ ಅಮಲು ಸಂಪೂರ್ಣವಾಗಿ ಓಡಿಹೋಯಿತು. ತನ್ನ ನೆರಳಿಗಿಂತಲೂ ಅವನು ಕಳೆಗುಂದಿದ, ಗೋವಿಂದಮಾಣಿಕ್ಯ ನಿದ್ರಿಸುತ್ತಿದ್ದ ಧ್ರುವನನ್ನು

ವೇಗವಾಗಿ ಉಡಿಗೆ ಎತ್ತಿಕೊಂಡು "ಇವರಿಬ್ಬರನ್ನೂ ಬಂಧಿಸಿ" ಎಂದು ಕಾವಲುಗಾರರಿಗೆ ಹೇಳಿದ.

ನಾಲ್ಕುಜನ ಕಾವಲುಗಾರರು ರಘುಪತಿ ಹಾಗೂ ನಕ್ಷತ್ರರಾಯನ ಎರಡು ಕೈಗಳನ್ನು ಹಿಡಿದುಕೊಂಡರು. ಧ್ರುವನನ್ನು ಎದೆಗಪ್ಪಿ ಹಿಡಿದು ಕೊಂಡು ಜನಹೀನ ದಾರಿಯಲ್ಲಿ ಬೆಳುದಿಂಗಳ ಬೆಳಕಿನಲ್ಲಿ ರಾಜ ಅರಮನೆಗೆ ಹಿಂದಿರುಗಿ ಬಂದ. ರಘುಪತಿಯೂ ನಕ್ಷತ್ರರಾಯನೂ ಆ ರಾತ್ರಿ ಸೆರೆಮನೆ ಯಲ್ಲಿದ್ದರು.

## ೧೮

ಮರುದಿನ ವಿಚಾರಣೆ. ವಿಚಾರಣಾಸಭೆ ಜನದಿಂದ ಕಿಕ್ಕಿರಿದು ತುಂಬಿತ್ತು. ವಿಚಾರಾಸನದಲ್ಲಿ ರಾಜ ಕುಳಿತಿದ್ದ. ಸಭಾಸದರು ನಾಲ್ಕು ದಿಕ್ಕಿನಲ್ಲೂ ಕುಳಿತಿದ್ದರು. ಎದುರುಗಡೆ ಇಬ್ಬರು ಬಂದಿಗಳು. ಯಾರ ಕೈಯಲ್ಲೂ ಸಂಕೋಲೆ ಇರಲಿಲ್ಲ. ಸಶಸ್ತ್ರ ಕಾವಲುಗಾರರು ಮಾತ್ರ ಅವರು ಗಳನ್ನು ಬಳಸಿ ನಿಂತಿದ್ದರು. ರಘುಪತಿ ಕಲ್ಲುವಿಗ್ರಹದಂತೆ ನಿಂತಿದ್ದ. ನಕ್ಷತ್ರ ರಾಯನ ತಲೆ ಬಗ್ಗಿತ್ತು.

ರಘುಪತಿಯ ದೋಷವನ್ನು ಸ್ಪಷ್ಟಪಡಿಸಿ ರಾಜ ಆತನನ್ನು ಕುರಿತು "ನೀವು ಹೇಳಬೇಕಾದುದು ಏನಾದರೂ ಇದೆಯೆ?" ಎಂದು ಕೇಳಿದ.

ರಘುಪತಿ—"ನನ್ನನ್ನು ವಿಚಾರಣೆ ಮಾಡುವ ಅಧಿಕಾರ ನಿಮಗಿಲ್ಲ" ಎಂದ.

ರಾಜನೆಂದ—"ಹಾಗಾದರೆ ನಿಮ್ಮ ವಿಚಾರಣೆ ನಡೆಸುವವರು ಯಾರು?"

ರಘುಪತಿ—"ನಾನು ಬ್ರಾಹ್ಮಣ, ನಾನು ದೇವಿಯ ಸೇವಕ. ನನ್ನ ವಿಚಾರಣೆ ಮಾಡುವವಳು ದೇವತೆ."

ರಾಜ—ಪಾಪಕ್ಕೆ ಶಿಕ್ಷೆಯನ್ನೂ ಪುಣ್ಯಕ್ಕೆ ಪುರಸ್ಕಾರವನ್ನೂ ಕೊಡಲು ದೇವಿಗೆ ಸಾವಿರಾರು ಸಹಾಯಕರಿರುವರು. ಅವರಲ್ಲಿ ನಾನೂ ಒಬ್ಬ. ಆ ವಿಷಯವಾಗಿ ನಾನು ನಿಮ್ಮೊಡನೆ ವಿವಾದ ಮಾಡಬೇಕಾಗಿಲ್ಲ. ನಾನು

ಕೇಳುವುದಿಷ್ಟು. ನೆನ್ನೆ ಸಂಜೆ ಬಲಿಕೊಡುವುದಕ್ಕಾಗಿ ನೀವು ಒಂದು ಮಗುವನ್ನು ಅಪಹರಿಸಿದ್ದಿರಲ್ಲವೆ? '

" ಹೌದು," ಎಂದ ರಘುಪತಿ.

ರಾಜ—" ನೀವು ಅಪರಾಧ ಒಪ್ಪಿಕೊಳ್ಳುವಿರಾ? "

ರಘುಪತಿ—" ಯಾವ ಅಪರಾಧ. ನಾನು ತಾಯಿಯ ಅಪ್ಪಣೆ ನೆರವೇರಿಸುತಿದ್ದೆ. ತಾಯಿಯ ಕೆಲಸ ಮಾಡುತ್ತಿದ್ದೆ. ನೀವು ಅದಕ್ಕೆ ಅಡ್ಡಿ ಮಾಡಿದಿರಿ. ಅಪರಾಧ ಮಾಡಿದ್ದು ನೀವು, ನಾನು ತಾಯಿಯ ಎದುರಿಗೆ ನಿಮ್ಮನ್ನು ಅಪರಾಧಿಯನ್ನಾಗಿ ಮಾಡುವೆ. ಅವಳು ನಿಮ್ಮ ವಿಚಾರಣೆ ನಡೆಸುವಳು."

ರಾಜ ಅವನ ಮಾತಿಗೆ ಯಾವ ಉತ್ತರವನ್ನೂ ಹೇಳದೆ " ನನ್ನ ರಾಜ್ಯದ ನಿಯಮ ಇದು. ಯಾವ ವ್ಯಕ್ತಿ ದೇವಿಗಾಗಿ ಜೀವಬಲಿ ಕೊಡುವನೋ ಅಥವಾ ಕೊಡಲೆತ್ನಿಸುವನೋ ಅವನಿಗೆ ದೇಶಭ್ರಷ್ಟಶಿಕ್ಷೆ. ಆ ಶಿಕ್ಷೆಯನ್ನು ನಾನು ನಿಮಗೆ ವಿಧಿಸುತ್ತೇನೆ. ಎಂಟು ವರ್ಷಗಳ ಕಾಲ ನೀವು ದೇಶಭ್ರಷ್ಟರು. ಕಾವಲುಗಾರರು ನಿಮ್ಮನ್ನು ನನ್ನ ರಾಜ್ಯದ ಗಡಿ ದಾಟಿಸಿ ಬರುವರು." ಎಂದು ಹೇಳಿದ.

ಕಾವಲುಗಾರರು ರಘುಪತಿಯನ್ನು ಸಭಾಗೃಹದಿಂದ ಕರೆದೊಯ್ಯಲು ಸಿದ್ಧರಾದರು. ರಘುಪತಿ ಅವರಿಗೆ " ನಿಲ್ಲಿರಿ " ಎಂದ. ರಾಜನ ಕಡೆ ತಿರುಗಿ " ನಿಮ್ಮ ವಿಚಾರಣೆ ಮುಗಿಯಿತು. ಈಗ ನಾನು ನಿಮ್ಮ ವಿಚಾರಣೆ ನಡೆಸುವೆ. ನೀವು ಕೇಳಿ! ಹದಿನಾಲ್ಕು ದೇವತೆಗಳ ಪೂಜೆಯ ಎರಡು ರಾತ್ರಿ ಬೀದಿಗೆ ಬಂದವರು ಪುರೋಹಿತನ ಶಿಕ್ಷೆಗೆ ಗುರಿಯಾಗುವರು. ಇದು ನಮ್ಮ ದೇವಾಲಯದ ನಿಯಮ. ಈ ಪುರಾತನ ನಿಯಮದಂತೆ ನೀವು ನನ್ನ ಬಳಿ ಅಪರಾಧಿಗಳು " ಎಂದ.

" ನಾನು ನಿಮ್ಮ ಶಿಕ್ಷೆ ಒಪ್ಪಿಕೊಳ್ಳಲು ಸಿದ್ಧ" ಎಂದು ರಾಜನೆಂದ.

ಸಭಾಸದರು—" ಈ ಅಪರಾಧಕ್ಕೆ ತಪ್ಪುಹಣ ಮಾತ್ರ ಶಿಕ್ಷೆ " ಎಂದರು.

ಪುರೋಹಿತ—“ ನಾನು ನಿಮಗೆ ಎರಡು ಲಕ್ಷ ವರಹೆ ದಂಡ ಹಾಕುವೆ. ಈಗಲೇ ಕೊಡಬೇಕು ” ಎಂದ.

ರಾಜ ಕ್ಷಣಕಾಲ ಯೋಚಿಸಿದ ಬಳಿಕ “ ಹಾಗೆಯೇ ಆಗಲಿ ” ಎಂದ.

ಕೋಶಾಧ್ಯಕ್ಷನನ್ನು ಕರೆದು ಎರಡು ಲಕ್ಷ ವರಹಕ್ಕೆ ಅಪ್ಪಣೆಮಾಡಿದ. ಕಾವಲುಗಾರರು ರಘುಪತಿಯನ್ನು ಹೊರಗೆ ಕರೆದುಕೊಂಡು ಹೋದರು.

ರಘುಪತಿ ಹೋದಮೇಲೆ ನಕ್ಷತ್ರರಾಯನ ಕಡೆಗೆ ತಿರುಗಿ ರಾಜ ದೃಢ ಸ್ವರದಲ್ಲಿ ಹೇಳಿದ—“ ನಕ್ಷತ್ರರಾಯ, ನಿನ್ನ ಅಪರಾಧ ನೀನು ಒಪ್ಪಿಕೊಳ್ಳುವೆ ಯಲ್ಲವೆ ? ”

ನಕ್ಷತ್ರರಾಯನೆಂದ—ಮಹಾರಾಜ ನಾನು ತಪ್ಪಿತಸ್ಥ. ನನ್ನನ್ನು ಕ್ಷಮಿಸು ; ಎಂದು ವೇಗವಾಗಿ ಬಂದು ರಾಜನ ಕಾಲನ್ನು ಕಟ್ಟಿಕೊಂಡ.

ಮಹಾರಾಜ ಬೆರಗಾದ, ಕ್ಷಣಹೊತ್ತು ಮಾತು ಹೊರಡಲಿಲ್ಲ. ಕಡೆಗೆ ತನ್ನನ್ನು ಸಮಾಧಾನ ಪಡಿಸಿಕೊಂಡು “ ನಕ್ಷತ್ರರಾಯ, ಏಳು, ನನ್ನ ಮಾತು ಕೇಳು. ಕ್ಷಮಿಸುವುದಕ್ಕೆ ನಾನು ಯಾರು ? ನಾನೇ ನನ್ನ ನಿಯಮದಲ್ಲಿ ಸಿಕ್ಕಿಕೊಂಡಿರುವೆ. ಬಂದಿ ಹೇಗೆ ಕಟ್ಟಿಗೆ ಒಳಗಾಗಿರುವನೋ ಹಾಗೆ ವಿಚಾರಕನೂ ಕಟ್ಟಿಗೆ ಒಳಗಾದವನು. ಒಂದೇ ತಪ್ಪಿಗೆ ನಾನು ಒಬ್ಬನಿಗೆ ಶಿಕ್ಷೆವಿಧಿಸಿ ಇನ್ನೊಬ್ಬನನ್ನು ಕ್ಷಮಿಸುವದು ಹೇಗೆ ಸಾಧ್ಯ ? ನೀನೇ ಯೋಚಿಸಿ ನೋಡು.” ಎಂದು ಹೇಳಿದ.

ಸಭಾಸದರು “ ಮಹಾರಾಜ. ನಕ್ಷತ್ರರಾಯ ನಿಮ್ಮ ತಮ್ಮ. ನಿಮ್ಮ ತಮ್ಮನನ್ನು ಕ್ಷಮಿಸಿ ” ಎಂದರು.

ರಾಜ ದೃಢಸ್ವರದಲ್ಲಿ “ ನೀವೆಲ್ಲ ಸುಮ್ಮನಿರಿ. ಆಸನದಲ್ಲಿ ಕುಳಿತಿರುವ ವರೆಗೂ ನಾನು ಯಾರ ಅಣ್ಣನೂ ಅಲ್ಲ. ಯಾರ ನೆಂಟನೂ ಅಲ್ಲ.” ಎಂದ.

ಸಭಾಸದರೆಲ್ಲ ಸುಮ್ಮನಾದರು. ಸಭೆ ನೀರವವಾಯಿತು. ರಾಜ ಗಂಭೀರ ಸ್ವರದಲ್ಲಿ ಹೇಳಿದ “ ನೀವೆಲ್ಲರೂ ಬಲ್ಲಿರಲ್ಲವೆ. ರಾಜ್ಯದಲ್ಲಿ ಯಾರು ದೇವಿಗಾಗಿ ಜೀವಬಲಿ ಕೊಡುವರೋ ಅಥವಾ ಕೊಡಲೆತ್ನಿಸುವರೋ ಅವರಿಗೆ

ದೇಶಭ್ರಷ್ಟ ಶಿಕ್ಷೆ. ನೆನ್ನೆ ಸಂಜೆ ನಕ್ಷತ್ರರಾಯ ಪುರೋಹಿತರೊಡನೆ ಒಳ ಸಂಚು ನಡಸಿ ಬಲಿಗಾಗಿ ಒಂದು ಮಗುವನ್ನು ಅಪಹರಿಸಿದ. ಈ ಅಪರಾಧ ಸ್ಪಷ್ಟವಾದ್ದರಿಂದಲೇ ನಾನು ಅವನಿಗೆ ಎಂಟು ವರ್ಷಕಾಲ ದೇಶಭ್ರಷ್ಟತೆಯ ಶಿಕ್ಷೆ ವಿಧಿಸಿರುವೆ.''

ಕಾವಲಿನವರು ನಕ್ಷತ್ರರಾಯನನ್ನು ಕರೆದುಕೊಂಡು ಹೋಗಲು ಸಿದ್ಧರಾದಾಗ ರಾಜ ಆಸನ ಬಿಟ್ಟು ಕೆಳಗಿಳಿದು ನಕ್ಷತ್ರರಾಯನನ್ನು ಆಲಿಂಗಿಸಿಕೊಂಡ. ಗದ್ಗದ ಧ್ವನಿಯಿಂದ ''ಮಗು, ನಿನಗೆ ಮಾತ್ರ ಶಿಕ್ಷೆಯಾಗಲಿಲ್ಲ. ನನಗೂ ಶಿಕ್ಷೆಯಾಯಿತು. ಹಿಂದಿನ ಜನ್ಮದಲ್ಲಿ ಯಾವ ತಪ್ಪುಮಾಡಿದ್ದೆನೋ ಅರಿಯೆ. ನೀನು ನೆಂಟರಿಷ್ಟರಿಂದ ದೂರ ಇರುವಷ್ಟು ಕಾಲವೂ ದೇವಿ ನಿನ್ನ ಸಂಗಡಲೇ ಇರಲಿ. ನಿನಗೆ ಒಳ್ಳೆಯದು ಮಾಡಲಿ'' ಎಂದು ಹೇಳಿದ.

ಮಾತು ಎಲ್ಲೆಲ್ಲೂ ಹರಡಿತು. ಅಂತಃಪುರದಲ್ಲಿ ಅಳು ಮೊದಲಾಯಿತು. ರಾಜ ಮರೆಯಲ್ಲಿದ್ದ ಕೊಠಡಿಯಲ್ಲಿ ಬಾಗಿಲು ಮುಚ್ಚಿ ಕುಳಿತುಕೊಂಡ. ಕೈ ಮುಗಿದು ಹೇಳತೊಡಗಿದ. ''ಪ್ರಭು, ನಾನು ಎಂದಾದರೂ ತಪ್ಪುಮಾಡಿದ್ದರೆ ನನ್ನನ್ನು ಕ್ಷಮಿಸಬೇಡ. ನನಗೆ ಸ್ವಲ್ಪವೂ ದಯೆ ತೋರಿಸಬೇಡ. ನನಗೆ ನನ್ನ ಪಾಪದ ಶಿಕ್ಷೆ ವಿಧಿಸು. ಪಾಪಮಾಡಿ ಶಿಕ್ಷೆ ಹೊರಬಹುದು. ಆದರೆ ಕ್ಷಮಾಭಾರ ಹೊರಲು ಸಾಧ್ಯವಿಲ್ಲ ಪ್ರಭು.''

ನಕ್ಷತ್ರರಾಯನ ಮೇಲಿನ ಪ್ರೇಮ ರಾಜನ ಮನದಲ್ಲಿ ಇಮ್ಮಡಿಯಾಯಿತು. ನಕ್ಷತ್ರರಾಯನ ಚಿಕ್ಕಂದಿನ ಮುಖ ಅವನಿಗೆ ನೆನಪಾಯಿತು. ಅವನು ಆಡಿದ್ದ ಆಟ, ಹೇಳಿದ್ದಮಾತು, ಮಾಡಿದ್ದ ಕೆಲಸ, ಒಂದೊಂದಾಗಿ ಅವನಿಗೆ ನೆನಪಾಗತೊಡಗಿತು. ಒಂದೊಂದು ದಿನವೂ, ಒಂದೊಂದು ರಾತ್ರಿಯೂ ಅವನ ಸೂರ್ಯನ ಬೆಳಕಿನ ನಡುವೆ, ಅವನ ನಕ್ಷತ್ರ ತುಂಬಿದ್ದ ಆಕಾಶದ ನಡುವೆ ಮಗುವಾಗಿದ್ದ ನಕ್ಷತ್ರರಾಯನನ್ನು ಎತ್ತಿಕೊಂಡು ಅವನ ಎದುರಿಗೆ ಉದಯಿಸುತಿತ್ತು. ರಾಜನ ಎರಡು ಕಣ್ಣುಗಳಿಂದಲೂ ನೀರು ಸುರಿಯಲಾರಂಭಿಸಿತು.

## ೧೯

ಗಡಿ ದಾಟಲು ಸಿದ್ಧನಾದ ರಘುಪತಿಯನ್ನು ಕಾವಲುಗಾರರು "ಠಾಕೂರ್, ಯಾವ ದಿಕ್ಕಿಗೆ ಹೋಗುವಿರಿ ?" ಎಂದು ಪ್ರಶ್ನಿಸಿದಾಗ ರಘುಪತಿ "ಪಶ್ಚಿಮ ದಿಕ್ಕಿಗೆ ಹೋಗುವೆ ?" ಎಂದು ಉತ್ತರಕೊಟ್ಟ.

ಪಶ್ಚಿಮದ ಕಡೆ ಒಂಬತ್ತು ದಿನಗಳು ಪ್ರಯಾಣ ಮಾಡಿದ ಬಳಿಕ ಬಂದಿಯೂ ಕಾವಲುಗಾರರೂ ಡಾಕಾ ನಗರಕ್ಕೆ ಹತ್ತಿರ ಬಂದರು. ಆಗ ಕಾವಲುಗಾರರು ರಘುಪತಿಯನ್ನು ಬಿಟ್ಟು ಬಿಟ್ಟು ರಾಜಧಾನಿಗೆ ಹಿಂದಿರುಗಿ ಬಂದರು.

ರಘುಪತಿ ತನ್ನಲ್ಲಿ ಹೇಳಿಕೊಂಡ, "ಕಲಿಯುಗದಲ್ಲಿ ಬ್ರಹ್ಮಶಾಪ ಫಲಿಸುವುದಿಲ್ಲ. ಬ್ರಾಹ್ಮಣನ ಬುದ್ಧಿ ಎಷ್ಟೆಂದು ನೋಡೋಣ. ಗೋವಿಂದ ಮಾಣಿಕ್ಯ ಎಂತಹ ರಾಜ, ನಾನೂ ಎಂತಹ ಪುರೋಹಿತ ಎನ್ನುವುದನ್ನು ನೋಡೋಣ."

ತ್ರಿಪುರದ ಪ್ರಾಂತ್ಯದ ದೇವಾಲಯದ ಮೂಲೆಗೆ ಮೊಗಲ್ ಸಾಮ್ರಾಜ್ಯದ ಸುದ್ದಿ ಅಷ್ಟಾಗಿ ಹರಡದು. ಇದರಿಂದ ರಘುಪತಿ ಢಾಕಾ ನಗರಕ್ಕೆ ಹೋಗಿ ಮೊಗಲರ ರಾಜನೀತಿಯನ್ನೂ ರಾಜ್ಯದ ಪರಿಸ್ಥಿತಿಯನ್ನೂ ತಿಳಿಯಲು ಕುತೂಹಲಗೊಂಡ. ಅದು ಮೊಗಲ್ ಸಾಮ್ರಾಟ ಶಹಜಹಾನನ ಆಳ್ವಿಕೆಯ ಕಾಲ. ಆಗ ಅವನ ಮೂರನೆಯ ಮಗ ಔರಂಗಜೇಬ ದಕ್ಷಿಣಾಪಥದ ಬಿಜಾಪುರದ ಆಕ್ರಮಣದಲ್ಲಿ ನಿಯುಕ್ತನಾಗಿದ್ದ. ಅವನ ಮಗ ಸೂಜ ಬಂಗಾಳದ ಅಧಿಪತಿಯಾಗಿದ್ದ. ರಾಜಮಹಲಿನಲ್ಲಿ ಅವನ ರಾಜಧಾನಿ. ಕಿರಿಯಮಗ ಕುಮಾರ ಮುರಾದ ಗುಜರಾತಿನ ಶಾಸನಕರ್ತ. ಹಿರಿಯಮಗ ಯುವರಾಜ ದಾರಾ ದೆಹಲಿಯಲ್ಲೇ ಇದ್ದ. ಸಾಮ್ರಾಟರಿಗೆ ಆಗ ಅರವತ್ತೇಳು ವರ್ಷ. ಅವರ ಅನಾರೋಗ್ಯದ ಕಾರಣ ಸಾಮ್ರಾಜ್ಯದ ಹೊರೆಯೆಲ್ಲ ದಾರಾನ ಮೇಲೆಯೇ ಬಿದ್ದಿತ್ತು.

ರಘುಪತಿ ಕೆಲವು ಕಾಲ ಡಾಕಾದಲ್ಲಿ ತಂಗಿದ್ದು ಉರ್ದು ಭಾಷೆಯನ್ನು ಅಭ್ಯಾಸಮಾಡಿದ. ಕಡೆಗೆ ರಾಜಮಹಲಿನ ಕಡೆ ಪಯಣ ಹೊರಟ.

ರಾಜಮಹಲನ್ನು ಸೇರಿದಾಗ ಭಾರತದಲ್ಲಿ ಗೊಂದಲ ಎದ್ದಿತ್ತು. ಶಹಜಹಾನ ಮರಣಶಯ್ಯೆಯಲ್ಲಿ ಮಲಗಿರುವನು ಎಂಬ ಸುದ್ದಿ ಹರಡಿತ್ತು. ಈ ಸುದ್ದಿ ತಿಳಿದಕೂಡಲೆ ಸೂಜ ಸೈನ್ಯಸಹಿತ ದೆಹಲಿಯ ಕಡೆಗೆ ಓಡಿದ. ಸಾಮ್ರಾಟನ ನಾಲ್ಕು ಮಕ್ಕಳೂ ಮರಣಾವಸ್ಥೆಯಲ್ಲಿದ್ದ ಷಹಜಹಾನನ ತಲೆಯಲ್ಲಿದ್ದ ಕಿರೀಟವನ್ನು ಒಂದೇ ಏಟಿಗೆ ಕಸಿದುಕೊಳ್ಳಲು ಪ್ರಯತ್ನಿಸುತ್ತಿದ್ದರು.

ಆ ಕೂಡಲೆ ಬ್ರಾಹ್ಮಣ ರಾಜನಿಲ್ಲದ ರಾಜಮಹಲನ್ನು ಬಿಟ್ಟು ಸೂಜನನ್ನು ಹಿಂಬಾಲಿಸ ತೊಡಗಿದ. ಪರಿಜನರು, ವಾಹಕರು, ಮೊದಲಾದವರನ್ನು ಬೀಳ್ಕೊಟ್ಟ. ತನ್ನ ಹತ್ತಿರವಿದ್ದ ಎರಡು ಲಕ್ಷ ವರಹಗಳನ್ನು ರಾಜಮಹಲಿನ ಸಮೀಪದ ಒಂದು ಜನಹೀನ ಸ್ಥಳದಲ್ಲಿ ಹೂತಿಟ್ಟ. ಅದರ ಮೇಲೆ ಒಂದು ಚಿಹ್ನೆ ಇಟ್ಟ. ಅತಿ ಸ್ವಲ್ಪ ವರಹಗಳನ್ನು ಕೈಯಲ್ಲಿ ಇಟ್ಟುಕೊಂಡು ಸುಟ್ಟ ಗುಡಿಸಲು, ಜನ ಬಿಟ್ಟ ಹಳ್ಳಿ, ತುಳಿದ ಪೈರುಪಚ್ಚೆಗಳನ್ನು ಅನುಸರಿಸಿ ರಘುಪತಿ ಒಂದೇ ಸಮನಾಗಿ ಮುಂದುವರಿದು ಹೋಗುತ್ತಿದ್ದ. ರಘುಪತಿ ಸಂನ್ಯಾಸಿಯ ವೇಷ ಧರಿಸಿದ. ಆದರೆ ಸಂನ್ಯಾಸಿಯ ವೇಷ ಧರಿಸಿದ್ದರೂ ಆತಿಥ್ಯ ದೊರೆಯುವುದು ಕಷ್ಟ. ಕಾರಣ ಮಿಡಿತೆಗಳಂತೆ ಸೈನಿಕರು ಹೋದ ಹಾದಿಯ ಇಕ್ಕೆಲದಲ್ಲೂ ಕೇವಲ ದುರ್ಭಿಕ್ಷ ಮನೆಮಾಡಿಕೊಂಡಿತ್ತು. ಸೈನಿಕರು ಕುದುರೆ ಮತ್ತು ಆನೆಗಳಿಗಾಗಿ ಅಪಕ್ವ ಬೆಳೆಯನ್ನೇ ಕತ್ತರಿಸಿ ಹಾಕಿದ್ದರು. ರೈತರ ಕಣಜದಲ್ಲೂ ಒಂದು ಕಾಳಿಲ್ಲ. ನಾಲ್ಕೂ ಕಡೆ ಲೂಟಿಯ ಸ್ವೇಚ್ಛಾಧಿಕಾರ. ಅನೇಕ ಜನ ಹಳ್ಳಿಬಿಟ್ಟು ಓಡಿಹೋಗಿರುವರು. ದೈವವಶದಿಂದ ಕಣ್ಣಿಗೆ ಬೀಳುವ ಒಬ್ಬಿಬ್ಬರ ಮುಖದಲ್ಲೂ ನಗೆ ಇಲ್ಲ. ಅವರು ಹೆದರಿದ ಜಿಂಕೆಯಂತೆ ಅಂಜುಬುರುಕರು. ಅವರು ಯಾರನ್ನೂ ನಂಬರು. ದಯೆ ತೋರಿಸರು. ಜನಹೀನ ದಾರಿಯಲ್ಲಿನ ಮರದಡಿ ದೊಣ್ಣೆ ಹಿಡಿದು ನಾಲ್ಕಾರು ಜನ ಕುಳಿತಿರುವುದನ್ನು ಕಾಣಬಹುದು. ಹಾದಿಗ ಬೇಟೆಗಾಗಿ ಅವರು ಹಗಲೆಲ್ಲ ಕಾಯ್ದು ಕುಳಿತಿರುತಿದ್ದರು. ಧೂಮಕೇತುವಿನ ಹಿಂದೆ ಅನುಸರಿಸುವ ಉಲ್ಕಾರಾಶಿಯಂತೆ ದರೋಡೆಗಾರರು ಸೈನಿಕರನ್ನು ಅನುಸರಿಸಿ ಲೂಟಿಯಾಗಿ ಮಿಕ್ಕದ್ದನ್ನು ದೋಚಿಕೊಂಡು ಹೋಗುತ್ತಿದ್ದರು. ಅಷ್ಟೇಕೆ, ಹೆಣಗಳ ಮೇಲಿನ ನಾಯಿ ನರಿಗಳಂತೆ

ಆಗಾಗ್ಗೆ ಸೈನಿಕರಿಗೂ ವರೋಡೆಕಾರರಿಗೂ ಜಗಳಬರುತ್ತಿತ್ತು. ಕ್ರೌರ್ಯ ಸೈನಿಕರ ಆಪವಾಗಿತ್ತು. ಮಾರ್ಗದಲ್ಲಿ ಹೋಗುವ ನಿರ್ಭಾಗ್ಯ ಹಾದಿಗನ ಹೊಟ್ಟೆ ತಟ್ಟೆ ಒಂದು ಕತ್ತಿ ಚುಚ್ಚುವುದೋ ಅಥವಾ ಅವನ ತಲೆಯಿಂದ ರುಮಾಲು ಸಹಿತ ಸ್ವಲ್ಪ ಭಾಗವನ್ನು ಕಿತ್ತೆಬ್ಬಿಸುವುದೊ ಅವರಿಗೆ ಸಹಜವಾದ ಹಾಸ್ಯದಂತೆ. ಗ್ರಾಮದ ಜನ ಅವರಿಗೆ ಹೆದರುವುದನ್ನು ಕಂಡಾಗ ಬಹಳ ಮೋಜೆನಿಸುತಿತ್ತು. ಕೊಳ್ಳೆ ಹೊಡೆದ ಬಳಿಕ ಅವರು ಹಳ್ಳಿಯ ಜನರನ್ನು ಹಿಂಸಿಸಿ ಆನಂದಪಡುತ್ತಿದ್ದರು. ಇಬ್ಬರು ಗಣ್ಯ ಬ್ರಾಹ್ಮಣರನ್ನು ಬೆನ್ನಿಗೆ ಬೆನ್ನು ಸೇರಿಸಿ ನಿಲ್ಲಿಸಿ ಇಬ್ಬರ ಜುಟ್ಟನ್ನೂ ಗಂಟುಹಾಕಿ ಇಬ್ಬರ ಮೂಗಿಗೂ ನಶ್ಯಹಾಕುವರು. ಎರಡು ಕುದುರೆಗಳ ಮೇಲೆ ಒಬ್ಬ ಮನುಷ್ಯನನ್ನು ಕೂರಿಸಿ ಕುದುರೆಗಳನ್ನು ಹೊಡೆದೋಡಿಸುವರು. ಕುದುರೆಗಳೆರಡೂ ಬೇರೆ ಬೇರೆ ದಿಕ್ಕಿಗೆ ಓಡುವವು. ನಡುವೆ ಮನುಷ್ಯ ಬಿದ್ದು ಕೈಕಾಲು ಮುರಿಯು-ವದು. ಈ ರೀತಿ ಪ್ರತಿನಿತ್ಯವೂ ಹೊಸ ಹೊಸ ಆಟಗಳನ್ನು ಅವರು ಕಂಡು ಹಿಡಿಯುವರು. ಕಾರಣವಿಲ್ಲದೆ ಹಳ್ಳಿಗೆ ಬೆಂಕಿ ಹಚ್ಚುವರು. ಕೇಳಿದರೆ ಬಾದಷಹರ ಗೌರವಾರ್ಥವಾಗಿ ಬಾಣಬಿರುಸು ಹತ್ತಿಸುತಿರುವುದಾಗಿ ಹೇಳುವರು. ಸೈನಿಕರು ಹೋಗುವ ದಾರಿಯಲ್ಲಿ ಇಂತಹ ಅತ್ಯಾಚಾರದ ಚಿಹ್ನೆಗಳು ನೂರಾರು. ಇಲ್ಲಿ ರಘುಪತಿಗೆ ಆಹಾರ ಸಿಕ್ಕುವುದಾದರೂ ಎಲ್ಲಿ ? ಕೆಲವು ದಿನ ಆಹಾರವಿಲ್ಲವೆ ಕೆಲವು ದಿನ ಮಿತಾಹಾರದಿಂದ ಕಳೆಯುತಿತ್ತು. ರಾತ್ರಿ ಕತ್ತಲಲ್ಲಿ ಉರಿದ ಪಾಳು ಗುಡಿಸಲಲ್ಲಿ ದಣಿದ ದೇಹದೊಡನೆ ಮಲ ಗಿರುವನು. ಬೆಳಗ್ಗೆ ಎದ್ದು ನೋಡಿದರೆ, ಒಂದು ಕತ್ತರಿಸಿಹೋದ ಮೃತ ದೇಹವನ್ನು ರಾತ್ರಿಯೆಲ್ಲ ದಿಂಬಾಗಿಟ್ಟುಕೊಂಡು ಮಲಗಿರುವದು ಅರಿವಾಗು ವದು. ಒಂದು ದಿನ ಮಧ್ಯಾಹ್ನ ರಘುಪತಿ ಹಸಿವಿನಿಂದ ಯಾವುದೋ ಗುಡಿಸಲಿನೊಳಕ್ಕೆ ಹೋದಾಗ ಒಬ್ಬಾತ ತನ್ನ ಮುರಿದ ಪೆಟ್ಟಿಗೆಯ ಮೇಲೆ ಬೋರಲಾಗಿ ಬಿದ್ದಿದ್ದ. ಅವನು ಕೊಳ್ಳೆಹೋದ ಹಣಕ್ಕಾಗಿ ಅಳು ತ್ತಿದ್ದಂತೆತೋರಿತು. ಹತ್ತಿರ ಹೋಗಿ ಮುಟ್ಟುತ್ತಲೆ ಅವನು ಕೆಳಕ್ಕುರುಳಿದ. ಅದು ಜೀವವಿಲ್ಲದ ಒಡಲು. ಜೀವಹೋಗಿ ಬಹಳ ಕಾಲವಾಗಿತ್ತು.

ರಘುಪತಿ ಒಂದು ದಿನ ಗುಡಿಸಲೊಂದರಲ್ಲಿ ಮಲಗಿದ್ದ. ರಾತ್ರಿ ಮುಗಿದಿರಲಿಲ್ಲ, ಸ್ವಲ್ಪ ಹೊತ್ತಿತ್ತು. ಈ ವೇಳೆಯಲ್ಲಿ ಮೆಲ್ಲ ಮೆಲ್ಲನೆ ಬಾಗಿಲು

ತೆರೆಯಿತು. ಶರತ್ಕಾಲದ ಚಂದ್ರನ ಬೆಳಕಿನೊಡನೆ ಕೆಲವು ನೆರಳೂ ಮನೆಯೊಳಕ್ಕೆ ಬಂದಿತು. ಪಿಸಪಿಸ ಮಾತಿನ ಶಬ್ದ ಕೇಳಿಸಿತು. ರಘುಪತಿ ಬೆದರಿಕೆಯಿಂದ ಎದ್ದು ಕುಳಿತ. ಆವನು ಏಳುತ್ತಲೆ ಕೆಲವು ಹೆಂಗಸರ ಧ್ವನಿ ಹೆದರಿಕೆಯೊಡನೆ "ಅಮ್ಮಮ್ಮಾ" ಎಂದಿತು. ಗಂಡಸೊಬ್ಬ ಮುಂದೆ ಬಂದು "ಯಾರೋ ನೀನು?" ಎಂದು ಕೇಳಿದ.

ರಘುಪತಿ ಹೇಳಿದ—"ನಾನು ಬ್ರಾಹ್ಮಣ, ದಾರಿಹೋಕ ನೀವೆಲ್ಲ ಯಾರು?"

"ನಮ್ಮದೇ ಈ ಮನೆ. ನಾವು ಮನೆಬಿಟ್ಟು ಓಡಿಹೋಗಿದ್ದೆವು. ಮೊಗಲಸೈನ್ಯ ಹೊರಟುಹೋಗಿದ್ದನ್ನು ಕೇಳಿ ಮನೆಗೆ ಹಿಂದಿರುಗಿದೆವು."

ರಘುಪತಿ—"ಮೊಗಲ್‌ಸೈನ್ಯ ಯಾವ ದಿಕ್ಕಿನಲ್ಲಿ ಹೋಯಿತು" ಎಂದು ಪ್ರಶ್ನಿಸಿದ.

"ವಿಜಯಗಡದ ದಿಕ್ಕಿಗೆ. ಇಷ್ಟು ಹೊತ್ತಿಗೆ ವಿಜಯಗಡದ ಕಾಡಿನೊಳಕ್ಕೆ ಹೋಗಿರಬಹುದು" ಎಂದರು ಅವರು.

ರಘುಪತಿ ಇನ್ನೇನೂ ಹೇಳದೆ ಕೂಡಲೆ ಪಯಣಬೆಳಸಿದ.

## ೨೦

ವಿಜಯಗಡದ ಕಗ್ಗಾಡು ತಕ್ಕರ ವಾಸಸ್ಥಳ. ಕಾಡಿನ ಒಳಕ್ಕೆ ಹೋಗುವ ದಾರಿಯ ಇಕ್ಕೆಲದಲ್ಲೂ ಬಿದ್ದಿದ್ದ ಮನುಷ್ಯರ ಎಲುಬುಗೂಡಿನ ರಾಶಿಯುಮೇಲೆ ಕೇವಲ ಕಾಡು ಹೂ ಅರಳುವುದು. ಬೇರೆ ಯಾವ ಚಿಹ್ನೆಯೂ ಇಲ್ಲ. ಕಾಡಿನಲ್ಲಿ ಆಲದ ಮರವಿದೆ. ಬೇವಿನಮರವಿದೆ. ಗೊಬ್ಬಳಿಯ ಮರವಿದೆ. ನೂರಾರು ಬಗೆಯ ಬಳ್ಳಿಯೂ, ಪೊದರೂ, ಇವೆ. ಅಲ್ಲಲ್ಲಿ ಕೊಳ ಅಥವಾ ಕೆರೆ ಕಾಣಿಸುವುದು, ಒಂದೇ ಸಮನೆ ಎಲೆ ಉದುರಿ ಉದುರಿ ಅವುಗಳ ನೀರು ಸಂಪೂರ್ಣವಾಗಿ ಹಸುರಾಗಿತ್ತು. ಸಣ್ಣ ಸಣ್ಣ ಕಾಲುದಾರಿಗಳು ಅತ್ತ ಇತ್ತ ತಿರುಗಿ ಬಳಸಿ ಹಾವಿನಂತೆ ಕತ್ತಲ ಕಾಡಿನೊಳಕ್ಕೆ ಹೋಗಿ ಸೇರಿದ್ದುವು. ಮರಗಳ ಕಂಬಗಳಲ್ಲೂ ಸಂದುಗಳಲ್ಲೂ ಕೋತಿಗಳು. ಆಲದ ಮರದ ಕೊಂಬೆಯಿಂದ ಬಿಳಲುಗಳೂ ನೂರಾರೂ

ಕೋತಿಗಳ ಬಾಲವೂ ನೇತಾಡುತಿದ್ದುವು, ಹಾಳುಗುಡಿಯ ಒಳ ಅಂಗಣ ಬಾಗೆಯ ಮರದ ಬಿಳಿಯ ಹೂವಿನಿಂದಲೂ ಕೋತಿಗಳ ಹಲ್ಲು ಕಿರಿಯುವಿಕೆಯಿಂದಲೂ ಸಂಪೂರ್ಣವಾಗಿ ಮುಚ್ಚಿಹೋಗಿತ್ತು. ಸಂಜೆಯಲ್ಲಿ ದೊಡ್ಡ ದೊಡ್ಡ ಮರಗಳ ಮೇಲೆ ಗುಂಪು ಗುಂಪಾಗಿ ಕಾಡು ಹಕ್ಕಿಗಳ ಕಿರುಚಾಟ ಕಾಡಿನ ಕಗ್ಗತ್ತಲೆಯನ್ನು ಚೂರು ಚೂರುಮಾಡುತಿತ್ತು. ಈ ದೊಡ್ಡ ಕಾಡಿನೊಳಕ್ಕೆ ಸುಮಾರು ಇಪ್ಪತ್ತು ಸಾವಿರ ಸೈನ್ಯ ಪ್ರವೇಶಿಸಿತ್ತು. ಈ ಕೊಂಬೆ—ಕವಲು-ಎಲೆ-ಬಳ್ಳಿ-ಹುಲ್ಲು ಪೊದರಿನಿಂದ ತುಂಬಿದ ವಿಶಾಲವಾದ ದುಂಡನೆಯ ಆಕೃತಿಯ ಕಾಡು ಇಪ್ಪತ್ತು ಸಾವಿರ ಮೊನಚಾದ ಕೊಕ್ಕುಳ್ಳ ಸೈನಿಕ ಗಿಡಗಗಳ ಗೂಡೆನ್ನುವಂತಿತ್ತು. ಸೈನ್ಯದ ಬರುವಿಕೆ ಕಂಡು ಲೆಖ್ಖವಿಲ್ಲದಷ್ಟು ಕಾಗೆಗಳು ಕಾ, ಕಾ-ಎನ್ನುತ್ತಗುಂಪು-ಗಟ್ಟಿ ಆಕಾಶದಲ್ಲಿ ಹಾರಾಡುತಿದ್ದುವು. ಧೈರ್ಯವಾಗಿ ಒಂದು ಕೊಂಬೆಯಮೇಲೆ ಕೂರುತ್ತಿರಲಿಲ್ಲ. ಯಾವ ಬಗೆಯ ಗೊಂದಲಕ್ಕೂ ಸೇನಾಪತಿಯ ತಡೆ. ಸೈನ್ಯ ಹಗಲೆಲ್ಲ ದಣಿದು ಸಂಜೆಯ ಹೊತ್ತಿಗೆ ಕಾಡಿಗೆ ಬಂದು ಒಣಪುಳ್ಳಿ ಒಟ್ಟಿ ಅಡುಗೆ ಮಾಡುತ್ತ ಪರಸ್ಪರವಾಗಿ ಪಿಸುಗುಟ್ಟುತಿತ್ತು. ಅವರ ಈ ಗೊಣಗೊಣ ಶಬ್ದ ಕಾಡಿನಲ್ಲೆಲ್ಲ ಪ್ರತಿಧ್ವನಿಸುತಿತ್ತು. ಸಂಜೆಯಲ್ಲಿ ಜೀರುಂಡೆಯ ಝೇಂಕಾರ ಕೇಳುತ್ತಿರಲಿಲ್ಲ. ಮರಕ್ಕೆ ಕಟ್ಟಿ ಹಾಕಿದ್ದ ಕುದುರೆಗಳು ಆಗಾಗ ಗೊರಸಿನಿಂದ ನೆಲ ಕೆರೆಯುತಿದ್ದುವು —ಕೆನೆಯುತಿದ್ದುವು, ಒಟ್ಟಿನಲ್ಲಿ ಕಾಡೆಲ್ಲ ಬೆಳಕಾಗಿತ್ತು. ಹಾಳುಗುಡಿಯ ಹತ್ತಿರವಿದ್ದ ಪಾಳು ಜಾಗದಲ್ಲಿ ಷಾ ಸೂಜನ ಡೇರೆ ಹಾಕಿತ್ತು. ಉಳಿದವರು ಮರದ ಕೆಳಗೆ ಇದ್ದರು. ಹಗಲೆಲ್ಲ ಒಂದೇ ಸಮನೆ ನಡೆದು ರಘುಪತಿ ಕಾಡನ್ನು ತಲುಪಿದ. ಆಗ ರಾತ್ರಿಯಾಗಿತ್ತು. ಬಹಳ ಮಂದಿ ಸೈನಿಕರು ಸದ್ದಿಲ್ಲದೆ ನಿದ್ರಿಸುತ್ತಿದ್ದರು. ಕೆಲವರು ಸೈನಿಕರು ಮಾತ್ರ ಸದ್ದಿಲ್ಲದೆ ಕಾವಲುಕಾಯುತ್ತಿದ್ದರು. ನಡುನಡುವೆ ಒಂದೊಂದು ಕಡೆ ಬೆಂಕಿ ಉರಿಯುತಿತ್ತು. ಕತ್ತಲೆ ಕಷ್ಟದಿಂದ ನಿದ್ದೆ ಹತ್ತಿದ್ದ ಕೆಂಪು ಕಣ್ಣನ್ನು ಮುಚ್ಚಿದಂತಿತ್ತು. ರಘುಪತಿ ಕಾಡಿನೊಳಕ್ಕೆ ಕಾಲಿಡುತ್ತಲೆ ಇಪ್ಪತ್ತು ಸಾವಿರ ಸೈನಿಕರ ನಿಟ್ಟುಸಿರು—ಮೇಲುಸಿರನ್ನು ಕೇಳತೊಡಗಿದ. ಕಾಡಿನ ಸಾವಿರಾರು ಮರಗಳು ಕೊಂಬೆಯನ್ನು ಹರಡಿ ಪಹರೆ ಕೊಡುತಿತ್ತು. ಗೂಬೆಗಳು ತಮ್ಮ ಆಗ ತಾನೆ ಹುಟ್ಟಿದ್ದ ಮರಿಗಳ

ಮೇಲೆ ಹೇಗೆ ಗರಿಗೆದರಿ ಕೂಡುವವೋ ಹಾಗೆ ಕಾಡಿನ ಹೊರಭಾಗದ ಅದ್ಭುತ ರಾತ್ರಿ ಕಾಡಿನ ಒಳಭಾಗದ ಕಗ್ಗತ್ತಲೆಯ ಮೇಲೆ ರೆಕ್ಕಹರಡಿ ಕೊಂಡು ತೆಪ್ಪನೆ ಕುಳಿತಿತ್ತು. ಕಾಡಿನ ನಡುವೆ ಒಂದು ರಾತ್ರಿ ಮುಖ ಮುಚ್ಚಿಕೊಂಡು ನಿದ್ರೆಮಾಡುತಿತ್ತು. ಕಾಡಿನ ಹೊರಗಡೆ ಇನ್ನೊಂದು ರಾತ್ರಿ ತಲೆ ಎತ್ತಿ ಎಚ್ಚರವಾಗಿ ಕುಳಿತಿತ್ತು. ರಘುಪತಿ ಆ ರಾತ್ರಿ ಕಾಡಿನ ಒಂದು ಪಕ್ಕದಲ್ಲಿ ಮಲಗಿಕೊಂಡ.

ಹಠಾತ್ತಾಗಿ ಒಂದೆರಡು ತಿವಿತ ಅನುಭವಿಸಿ ಬೇಗಬೇಗನೆ ಎದ್ದು ಕುಳಿತ. ನೋಡಿದರೆ ರುಮಾಲು ಸುತ್ತಿಕೊಂಡ ನೀಳಗಡ್ಡದ ತುರ್ಕಿ ಸೈನಿಕರು. ಕೆಲವರು ವಿದೇಶಿಭಾಷೆಯಲ್ಲಿ ಅವನಿಗೆ ಏನೋ ಹೇಳುತ್ತಿದ್ದರು. ಅದನ್ನು ಕೇಳಿ ಅವನು ವೈರಿಗಳೆಂದು ನಿಶ್ಚಯಿಸಿಕೊಂಡ. ಅವನೂ ಬಂಗಾಳಿ ಭಾಷೆ ಯಲ್ಲಿ ಅವರೊಡನೆ ಭಾವನ ನೆಂಟಸ್ತಿಕೆ ಜೋಡಿಸಿಕೊಂಡು ಹೇಳಬೇಕಾದುದನ್ನು ಹೇಳಿದ. ಅವರುಗಳು ಅವನನ್ನು ಎಳೆದಾಡ ತೊಡಗಿದರು.

“ ಹುಡುಗಾಟವಾಡುವಿರಾ ? ” ಎಂದು ರಘುಪತಿ ಕೇಳಿದ. ಆದರೆ ಅವರ ವ್ಯವಹಾರದಲ್ಲಿ ಹುಡುಗಾಟದ ಲಕ್ಷಣ ಸ್ವಲ್ಪವಾದರೂ ಕಂಡು ಬರಲಿಲ್ಲ. ಕಾಡಿನೊಳಗಿಂದ ಅವರು ಅವನನ್ನು ನಿಶ್ಚಿಂತರಾಗಿ ಎಳೆದು ಕೊಂಡು ಹೋಗುತಿದ್ದರು.

ಕಡೆಗೆ ಅವನು ಅಸಂತೋಷ ವ್ಯಕ್ತಪಡಿಸುತ್ತ “ ಏಕೆ, ಎಳೆದಾಡುವಿರಿ. ನಾನೇ ಬರುತ್ತೇನೆ. ಇಷ್ಟು ದೂರ ಬಂದದ್ದಾದರೂ ಏಕೆ.”—ಎಂದ.

ಸೈನಿಕರು ನಗತೊಡಗಿದರು. ಅವನ ವಂಗ ಭಾಷೆಯನ್ನು ಅನುಕರಿಸ ತೊಡಗಿದರು. ಕ್ರಮ—ಕ್ರಮವಾಗಿ ಅವನ ಸುತ್ತಲೂ ಸೈನಿಕರು ಗುಂಪು-ಗೂಡಿದರು. ಅವನನ್ನು ಉದ್ದೇಶಿಸಿ ದೊಡ್ಡಗದ್ದಲ. ಹಿಂಸೆಗೂ ಎಲ್ಲೆ ಉಳಿಯಲಿಲ್ಲ, ಸೈನಿಕನೊಬ್ಬ ಒಂದು ಅಳಿಲಮರಿಯನ್ನು ಬಾಲಹಿಡಿದು ಅವನ ನುಣ್ಣನೆಯ ತಲೆಗೇರಿಸಿದ. ಅವನ ತಲೆಯನ್ನು ಹಣ್ಣೆಂದು ಭಾವಿಸಿ ತಿನ್ನುವದೇನೋ ಎಂದು ನೋಡುವ ಇಚ್ಛೆ. ಇನ್ನೊಬ್ಬ ಸೈನಿಕ ಅವನ ಮೂಗಿಗೆ ನೇರವಾಗಿ ದಪ್ಪ ಬೆತ್ತವೊಂದನ್ನು ಬಾಗಿಸಿ ಹಿಡಿದು ಅವನ ಜೊತೆ

ಜೊತೆಯಲ್ಲಿ ನಡೆದ. ಅದನ್ನು ಬಿಟ್ಟುಬಿಟ್ಟರೆ ರಘುಪತಿಯ ಮುಖದಿಂದ ಮೂಗಿನ ಎತ್ತರವಾದ ಭಾಗ ಒಂದೇ ಏಟಿಗೆ ಸಂಪೂರ್ಣವಾಗಿ ಲೋಪ ವಾಗುವ ಸಂಭವ. ಸೈನಿಕರ ಹಾಸ್ಯದಿಂದ ಕಾಡು ಪ್ರತಿಧ್ವನಿಸ ತೊಡಗಿತು. ಇಂದು ಮಧ್ಯಾಹ್ನ ಯುದ್ಧ ಮಾಡಬೇಕು. ಅದರಿಂದಲೇ ಬೆಳಗ್ಗೆ ರಘುಪತಿ ಯನ್ನು ನೆಪವಾಗಿಟ್ಟುಕೊಂಡು ಅವರುಗಳಿಗೆ ಇಷ್ಟೊಂದು ಹುಡುಗಾಟ. ಆಟದ ಚಟ ತೀರಿದ ಬಳಿಕ ಬ್ರಾಹ್ಮಣನನ್ನ ಸೂಜನ ಶಿಬಿರಕ್ಕೆ ಕರೆದು ಕೊಂಡುಹೋದರು.

ಸೂಜನನ್ನು ಕಂಡು ರಘುಪತಿ ಸಲಾಂ ಮಾಡಲಿಲ್ಲ. ಅವನು ದೇವತೆಗಳನ್ನೂ ಸ್ವಜಾತಿಯವರನ್ನೂ ಬಿಟ್ಟು ಬೇರೆ ಯಾರಿಗೂ ಎಂದೂ ತಲೆಬಾಗಿಸಿರಲಿಲ್ಲ. ತಲೆ ಎತ್ತಿನಿಂತು ಕೈ ಎತ್ತಿ "ಷಾಹನ್-ಷಾಹಗೆ ಜಯವಾಗಲಿ" ಎಂದ.

ಸೂಜ ಮದ್ಯದ ಬಟ್ಟಲು ಹಿಡಿದು ಸಭಾಸದರೊಡನೆ ಕುಳಿತಿದ್ದ. ಬೇಸರ ತುಂಬಿದ ದನಿಯಲ್ಲಿ ಸಂಪೂರ್ಣ ತಿರಸ್ಕಾರದೊಡನೆ—"ಏನು, ಏನು ಸಂಗತಿ" ಎಂದು ಕೇಳಿದ.

ಸೈನಿಕರೆಂದರು—ಜನಾಬ್, ಶತ್ರುಪಕ್ಷದ ಗೂಢಚಾರ. ರಹಸ್ಯ ವಾಗಿ ನಮ್ಮ ಒಲಾಬಲ ತಿಳಿಯಲು ಬಂದಿದ್ದ. ನಾವುಗಳು ಅವನನ್ನು ಯಜ ಮಾನರ ಸನ್ನಿಧಾನಕ್ಕೆ ಕರೆತಂದೆವು.

"ಒಳ್ಳೆಯದು, ಒಳ್ಳೆಯದು, ನಿರ್ಭಾಗ್ಯ ನೋಡಲು ಬಂದಿರುವನು. ಅವನಿಗೆ ಎಲ್ಲವನ್ನೂ ತೋರಿಸಿ ಓಡಿಸಿ. ಊರಿಗೆಹೋಗಿ ಕತೆ ಹೇಳಲಿ" ಎಂದು ಸೂಜನೆಂದ.

ರಘುಪತಿ ಹರಕು ಮುರುಕು ಹಿಂದುಸ್ತಾನಿಯಲ್ಲಿ-ಧಣಿಗಳ ಕೈಕೆಳಗೆ ನಾನು ಕೆಲಸಕ್ಕೆ ಪ್ರಾರ್ಥಿಸುತ್ತೇನೆ—ಎಂದ.

ಸೂಜ ಬೇಸರದಿಂದ ಕೈ ಅಲ್ಲಾಡಿಸಿ, ಅವನನ್ನು ಬೇಗ ಹೋಗಲು ಸೂಚಿಸಿದ—"ಸೆಕೆ" ಎಂದ. ಗಾಳಿ ಹಾಕುತ್ತಿದ್ದವರು ಇಮ್ಮಡಿ ವೇಗ ದಿಂದ ಗಾಳಿ ಬೀಸ ತೊಡಗಿದರು.

ದಾರಾ ತನ್ನ ಮಗ ಸುಲೇಮಾನನನ್ನು ರಾಜಾ ಜಯಸಿಂಹನ ಕೈ ಕೆಳಗೆ ಸೂಜನ ಆಕ್ರಮಣ ತಡೆಯುವುದಕ್ಕಾಗಿ ಕಳುಹಿಸಿದ. ಅವರ ಅಪಾರ ಸೈನ್ಯದಳ ಸಮೀಪಕ್ಕೆ ಬರುತ್ತಿದೆಯೆಂದು ಸುದ್ದಿ ಬಂತು. ಅದ ರಿಂದಲೆ ವಿಜಯಗಡ ಕೋಟೆಯನ್ನು ವಶಪಡಿಸಿಕೊಂಡು ಅಲ್ಲಿ ಸೈನ್ಯ ಕೂಡಿ ಸಲು ಸೂಜಾ ಪ್ರಯತ್ನಮಾಡುತಿರುವನು. ಸೂಜನ ಕೈಗೆ ಸರಕಾರದ ಹಣಕಾಸು ಹಾಗೂ ಕೋಟೆಯನ್ನು ಒಪ್ಪಿಸಬೇಕೆಂದು ವಿಜಯಗಡದ ರಾಜ ವಿಕ್ರಮಸಿಂಹನ ಬಳಿಗೆ ದೂತರು ಹೋಗಿರುವರು. ವಿಕ್ರಮಸಿಂಹ ಆ ದೂತರಿಗೆ " ನಾನು ದೆಹಲೀ ಚಕ್ರವರ್ತಿ ಶಾಹಜಹಾನನ್ನೂ ಜಗದೀಶ್ವರ ಭವಾನೀ ಪತಿಯನ್ನೂ ಬಲ್ಲೆ, ಸೂಜ ಯಾರೋ ನನಗವನು ಗೊತ್ತಿಲ್ಲ " ಎಂದು ಹೇಳಿ ಕಳುಹಿಸಿದ.

ಸೂಜ ರೋಷಧ್ವನಿಯಲ್ಲಿ " ಬಹಳ ಅವಿಧೇಯತೆ. ಈಗ ವ್ಯರ್ಥ ವಾಗಿ ಯುದ್ಧಮಾಡಬೇಕಾದೀತು. ಒಳ್ಳೆಯ ಉಪದ್ರವ—" ಎಂದ.

ಇವೆಲ್ಲವನ್ನೂ ರಘುಪತಿ ಕೇಳಿದ. ಸೈನಿಕರ ಕೈಯಿಂದ ತಪ್ಪಿಸಿ ಕೊಂಡೊಡನೆ ವಿಜಯಗಡದ ಕಡೆಗೆ ಓಟ ಹಿಡಿದ.

## ೨೧

ಬೆಟ್ಟದ ಮೇಲೆ ವಿಜಯಗಡ. ವಿಜಯಗಡದ ಕಾಡು ದುರ್ಗವ ಹತ್ತಿರ ಹತ್ತಿರಕ್ಕೆಹೋಗಿ ಕೊನೆಗಂಡಿರುವದು. ಕಾಡಿನಿಂದ ಹೊರ ಬಂದೊಡನೆ ರಘುಪತಿ—ಎತ್ತರವಾದ ಕಲ್ಲಿನ ದುರ್ಗ ನೀಲಾಕಾಶಕ್ಕೆ ಆಸರೆ ಯಾಗಿ ನಿಂತಿರುವುದನ್ನು ನೋಡಿದ. ಕಾಡು ಅದರ ಸಾವಿರಾರು ಮರ ಗಳಿಂದ ಮರೆಯಾಗಿರುವಂತೆಯೇ ದುರ್ಗವೂ ಅದರ ಕಲ್ಲಿನ ನಡುವೆ ಅದೇ ಅದಾಗಿ ಸಿಕ್ಕಿಕೊಂಡಿರುವದು. ಕಾಡಿನಲ್ಲಿ ಸದ್ದಿಲ್ಲ. ದುರ್ಗದಲ್ಲಿ ಜಾಗರೂಕತೆ. ಕಾಡು ಹುಲಿಯಂತೆ ಬಾಲ ಮುರಿದುಕೊಂಡು ಕುಳಿತಿರುವದು. ದುರ್ಗ ಸಿಂಹ ದಂತೆ ಕೇಸರ ಹರಡಿಕೊಂಡು ಕೊರಳು ಕೊಂಕಿಸಿಕೊಂಡು ನಿಂತಿರುವುದು. ಕಾಡು ನೆಲಕ್ಕೆ ಕಿವಿಯಿಟ್ಟುಕೇಳುತಿರುವದು. ದುರ್ಗ ಆಕಾಶದಲ್ಲಿ ತಲೆ ಎತ್ತಿನೋಡುತಿರುವದು.

ರಘುಪತಿ ಕಾಡಿನಿಂದ ಹೊರ ಬರುತ್ತಲೆ ದುರ್ಗದ ಗೋಡೆಯ ಮೇಲಿದ್ದ ಸೈನಿಕರು ಜಾಗರೂಕರಾದರು. ಕೊಂಬು ಮೊಳಗಿತು. ಕೂಡಲೆ ಸಿಂಹ ಗರ್ಜನೆಮಾಡಿ ಉಗುರು, ಹಲ್ಲು, ಚಾಚಿ ಹುಬ್ಬು ಗಂಟಿಕ್ಕಿ ನಿಂತಿತು. ರಘುಪತಿ ಜನಿವಾರತೋರಿಸಿ ಕೈ ಎತ್ತಿ ಇಂಗಿತಮಾಡತೊಡಗಿದ. ಸೈನಿಕರು ಜಾಗರೂಕರಾಗಿ ನಿಂತುಕೊಂಡರು. ರಘುಪತಿ ದುರ್ಗವನ್ನು ಸಮೀಪಿಸಿ ಹೋಗುತ್ತಲು ಸೈನಿಕರು—ಯಾರು ನೀನು ?—ಎಂದು ಕೇಳಿದರು.

" ನಾನು ಬ್ರಾಹ್ಮಣ, ಅತಿಥಿ " ಎಂದು ರಘುಪತಿ ಹೇಳಿದ.

ದುರ್ಗದ ರಾಜ ವಿಕ್ರಮಸಿಂಹ ಅತ್ಯಂತ ಧರ್ಮನಿಷ್ಠೆಯುಳ್ಳವ. ದೇವ ಬ್ರಾಹ್ಮಣ ಹಾಗೂ ಅತಿಥಿ ಸೇವೆಯಲ್ಲಿ ಮುಳುಗಿರುವವನು. ಜನಿವಾರ ಇದ್ದರೆ ದುರ್ಗದೊಳಕ್ಕೆ ಬರಲು ಬೇರೆ ಯಾವ ಪರಿಚಯವೂ ಆವಶ್ಯಕವಿಲ್ಲ. ಆದರೆ ಇಂದು ಯುದ್ಧದ ದಿನವಾದ್ದರಿಂದ ಏನುಮಾಡುವುದು ಸರಿ ಎಂದು ಸೈನಿಕರಿಗೆ ತಿಳಿಯದೆಹೋಯಿತು.

ರಘುಪತಿ—" ನೀವು ಆಶ್ರಯ ಕೊಡದಿದ್ದರೆ ಮೊಗಲರ ಕೈಗೆ ಸಿಕ್ಕಿ ಸಾಯಬೇಕಾದೀತು "—ಎಂದ.

ವಿಕ್ರಮಸಿಂಹನಿಗೆ ಈ ಸುದ್ದಿ ತಿಳಿದೊಡನೆ ಅವನು ಬ್ರಾಹ್ಮಣನಿಗೆ ದುರ್ಗದಲ್ಲಿ ಆಶ್ರಯಕೊಡಲು ಸಮ್ಮತಿಸಿದ. ಕೋಟೆಯ ಮೇಲಿಂದ ಒಂದು ನೂಲೇಣಿಯನ್ನು ಇಳಿಸಿದರು. ರಘುಪತಿ ದುರ್ಗದೊಳಕ್ಕೆ ಹೋದ.

ದುರ್ಗದೊಳಗೆ ಯುದ್ಧವನ್ನು ಎದುರುನೋಡುತ್ತ ಎಲ್ಲರೂ ಆತುರ ದಿಂದಿದ್ದರು. ಮುದುಕ ಖೂಡಾಸಾಹೇಬ ಸ್ವತಃ ಆ ಬ್ರಾಹ್ಮಣನನ್ನು ಸ್ವಾಗ ತಿಸುವ ಭಾರ ವಹಿಸಿದ. ಅವನ ನಿಜವಾದ ಹೆಸರು ಖಡ್ಗಸಿಂಹ. ಆದರೆ ಕೆಲವರು ಅವನನ್ನು ಖೂಡಾಸಾಹೇಬ್ ಎನ್ನುವರು. ಕೆಲವರು ಸುಬೇ ದಾರ್ ಸಾಹೇಬ್ ಎನ್ನುವರು. ಏಕೆ ಹಾಗೆ ಕರೆಯುತಿದ್ದರೆನ್ನಲು ಯಾವ ಕಾರಣವೂ ದೊರೆಯದು. ಜಗತ್ತಿನಲ್ಲಿ ಅವನಿಗೆ ಅಣ್ಣನ ಮಗನಿಲ್ಲ. ಅಣ್ಣನೂ ಇಲ್ಲ. ಅವನು ' ಖೂಡಾ ' (ಚಿಕ್ಕಪ್ಪ) ಆಗಲು ಅಧಿಕಾರವಾಗಲಿ ಸಂಭವವಾಗಲಿ ಇರಲಿಲ್ಲ. ಅವನ ಅಣ್ಣನ ಮಕ್ಕಳು ಎಷ್ಟು ಜನರಿದ್ದರೋ ಅವನ ಸುಭೆ (ಅಧಿಕಾರಕ್ಕೆ ಒಳಗಾದ ಸೀಮೆ) ಅದಕ್ಕಿಂತ ವಿಸ್ತಾರವಾಗೇನೂ

ಇರಲಿಲ್ಲ. ಆದರೆ ಇಂದಿನವರೆಗೆ ಯಾರೂ ಅವನ ಬಿರುದಿನ ವಿಷಯವಾಗಿ ಯಾವ ಬಗೆಯ ವಿರೋಧ ಅಥವಾ ಸಂದೇಹ ಎತ್ತಿರಲಿಲ್ಲ. ಯಾರು ಅಣ್ಣನ ಮಗನಿಲ್ಲದೆ ಖೂಡರೋ, ಸುಭೆ ಇಲ್ಲದೆ ಸುಬೇದಾರರೋ ಪ್ರಪಂಚದ ನಶ್ವರತೆ ಹಾಗೂ ಲಕ್ಷ್ಮಿಯ ಚಂಚಲತೆಯ ಕಟ್ಟು ಅವರ ಮಟ್ಟವನ್ನಿಳಿಸುವುದೆಂಬ ಹೆದರಿಕೆಯೇನೂ ಇಲ್ಲ.

ಖೂಡಾಸಾಹೇಬ ಒಂದು "ಆಹಾ, ಈತ ಬ್ರಾಹ್ಮಣನೇ ಸರಿ" ಎಂದ. ಹೀಗೆಂದು ಭಕ್ತಿಯಿಂದ ನಮಸ್ಕಾರಮಾಡಿದ. ರಘುಪತಿಯನ್ನು ನೋಡಿದೊಡನೆ ದೀಪದ ಹುಳು ಮೋಹಿಸುವಂತಹ ಒಂದು ಬಗೆಯ ತೇಜಸ್ಸಿನಿಂದ ಕೂಡಿದ ದೀಪದುರಿಯಂತಹ ಆಕೃತಿಯಿತ್ತು.

ಖೂಡಾಸಾಹೇಬ ಜಗತ್ತಿನ ಸತ್ಯದ ಶೋಚನೀಯ ಸ್ಥಿತಿಗಾಗಿ ದುಃಖಿಸುತ್ತ ಹೇಳಿದ, "ಠಾಕೂರ್ ಅಂಥ ಬ್ರಾಹ್ಮಣರು ಈಗೆಷ್ಟು ಜನ ದೊರೆತಾರು."

"ಬಹಳ ವಿರಳ"—ಎಂದ ರಘುಪತಿ.

"ಹಿಂದೆ ಬ್ರಾಹ್ಮಣರ ಮುಖದಲ್ಲಿ ಅಗ್ನಿಯಿತ್ತು. ಈಗ ಅಗ್ನಿಯೆಲ್ಲ ಹೊಟ್ಟೆಯಲ್ಲಿ ಆಶ್ರಯಪಡೆದಿರುವದು" ಎಂದು ಖೂಡಾಸಾಹೇಬ ಹೇಳಿದ.

ರಘುಪತಿ—"ಅದಾದರೂ ಹಿಂದಿನಂತೆ ಇದೆಯೇನು" ಎಂದು ಕೇಳಿದ.

ಖೂಡಾಸಾಹೇಬ—ತಲೆಯಾಡಿಸಿ ಹೇಳಿದ—ಸರಿಯಾದ ಮಾತು, ಅಗಸ್ತ್ಯಋಷಿ ಯಾವ ಪ್ರಮಾಣದಲ್ಲಿ ಪಾನಮಾಡಿದ್ದನೋ ಆ ಪ್ರಮಾಣದಲ್ಲಿ ಒಂದು ವೇಳೆ ಊಟಮಾಡುತ್ತಿದ್ದಿದ್ದರೆ–ಅದನ್ನು ಸ್ವಲ್ಪ ಯೋಚಿಸಿನೋಡಿ—

"ಇನ್ನೂ ಉದಾಹರಣೆಗಳಿವೆ" ಎಂದು ರಘುಪತಿ ಹೇಳಿದ.

ಖೂಡಾಸಾಹೇಬ—ಹೌದು, ಹೌದು, ಜಹ್ನು ಮುನಿಯ ಹಸಿವಿನ ಕತೆ ಕೇಳಿಲ್ಲವೆ. ಅವನ ಹಸಿವಿನ ಸಂಗತಿಯನ್ನು ಎಲ್ಲೂ ಬರೆದಿಟ್ಟಿಲ್ಲ. ಆದರೆ ಊಹಿಸಿ ತಿಳಿಯಬಹುದು. ಆಳಲೇಕಾಯಿ ತಿನ್ನುವುದು ಎಂದ

ಮಾತ್ರಕ್ಕೆ ಕಡಮೆ ತಿಂದಂತಾಗದು. ದಿನವೊಂದಕ್ಕೆ ಅದೆಷ್ಟು ಆಳಲೇ ಕಾಯಿ ತಿನ್ನುತ್ತಿದ್ದರು ಎಂಬುದನ್ನು ಯೋಚಿಸಿನೋಡಬೇಕು.

ರಘುಪತಿ ಬ್ರಾಹ್ಮಣರ ಮಹಾತ್ಮ್ಯೆ ಸ್ಮರಿಸಿ ಗಂಭೀರವಾಗಿ ಹೇಳಿದ—"ಇಲ್ಲ, ಸಾಹೇಬ್, ಆಹಾರದ ಕಡೆ ಅವರುಗಳಿಗೆ ಅಷ್ಟಾಗಿ ಗಮನ ಇರಲಿಲ್ಲ."

ಖೂಡಾಸಾಹೇಬ ನಾಲಿಗೆ ಕಚ್ಚಿ ಹೇಳಿದ—"ರಾಮ, ರಾಮ, ಏನೆಂದಿರಿ ! ಅವರುಗಳ ಜಠರಾಗ್ನಿ ಬಹಳ ಪ್ರಬಲವಾಗಿತ್ತು ಎನ್ನುವುದಕ್ಕೆ ಸಾಕಷ್ಟು ಪ್ರಮಾಣಗಳಿವೆ. ನೋಡಲಿಲ್ಲವೆ, ಕಾಲಕ್ರಮದಲ್ಲಿ ಎಲ್ಲ ಅಗ್ನಿಯೂ ಆರಿಹೋಯಿತು. ಹೋಮದ ಅಗ್ನಿಯೂ ಉರಿಯದು. ಆದರೆ—"

ರಘುಪತಿ ಸ್ವಲ್ಪ ಮನಗುಂದಿ—"ಹೋಮದ ಅಗ್ನಿ ಉರಿಯು ವ್ವದಾದರೂ ಹೇಗೆ. ದೇಶದಲ್ಲಿ ತುಪ್ಪ ಎಲ್ಲಿದೆ. ನಾಸ್ತಿಕರು ಹಸುವನ್ನು ಸಾಗ ಕಳುಹಿಸಿದರು. ಈಗ ಹವ್ಯ ದೊರೆಯುವುದಾದರೂ ಎಲ್ಲಿ. ಹೋಮಾಗ್ನಿ ಉರಿಯದೆ ಬ್ರಹ್ಮತೇಜಸ್ಸು ಎಷ್ಟು ದಿನ ತಾನೆ ಉಳಿದೀತು" ಎಂದು ಹೇಳಿದ.

ಹೀಗೆಂದು ರಘುಪತಿ ತನ್ನಲ್ಲಿ ಅಡಗಿರುವ ಹಸಿವು ನೀರಡಿಕೆಗಳ ಅಶಾಂತಿಯನ್ನು ಅತಿಯಾಗಿ ಅನುಭವಿಸತೊಡಗಿದ.

ಖೂಡಾಸಾಹೇಬ ಹೇಳಿದ—"ಸರಿಯಾಗಿ ಹೇಳಿದಿರಿ, ಠಾಕೂರ್. ಹಸುಗಳು ಸತ್ತು ಇತ್ತೀಚೆಗೆ ಮನುಷ್ಯಲೋಕದಲ್ಲಿ ಜನ್ಮವೆತ್ತಲು ಆರಂಭಿಸಿವೆ. ಆದರೆ ಅವುಗಳ ಒಳಿ ತುಪ್ಪ ಪಡೆಯಲು ಆಸೆ ಪಡುವಂತಿಲ್ಲ. ಸಂಪೂರ್ಣವಾಗಿ ಮೆದುಳಿನ ಅಭಾವ. ಠಾಕೂರರು ಬಂದದ್ದು ಎಲ್ಲಿಂದ?"

"ತ್ರಿಪುರದ ರಾಜಧಾನಿಯಿಂದ" ಎಂದ ರಘುಪತಿ.

ವಿಜಯಗಡದ ಹೊರಗಿನ ಭಾರತವರ್ಷದ ಭೂಗೋಳ ಅಥವಾ ಚರಿತ್ರೆಯ ವಿಷಯವಾಗಿ ಖೂಡಾಸಾಹೇಬನಿಗೆ ಅಷ್ಟಾಗಿ ಪರಿಚಯವಿರಲಿಲ್ಲ. ವಿಜಯಗಡ ಹೊರತು ಭಾರತದೇಶದಲ್ಲಿ ತಿಳಿಯಲು ಯೋಗ್ಯವಾದದ್ದು

ಇದೆ ಎನ್ನುವ ನಂಬಿಕೆಯೂ ಅವನಿಗೆ ಇರಲಿಲ್ಲ. ಸಂಪೂರ್ಣ ಊಹೆಯ ಬಲದಿಂದ "ಆಹಾ, ತ್ರಿಪುರದ ರಾಜ ದೊಡ್ಡರಾಜ" ಎಂದ.

ರಘುಪತಿ ಅದನ್ನು ಸಂಪೂರ್ಣವಾಗಿ ಅನುಮೋದಿಸಿದ.

ಖೂಡಾಸಾಹೇಬ—"ಠಾಕೂರರ ವೃತ್ತಿಯೇನು ?"

ರಘುಪತಿ—ನಾನು ತ್ರಿಪುರದ ರಾಜಪುರೋಹಿತ.

ಖೂಡಾಸಾಹೇಬ ಕಣ್ಣು ಮುಚ್ಚಿ ತಲೆ ಅಲ್ಲಾಡಿಸಿ "ಆಹಾ" ಎಂದ.

ರಘುಪತಿಯ ವಿಷಯದಲ್ಲಿ ಅವನಿಗಿದ್ದ ಭಕ್ತಿ ಅತಿಯಾಗಿ ಹೆಚ್ಚಿತು. "ಏನುಮಾಡಲು ಬಂದಿರುವದು ?" ಎಂದ.

"ತೀರ್ಥಯಾತ್ರೆಗಾಗಿ" ಎಂದು ಹೇಳಿದ. ಹೋ ಎಂದು ಸಪ್ಪಳವಾಯಿತು. ಶತ್ರುಗಳು ದುರ್ಗ ಆಕ್ರಮಿಸುವರು. ಖೂಡಾಸಾಹೇಬ ನಕ್ಕು ಕಣ್ಣು ಮಿಟಕಿಸಿ "ಅದು ಏನೂ ಇಲ್ಲ, ಜಲ್ಲಿ ಎಸೆಯುತ್ತಿರುವರು" ಎಂದ.

ವಿಜಯಗಡದ ವಿಷಯದಲ್ಲಿ ಖೂಡಾಸಾಹೇಬನ ನಂಬಿಕೆ ಎಷ್ಟು ದೃಢವಾಗಿತ್ತೋ ವಿಜಯಗಡದ ಕಲ್ಲೂ ಅಷ್ಟು ದೃಢವಾಗಿರಲಿಲ್ಲ. ವಿದೇಶೀ ಪಯಣಿಗ ದುರ್ಗದೊಳಕ್ಕೆ ಬರುತ್ತಲೆ ಖೂಡಾಸಾಹೇಬ ಅವನನ್ನು ಸಂಪೂರ್ಣವಾಗಿ ಆಕ್ರಮಿಸಿದ. ಹಾಗೂ ವಿಜಯಗಡದ ಹಿರಿಮೆಯನ್ನು ಅವನ ಮನಸ್ಸಿಗೆ ನಾಟುವಂತೆ ಮಾಡಿದ. ತ್ರಿಪುರದ ರಾಜಧಾನಿಯಿಂದ ರಘುಪತಿ ಬಂದಿರುವನು. ಇಂಥ ಅತಿಥಿ ಭೂಲೋಕದಲ್ಲಿ ಸಿಗಲಾರ. ಖೂಡಾಸಾಹೇಬ ಬಹಳ ಉಲ್ಲಾಸದಿಂದಿರುವನು. ವಿಜಯಗಡದ ಪುರಾತನತೆಯನ್ನು ಕುರಿತು ಅತಿಥಿಯೊಡನೆ ಚರ್ಚಿಸತೊಡಗಿದ. "ಬ್ರಹ್ಮನ ಅಂಡವೂ ವಿಜಯಗಡವೂ ಪ್ರಾಯಶಃ ಒಂದೇ ಕಾಲದಲ್ಲಿ ಹುಟ್ಟಿದವು. ಮನು ಮಹಾರಾಜನಿಂದ ಆರಂಭಿಸಿ ಮಹಾರಾಜ ವಿಕ್ರಮಸಿಂಹನ ಪೂರ್ವ ಪುರುಷರು ಈ ದುರ್ಗದಲ್ಲಿ ವೈಭವವನ್ನು ಅನುಭವಿಸುತ್ತಿದ್ದರು. ಈ ವಿಷಯದಲ್ಲಿ ಸಂಶಯವೇ ಇಲ್ಲ" ಎಂದ. ಈ ದುರ್ಗಕ್ಕೆ ಶಿವ ಯಾವ ವರಕೊಟ್ಟ, ಈ ದುರ್ಗದಲ್ಲಿ ಕಾರ್ತವೀರ್ಯಾರ್ಜುನ ಹೇಗೆ ಬಂದಿಯಾಗಿದ್ದ, ಎನ್ನುವುದು ರಘುಪತಿಗೆ ತಿಳಿದಿರಲಿಲ್ಲ.

ಸಂಜೆಯ ಹೊತ್ತಿಗೆ ಶತ್ರುಪಕ್ಷ ದುರ್ಗಕ್ಕೆ ಯಾವ ನಷ್ಟವನ್ನೂ ಮಾಡಲಾಗಲಿಲ್ಲ ಎಂಬ ಸುದ್ದಿ ತಿಳಿಯಿತು. ಅವರು ತೋಪು ಹಾರಿಸಿದ್ದರು. ಆದರೆ ತೋಪಿನ ಗುಂಡು ದುರ್ಗದೊಳಕ್ಕೆ ಬರಲಾರದೆಹೋಯಿತು. ಖೂಡಾಸಾಹೇಬ ನಕ್ಕು ರಘುಪತಿಯ ಕಡೆ ನೋಡಿದ. ದುರ್ಗದ ವಿಷಯ ದಲ್ಲಿ ಶಿವ ಕೊಟ್ಟ ಅಮೋಘ ವರ ಇತ್ತಲ್ಲ ಅದಕ್ಕೆ ಇಂತಹ ಪ್ರತ್ಯಕ್ಷ ಪ್ರಮಾಣಕ್ಕಿಂತಲೂ ಇನ್ನೇನು ಬೇಕು ಎಂಬ ಭಾವನೆ. ನಂದಿ ಸ್ವತಃ ಬಂದು ತೋಪಿನ ಗುಂಡುಗಳನ್ನು ಎತ್ತಿಕೊಂಡುಹೋಗಿರುವ. ಗಣಪತಿಯೂ ಕಾರ್ತಿಕೇಯನೂ ಅವನ್ನು ಎಸೆದಾಟ ಆಡುವರು ಎಂಬ ನಂಬಿಕೆ.

೨೨

ಷಾ ಸೂಜನನ್ನು ಹೇಗಾದರೂ ಕೈವಶಮಾಡಿಕೊಳ್ಳಬೇಕೆಂಬುದು ರಘುಪತಿಯ ಉದ್ದೇಶವಾಗಿತ್ತು. ಸೂಜ ದುರ್ಗವನ್ನು ಆಕ್ರಮಿಸಲು ಮುಂದೆ ಬಂದಿರುವುದನ್ನು ಕೇಳಿದಾಗ ಸ್ನೇಹಭಾವದಲ್ಲಿ ದುರ್ಗದೊಳಕ್ಕೆ ಬಂದು ತಾನು ಯಾವ ರೀತಿಯಲ್ಲಿ ದುರ್ಗ ಆಕ್ರಮಣಕ್ಕೆ ಸಹಾಯಮಾಡ ಬಹುದು ಎಂದು ಯೋಚಿಸಿದ. ಆದರೆ ಬ್ರಾಹ್ಮಣ ಯುದ್ಧ, ಜಗಳಗಳ ಯಾವ ಹಾದಿಯನ್ನೂ ಹಿಡಿಯುವಂತಿಲ್ಲ. ಏನುಮಾಡಿದರೆ ಸೂಜನಿಗೆ ನೆರವಾಗಬಹುದೆನ್ನುವುದು ಬಗೆ ಹರಿಯಲಿಲ್ಲ.

ಮರುದಿನ ಪುನಃ ಯುದ್ಧ ಆರಂಭವಾಯಿತು. ಶತ್ರುಗಳು ಮುದ್ದಿಟ್ಟು ದುರ್ಗದ ಕೋಟೆಯ ಸ್ವಲ್ಪ ಭಾಗವನ್ನು ಸಿಡಿಸಿದರು. ಆದರೆ ದೊಡ್ಡ ದೊಡ್ಡ ಗುಂಡುಗಳ ಮಳೆಯಲ್ಲಿ ದುರ್ಗದೊಳಕ್ಕೆ ಕಾಲಿಡಲಾಗಲಿಲ್ಲ. ನೋಡ ನೋಡುತ್ತ ಮುರಿದ ಭಾಗವನ್ನು ಸರಿಪಡಿಸಿದರು. ಇಂದು ಆಗಾಗ ದುರ್ಗದೊಳಕ್ಕೆ ಗುಂಡು ಬರತೊಡಗಿತು. ಒಬ್ಬಿಬ್ಬರಂತೆ ದುರ್ಗದ ಸೈನಿಕರು ಸತ್ತರು ಮತ್ತು ಗಾಯಗೊಂಡರು.

"ಠಾಕೂರ್, ಹೆದರಿಕೆಯೇನೂ ಇಲ್ಲ. ಇದು ಬರಿಯ ಆಟ" ಎಂದು ಹೇಳಿ ಖೂಡಾಸಾಹೇಬ ರಘುಪತಿಗೆ ದುರ್ಗದ ನಾಲ್ಕು ಕಡೆಯೂ ತೋರಿ ಸುತ್ತ ಓಡಾಡತೊಡಗಿದ. ಎಲ್ಲಿ ಆಯುಧ ಶಾಲೆ, ಎಲ್ಲಿ ಉಗ್ರಾಣ, ಗಾಯ ಗೊಂಡವರಿಗೆ ಚಿಕಿತ್ಸೆಮಾಡುವ ಸ್ಥಳ, ಬಂದೀ ಶಾಲೆ, ಸಭಾಭವನ ಎಂಬಿವು

ಗಳನ್ನೆಲ್ಲ ಬೇರೆ ಬೇರೆಯಾಗಿ ತೋರಿಸತೊಡಗಿದ. ಒಂದೇ ಸಮನೆ ರಘುಪತಿಯ ಮುಖ ನಿಟ್ಟಿಸುತ್ತಿದ್ದ. ರಘುಪತಿಯೆಂದ—ಆಶ್ಚರ್ಯವಾದ ತಯಾರಿಕೆ. ತ್ರಿಪುರದ ಕೋಟೆ ಇದಕ್ಕೆ ಈಡಾಗುವುದಿಲ್ಲ, ಆದರೆ ಸಾಹೆಬ್, ಗುಪ್ತವಾಗಿ ಓಡಿಹೋಗಲು ತ್ರಿಪುರದ ಕೋಟೆಯಲ್ಲಿ ಒಂದು ಆಶ್ಚರ್ಯವಾದ ಸುರಂಗದ ದಾರಿಯಿರುವದು. ಇಲ್ಲಿ ಆ ಬಗೆಯದೇನೂ ಕಾಣಲಿಲ್ಲವಲ್ಲ.

ಖೂದಾಸಾಹೇಬ ಏನನ್ನೋ ಹೇಳಲು ಹೋಗಿ, ಕೂಡಲೇ ತನ್ನನ್ನು ಅಡಗಿಸಿಕೊಂಡು "ಇಲ್ಲ, ಈ ದುರ್ಗದಲ್ಲಿ ಆ ಬಗೆಯದೇನೂ ಇಲ್ಲ" ಎಂದ.

ರಘುಪತಿ ಬಹಳ ಆಶ್ಚರ್ಯ ವ್ಯಕ್ತಪಡಿಸುತ್ತ "ಇಷ್ಟು ದೊಡ್ಡ ದುರ್ಗದಲ್ಲಿ ಒಂದು ಸುರಂಗದ ದಾರಿಯಿಲ್ಲವೆ? ಇದೆಂತಹ ಮಾತು" ಎಂದ.

ಖೂದಾಸಾಹೇಬ ಆತುರದಿಂದ "ಇಲ್ಲ, ಇಲ್ಲ, ಹೀಗಿದ್ದೀತೆ, ಖಂಡಿತವಾಗಿಯೂ ಇದ್ದೀತು. ಆದರೆ ನಮಗಾರಿಗೂ ತಿಳಿಯದು" ಎಂದ.

ರಘುಪತಿ ನಕ್ಕು—"ಹಾಗಾದರೆ ಇಲ್ಲದಿರುವಂತೆಯೇ ಸರಿ, ನಿಮಗೆ ತಿಳಿಯದಿದ್ದರೆ ಬೇರೆ ಯಾರಿಗೆ ತಿಳಿದೀತು" ಎಂದು ಹೇಳಿದ.

ಖೂದಾಸಾಹೇಬ ಅತಿ ಗಂಭೀರನಾಗಿ ಕ್ಷಣಕಾಲ ಸುಮ್ಮನಿದ್ದ. ಆ ಬಳಿಕ ಇದ್ದಕ್ಕಿದ್ದಂತೆ "ರಾಮ, ರಾಮ," ಎನ್ನುತ್ತ ಚಿಟಿಕಿಹಾಕಿ ಆಕಳಿಸಿದ. ಆಮೇಲೆ ಮುಖದಲ್ಲೂ ಮೀಸೆಯಲ್ಲೂ, ಗಡ್ಡದಲ್ಲೂ ಒಂದೆರಡು ಸಲ ಕೈ ಆಡಿಸಿ ತಕ್ಷಣ ಹೇಳಿದ. "ಠಾಕೂರ್, ಪೂಜೆ ಅರ್ಚನೆ ಮಾಡಿಕೊಂಡಿರುವಿರಿ, ನಿಮಗೆ ಹೇಳುವುದರಲ್ಲಿ ಯಾವ ದೋಷವೂ ಇಲ್ಲ. ದುರ್ಗಪ್ರವೇಶಕ್ಕೂ ದುರ್ಗದಿಂದ ಹೊರಗೆ ಹೋಗುವುದಕ್ಕೂ ಎರಡು ಗುಪ್ತ ದಾರಿಗಳಿವೆ. ಆದರೆ ಹೊರಗಿನ ಜನರಿಗೆ ಅವನ್ನು ತೋರಿಸುವಂತಿಲ್ಲ."

ರಘುಪತಿ ಸ್ವಲ್ಪ ಸಂಶಯದ ದನಿಯಲ್ಲಿ "ಅದು ಸರಿ, ಹಾಗಿರಬಹುದು" ಎಂದ.

ಖೂದಾಸಾಹೇಬ "ತಪ್ಪು ತನ್ನದೆಂದು ತಿಳಿದುಕೊಂಡ" ಒಮ್ಮೆ ಇಲ್ಲ, ಇನ್ನೊಮ್ಮೆ ಇದೆ ಎಂದರೆ ಜನಕ್ಕೆ ಸಂದೇಹ ಉಂಟಾಗುವದು.

ತ್ರಿಪುರದ ಗಡಕ್ಕಿಂತ ವಿಜಯಗಡ ಯಾವ ಅಂಶದಲ್ಲೂ ಹಿಂದಾಗುವುದು ಖೂಡಾಸಾಹೇಬನಿಗೆ ಸಹಿಸಲಾರದ ಮಾತು.

"ಠಾಕೂರ್, ನಿಮ್ಮ ತ್ರಿಪುರ ಬಹಳ ದೂರವಿದೆ ಎಂದು ತೋರುವುದು. ನೀವು ಬ್ರಾಹ್ಮಣರು. ದೇವಸೇವೆಯೇ ನಿಮ್ಮ ಮುಖ್ಯ ಕೆಲಸ. ನಿಮ್ಮ ಮೂಲಕ ರಹಸ್ಯ ಸ್ವಲ್ಪವೂ ಬಹಿರಂಗವಾಗುವ ಸಂಭವವಿಲ್ಲ" ಎಂದು ಹೇಳಿದ.

ರಘುಪತಿಯೆಂದ—"ಕೆಲಸವೇನು ಸಾಹೇಬ್, ಸಂದೇಹ ತೋರಿದರೆ ಆ ಸಂಗತಿ ಬೇಡ. ನಾನು ಬ್ರಾಹ್ಮಣನ ಮಗ. ನನಗೆ ದುರ್ಗದ ಸಂಗತಿಯಿಂದ ಏನು ಉಪಯೋಗ."

ಖೂಡಾಸಾಹೇಬ ನಾಲಗೆ ಕಚ್ಚಿ ಹೇಳಿದ—"ರಾಮ ರಾಮ, ನಿಮ್ಮಲ್ಲೂ ಸಂದೇಹವೆ! ನಡೆಯಿರಿ ಒಮ್ಮೆ ತೋರಿಸುವೆ."

ಇತ್ತ ಇದ್ದಕ್ಕಿದ್ದಂತೆ ದುರ್ಗದಾಚೆ ಸೂಜನ ಸೈನಿಕರಲ್ಲಿ ಕಟ್ಟು ಮೀರಿತು. ಕಾಡಿನೊಳಗೆ ಸೂಜನ ಡೇರೆಯಿತ್ತು. ಸುಲೇಮಾನ ಮತ್ತು ಜಯಸಿಂಹನ ಸೈನ್ಯ ಬಂದು ಕೂಡಲೆ ಅವನನ್ನು ಬಂಧಿಸಿತು. ಹಾಗೂ ಗುಟ್ಟಾಗಿ ದುರ್ಗ ಮುತ್ತಿರುವವರನ್ನು ಸುತ್ತುಗಟ್ಟಿತು. ಸೂಜನ ಸೈನಿಕರು ಯುದ್ಧಮಾಡದೆ ಮದ್ದುಗುಂಡುಗಳನ್ನು ಹಿಂದಕ್ಕೆ ಎಸೆದು ನಾಶಮಾಡಿದರು. ದುರ್ಗದೊಳಗೆ ಕೋಲಾಹಲ ಎದ್ದಿತು. ವಿಕ್ರಮಸಿಂಹನ ಬಳಿಗೆ ಸುಲೇಮಾನನ ದೂತ ಬರುತ್ತಲೆ ಅವನು ದುರ್ಗದ ಬಾಗಿಲು ತೆಗೆದು, ಸ್ವತಃ ಮುಂದುವರಿದು ಸುಲೇಮಾನನನ್ನೂ ರಾಜಾ ಜಯಸಿಂಹನನ್ನೂ ಸ್ವಾಗತಿಸಿದ. ದಿಲ್ಲೀಶ್ವರನ ಸೈನ್ಯ ಮತ್ತು ಆನೆ ಕುದುರೆಗಳಿಂದ ದುರ್ಗ ಕಿಕ್ಕಿರಿಯಿತು. ಬಾವುಟ ಹಾರತೊಡಗಿತು. ಶಂಖವೂ ರಣವಾದ್ಯವೂ ಮೊಳಗಲಾರಂಭಿಸಿತು. ಖೂಡಾಸಾಹೇಬನ ಬಿಳಿಯ ಮೀಸೆಯ ಕೆಳಗೆ ಬಿಳಿಯ ನಗು ಸಂಪೂರ್ಣವಾಗಿ ಅರಳಿತು.

## ೨೩

ಖೂಡಾಸಾಹೇಬನಿಗೆ ಅದೆಷ್ಟು ಆನಂದದ ದಿನ. ಇಂದು ದಿಲ್ಲೀಶ್ವರನ ರಜಪೂತ ಸೈನಿಕರು ವಿಜಯಗಡದ ಅತಿಥಿಗಳಾಗಿರುವರು. ಅತಿ

ಬಲಶಾಲಿಯಾದ ಶಾಸೂಜ ಈ ದಿನ ವಿಜಯಗಡದ ಬಂದಿ. ಕಾರ್ತವೀರ್ಯಾರ್ಜುನನ ಬಳಿಕ ವಿಜಯಗಡದಲ್ಲಿ ಇಂಥ ಬಂದಿ ಸಿಕ್ಕಿರಲಿಲ್ಲ. ಕಾರ್ತವೀರ್ಯಾರ್ಜುನನ ಬಂಧನಸ್ಥಿತಿ ಜ್ಞಾಪಿಸಿಕೊಂಡು ನಿಟ್ಟುಸಿರು ಬಿಟ್ಟು ಖೂಡಾಸಾಹೇಬ ರಜಪೂತ ಸುಚೇತ ಸಿಂಹನಿಗೆ ಹೇಳಿದ. “ಆಲೋಚಿಸಿ ನೋಡು, ಸಾವಿರಾರು ಕೈಗಳಿಗೆ ಕೊಳ ಹಾಕಲು ಎಷ್ಟು ಸಿದ್ಧತೆ ನಡೆಯುತ್ತಿತ್ತು. ಕಲಿಯುಗ ಬಂದಾರಭ್ಯ ವೈಭವ ಕಡಮೆಯಾಗಿ ಹೋಯಿತು. ಈಗ ರಾಜನ ಮಗನೆ ಆಗಲಿ, ಚಕ್ರವರ್ತಿಯ ಮಗನೆ ಆಗಲಿ ಅಂಗಡಿ ಬೀದಿಯಲ್ಲಿ ಹುಡುಕಿದರೂ ಎರಡು ಕೈಗಳಿಗಿಂತ ಹೆಚ್ಚಾಗಿ ಸಿಕ್ಕದು. ಕೋಳ ಹಾಕಿ ಏನೂ ಹಿತವಿಲ್ಲ.”

ಸುಚೇತಸಿಂಹ ನಕ್ಕು ತನ್ನ ಕೈ ನೋಡಿಕೊಳ್ಳುತ್ತ—“ಈ ಎರಡು ಕೈಗಳೇ ಯಥೇಷ್ಟ” ಎಂದ.

ಖೂಡಾಸಾಹೇಬ ಸ್ವಲ್ಪ ಯೋಚಿಸಿ ಹೇಳಿದ—“ಅದು ಸರಿ, ಆ ಕಾಲದಲ್ಲಿ ಕೆಲಸ ಬೇಕಾದಷ್ಟಿತ್ತು. ಇತ್ತೀಚೆಗೆ ಕೆಲಸ ಎಷ್ಟು ಕಡಮೆಯಾಗಿರುವುದೆಂದರೆ ಈ ಎರಡು ಕೈಗಳಿಗೂ ಯಾವ ಸಾಕ್ಷ್ಯವನ್ನೂ ಕೊಡುವುದಿಲ್ಲ. ಇನ್ನೂ ಕೈಯಿಟ್ಟರೆ ಇನ್ನೂ ಮೀಸೆಗೆ ಕೈಯಿಕ್ಕಬೇಕಾದೀತು.”

ಇಂದು ಖೂಡಾಸಾಹೇಬನ ಉಡುಗೆತೊಡುಗೆಯಲ್ಲಿ ಕೊರತೆಯಿರಲಿಲ್ಲ. ಗಲ್ಲದ ಕೆಳಗಡೆಯಿಂದ ನರೆತಗಡ್ಡ ಎರಡು ಭಾಗವಾಗಿ ಅವನ ಕಿವಿಗಳೆರಡರ ಮೇಲೂ ನೇತಾಡುತಿತ್ತು. ಮೀಸೆಗಳ ಭಾಗ ಹುರಿಯಾಗಿ ಕಿವಿಯ ರಂಧ್ರದ ಹತ್ತಿರ ಹತ್ತಿರ ಹೋಗಿತ್ತು. ತಲೆಯಲ್ಲಿ ಸೊಟ್ಟರುಮಾಲು. ಸೊಂಟದಲ್ಲಿ ಡೊಂಕಾದ ಕತ್ತಿ. ಜರತಾರಿ ಛಡಾವಿನ ಮುಂಭಾಗ ಕೊಂಬಿನಂತೆ ಚೂಪಾಗಿ ಬಗ್ಗಿಕೊಂಡಿರುವದು. ಇಂದು ಖೂಡಾಸಾಹೇಬನ ನಡಗೆಯ ರೀತಿ ವಿಜಯಗಡದ ಹಿರಿಮೆಯೆಲ್ಲ ಅವನ ಸರ್ವಾಂಗದಲ್ಲೂ ಸಂಚರಿಸುವಂತಿತ್ತು. ಈ ದಿನ ಎಲ್ಲ ಬುದ್ಧಿಶಾಲಿ ಜನರ ಹತ್ತಿರ ವಿಜಯಗಡದ ಹಿರಿಮೆ ಸ್ಪಷ್ಟವಾಗಿರುವುದೆಂಬ ಆನಂದದಲ್ಲಿ ಅವನಿಗೆ ಊಟ, ನಿದ್ರೆ ಬೇಕಾಗಿರಲಿಲ್ಲ.

ಸುಚೇತಸಿಂಹನನ್ನು ಕರೆದುಕೊಂಡು ದಿನವೆಲ್ಲ ದುರ್ಗ ಸುತ್ತಿ ತಿರುಗಿದ. ಸುಚೇತ ಎಲ್ಲಿ ಯಾವ ಬಗೆಯ ಆಶ್ಚರ್ಯವನ್ನೂ ವ್ಯಕ್ತಪಡಿಸುತಿರಲಿಲ್ಲವೋ ಅಲ್ಲೆಲ್ಲ ಖೂಡಾಸಾಹೇಬ ಸ್ವತಃ—ಶಾಭಾಸ್, ಶಾಭಾಸ್—ಎಂದು ತನ್ನ ಉತ್ಸಾಹವನ್ನು ರಜಪೂತವೀರನ ಹೃದಯದಲ್ಲಿ ಸಂಚರಿಸುವಂತೆ ಮಾಡಲು ಯತ್ನಿಸುವನು. ವಿಶೇಷವಾಗಿ ದುರ್ಗದ ಕೋಟೆಯ ನಿರ್ಮಾಣದ ವಿಷಯವಾಗಿ ಆತನಲ್ಲಿ ಬಹಳ ಉತ್ಸಾಹ ಹುಟ್ಟಿಸಬೇಕಾಯಿತು. ದುರ್ಗದ ಕೋಟೆ ಹೇಗೆ ಚಲನೆಯಿಲ್ಲದುದೋ ಸುಚೇತಸಿಂಹ ಅದನ್ನೂ ಮೀರಿದವನು. ಆತನ ಮುಖದಲ್ಲಿ ಯಾವ ರೀತಿಯ ಭಾವವೂ ವ್ಯಕ್ತಪಡಲಿಲ್ಲ. ಖೂಡಾಸಾಹೇಬ ತಿರುಗಿ ಬಳಸಿ ಆತನಿಗೆ ಒಮ್ಮೆ ದುರ್ಗದ ಕೋಟೆಯ ಎಡಕ್ಕೆ, ಒಮ್ಮೆ ಬಲಕ್ಕೆ, ಒಮ್ಮೆ ಮೇಲಕ್ಕೆ, ಒಮ್ಮೆ ಕೆಳಕ್ಕೆ ಕರೆದುಕೊಂಡು ಬರುವನು. ಒಂದೇ ಸಮನೆ 'ಏನಾಶ್ಚರ್ಯ' ಎಂದು ಹೇಳತೊಡಗುವನು. ಆದರೆ ಯಾವುದಕ್ಕೂ ಸುಚೇತಸಿಂಹನ ಹೃದಯ-ದುರ್ಗ ಆಕ್ರಮಿಸಲಾರ. ಕಡೆಗೆ ಸಂಜೆಯ ಹೊತ್ತಿಗೆ ದಣಿದು ಸುಚೇತಸಿಂಹ—ನಾನು ಭರತಪುರದ ಕೋಟೆ ನೋಡಿರುವೆ, ಬೇರಾವುದೂ ನನ್ನ ದೃಷ್ಟಿಗೆ ಬೀಳದು—ಎಂದ.

ಖೂಡಾಸಾಹೇಬ ಎಂದೂ ಯಾರೊಡನೆಯೂ ವಾದ ಮಾಡುವವನಲ್ಲ. ಬಹಳವಾಗಿ ಮನಗುಂದಿ 'ಇದ್ದೀತು, ಇದ್ದೀತು, ಹಾಗೂ ಹೇಳಬಹುದು' ಎಂದ.

ನಿಟ್ಟುಸಿರುಬಿಟ್ಟು ದುರ್ಗಕ್ಕೆ ಸಂಬಂಧಪಟ್ಟ ಚರ್ಚೆಯನ್ನು ಕೈಬಿಟ್ಟ. ವಿಕ್ರಮಸಿಂಹನ ಪೂರ್ವ ಪುರುಷ ದುರ್ಗಾಸಿಂಹನ ವಿಷಯ ಮಾತನಾಡಲು ಮೊದಲುಮಾಡಿದ. ಅವನು ಹೇಳಿದ—"ದುರ್ಗಾಸಿಂಹನಿಗೆ ಮೂವರು ಗಂಡು ಮಕ್ಕಳಿದ್ದರು. ಹಿರಿಯಮಗ ಚಿತ್ರಸಿಂಹನಿಗೆ ಒಂದು ವಿಚಿತ್ರವಾದ ಅಭ್ಯಾಸವಿತ್ತು. ಅವನು ಪ್ರತಿದಿನವೂ ಬೆಳಗ್ಗೆ ಸುಮಾರು ಅರ್ಧ ಸೇರು ಕಡಲೆಯನ್ನು ಹಾಲಿನಲ್ಲಿ ಬೇಯಿಸಿ ತಿನ್ನುವನು. ಅವನ ಮೈಯೂ ಹಾಗಿತ್ತು. "ಒಳ್ಳೆಯದಯ್ಯಾ, ನೀವು ಭರತಪುರದ ಕೋಟೆಯ ವಿಷಯ ಹೇಳಿದಿರಲ್ಲ, ಅದು ಅತಿ ದೊಡ್ಡ ಕೋಟೆಯಾಗಿರಬಹುದು. ಆದರೆ ಬ್ರಹ್ಮವೈವರ್ತ ಪುರಾಣದಲ್ಲಿ ಅದರ ಹೆಸರೇ ಇಲ್ಲವಲ್ಲ."

ಸುಚೇತಸಿಂಹ ನಕ್ಕು—“ಅದರಿಂದ ಕೆಲಸಕ್ಕೆ ಯಾವ ತೊಂದರೆಯೂ ಆಗದು—” ಎಂದ.

ಖೂಡಾಸಾಹೇಬ ಒಣನಗೆ ನಕ್ಕು ಹೇಳಿದ “ಹ್ಞ, ಹ್ಞ, ಹ್ಞ, ಅದು ಸರಿ, ಅದು ಸರಿ, ಅದು ಸರಿ, ಯಾರು ಬಲ್ಲರು. ತ್ರಿಪುರದ ಗಡವೂ ದೊಡ್ಡದಲ್ಲದೆ ಇಲ್ಲ—ಆದರೆ ವಿಜಯಗಡ”.

ಸುಚೇತಸಿಂಹ—“ತ್ರಿಪುರ ಯಾವ ಪ್ರಾಂತ್ಯದಲ್ಲಿ ?”

ಖೂಡಾಸಾಹೇಬ—“ಅದು ದೊಡ್ಡ ಪ್ರಾಂತ್ಯ, ಅಷ್ಟು ಮಾತೇಕೆ. ಅಲ್ಲಿಯ ರಾಜಪುರೋಹಿತರು ನಮ್ಮ ಗಡದಲ್ಲಿ ಅತಿಥಿಯಾಗಿರುವರು. ಅವರ ಬಾಯಿಂದಲೇ ನೀವು ಎಲ್ಲವನ್ನೂ ಕೇಳಬಹುದು.”

ಆದರೆ ಎಲ್ಲೆಲ್ಲಿ ಹುಡುಕಿಯೂ ಈ ದಿನ ಬ್ರಾಹ್ಮಣ ಕಣ್ಣಿಗೆ ಬೀಳಲಿಲ್ಲ. ಖೂಡಾಸಾಹೇಬನ ಜೀವ ಆ ಬ್ರಾಹ್ಮಣನಿಗಾಗಿ ಗೋಳಿಡತೊಡಗಿತು. ಅವನು ಮನದಲ್ಲಿ—'ಈ ರಾಜಪೂತ ಹಳ್ಳಿಗನಿಗಿಂತ ಆ ಬ್ರಾಹ್ಮಣ ಎಷ್ಟೋ ಮೇಲು' ಎಣಿದುಕೊಂಡ. ಸುಚೇತಸಿಂಹನ ಹತ್ತಿರ ನೂರು ಬಾಯಲ್ಲಿ ರಘುಪತಿಯನ್ನು ಹೊಗಳಲಾರಂಭಿಸಿದ. ವಿಜಯಗಡದ ವಿಷಯದಲ್ಲಿ ರಘುಪತಿಯ ಅಭಿಪ್ರಾಯವೇನೆಂಬುದನ್ನೂ ವ್ಯಕ್ತಪಡಿಸಿದ.

## ೨೪

ಖೂಡಾಸಾಹೇಬನ ಕೈಯಿಂದ ಬಿಡುಗಡೆ ಹೊಂದಲು ಸುಚೇತಸಿಂಹನಿಗೆ ಅಷ್ಟು ಕಷ್ಟವಾಗಲಿಲ್ಲ. ನಾಳೆ ಬೆಳಗ್ಗೆ ಬಂದಿಗಳೊಡನೆ ಸಾಮ್ರಾಟನ ಸೈನಿಕರ ಪಯಣದ ದಿನವೆಂದು ತೀರ್ಮಾನವಾಗಿತ್ತು. ಸೈನಿಕರು ಪ್ರಯಾಣದ ಸಿದ್ಧತೆಯಲ್ಲಿ ತೊಡಗಿದರು. ಬಂದೀಖಾನೆಯಲ್ಲಿ ಶಾಸೂಜ ಅತ್ಯಂತ ದುಃಖದಿಂದ ತನ್ನಲ್ಲೆ—ಇವರಿಗೆಷ್ಟು ಅವಿಧೇಯತೆ, ಶಿಬಿರದಿಂದ ನನ್ನ ಹುಕ್ಕಾ ತಂದುಕೊಡಬೇಕೆನ್ನುವದೂ ಇವರುಗಳಿಗೆ ತೋರಲಿಲ್ಲವಲ್ಲ—ಎಂದು ಅಂದುಕೊಂಡ.

ವಿಜಯಗಡದ ಬೆಟ್ಟದ ಕೆಳಗೆ ಒಂದು ಆಳವಾದ ಕಾಲುವೆ. ಆ ಕಾಲುವೆಯ ದಡದಲ್ಲಿ ಒಂದೆಡೆ ಸಿಡಿಲುಬಡಿದ ಅರಳಿ ಮರದ ಮೋಟು.

ಈ ಪೋಟುಪುರದ ಹತ್ತಿರ ರಘುಪತಿ ನಡುರಾತ್ರಿಯಲ್ಲಿ ಮುಳುಗುಹಾಕಿ ಕಣ್ಮರೆಯಾದ.

ಗುಪ್ತವಾಗಿ ದುರ್ಗದೊಳಕ್ಕೆ ಹೋಗುವ ಸುರಂಗದಾರಿಯ ಪ್ರವೇಶ ಮುಖ ಈ ಕಾಲುವೆಯ ಆಳವಾದ ಭಾಗದಲ್ಲೆ. ಈ ದಾರಿಯನ್ನು ದಾಟಿ ಸುರಂಗದ ಹತ್ತಿರಹೋಗಿ ಕೆಳಗಡೆಯಿಂದ ಬಲವಾಗಿ ತಳ್ಳಿದರೆ ಒಂದು ಕಲ್ಲು ಮೇಲೇಳುವದು. ಮೇಲುಗಡೆಯಿಂದ ಹೇಗೂ ಅದನ್ನು ಎತ್ತಲು ಸಾಧ್ಯ ವಿಲ್ಲ. ದುರ್ಗದ ಒಳಗಡೆ ಇರುವವರು ಈ ದಾರಿಯಿಂದ ಹೊರಬರಲಾರರು.

ಬಂದೀಖಾನೆಯ ಮಂಚದ ಮೇಲೆ ಸೂಜ ಮಲಗಿರುವನು. ಮಂಚ ವನ್ನು ಬಿಟ್ಟರೆ ಬೇರಾವ ಹಾಸಿಗೆಯೂ ಅಲ್ಲಿಲ್ಲ. ದೀಪವೊಂದು ಉರಿಯು ತ್ತಿರುವದು. ಆಕಸ್ಮಿಕವಾಗಿ ಕೋಠಡಿಯೊಳಗೆ ಕಿಂಡಿಯಿಂದ ಬೆಳಕು ಬಂದಿತು. ಸ್ವಲ್ಪ ಸ್ವಲ್ಪವಾಗಿ ರಘುಪತಿ ತಲೆಯೆತ್ತಿ ಪಾತಾಳದಿಂದ ಮೇಲಕ್ಕೆ ಬಂದ. ಅವನ ಮೈಯೆಲ್ಲ ಒದ್ದೆಯಾಗಿತ್ತು. ನೆನೆದ ಬಟ್ಟೆ ಯಿಂದ ನೀರಿನಕೋಡಿ ಹರಿಯುತ್ತಿತ್ತು. ರಘುಪತಿ ಮೆಲ್ಲ ಮೆಲ್ಲನೆ ಸೂಜ ನನ್ನು ಮುಟ್ಟಿದ.

ಸೂಜ ಬೆಚ್ಚಿಬಿದ್ದು ಕಣ್ಣು ಉಜ್ಜಿಕೊಳ್ಳುತ್ತ ಕ್ಷಣಹೊತ್ತು ಕುಳಿತಿದ್ದ. ಅನಂತರ ಬೇಸರ ತುಂಬಿದ ದನಿಯಲ್ಲಿ "ಏನು ಕಾಟ, ಈ ಜನ ನನ್ನನ್ನು ರಾತ್ರಿಯಲ್ಲೂ ನೆಮ್ಮದಿಯಾಗಿ ನಿದ್ರೆಮಾಡಗೊಡರಲ್ಲ. ನಿಮ್ಮ ವ್ಯವಹಾರ ನನಗೆ ಆಶ್ಚರ್ಯವಾಗಿರುವುದು—" ಎಂದ.

ರಘುಪತಿ ಮೆಲುದನಿಯಲ್ಲಿ ಹೇಳಿದ—ಶಹಜಾದಾ, ಏಳೋಣವಾಗಲಿ ನಾನು ಆ ಬ್ರಾಹ್ಮಣ. ನನ್ನನ್ನು ಜ್ಞಾಪಿಸಿಕೊಳ್ಳಿರಿ. ಮುಂದೆಯೂ ನನ್ನನ್ನು ನೆನೆದುಕೊಳ್ಳುವಿರಿ.

ಮರುದಿನ ಬೆಳಗ್ಗೆ ಸಾಮ್ರಾಟನ ಸೈನಿಕರು ಪ್ರಯಾಣಕ್ಕೆ ಸಿದ್ಧ ರಾದರು. ಸೂಜನನ್ನು ನಿದ್ರೆಯಿಂದ ಎಬ್ಬಿಸಲು ರಾಜಾ ಜಯಸಿಂಹ ಸ್ವತಃ ಬಂದೀಖಾನೆಗೆ ಬಂದು ಸೇರಿದ. ಸೂಜ ಆಗಲೂ ಹಾಸಿಗೆ ಬಿಟ್ಟು ಏಳ ದಿರುವುದನ್ನು ಕಂಡ. ಹತ್ತಿರ ಹೋಗಿ ಮುಟ್ಟಿದ. ನೋಡಿದರೆ ಸೂಜ

ಅಲ್ಲ. ಅವನ ಬಟ್ಟೆ ಬಿದ್ದಿದೆ. ಸೂಜ ಇಲ್ಲ. ಕೋಣೆಯ ನೆಲದ ನಡುವೆ ಸುರಂಗದ ಬಿಲ. ಅದರ ಕಲ್ಲುಮುಚ್ಚಳ ಮೇಲೆದ್ದು ಬಿದ್ದಿರುವದು.

ಬಂದಿ ಓಡಿಹೋದ ಸಂಗತಿ ದುರ್ಗದಲ್ಲಿ ಜನಜನಿತವಾಯಿತು. ಹುಡುಕುವುದಕ್ಕಾಗಿ ನಾಲ್ಕೂ ದಿಕ್ಕಿಗೆ ಜನ ಓಡಿತು. ರಾಜಾ ವಿಕ್ರಮ ಸಿಂಹನ ತಲೆ ತಗ್ಗಿತು. ಬಂದಿ ಯಾವ ಬಗೆಯಲ್ಲಿ ಓಡಿಹೋದನೆಂದು ವಿಚಾರಣೆ ನಡೆಸಲು ಸಭೆ ಸೇರಿತು.

ಖೂಡಾಸಾಹೇಬನ ಆ ಗರ್ವ ಹಿಡಿದ ಸಂತೋಷಭಾವ ಎಲ್ಲಿಗೋ ಹೋಯಿತು. ಅವನು ಹುಚ್ಚನಂತೆ 'ಬ್ರಾಹ್ಮಣ ಎಲ್ಲಿ, ಬ್ರಾಹ್ಮಣ ಎಲ್ಲಿ,' ಎಂದು ರಘುಪತಿಯನ್ನು ಹುಡುಕಾಡತೊಡಗಿದ. ಬ್ರಾಹ್ಮಣ ಎಲ್ಲೂ ಇಲ್ಲ. ರುಮಾಲು ಕಳಚಿ ಖೂಡಾಸಾಹೇಬ ಕ್ಷಣಕಾಲ ತಲೆಯಮೇಲೆ ಕೈಯಿಟ್ಟು ಕುಳಿತಿದ್ದ. ಸುಚೇತಸಿಂಹ ಮಗ್ಗುಲಲ್ಲಿ ಬಂದು ಕುಳಿತು "ಖೂಡಾಸಾಹೇಬ, ಏನು ವಿಚಿತ್ರ ಸಂಗತಿ, ಇದೇನು ಭೂತ ಚೇಷ್ಟೆ" ಎಂದು ಕೇಳಿದ. ಖೂಡಾ ಸಾಹೇಬ ದುಃಖದಿಂದ ತಲೆಯಲ್ಲಾಡಿಸಿ "ಇಲ್ಲ, ಭೂತದ ಚೇಷ್ಟೆಯಲ್ಲ, ಸುಚೇತಸಿಂಹ. ಇದೊಬ್ಬ ಮುಟ್ಠಾಳ ಮುದುಕನ ಚೇಷ್ಟೆ; ಮತ್ತೊಬ್ಬ ನಂಬಿಕೆದ್ರೋಹಿ ನಾಸ್ತಿಕನ ಚೇಷ್ಟೆ" ಎಂದ. ಸುಚೇತಸಿಂಹ ಆಶ್ಚರ್ಯ ದಿಂದ ಹೇಳಿದ—"ನಿಮಗೆ ಅವರ ಗುರುತಿದ್ದರೆ ಅವರನ್ನು ಬಂಧಿಸುವು ದಿಲ್ಲವೇಕೆ?"

"ಅವರಲ್ಲಿ ಒಬ್ಬ ಓಡಿಹೋದ. ಇನ್ನೊಬ್ಬನನ್ನು ಬಂಧಿಸಿ ರಾಜ ಸಭೆಗೆ ಕರೆದುಕೊಂಡು ಹೋಗುವೆ" ಎಂದು ಖೂಡಾಸಾಹೇಬ ಹೇಳಿದ. ಹೀಗೆಂದು ರುಮಾಲು ಹಾಕಿಕೊಂಡು ರಾಜ ಸಭೆಯ ಉಡುಪು ಧರಿಸಿ ಕೊಂಡ.

ಸಭೆಯಲ್ಲಿ ಆಗ ಕಾವಲುಗಾರರ ಹೇಳಿಕೆ ಸಂಗ್ರಹಿಸುತ್ತಿದ್ದರು. ಖೂಡಾಸಾಹೇಬ ತಲೆ ಬಾಗಿಸಿಕೊಂಡು ಸಭೆಯನ್ನು ಪ್ರವೇಶಿಸಿದ. ವಿಕ್ರಮಸಿಂಹನ ಕಾಲ ಬಳಿ ಕತ್ತಿ ಬಿಚ್ಚಿ ಇಟ್ಟು "ನನ್ನನ್ನು ಬಂದಿಯನ್ನಾಗಿ ಮಾಡಲು ಅಪ್ಪಣೆ ಕೊಡಿ. ನಾನು ಅಪರಾಧಿ" ಎಂದ.

ರಾಜ ವಿಸ್ಮಿತನಾಗಿ—" ಖೂಡಾಸಾಹೇಬ—ಸಂಗತಿಯೇನು ? " ಎಂದ.

ಖೂಡಾಸಾಹೇಬನೆಂದ—ಅದೇ ಬ್ರಾಹ್ಮಣ, ಇದೆಲ್ಲ ಆ ಬಂಗಾಳಿ ಬ್ರಾಹ್ಮಣನ ಕೆಲಸ.

ರಾಜಾ ಜಯಸಿಂಹನು ' ನೀವಾರು ? ' ಎಂದು ವಿಚಾರಿಸಿದ.

ಖೂಡಾಸಾಹೇಬನೆಂದ—" ನಾನು ವಿಜಯಗಡದ ಮುದುಕ ಖೂಡಾ ಸಾಹೇಬ ".

ಜಯಸಿಂಹ—" ನೀನೇನು ತಪ್ಪುಮಾಡಿದೆ ? "

ಖೂಡಾಸಾಹೇಬ—"ನಾನು ವಿಜಯಗಡದ ಗುಟ್ಟನ್ನು ರಟ್ಟುಮಾಡಿ ವಿಶ್ವಾಸಘಾತುಕತೆಮಾಡಿರುವೆ. ನಾನು ಸಂಪೂರ್ಣ ಅರಿವಿಲ್ಲದವನಂತೆ ನಂಬಿ ಬಂಗಾಳಿ ಬ್ರಾಹ್ಮಣನಿಗೆ ಸುರಂಗದ ಹಾದಿಯ ವಿಷರ ತಿಳಿಸಿದೆ—"

ವಿಕ್ರಮಸಿಂಹನು ಹಠಾತ್ತಾಗಿ ಉರಿದೆದ್ದು—ಖಡ್ಗಸಿಂಹ—ಎಂದನು.

ಖೂಡಾಸಾಹೇಬ ಬೆಚ್ಚಿದ. ತನ್ನ ಹೆಸರು ಖಡ್ಗಸಿಂಹ ಎನ್ನುವುದು ಪ್ರಾಯಶಃ ಅವನಿಗೆ ಮರೆತೇಹೋಗಿತ್ತು.

ವಿಕ್ರಮಸಿಂಹನೆಂದ—" ಖಡ್ಗಸಿಂಹ, ಇಷ್ಟು ಕಾಲದ ಬಳಿಕ ನೀನು ಪುನಃ ಮಗುವಾದೆಯೇನು ? "

ಖೂಡಾಸಾಹೇಬ ತಲೆ ಬಗ್ಗಿಸಿ ತೆಪ್ಪನಿದ್ದ.

ವಿಕ್ರಮಸಿಂಹ—" ಖೂಡಾಸಾಹೇಬ, ನೀನು ಈ ಕೆಲಸ ಮಾಡಿದೆಯಾ ! ಇಂದು ನಿನ್ನ ಕೈಯಿಂದ ವಿಜಯಗಡಕ್ಕೆ ಅವಮಾನ ಬಂದಿತು "–

ಖೂಡಾಸಾಹೇಬ ಮಾತಿಲ್ಲದೆ ನಿಂತಿದ್ದ. ಅವನ ಕೈ ಥರಥರ ನಡುಗುತಿತ್ತು. ನಡುಗುವ ಕೈಯಿಂದ ಹಣೆ ಮುಟ್ಟಿಕೊಂಡು " ಅದೃಷ್ಟ " ಎಂದ.

ವಿಕ್ರಮಸಿಂಹನೆಂದ—" ನಮ್ಮ ದುರ್ಗದಿಂದ ದಿಲ್ಲೀಶ್ವರನ ಶತ್ರು ಓಡಿಹೋದ. ನೀನು ನನ್ನನ್ನು ದಿಲ್ಲೀಶ್ವರನ ಬಳಿ ಅಪರಾಧಿಯನ್ನಾಗಿ ಮಾಡಿರುವೆ, ತಿಳಿಯಿತೆ."

"ನಾನೊಬ್ಬನೇ ಒಬ್ಬ ಅಪರಾಧಿ. ಮಹಾರಾಜರು ಅಪರಾಧಿ ಎಂದು ದಿಲ್ಲೀಶ್ವರ ನಂಬುವುದಿಲ್ಲ." ಎಂದು ಖೂಡಾಸಾಹೇಬ ಹೇಳಿದ.

ವಿಕ್ರಮಸಿಂಹ ರೋಷದಿಂದ ಹೇಳಿದ—"ನೀನು ಯಾರು! ನಿನ್ನ ಸಂಗತಿ ದಿಲ್ಲೀಶ್ವರನಿಗೆ ಏನು ಗೊತ್ತು. ನೀನು ನನ್ನ ಪ್ರಜೆ. ಅದರಿಂದ ನಾನು ನನ್ನ ಕೈಯಿಂದಲೇ ಬಂದಿಯ ಬಂಧನ ಕಳಚಿದಂತಾಯಿತು."

ಖೂಡಾಸಾಹೇಬ ಉತ್ತರ ಕೊಡಲಾರದೆ ನಿಂತಿದ್ದ. ಅವನು ಇನ್ನು ಕಣ್ಣೀರನ್ನು ತಡೆಯಲಾರದೆ ಹೋದ.

"ನಿನಗೇನು ದಂಡನೆ ವಿಧಿಸಲಿ?" ಎಂದು ವಿಕ್ರಮಸಿಂಹ ಕೇಳಿದ.

ಖೂಡಾಸಾಹೇಬ—"ಮಹಾರಾಜರ ಇಷ್ಟ."

ವಿಕ್ರಮಸಿಂಹ—"ನೀನು ಮುದುಕ. ನಿನಗೆ ಹೆಚ್ಚಿನ ಶಿಕ್ಷೆ ಏನು ವಿಧಿಸಲಾದೀತು. ನಿನಗೆ ದೇಶಭ್ರಷ್ಟ ದಂಡನೆಯೇ ಸಾಕು"

ಖೂಡಾಸಾಹೇಬ—ವಿಕ್ರಮಸಿಂಹನ ಕಾಲುಕಟ್ಟಿಕೊಂಡು ಹೇಳಿದ–ವಿಜಯಗಡದಿಂದ ದೇಶಭ್ರಷ್ಟತೆಯೆ!! ಇಲ್ಲ, ಮಹಾರಾಜ, ನಾನು ಮುದುಕ. ನನ್ನ ಬುದ್ಧಿ ಕೆಟ್ಟಿದೆ. ನನ್ನನ್ನು ವಿಜಯಗಡದಲ್ಲೆ ಸಾಯಗೊಡಿ. ಮರಣದಂಡನೆ ವಿಧಿಸಿರಿ. ಈ ಮುದಿ ವಯಸ್ಸಿನಲ್ಲಿ ನಾಯಿ-ನರಿಗಳಂತೆ ನನ್ನನ್ನು ವಿಜಯಗಡದಿಂದ ಅಟ್ಟಬೇಡಿ."

ರಾಜಾ ಜಯಸಿಂಹ—ಮಹಾರಾಜ, ನನ್ನ ಬೇಡಿಕೆಯಂತೆ ಈತನ ಅಪರಾಧವನ್ನು ಕ್ಷಮಿಸಿರಿ. ನಾನು ಸಮ್ರಾಟರಿಗೆ ಎಲ್ಲ ಸಂಗತಿಯನ್ನೂ ವಿವರಿಸುವೆ." ಎಂದ.

ಖೂಡಾಸಾಹೇಬನಿಗೆ ಕ್ಷಮೆಯಾಯಿತು. ಸಭೆಯಿಂದ ಹೊರಗೆ ಬರುವಾಗ ಖೂಡಾಸಾಹೇಬ ನಡುನಡುಗಿ ಬಿದ್ದ. ಆ ದಿನದಿಂದ ಖೂಡಾಸಾಹೇಬನನ್ನು ಯಾರೂ ಆಷ್ಟಾಗಿ ಕಾಣಲಿಲ್ಲ. ಅವನು ಮನೆ ಬಿಟ್ಟು ಹೊರಗೆ ಬರುತ್ತಿರಲಿಲ್ಲ. ಅವನ ಬೆನ್ನೆಲುಬು ಮುರಿದು ಹೋದಂತಾಯಿತು.

೨೫

ಗುಜೂರ್‌ಪಾಡ ಬ್ರಹ್ಮಪುತ್ರದ ದಡದಲ್ಲಿ ಕುಗ್ರಾಮ. ಒಬ್ಬ ಪುಟ್ಟ ಜಮೀನುದಾರನಿರುವನು. ಹೆಸರು ಪೀತಾಂಬರರಾಯ. ಪ್ರಜೆಗಳು ಹೆಚ್ಚಾಗಿಲ್ಲ. ಪೀತಾಂಬರ ಅವನ ಪುರಾತನ ಚಂಡೀಮಂಟಪದಲ್ಲಿ ಕುಳಿತು ತನ್ನನ್ನು ರಾಜ ಎಂದು ಹೇಳಿಕೊಂಡ. ಅವನ ಪ್ರಜೆಗಳೂ ಅವನನ್ನು ರಾಜ ಎಂದೇ ಕರೆದರು. ಅವನ ರಾಜತ್ವದ ಮಹಿಮೆ ಆ ಮಾವು ಸೀಬೆ ಗಿಡಗಳ ತೋಟದಿಂದ ಕೂಡಿದ್ದ ಕುಗ್ರಾಮದೊಳಗೆ ಮಾತ್ರ ವಿರಾಜಿಸುತ್ತಿತ್ತು. ಅವನ ಕೀರ್ತಿ ಈ ಗ್ರಾಮದ ಪೊದರುಗಳಲ್ಲಿ ಪ್ರತಿಧ್ವನಿಯಾಗಿ ಈ ಗ್ರಾಮದ ಎಲ್ಲೆಯೊಳಗೇ ವಿಲೀನವಾಗುವದು. ಜಗತ್ತಿನ ದೊಡ್ಡ ದೊಡ್ಡ ರಾಜ ಮಹಾರಾಜರ ಹಿರಿಯ ಸಾಹಸಗಳು ಈ ನೆರಳು ಕವಿದ ಗೂಡಿನೊಳಕ್ಕೆ ಪ್ರವೇಶಿಸುತ್ತಿರಲಿಲ್ಲ. ಕೇವಲ ತೀರ್ಥಸ್ನಾನದ ಉದ್ದೇಶದಿಂದ ನದೀತೀರದಲ್ಲಿ ತ್ರಿಪುರದ ರಾಜರ ದೊಡ್ಡದೊಂದು ಅರಮನೆ ಇತ್ತು. ಆದರೆ ಬಹಳ ಕಾಲದಿಂದ ಯಾವ ರಾಜರೂ ಸ್ನಾನಕ್ಕಾಗಿ ಬಂದಿರಲಿಲ್ಲ. ತ್ರಿಪುರದ ರಾಜರ ವಿಷಯವಾಗಿ ಹಳ್ಳಿಗಳಲ್ಲಿ ಒಂದು ಅಸ್ಪಷ್ಟ ಹೇಳಿಕೆಯಿತ್ತು.

ಭಾದ್ರಪದಮಾಸದಲ್ಲಿ ಒಂದು ದಿನ ತ್ರಿಪುರದ ರಾಜಕುಮಾರನೊಬ್ಬ ನದೀತೀರದ ಪುರಾತನ ಅರಮನೆಯಲ್ಲಿ ವಾಸಕ್ಕಾಗಿ ಬರುವನೆಂದು ಗ್ರಾಮಕ್ಕೆ ಸುದ್ದಿ ಬಂದಿತು. ಕೆಲವು ದಿನಗಳ ಅನಂತರ ದೊಡ್ಡ ದೊಡ್ಡ ರುಮಾಲು ಸುತ್ತಿದ ಜನ ಬಂದು ಅರಮನೆಯಲ್ಲಿ ಬಹಳ ಕೋಲಾಹಲ ಮಾಡಿದರು. ಆ ಬಳಿಕ ಸುಮಾರು ಒಂದು ವಾರ ಕಳೆಯಲು ಆನೆ, ಕುದುರೆ, ಕಾಲಾಳುಗಳೊಡನೆ ಸ್ವತಃ ನಕ್ಷತ್ರರಾಯ ಗುಜೂರ್‌ಪಾಡಾ ಗ್ರಾಮಕ್ಕೆ ಬಂದು ಸೇರಿದ. ಆಡಂಬರ ನೋಡಿ ಹಳ್ಳಿಗರ ಮುಖದಲ್ಲಿ ನೊಣ ಆಡಲಿಲ್ಲ. ಪೀತಾಂಬರನನ್ನು ಇಷ್ಟುಕಾಲ ರಾಜನೆಂದು ಭಾವಿಸಿದ್ದರು. ಆದರೆ ಇಂದು ಯಾರಿಗೂ ಹಾಗೆ ತೋರಲಿಲ್ಲ. ನಕ್ಷತ್ರರಾಯನನ್ನು ನೋಡಿ ಎಲ್ಲರೂ ಒಮ್ಮತದಿಂದ 'ಹೌದು, ರಾಜಪುತ್ರ ಹೀಗೆಯೇ ಇರುವುದು' ಎಂದರು.

ಹೀಗೆ ಪೀತಾಂಬರ ತನ್ನ ಗಾರೆಯ ಜಗುಲಿ ಮತ್ತು ಚಂಡೀ ಮಂಟಪ ದಲ್ಲೇ ಸಂಪೂರ್ಣವಾಗಿ ಮರೆಯಾದ. ಆದರೂ ಅವನ ಆನಂದಕ್ಕೆ ಎಲ್ಲೆ ಮೀರಿತು. ನಕ್ಷತ್ರರಾಯನನ್ನು ಅವನು ಬಹಳ ದೊಡ್ಡ ರಾಜನೆಂದು ತಿಳಿದು ತನ್ನ ಕೆಲಸಕ್ಕೆ ಬಾರದ ರಾಜಮಹಿಮೆಯನ್ನು ನಕ್ಷತ್ರರಾಯನ ಪಾದಕ್ಕರ್ಪಿಸಿ ಅವನು ಬಹಳ ಸುಖಿಯಾದ. ನಕ್ಷತ್ರರಾಯ ಒಮ್ಮೆ ಆನೆಯ ಮೇಲೆ ಕುಳಿತು ಹೊರಗೆ ಬಂದರೆ ಅವನು ತನ್ನ ಪ್ರಜೆಗಳನ್ನು ಕರೆದು "ರಾಜನನ್ನು ನೋಡುವಿರಾ? ಅದೋ ನೋಡಿ" ಎಂದು ಹೇಳುವನು. ಮೀನು, ಕಾಯಿಪಲ್ಯ ಮೊದಲಾದ ಆಹಾರ ಸಾಮಗ್ರಿಗಳನ್ನು ಕಾಣಿಕೆಯಾಗಿ ತೆಗೆದುಕೊಂಡು ಪೀತಾಂಬರ ಪ್ರತಿದಿನವೂ ನಕ್ಷತ್ರರಾಯನನ್ನು ನೋಡಲು ಬರುವನು.—ನಕ್ಷತ್ರರಾಯನ ಕರುಣ ಮುಖ ನೋಡಿ ಸ್ನೇಹ ಜೀವಂತ ವಾಗುವದು. ನಕ್ಷತ್ರರಾಯ ಗ್ರಾಮದ ರಾಜನಾದ. ಪೀತಾಂಬರ ಪ್ರಜೆ ಗಳ ನಡುವೆ ಸೇರಿಹೋದ.

ಪ್ರತಿದಿನವೂ ಮೂರು ಹೊತ್ತು ನಗಾರಿ ಮೊಳಗತೊಡಗಿತು. ಗ್ರಾಮದ ಬೀದಿಯಲ್ಲಿ ಆನೆ ಕುದುರೆ ನಡೆಯಲಾರಂಭಿಸಿದುವು. ಅರಮನೆಯ ಬಾಗಿಲಲ್ಲಿ ತೆರೆದ ಕತ್ತಿಯ ಮಿಂಚು ಕುಣಿಯಲು ಮೊದಲಾಯಿತು. ಅಂಗಡಿ, ಸಂತೆ ಕೂಡಿತು. ಪೀತಾಂಬರನೂ ಅವನ ಪ್ರಜೆಗಳೂ ಪುಳಕಿತರಾದರು. ನಕ್ಷತ್ರರಾಯ ಈ ಹೊರದೇಶದ ರಾಜನಾಗಿ ಎಲ್ಲ ದುಃಖವನ್ನೂ ಮರೆತ. ಇಲ್ಲಿ ರಾಜತ್ವದ ಹೊರೆ ಇಲ್ಲದಿದ್ದರೂ ರಾಜತ್ವದ ಸುಖ ಸಂಪೂರ್ಣವಾಗಿತ್ತು. ಇಲ್ಲಿ ಅವನು ಸಂಪೂರ್ಣ ಸ್ವತಂತ್ರ. ಸ್ವದೇಶದಲ್ಲಿ ಇಷ್ಟು ಹೆಚ್ಚಿನ ಪ್ರತಾಪ ವಿರಲಿಲ್ಲ. ಅಷ್ಟೇ ಅಲ್ಲದೆ ಇಲ್ಲಿ ರಘುಪತಿಯ ನೆರಳೂ ಇಲ್ಲ. ಮನಸಿಗೆ ಸಂತೋಷವಾದಂತೆ ನಕ್ಷತ್ರರಾಯ ವಿಲಾಸದಲ್ಲಿ ತಲ್ಲೀನನಾದ. ಢಾಕಾನಗರದಿಂದ ನಟನಟಿಯರು ಬಂದರು. ನೃತ್ಯ ಸಂಗೀತ ವಾದ್ಯಗಳಲ್ಲಿ ನಕ್ಷತ್ರರಾಯನಿಗೆ ಎಳ್ಳಷ್ಟೂ ಅರುಚಿ ಇರಲಿಲ್ಲ.

ನಕ್ಷತ್ರರಾಯ ತ್ರಿಪುರದ ರಾಜ—ಅನುಷ್ಠಾನವೆಲ್ಲವನ್ನೂ ಆಚರಣೆಗೆ ತಂದ. ಸೇವಕರ ನಡುವೆ ಒಬ್ಬನಿಗೆ ಮಂತ್ರಿಯೆಂದು ಹೆಸರಿಟ್ಟು ಒಬ್ಬನನ್ನು ಸೇನಾಪತಿಯೆಂದು ಕರೆದ. ಪೀತಾಂಬರ ದಿವಾನನೆಂದು ಪ್ರಸಿದ್ಧನಾದ.

ಪದ್ಧತಿಯಂತೆ ರಾಜ ದರ್ಬಾರು ನಡೆಯುವದು. ನಕ್ಷತ್ರರಾಯ ಅತಿವಿರುದನಿಯಲ್ಲಿ ವಿಚಾರಣೆಮಾಡುವನು. ನಕುಡ ಬಂದು "ಮುಖರ ನನ್ನನ್ನು 'ನಾಯಿ' ಎನ್ನುತ್ತಾನೆ" ಎಂದು ದೂರು ಕೊಟ್ಟ. ಅದಕ್ಕೆ ನಿಯಮದಂತೆ ವಿಚಾರಣೆ ನಡೆಯಿತು. ನಾನಾ ಪ್ರಮಾಣಗಳನ್ನು ಸಂಗ್ರಹಿಸಿದ ಬಳಿಕ 'ಮುಖರ ತಪ್ಪಿತಸ್ಥ' ಎಂದು ತೀರ್ಮಾನವಾಯಿತು. ನಕ್ಷತ್ರರಾಯ ಅತ್ಯಂತ ಗಂಭೀರಭಾವದಿಂದ ವಿಚಾರಾಸನದಿಂದ 'ನಕುಡ ಮುಖರನ ಕೆನ್ನೆಗೆ ಎರಡು ಏಟು ಹೊಡೆಯಲಿ' ಎಂದು ಅಪ್ಪಣೆಮಾಡಿದ. ಈ ರೀತಿಯಾಗಿ ಕಾಲ ಸುಖವಾಗಿ ಕಳೆಯತೊಡಗಿತು. ಒಂದೊಂದು ದಿನ ಸ್ವಲ್ಪವೂ ಕೆಲಸವಿಲ್ಲದಿದ್ದರೆ ಹೊಸ ವಿನೋದ ಕಂಡು ಹಿಡಿಯುವದು ಮಂತ್ರಿಗೆ ತೊಂದರೆಗಿಟ್ಟುಕೊಳ್ಳುವದು. ಮಂತ್ರಿ ರಾಜ ಸಭಾಸದರನ್ನು ಕೂಡಿಸಿ ಮಹಾದುಗುಡದಿಂದ ಹೊಸ ಆಟ ಕಂಡು ಹಿಡಿಯಲು ಪ್ರಯತ್ನಿಸುವನು. ದೀರ್ಘಚಿಂತನೆಗಾಗಲಿ, ಚರ್ಚೆಗಾಗಲಿ ಸಮಯವಿಲ್ಲ. ಒಂದೊಂದು ದಿನ ಸೈನ್ಯ ಸಾಮಂತರೊಡನೆ ಪೀತಾಂಬರನ ಚಂಡೀಮಂಟಪದ ಆಕ್ರಮಣ ನಡೆಯುವದು. ಅವನ ಕೊಳದ ಮೀನು, ಅವನ ತೋಟದ ಎಳನೀರು, ಹರಿವೆಸೊಪ್ಪು ಇವನ್ನು ಕೊಳ್ಳೆಹೊಡೆದ ಸಾಮಗ್ರಿಗಳಂತೆ ಮಹಾಕೋಲಾಹಲದೊಡನೆ ವಾದ್ಯ ಬಾರಿಸಿಕೊಂಡು ಅರಮನೆಗೆ ತರಲಾಗುವದು. ಈ ರೀತಿಯ ಆಟಗಳಿಂದ ನಕ್ಷತ್ರರಾಯನ ವಿಷಯದಲ್ಲಿ ಪೀತಾಂಬರನ ಸ್ನೇಹ ಮತ್ತಷ್ಟು ಹೆಚ್ಚುವದು.

ಇಂದು ಅರಮನೆಯಲ್ಲಿ ಬೆಕ್ಕಿನ ಮದುವೆ. ನಕ್ಷತ್ರರಾಯನ ಹತ್ತಿರ ಒಂದು ಹೆಣ್ಣು ಬೆಕ್ಕಿನಮರಿಯಿತ್ತು. ಅದರೊಡನೆ ಊರ ಗೌಡನ ಗಂಡು ಬೆಕ್ಕಿನಮರಿಯ ಮದುವೆ. ಚೂಡಾಮಣಿ ಘಟಕ * ಘಟಕರ ಮೊದಲಿಗನಂತೆ ಮುನ್ನೂರು ವರಹಗಳನ್ನೂ ಶಾಲು ಜೋಡಿಯನ್ನೂ ಪಡೆದಿರುವ. ಎಣ್ಣೆಶಾಸ್ತ್ರ ಮೊದಲಾದ ಪೀಠಿಕೆಯೆಲ್ಲ ಮುಗಿದಿರುವದು. ಈ ದಿನ ಶುಭಲಗ್ನದಲ್ಲಿ ಸಂಜೆಗೆ ಮದುವೆ ನಡೆಯುವುದು. ಈ ಕೆಲವು ದಿನಗಳಿಂದ ಅರಮನೆಯಲ್ಲಿ ಯಾರಿಗೂ ಎಳ್ಳಷ್ಟೂ ವಿರಾಮವಿಲ್ಲ. ಸಂಜೆಯ ಹೊತ್ತಿಗೆ ಹಾದಿ ಬೀದಿಯೆಲ್ಲ ಬೆಳಕಾಯಿತು. ನಗಾರಿ ಮೊಳಗಿತು. ಗೌಡನ ಮನೆಯಿಂದ

---

* ಘಟಕ—ಮದುವೆಯ ಮಧ್ಯಸ್ಥಗಾರ.

ನಾಲ್ಕು ಜನ ಹೊತ್ತ ಪಲ್ಲಕ್ಕಿ ಏರಿ, ಕಿಂಕಾಪಿನ ವಸ್ತ್ರ ಧರಿಸಿ ವರ ಅತಿ-ವ್ಯಾಕುಲ ಸ್ವರದಲ್ಲಿ ಮಿಯಾವ್–ಮಿಯಾವ್ ಎನ್ನುತ್ತ ಮೆರವಣಿಗೆ ಹೊರಟಿತು. ಗೌಡನ ಮನೆಯ ಚಿಕ್ಕ ಹುಡುಗ ಪುಟ್ಟ ಅಳಿಯನ ಗೆಳೆಯನಂತೆ ಅದರ ಕೊರಳ ಹಗ್ಗ ಹಿಡಿದುಕೊಂಡು ಅದರ ಜೊತೆಯಲ್ಲೇ ಬರುತ್ತಿರುವನು. ಹುಲುಧ್ವನಿ, ಶಂಖ ಧ್ವನಿಗಳ ನಡುವೆ ವರ ಬಹಳ ಹೆದರಿತು.

ಪುರೋಹಿತನ ಹೆಸರು ಕೇನಾರಾಮ. ಆದರೆ ನಕ್ಷತ್ರರಾಯ ಅವನಿಗೆ ರಘುಪತಿ ಎಂದು ಹೆಸರಿಟ್ಟಿದ್ದ. ನಕ್ಷತ್ರರಾಯ ನಿಜವಾದ ರಘುಪತಿಗೆ ಹೆದರುತಿದ್ದ. ಇದರಿಂದಲೇ ಸುಳ್ಳು ರಘುಪತಿಯನ್ನು ಕುಚೇಷ್ಟೆಮಾಡಿ ಸಂತೋಷ ಪಡುವನು. ಅಷ್ಟೇಕೆ, ಮಾತು ಮಾತಿಗೂ ಆತನನ್ನು ಹಿಂಸಿಸುವನು. ಬಡ ಕೇನಾರಾಮ ಮಾತಿಲ್ಲದೆ ಎಲ್ಲವನ್ನೂ ಸಹಿಸಿಕೊಳ್ಳುವನು. ಈ ದಿನ ವಿಧಿವಿಡಂಬನೆಯಿಂದ ಕೇನಾರಾಮ ಸಭೆಯಲ್ಲಿರಲಿಲ್ಲ—ಆತನ ಮಗ ಜ್ವರ ವಿಕಾರದಿಂದ ಪ್ರಾಣಬಿಡುತ್ತಿದ್ದ. ನಕ್ಷತ್ರರಾಯ ತಗ್ಗು ದನಿಯಲ್ಲಿ "ರಘುಪತಿ ಎಲ್ಲಿ?" ಎಂದು ಪ್ರಶ್ನಿಸಿದ. ಆಳು 'ಅವರ ಮನೆಯಲ್ಲಿ ಖಾಯಿಲೆ' ಎಂದ. ನಕ್ಷತ್ರರಾಯ ಇಮ್ಮಡಿ ಹೂಂಕರಿಸಿ 'ಕರೆ ಅವನನ್ನು' ಎಂದ. ಜನ ಓಡಿತು. ಅಲ್ಲಿಯವರೆಗೂ ಅಳುವ ಬೆಕ್ಕಿನ ಮುಂದೆ ನೃತ್ಯ ಸಂಗೀತ ನಡೆಯಲಾರಂಭಿಸಿತು. ನಕ್ಷತ್ರರಾಯ 'ಶಹಾನ ಹಾಡಿ' ಎಂದ. ಶಹಾನ ಹಾಡು ಆರಂಭಿಸಿತು.

ಕ್ಷಣ ಹೊತ್ತಿನ ಅನಂತರ ಆಳು ಬಂದು 'ರಘುಪತಿ ಬಂದಿರುವನು' ಎಂದು ಅರಿಕೆಮಾಡಿದ.

ನಕ್ಷತ್ರರಾಯ ರೋಷದಿಂದ "ಕರೆ" ಎಂದ.

ಕೂಡಲೆ ಪುರೋಹಿತ ಅರಮನೆಯೊಳಕ್ಕೆ ಬಂದ. ಪುರೋಹಿತನನ್ನು ಕಂಡೊಡನೆ ನಕ್ಷತ್ರನ ಹುಬ್ಬುಗಂಟು ಎಲ್ಲೋ ಕಣ್ಮರೆಯಾಯಿತು. ಅವನ ಭಾವನೆ ಸಂಪೂರ್ಣವಾಗಿ ಮಾರ್ಪಟ್ಟಿತು. ಅವನ ಮುಖ ಬಣ್ಣಗೆಟ್ಟಿತು. ಹಣೆಯಲ್ಲಿ ಬೆವರು ಕಾಣಿಸಿತು. ಶಹಾನ, ಹಾಗೂ ಸಾರಂಗವೂ ಮೃದಂಗವೂ ಕೂಡಲೆ ನಿಂತಿತು. ಬೆಕ್ಕಿನ ಮಿಯಾವ್ ಮಿಯಾವ್ ಧ್ವನಿ ಮಾತ್ರ ನೀರವ ಕೊಠಡಿಯಲ್ಲಿ ಇಮ್ಮಡಿಸಿತು.

ಇವನು ರಘುಪತಿಯೇ ಸರಿ. ಅದಕ್ಕೆ ಸಂದೇಹವೇ ಇಲ್ಲ. ಉದ್ದವಾದ ಬಡಕಲಾದ ತೇಜಸ್ವಿ. ಹಲವು ದಿನಗಳು ಹಸಿದ ನಾಯಿಯಂತೆ ಕಣ್ಣೆರಡೂ ಜ್ವಲಿಸುತ್ತಿದ್ದುವು. ಧೂಳು ತುಂಬಿದ ಕಾಲುಗಳೆರಡನ್ನೂ ಅವನು ಕಿಂಕಾಪಿನ ರತ್ನಗಂಬಳಿಯ ಮೇಲೆ ಇಟ್ಟು ತಲೆಯೆತ್ತಿ ನಿಂತ. "ನಕ್ಷತ್ರರಾಯ!" ಎಂದು ಕೂಗಿದ.

ನಕ್ಷತ್ರರಾಯ ಸುಮ್ಮನಿದ್ದ.

ರಘುಪತಿಯೆಂದ—"ನೀನು ರಘುಪತಿಯನ್ನು ಕರೆದೆ. ನಾನು ಬಂದೆ.

ನಕ್ಷತ್ರರಾಯ ಅಸ್ಪಷ್ಟಸ್ವರದಲ್ಲಿ "ಠಾಕೂರ್" ಎಂದ.

"ಎದ್ದು ಬಾ" ಎಂದು ರಘುಪತಿ ಹೇಳಿದ.

ನಕ್ಷತ್ರರಾಯ ಮೆಲ್ಲಮೆಲ್ಲನೆ ಸಭೆಯಿಂದ ಎದ್ದು ಹೊರಟ. ಬೆಕ್ಕಿನ ಮದುವೆಯೂ, ಶಹಾನ ರಾಗವೂ ಸಾರಂಗಿಯೂ ಒಟ್ಟಿಗೆ ನಿಂತುಹೋದವು.

## ೨೬

ನಡೆಯುತಿದ್ದುದೇನು? ಎಂದು ರಘುಪತಿ ವಿಚಾರಿಸಿದ. ನಕ್ಷತ್ರರಾಯ ತಲೆ ಕೆರೆದುಕೊಳ್ಳುತ್ತ ನೃತ್ಯನಡೆಯುತಿತ್ತು ಎಂದ.

ರಘುಪತಿ ತಿರಸ್ಕಾರದಿಂದ ಹುಬ್ಬುಗಂಟಿಕ್ಕಿ 'ಛಿ, ಛಿ,' ಎಂದ.

ನಕ್ಷತ್ರರಾಯ ತಪ್ಪಿತಸ್ಥನಂತೆ ನಿಂತಿದ್ದ.

ರಘುಪತಿ—ನಾಳೆ ಇಲ್ಲಿಂದ ಪ್ರಯಾಣ ಹೊರಡಬೇಕು. ಅದಕ್ಕೆ ಸಿದ್ಧತೆ ಮಾಡಿಕೊ—ಎಂದ.

ನಕ್ಷತ್ರರಾಯ—ಎಲ್ಲಿಗೆ ಹೋಗಬೇಕು.

ರಘುಪತಿ—"'ಆ ಮಾತು ಆಮೇಲೆ.' ಒಟ್ಟಿನಲ್ಲಿ ನನ್ನೊಡನೆ ಹೊರಡಬೇಕು."

"ನಾನು ಇಲ್ಲಿ ಸುಖವಾಗಿದೇನೆ" ಎಂದು ನಕ್ಷತ್ರರಾಯ ಹೇಳಿದ.

ರಘುಪತಿ—ಸುಖವಾಗಿರುವೆಯ. ನೀನು ರಾಜ ವಂಶದಲ್ಲಿ ಹುಟ್ಟಿದವ. ನಿಮ್ಮ ಹಿರಿಯರೆಲ್ಲರೂ ರಾಜ್ಯ ಆಳಿರುವರು. ನೀನು ಈ ದಿನ ಈ ಕಗ್ಗಾಡಿನಲ್ಲಿ ಕುಳಿತು ' ಸುಖವಾಗಿರುವೆ ' ಎನ್ನುವೆಯಲ್ಲವೆ.

ರಘುಪತಿ ಕಠಿಣ ಮಾತಿನಿಂದಲೂ ಕ್ರೂರ ನೋಟದಿಂದಲೂ ನಕ್ಷತ್ರರಾಯ ಸುಖವಾಗಿಲ್ಲವೆಂದು ಸ್ಪಷ್ಟಪಡಿಸಿದ. ನಕ್ಷತ್ರರಾಯನೂ ರಘುಪತಿಯ ಮುಖದ ತೇಜಸ್ಸಿನಿಂದ ಸ್ವಲ್ಪಮಟ್ಟಿಗೆ ಆ ಬಗೆಯಲ್ಲಿ ತಿಳಿದುಕೊಂಡ. ಅವನು "ಇನ್ನೇನು ಸುಖ, ಹೀಗಿರುವೆ. ಆದರೆ ಮಾಡುವುದೇನು. ಉಪಾಯ ಏನಿದೆ" ಎಂದ.

ರಘುಪತಿ—ಉಪಾಯ ಬೇಕಾದಷ್ಟಿರುವದು. ಉಪಾಯಕ್ಕೆ ಕೊರತೆ ಇಲ್ಲ. ನಾನು ನಿನಗೆ ಉಪಾಯ ತೋರಿಸಿಕೊಡುವೆ. ನನ್ನೊಡನೆ ಹೊರಡು.

ನಕ್ಷತ್ರರಾಯ—" ಒಮ್ಮೆ ದಿವಾನರನ್ನು ಕೇಳಿನೋಡುವೆ."

ರಘುಪತಿ—ಬೇಕಿಲ್ಲ.

ನಕ್ಷತ್ರರಾಯ—ನನ್ನ ಈ ಎಲ್ಲ ಸಾಮುಗ್ರಿಗಳು—

ರಘುಪತಿ—ಯಾವುದೂ ಬೇಕಿಲ್ಲ.

ನಕ್ಷತ್ರರಾಯ—ಜನ ?

ರಘುಪತಿ—ಅಗತ್ಯವಿಲ್ಲ.

ನಕ್ಷತ್ರರಾಯ—ನನ್ನ ಕೈಯಲ್ಲಿ ಈಗ ಬೇಕಾದಷ್ಟು ರೊಕ್ಕ ಇಲ್ಲ.

ರಘುಪತಿ—" ನನ್ನಲ್ಲಿದೆ. ಇನ್ನು ಈ ಸುಳ್ಳು ನೆಪಗಳನ್ನೆಲ್ಲ ಹೇಳಬೇಡ. ಈಗ ಮಲಗಲುಹೋಗು. ನಾಳೆ ಬೆಳಗ್ಗೆಯೇ ಪ್ರಯಾಣ ಹೊರಡಬೇಕು" ಎಂದು ಹೇಳಿ ರಘುಪತಿ ಯಾವ ಉತ್ತರವನ್ನೂ ನಿರೀಕ್ಷಿಸದೆ ಹೊರಟು ಹೋದ. ಆ ಮರುದಿನ ಮುಂಜಾನೆಯಲ್ಲಿ ನಕ್ಷತ್ರರಾಯ ಎಚ್ಚೆತ್ತ. ಆಗ ಹೊಗಳುಭಟ್ಟರು ಲಲಿತರಾಗದಲ್ಲಿ ಮಧುರಗೀತ ಹಾಡುತ್ತಿದ್ದರು. ನಕ್ಷತ್ರ ಹೊರಮನೆಗೆ ಬಂದು ಕಿಟಕಿಯಿಂದ ಹೊರಗೆ ನೋಡಲಾರಂಭಿಸಿದ. ನದಿಯ ಮೂಡಣ ದಡದಲ್ಲಿ ಸೂರ್ಯ ಮೂಡುತ್ತಿದ್ದ. ಅರುಣರೇಖೆ ಕಾಣಿಸುತಿತ್ತು.

ಇಕ್ಕೆಲದ ದಟ್ಟವಾದ ಮರಗಳ ನಡುವೆ ಸಣ್ಣಸಣ್ಣ ನಿದ್ರಿತಗ್ರಾಮಗಳ ಮಗ್ಗುಲಲ್ಲಿ ಬ್ರಹ್ಮಪುತ್ರ ತನ್ನ ಅನಂತ ಜಲರಾಶಿಯನ್ನು ಹೊತ್ತುಕೊಂಡು ತಡೆಯಿಲ್ಲದೆ ಹರಿಯುತಿತ್ತು. ಅರಮನೆಯ ಕಿಟಕಿಯಿಂದ ನದೀತೀರದ ಸಣ್ಣಗುಡಿಸಲೊಂದು ಕಣ್ಣಿಗೆ ಕಾಣಿಸುತಿತ್ತು. ಹೆಂಗಸೊಬ್ಬಳು ಅಂಗಳ ಗುಡಿಸುತಿದ್ದಳು. ಗಂಡಸೊಬ್ಬ ಅವಳೊಡನೆ ಒಂದೆರಡು ಮಾತಾಡಿ ತಲೆಗೆ ವಸ್ತ್ರ ಸುತ್ತಿಕೊಂಡು ದೊಡ್ಡ ದೋಣಿಯ ಕೊನೆಯಲ್ಲಿ ಗಂಟು ಕಟ್ಟಿಕೊಂಡು ನಿಶ್ಚಿಂತನಾಗಿ ಎಲ್ಲಿಗೋ ಹೊರಟಿದ್ದ. ನೀಲಿಯೂ ಚಿಕ್ಕವ್ವನ ಹಕ್ಕಿಯೂ ಕೂಗುತಿತ್ತು. ಕಾಡುಹಕ್ಕಿ ಹೆಬ್ಬಹಲಸಿನ ಎಲೆಯ ಮರೆಯಲ್ಲಿ ಕುಳಿತು ಹಾಡುತಿತ್ತು. ಕಿಟಕಿಯಲ್ಲಿ ನಿಂತು ಹೊರಗೆ ನೋಡಿದ ನಕ್ಷತ್ರರಾಯನ ಹೃದಯದಿಂದ ಆಳವಾದೊಂದು ನಿಟ್ಟುಸಿರು ಎದ್ದಿತು.

ಇಂಥ ಹೊತ್ತಿನಲ್ಲಿ ಹಿಂದಿನಿಂದ ರಘುಪತಿ ಬಂದು ನಕ್ಷತ್ರರಾಯನನ್ನು ಸ್ಪರ್ಶಿಸಿದ. ನಕ್ಷತ್ರರಾಯ ಬೆದರಿದ. ರಘುಪತಿ ಮೃದುಗಂಭೀರ ಸ್ವರದಲ್ಲಿ —ಪ್ರಯಾಣಕ್ಕೆ ಎಲ್ಲವೂ ಸಿದ್ಧವಾಗಿದೆ-ಎಂದ.

ನಕ್ಷತ್ರರಾಯ ಕೈಮುಗಿಯುತ್ತ ಬಹಳ ವ್ಯಾಕುಲ ಧ್ವನಿಯಲ್ಲಿ "ಠಾಕೂರ್, ನನ್ನನ್ನು ಕ್ಷಮಿಸಿ, ಠಾಕೂರ್, ನಾನು ಎಲ್ಲಿಗೂ ಬರಲಾರೆ. ನಾನು ಇಲ್ಲಿ ಸುಖವಾಗಿರುವೆ" ಎಂದ.

ರಘುಪತಿ ಒಂದು ಮಾತೂ ಹೇಳದೆ ನಕ್ಷತ್ರರಾಯನ ಮುಖದ ಕಡೆ ತನ್ನ ಕಿಡಿ ನೋಟ ಬೀರಿದ. ನಕ್ಷತ್ರರಾಯ ನೆಲನೋಡುತ್ತ "ಎಲ್ಲಿಗೆ ಹೋಗಬೇಕು" ಎಂದ.

ರಘುಪತಿ—ಆ ಮಾತು ಹೇಳಲು ಈಗ ಸಾಧ್ಯವಿಲ್ಲ.

ನಕ್ಷತ್ರ—ಅಣ್ಣನಿಗೆ ವಿರುದ್ಧವಾಗಿ ನಾನು ಯಾವ ಬಗೆಯ ಒಳಸಂಚನ್ನೂ ಮಾಡಲಾರೆ.

ರಘುಪತಿ—ಕಿಡಿಕಿಡಿಯಾಗಿ "ಅಣ್ಣ ನಿನಗೆ ಬಹಳ ಉಪಕಾರ ಮಾಡಿರುವನಲ್ಲವೆ" ಎಂದ.

ನಕ್ಷತ್ರ ಮುಖ ತಿರುಗಿಸಿಕೊಂಡು ಕಿಟಕಿಯಮೇಲೆ ಉಗುರಿನಿಂದ ಗೀರುತ್ತ 'ನಾನು ಒಲ್ಲೆ. ಅವನು ನನ್ನನ್ನು ಪ್ರೀತಿಸುವನು' ಎಂದು ಹೇಳಿದ.

ರಘುಪತಿ ಕ್ರೂರ ಒಣನಗೆಯೊಡನೆ—ಹರಿ ಹರಿ, ಎಂಥ ಪ್ರೇಮ. ಅದರಿಂದಲೇ ಅಲ್ಲವೆ ನಿರ್ವಿಘ್ನವಾಗಿ ಧ್ರುವನಿಗೆ ಯುವರಾಜ ಪಟ್ಟಕಟ್ಟಲು ಸುಳ್ಳುನೆಪಹೂಡಿ ಅಣ್ಣ ನಿನ್ನನ್ನು ರಾಜ್ಯದಿಂದ ಹೊರಗೆ ದೂಡಿದ್ದು. ಬಹುಶಃ ರಾಜ್ಯಭಾರದ ಹೊರೆ ಹೊತ್ತು ಬೆಣ್ಣೆಯ ಬೊಂಬೆ, ಅಕ್ಕರೆಯ ತಮ್ಮ ಎಲ್ಲಾದರೂ ಕರಗಿ ಹೋದಾನು ಎಂದಿರಬಹುದು. ಅವನ ರಾಜ್ಯಕ್ಕೆ ಇನ್ನೆಂದಾದರೂ ಸುಲಭವಾಗಿ ಕಾಲಿಡಬಲ್ಲೆಯಾ, ಮೂಢ.

ನಕ್ಷತ್ರರಾಯ ಅವಸರದಿಂದ 'ನಾನು ಈ ಅಲ್ಪಸಂಗತಿಯನ್ನು ಅರಿಯೆನೇನು. ನಾನೆಲ್ಲವನ್ನೂ ಬಲ್ಲೆ—ಆದರೆ ನಾನೇನು ಮಾಡಲಿ ಹೇಳಿ. ಠಾಕೂರ್, ದಾರಿಯೇನು" ಎಂದು ಹೇಳಿದ.

ರಘುಪತಿ—"ಆ ದಾರಿಗೋಸ್ಕರವೇ, ಅದಕ್ಕಾಗಿಯೇ ಬಂದಿರುವುದು. ಇಷ್ಟವಿದ್ದರೆ ನನ್ನೊಡನೆ ಹೊರಟು ಬಾ. ಇಲ್ಲದಿದ್ದರೆ ಈ ಬಿದಿರು ಕಾಡಿನ ನಡುವೆ ಕುಳಿತು ನಿನ್ನ ಹಿತಕಾಂಕ್ಷಿ ಅಣ್ಣನನ್ನು ಧ್ಯಾನಿಸುತ್ತಿರು. ನಾನು ಹೊರಟೆ.

ಹೀಗೆ ಹೇಳಿ ರಘುಪತಿ ಹೊರಡುವ ಪ್ರಯತ್ನಮಾಡಿದ. ನಕ್ಷತ್ರ ರಾಯ ಕೂಡಲೆ ಅವನ ಹಿಂದೆ ಹಿಂದೆಯೇ ಹೋಗಿ "ನಾನೂ ಬರುತ್ತೇನೆ. ಠಾಕೂರ್. ಒಂದು ವೇಳೆ ದಿವಾನರು ಬರಲೊಪ್ಪಿದರೆ ಆತನನ್ನೂ ನಮ್ಮೊಡನೆ ಕರೆದುಕೊಂಡು ಹೋಗುವುದರಲ್ಲಿ ತೊಂದರೆಯೇನು" ಎಂದ.

"ನಿನ್ನ ಹೊರತು ಬೇರೆ ಯಾರೂ ಸಂಗಡ ಬರಬಾರದು" ಎಂದು ರಘುಪತಿ ಹೇಳಿದ.

ಮನೆಯಿಂದ ನಕ್ಷತ್ರರಾಯನಿಗೆ ಕಾಲುತೆಗೆಯಲು ಬರಲಿಲ್ಲ. ಈ ಎಲ್ಲ ಸುಖದ ಆಟಗಳನ್ನು ಬಿಟ್ಟು ದಿವಾನರನ್ನು ಬಿಟ್ಟು ರಘುಪತಿಯ ಕೂಡ ಒಂಟಿಯಾಗಿ ಎಲ್ಲಿಗೋ ಹೋಗಬೇಕಾದೀತು. ಆದರೆ ರಘುಪತಿ ಅವನ ಜುಟ್ಟುಹಿಡಿದು ಎಳೆದುಕೊಂಡು ಹೋಗುವಂತಿತ್ತು. ಇಷ್ಟೇ ಅಲ್ಲದೆ ನಕ್ಷತ್ರರಾಯನ ಮನಸಿನಲ್ಲೆ ಒಂದು ಭಯಮಿಶ್ರಿತ ಕುತೂಹಲವೂ ತಲೆದೋರಿತು. ಅದರಲ್ಲೂ ಒಂದು ಭಯಂಕರ ಆಕರ್ಷಣೆ.

ದೋಣಿ ಸಿದ್ಧವಾಗಿತ್ತು. ನದೀತೀರದಲ್ಲಿ ನಿಂತು ನಕ್ಷತ್ರರಾಯ ನೋಡಿದ. ಹೆಗಲಿನಮೇಲೆ ಭೈರವಾಸ ಹಾಕಿಕೊಂಡು ಪೀತಾಂಬರ ಸ್ನಾನಕ್ಕೆ ಬಂದಿದ್ದ. ನಕ್ಷತ್ರರಾಯನನ್ನು ಕಂಡೊಡನೆ ಪೀತಾಂಬರ ಮಹಾರಾಜರಿಗೆ ಜಯವಾಗಲಿ. ನೆನ್ನೆ ಎಲ್ಲಿಂದಲೋ ಒಂದು ಅವಲಕ್ಷಣ ಗೊಡ್ಡು ಬ್ರಾಹ್ಮಣ ಬಂದು ಶುಭ ವಿವಾಹಕ್ಕೆ ಅಡ್ಡಿ ಮಾಡಿದನೆಂದು ಕೇಳಿದೆನಲ್ಲ." ಎಂದ.

ನಕ್ಷತ್ರರಾಯ ಘಾಬರಿಯಾದ. ರಘುಪತಿ ಗಂಭೀರ ಸ್ವರದಿಂದ "ನಾನೇ ಆ ಗೊಡ್ಡು ಬ್ರಾಹ್ಮಣ" ಎಂದ.

ಪೀತಾಂಬರ ನಕ್ಕು ಹೇಳಿದ—ಹಾಗಾದರೆ ನಿಮ್ಮೆದಿರಿನಲ್ಲಿ ನಿಮ್ಮ ವರ್ಣನೆ ಮಾಡುವುದೆನ್ನುವುದು ಅಷ್ಟು ಉತ್ತಮವಾಗಲಿಲ್ಲ. ತಿಳಿದು ಯಾವ ಅಪ್ಪನಮಗ ಇಂಥ ಕೆಲಸಮಾಡಿಯಾನು. ಅನ್ಯಥಾಭಾವಿಸಬೇಡಿ. ಠಾಕೂರ್, ಜನ ನನ್ನನ್ನು ಎದುರಿಗೆ ರಾಜಾ ಎನ್ನುವರು. ಹಿಂದೆ ಪಿತು ಎನ್ನುವರು. ಎದುರಿಗೆ ಏನೂ ಹೇಳುವುದಿಲ್ಲ. ಅದು ಮಾತ್ರ ನನಗೆ ಗೊತ್ತು. ನಿಜವಾದ ಸಂಗತಿ ಯಾರು ಬಲ್ಲರು. ನಿಮ್ಮ ಮುಖದಲ್ಲಿ ಇಷ್ಟೊಂದು ಅಪ್ರಸನ್ನತೆ ಕಾಣುವುದಲ್ಲ. ಬೇರೆಯಾರ ಮುಖದಲ್ಲಾದರೂ ಇಂಥ ಭಾವನೆ ಕಂಡರೆ ಜನ ಅವನನ್ನು ನಿಂದಿಸೀತು. ಮಹಾರಾಜ ಇಷ್ಟು ಬೆಳಗ್ಗೆ ನದೀತೀರಕ್ಕೆ?'

ನಕ್ಷತ್ರರಾಯ ಸ್ವಲ್ಪ ಕರುಣೆಯ ಧ್ವನಿಯಲ್ಲಿ "ನಾನು ಹೋಗುತ್ತೇನೆ ದಿವಾನ್‌ಜಿ," ಎಂದ.

ಪೀತಾಂಬರ—"ಹೋಗುವಿರಾ? ಎಲ್ಲಿಗೆ, ಹೊಸಕೇರಿಗೆ. ಗೌಡರ ಮನೆಗಲ್ಲವೆ.

ನಕ್ಷತ್ರರಾಯ—ಇಲ್ಲ, ದಿವಾನ್‌ಜಿ, ಗೌಡರ ಮನೆಗಲ್ಲ, ಬಹಳದೂರ.

ಪೀತಾಂಬರ—ಬಹಳ ದೂರ ಅಂದರೆ—ಪಾಯಿಕ್ ಘಟ್ಟದಲ್ಲಿ ಬೇಟೆಗಾಗಿಯೆ?

ನಕ್ಷತ್ರರಾಯ—ಒಮ್ಮೆ ರಘುಪತಿಯ ಮುಖದ ಕಡೆ ನೋಡಿ ಕೇವಲ ದುಃಖಭಾವನೆಯಿಂದ ಕತ್ತಾಡಿಸಿದ. "ಹೊತ್ತು ಮಿಾರುವದು, ದೋಣಿ ಯೇರಬೇಕು" ಎಂದು ರಘುಪತಿ ಹೇಳಿದ.

ಪೀತಾಂಬರ ಅತಿ ಸಂದಿಗ್ಧವೂ, ರೋಷವೂ ಕೂಡಿದ ಭಾವದಿಂದ ಬ್ರಾಹ್ಮಣನ ಮುಖ ದಿಟ್ಟಿಸಿದ—"ಠಾಕೂರ್ ನೀನಾರು, ನಮ್ಮ ಮಹಾ ರಾಜರಿಗೆ ಅಪ್ಪಣೆಮಾಡಲು ಬಂದಿರುವವನು" ಎಂದು ಕೇಳಿದ.

ನಕ್ಷತ್ರರಾಯ ಗಾಬರಿಯೊಡನೆ ಅವನನ್ನು ಒಂದು ಮಗ್ಗುಲಿಗೆ ಕರೆದುಕೊಂಡುಹೋಗಿ "ಅವರು ನಮ್ಮ ಗುರು" ಎಂದು ಹೇಳಿದ.

ಪೀತಾಂಬರನೆಂದ—"ಗುರುಗಳೇ ಆಗಲಿ. ಅವರು ನಮ್ಮ ಚಂಡೀ ಮಂಟಪದಲ್ಲಿ ಇರಲಿ. ಊಟ ಉಪಚಾರಕ್ಕೆ ಏರ್ಪಾಡು ಮಾಡುತ್ತೇನೆ. ದೊಡ್ಡಸ್ತಿಕೆಯಿಂದ ಇರಲಿ. ಅವರಿಗೆ ನಮ್ಮ ಮಹಾರಾಜರ ಆವಶ್ಯ ಕತೆಯೇನು ?"

ರಘುಪತಿ—ವೃಥಾ ಕಾಲಹರಣವಾಗುತ್ತಿದೆ. ಹಾಗಾದರೆ ನಾನು ಹೊರಟೆ.

ಪೀತಾಂಬರ—ಅಪ್ಪಣೆ. ಕಾಲಹರಣದಿಂದ ಫಲವೇನು, ಮಹಾ ಶಯರೆ, ಕೂಡಲೆ ಕಂಬಿ ಬಿಡಿ. ಮಹಾರಾಜರನ್ನು ಕರೆದುಕೊಂಡು ನಾನು ಅರಮನೆಗೆ ಹೋಗುವೆ.

ನಕ್ಷತ್ರರಾಯ ಒಮ್ಮೆ ರಘುಪತಿಯ ಮುಖ ನೋಡಿ ಇನ್ನೊಮ್ಮೆ ಪೀತಾಂಬರನ ಮುಖದ ಕಡೆ ತಿರುಗಿ ಮೆಲುದನಿಯಲ್ಲಿ "ಇಲ್ಲ ದಿವಾನ್ ಜಿ, ನಾನು ಹೋಗುತ್ತೇನೆ—" ಎಂದು ಹೇಳಿದ.

ಪೀತಾಂಬರ—ಹಾಗಾದರೆ ನಾನೂ ಹೊರಟೆ. ಪ್ರಜೆಗಳನ್ನು ಸಂಗಡ ಕರೆದುಕೊಂಡು ಹೊರಡಿ. ರಾಜರಂತೆ ಹೊರಡಿ. ರಾಜರು ಹೊರಟರೆ ಕೂಡ........

ನಕ್ಷತ್ರರಾಯ ಕೇವಲ ರಘುಪತಿಯ ಮುಖ ದಿಟ್ಟಿಸಿದ. "ಯಾರೂ ಕೂಡ ಬರಬಾರದು" ಎಂದು ರಘುಪತಿ ಹೇಳಿದ.

ಪೀತಾಂಬರ ರೋಷದಿಂದ ಹೇಳಿದ—"ನೋಡು, ಠಾಕೂರ್—ನೀನು—" ನಕ್ಷತ್ರರಾಯ ಕೂಡಲೇ ಅವನನ್ನು ತಡೆದು "ದಿವಾನ್ ಜಿ ನೀವು ಹೊರಡಿ, ಹೊತ್ತು ಮೀರಿತು—" ಎಂದ.

ಪೀತಾಂಬರ ಕಳೆಗುಂದಿ ನಕ್ಷತ್ರನ ಕೈ ಹಿಡಿದುಕೊಂಡು ಹೇಳಿದ—"ನೋಡಪ್ಪ—ನಾನು ನಿಮ್ಮನ್ನು ರಾಜ ಎಂದು ಕರೆದೆ. ಆದರೆ ನಾನು ನಿಮ್ಮನ್ನು ಮಗನಂತೆ ಪ್ರೀತಿಸುವೆ. ನನಗೆ ಮಕ್ಕಳೂ ಇಲ್ಲ. ನಿಮ್ಮ ಮೇಲೆ ನನ್ನ ಬಲವಂತ ನಡೆಯುವಂತೆಯೂ ಇಲ್ಲ. ನೀವು ಹೊರಟುಹೋಗುತಿರುವಿರಿ. ನಾನು ಬಲವಂತವಾಗಿ ಹಿಡಿದು ನಿಲ್ಲಿಸಲಾರೆ. ಆದರೆ ನನ್ನದೊಂದು ಬೇಡಿಕೆಯಿದೆ. ಎಲ್ಲೇ ಹೋಗಿರಿ, ನಾನು ಸಾಯುವುದಕ್ಕೆ ಮೊದಲು ಹಿಂದಿರುಗಿ ಬರಬೇಕು. ನಾನು ನನ್ನ ಕೈಯಾರ ನನ್ನ ರಾಜ್ಯವನ್ನೆಲ್ಲ ನಿಮಗೆ ಒಪ್ಪಿಸುವೆ. ಇದೊಂದು ನನ್ನ ಆಸೆ" ನಕ್ಷತ್ರರಾಯನೂ ರಘುಪತಿಯೂ ದೋಣಿ ಹತ್ತಿದರು. ದೋಣಿ ತೆಂಕಣ ದಿಕ್ಕಿಗೆ ಹೊರಟಿತು. ಪೀತಾಂಬರ ಸ್ನಾನ ಮರೆತು ಭೈರವಾಸ ಹೆಗಲಿಗೇರಿಸಿ ಅನ್ಯಮನಸ್ಕನಾಗಿ ಮನೆಗೆ ಹಿಂಧಿರುಗಿದ. ಗುಜೂರ್‌ಪಾಡ ಶೂನ್ಯವಾದಂತೆ ಆಯಿತು.—ಅದರ ಉತ್ಸಾಹ, ಉತ್ಸವ ಎಲ್ಲವೂ ಕೊನೆಗಂಡಿತು. ಪ್ರತಿದಿನ ಪ್ರಕೃತಿಯ ಹೊಸ ಉತ್ಸವ ಮಾತ್ರ—ಬೆಳಗ್ಗೆ ಹಕ್ಕಿಯ ಹಾಡು, ಎಲೆಗಳ ಮರ್ಮರ ಧ್ವನಿ, ನದಿಯ ಅಲೆಗಳ ಕಲಕಲ ನಾದ—ಇವುಗಳಿಗೆ ವಿರಾಮವಿರಲಿಲ್ಲ.

## ೨೭

ನಿಡುದಾರಿ, ಅಲ್ಲಲ್ಲಿ ನದಿ, ಅಲ್ಲಲ್ಲಿ ಕಗ್ಗಾಡು, ಅಲ್ಲಲ್ಲಿ ನೆರಳಿಲ್ಲದ ಮೈದಾನ. ಒಮ್ಮೆ ದೋಣಿಯಲ್ಲಿ, ಅನಂತರ ಕಾಲುನಡಗೆಯಲ್ಲಿ, ನಡುನಡುವೆ ಗಿಡ್ಡ ಕುದುರೆಯಮೇಲೆ. ಒಮ್ಮೆ ಬಿಸಿಲಲ್ಲಿ, ಒಮ್ಮೆ ಮಳೆಯಲ್ಲಿ. ಒಮ್ಮೆ ಕೋಲಾಹಲದಿಂದಿರುವ ಹಗಲಿನಲ್ಲಿ, ಒಮ್ಮೆ ರಾತ್ರಿಯ ನಿಶ್ಶಬ್ದ ಕತ್ತಲೆಯಲ್ಲಿ—ನಕ್ಷತ್ರರಾಯ ಬಿಡುವಿಲ್ಲದೆ ನಡೆಯುತ್ತಿರುವನು. ಅದೆಷ್ಟು ದೇಶ, ಅದೆಷ್ಟು ವಿಚಿತ್ರ ನೋಟ, ಅವೆಷ್ಟು ವಿಚಿತ್ರ ಜನ—ಆದರೆ ನಕ್ಷತ್ರರಾಯನ ಪಕ್ಕದಲ್ಲಿ ನೆರಳಿನಂತೆ ಕ್ಷೀಣವೂ ಬಿಸಿಲಿನಂತೆ ಸ್ಪಷ್ಟವೂ ಆದ ರಘುಪತಿಯೊಬ್ಬನೆ ಎಡೆಬಿಡದೆ ಅಂಟಿಕೊಂಡಿರುವನು. ಹಗಲಿನಲ್ಲಿ ರಘು

ಪತಿ, ರಾತ್ರಿಯಲ್ಲಿ ರಘುಪತಿ, ಕನಸಿನಲ್ಲಿ ರಘುಪತಿ ವಿರಾಜಿಸುತಿರುವನು. ದಾರಿಯಲ್ಲಿ ದಾರಿಗರು ಹೋಗಿ ಬರುತ್ತಿರುವರು. ದಾರಿ ಮಗ್ಗುಲ ಧೂಳಿ ನಲ್ಲಿ ಆಟವಾಡುತ್ತಿರುವರು. ಸಂತೆಯಲ್ಲಿ ನೂರಾರು ಮಂದಿ ಕೊಂಡು ಕೊಳ್ಳುತ್ತಿರುವರು. ಹಳ್ಳಿಯಲ್ಲಿ ಮುದುಕರು ಪಗಡೆ ಆಡುತ್ತಿರುವರು. ಘಟ್ಟದಲ್ಲಿ ಹೆಂಗಸರು ನೀರು ತುಂಬಿಕೊಳ್ಳುತ್ತಿರುವರು. ದೋಣಿಯಲ್ಲಿ ಅಂಬಿಗರು ಹಾಡು ಹಾಡುತ್ತಿರುವರು. ಆದರೆ ನಕ್ಷತ್ರರಾಯನ ಪಕ್ಕದಲ್ಲಿ ಬಡಕಲು ರಘುಪತಿಯೊಬ್ಬ ಸರ್ವದಾ ಎಚ್ಚೆತ್ತಿರುವನು. ಜಗತ್ತಿನ ನಾಲ್ಕೂ ಕಡೆ ವಿಚಿತ್ರವಾದ ಆಟ ನಡೆಯುತ್ತಿರುವದು. ವಿಚಿತ್ರ ಘಟನೆ ನಡೆಯುತ್ತಿರುವದು—ಆದರೆ ಈ ವಂಗ ಭೂಮಿಯ ವಿಚಿತ್ರ ಲೀಲೆಗಳ ಮೂಲಕ ನಕ್ಷತ್ರರಾಯನ ದುರದೃಷ್ಟ ಅವನನ್ನು ಎಳೆದುಕೊಂಡು ಹೋಗು ತ್ತಿರುವದು. ಜನ ಇದ್ದೂ ಅವನ ಪಾಲಿಗೆ ಜನ ಇಲ್ಲದಿರುವಂತೆ. ಊರು ಕೇವಲ ಶೂನ್ಯ ಮರುಭೂಮಿಯಂತೆ.

ನಕ್ಷತ್ರರಾಯ ದಣಿವುಗೊಂಡು “ಇನ್ನೂ ಎಷ್ಟು ದೂರ ಹೋಗ ಬೇಕು?” ಎಂದು ತನ್ನ ಮಗ್ಗುಲಲ್ಲಿದ್ದ ನೆರಳನ್ನು ಪ್ರಶ್ನಿಸಿದ.

ನೆರಳು “ಬಹಳ ದೂರ” ಎಂದು ಉತ್ತರ ಕೊಟ್ಟಿತು.

“ಎಲ್ಲಿಗೆ ಹೋಗಬೇಕು?”

ಅದಕ್ಕೆ ಉತ್ತರ ಇಲ್ಲ. ನಕ್ಷತ್ರರಾಯ ನಿಟ್ಟುಸಿರು ಬಿಟ್ಟು ನಡೆದು ಹೋಗುವನು. ಮರಗಳ ಸಾಲಿನ ನಡುವೆ ಎಲೆಗಳ ನೆರಳಿನಿಂದ ಮರೆ ಯಾಗಿರುವ ಗುಡಿಸಲು ಕಂಡರೆ, ನಾನೂ ಈ ಗುಡಿಸಲಿನವನಾಗಿದ್ದಿದ್ದರೆ ಎಂದು ಅವನ ಮನಸಿಗೆ ತೋರುವದು. ಗೋಧೂಳಿಯ ಹೊತ್ತಿನಲ್ಲಿ ಗೊಲ್ಲರು ಹೆಗಲಿಗೆ ದೊಣ್ಣೆ ಏರಿಸಿ ಮೈದಾನದಿಂದ ಹಳ್ಳಿಯ ದಾರಿಯಲ್ಲಿ ಧೂಳೆಬ್ಬಿಸುತ್ತ ಕರು ಎತ್ತಿಕೊಂಡು ಹೋಗುವಂತಿದ್ದಿದ್ದರೆ ಸಂಜೆಯಲ್ಲಿ ಮನೆಗೆಹೋಗಿ ವಿಶ್ರ ಮಿಸಿಕೊಳ್ಳಬಹುದಾಗಿತ್ತು ಎಂದು ನಕ್ಷತ್ರರಾಯನ ಮನಸ್ಸಿನಲ್ಲಿ ಮೂಡು ವುದು. ಮಧ್ಯಾಹ್ನದ ಬಿರು ಬಿಸಿಲಲ್ಲಿ ರೈತ ಉಳುತ್ತಿರುವನು. ಅವನನ್ನು ನೋಡಿನಕ್ಷತ್ರರಾಯ ತನ್ನಲ್ಲಿ “ಆಹಾ, ಇವನೆಷ್ಟು ಸುಖಿ” ಎಂದು ಕೊಳ್ಳುವನು.

ದಾರಿಯ ದಣಿವಿನಿಂದ ನಕ್ಷತ್ರರಾಯ ಬಣ್ಣಗೆಟ್ಟು ಬಡಕಲಾಗಿ ಕಳೆಗುಂದಿಹೋಗಿರುವನು—" ಠಾಕೂರ್, ಬದುಕಲಾರೆ " ಎಂದು ರಘುಪತಿಗೆ ಹೇಳುವನು.

ರಘುಪತಿ—" ಈಗ ನಿನ್ನನ್ನು ಸಾಯಲು ಬಿಡುವವರು ಯಾರು ? " ಎನ್ನುವನು.

ರಘುಪತಿ ಅವಕಾಶ ಕೊಡದಿದ್ದರೆ ತನಗೆ ಸಾಯುವುದಕ್ಕೂ ಅವಕಾಶವಿಲ್ಲ ಎಂದು ನಕ್ಷತ್ರರಾಯನಿಗೆ ಭಾಸವಾಯಿತು. ಹೆಂಗಸೊಬ್ಬಳು ನಕ್ಷತ್ರರಾಯನನ್ನು ನೋಡಿ " ಅವ್ವಾ, ಯಾರ ಮಗನವ್ವಾ, ಯಾರು ಇವನನ್ನು ಬೀದಿಗೆ ಓಡಿಸಿದ್ದು " ಎಂದಳು. ಇದನ್ನು ಕೇಳಿ ನಕ್ಷತ್ರರಾಯನ ಜೀವ ತಣ್ಣಗಾಯಿತು. ಅವನ ಕಣ್ಣಿನಲ್ಲಿ ನೀರೂರಿತು. ಹೆಂಗಸನ್ನು ಕರೆದು ಅವಳೊಡನೆ ಅವಳ ಮನೆಗೆ ಹೋಗಬೇಕು ಎಂದು ಅವನಿಗೆ ಆಸೆಯಾಯಿತು.

ಆದರೆ ನಕ್ಷತ್ರರಾಯ ರಘುಪತಿಯ ಕೈಯಿಂದ ಎಷ್ಟು ಕಷ್ಟ ಅನುಭವಿಸತೊಡಗಿದನೋ ಅಷ್ಟಷ್ಟೂ ವಶವಾಗತೊಡಗಿದ—ರಘುಪತಿಯ ಬೆರಳಿನ ಇಂಗಿತದಂತೆ ಅವನ ಆಗುಹೋಗುಗಳೆಲ್ಲ ನಡೆಯಲಾರಂಭಿಸಿತು.

ಹೋಗುತ್ತ ಹೋಗುತ್ತ ಕ್ರಮೇಣ ನದಿಗಳ ಬಾಹುಳ್ಯ ಕಡಮೆಯಾಗುತ್ತ ಬಂದಿತು. ಕ್ರಮ ಕ್ರಮವಾಗಿ ನೆಲ ಗಟ್ಟಿಯಾಗುತ್ತ ಬಂದಿತು. ಮಣ್ಣು ಕೆಂಬಣ್ಣವಾಯಿತು. ಕಲ್ಲು ಕಲ್ಲಾಯಿತು. ಗುಡಿಸಲು ದೂರ ದೂರವಾಯಿತು. ಗಿಡ ಮರ ವಿರಳವಾಯಿತು. ತೆಂಗಿನ ತೋಟದ ಪ್ರದೇಶ ಬಿಟ್ಟು ಇಬ್ಬರು ಹಾದಿಹೋಕರೂ ಹನೆ ತೋಪಿನ ಸೀಮೆಗೆ ಬಂದು ಸೇರಿದರು. ನಡು ನಡುವೆ ದೊಡ್ಡ ದೊಡ್ಡ ಬೇಲಿ, ಬತ್ತಿ ಹೋದ ನದಿಯ ಮಾರ್ಗ, ದೂರದಲ್ಲಿ ಹೆಂಗಸಿನಂತೆ ಕಾಣಿಸುವದು. ಕ್ರಮವಾಗಿ ಶಾಸೂಜನ ರಾಜಧಾನಿ ರಾಜಮಹಲ್ ಸಮೀಪವಾಗುತ್ತ ಬಂತು.

## ೨೮

ಕಡೆಗೆ ರಾಜಧಾನಿಗೆ ಬಂದು ಸೇರಿದರು. ಪರಾಜಯ ಹಾಗೂ ಪಲಾಯನದ ಬಳಿಕ ಸೂಜ ಹೊಸದಾಗಿ ಸೈನ್ಯ ಶೇಖರಿಸುವ ಕೆಲಸದಲ್ಲಿ

ತೊಡಗಿರುವ. ಆದರೆ ರಾಜ್ಯಕೋಶದಲ್ಲಿ ಹೆಚ್ಚು ಹಣವಿಲ್ಲ. ಪ್ರಜೆಗಳು ಕಂದಾಯದ ಹೊರೆಯಿಂದ ಕಂಗೆಟ್ಟಿರುವರು. ಈ ಮಧ್ಯೆ ದಾರನನ್ನು ಸೋಲಿಸಿ ಕೊಲ್ಲಿಸಿ ಔರಂಗಜೇಬನು ಡೆಲ್ಲಿಯ ಸಿಂಹಾಸನ ಹತ್ತಿರುವನು. ಸೂಜ ಈ ಸುದ್ದಿಯನ್ನು ಕೇಳಿ ಬಹಳವಾಗಿ ಕಳವಳಗೊಂಡ. ಆದರೆ ಸೈನ್ಯವೂ ಸಾಮಂತರೂ ಸಿದ್ಧರಾಗಿರಲಿಲ್ಲ. ಇದರಿಂದ ಸ್ವಲ್ಪ ಕಾಲ ಕೂಡಿ ಬರಲೆಂಬ ನೆಪ ಹೂಡಿ ಅವನು ಔರಂಗಜೇಬನ ಬಳಿಗೆ ಒಬ್ಬ ದೂತನನ್ನು ಕಳುಹಿಸಿಕೊಟ್ಟ. ಕಣ್ಣಿಗೆ ಬೆಳಕೂ, ಹೃದಯಕ್ಕೆ ಆನಂದವೂ ಆದ ಪ್ರೀತಿಯ ಸೋದರ ಔರಂಗಜೇಬ ಸಿಂಹಾಸನಗಳಿಸುವುದರಲ್ಲಿ ಜಯಶೀಲ ನಾಗಿರುವನು. ಇದರಿಂದ ಸೂಜನ ಮೃತ ದೇಹಕ್ಕೆ ಉಸಿರು ಕೂಡಿದಂತಾ ಯಿತು. ಈ ಕ್ಷಣವೆ ಸೂಜನ ಬಂಗಾಳದ ರಾಜ್ಯಭಾರವನ್ನು ಹೊಸ ಸಮ್ರಾಟ ಒಪ್ಪಿಕೊಂಡರೆ ಸಂತೋಷಕ್ಕೆ ಪಾರವೇ ಇಲ್ಲ—ಎಂದು ಹೇಳಿ ಕಳುಹಿಸಿದ. ಔರಂಗಜೇಬ ಅತಿ ಉತ್ಸಾಹದಿಂದ ದೂತನನ್ನು ಸ್ವಾಗತಿಸಿದ. ಸೂಜನ ಶಾರೀರಕ-ಮಾನಸಿಕ ಸ್ಥಿತಿ ಮತ್ತು ಸೂಜನ ಕುಟುಂಬದವರ ಕುಶಲವಾರ್ತೆಯನ್ನು ತಿಳಿಯುವುದಕ್ಕಾಗಿ ವಿಶೇಷವಾದ ಉತ್ಸಾಹವನ್ನು ವ್ಯಕ್ತಪಡಿಸಿದ.

ಸ್ವತಃ ಸಮ್ರಾಟ ಶಾಜಹಾನನೇ ಸೂಜನನ್ನು ಬಂಗಾಳದ ಆಡಳಿತಕ್ಕೆ ನಿಯಮಿಸಿರುವುದರಿಂದ ಬೇರೊಂದು ಒಪ್ಪಿಗೆಯ ಪತ್ರದ ಆವಶ್ಯಕತೆಯಿಲ್ಲ ವೆಂದು ತಿಳಿಯಪಡಿಸಿದ. ಇಂಥ ಸಮಯದಲ್ಲಿ ರಘುಪತಿ ಸೂಜನ ಸಭೆ ಯನ್ನು ಪ್ರವೇಶಿಸಿದ.

ಕೃತಜ್ಞತೆಯಿಂದಲೂ ಉತ್ಸಾಹದಿಂದಲೂ ಸೂಜ ತನ್ನನ್ನು ಸೆರೆ ಯಿಂದ ಬಿಡಿಸಿದವನನ್ನು ಸ್ವಾಗತಿಸಿದ. 'ಏನು ವಿಶೇಷ' ಎಂದು ಕೇಳಿದ.

'ಬಾದಷಹರಲ್ಲಿ ಒಂದು ಅರಿಕೆಯಿದೆ' ಎಂದು ರಘುಪತಿ ಹೇಳಿದ.

ಸೂಜ ಮನಸಿನಲ್ಲೆ "ಇನ್ನೇನು ಅರಿಕೆಯಿದ್ದೀತು. ಹಣ ಕೇಳದಿದ್ದರೆ ಬದುಕಿದೆ" ಎಂದು ಯೋಚಿಸಿದ.

ರಘುಪತಿಯೆಂದ—ನನ್ನ ಬೇಡಿಕೆಯೇನೆಂದರೆ—

ಸೂಜ—ಬ್ರಾಹ್ಮಣರೆ—ನಿಮ್ಮ ಬೇಡಿಕೆಯನ್ನು ನಾನು ಖಂಡಿತ ಈಡೇರಿಸಿಕೊಡುವೆ, ಆದರೆ ಸ್ವಲ್ಪಕಾಲ ನಿಧಾನಿಸಿರಿ. ಈಗ ರಾಜಕೋಶದಲ್ಲಿ ಹೆಚ್ಚು ಹಣ ಇಲ್ಲ ಎಂದ.

ರಘುಪತಿಯೆಂದ—ಶಾಹನ್‌ಶಾಹ, ಬೆಳ್ಳಿಯಾಗಲಿ, ಚಿನ್ನವಾಗಲಿ ನನಗೆ ಬೇಕಿಲ್ಲ. ನನಗೆ ಈಗ ಬೇಕಾಗಿರುವುದು ಸಾಣೆ ಹಿಡಿದ ಉಕ್ಕು. ನನ್ನ ದೂರನ್ನು ಕೇಳಿರಿ. ನಾನು ನ್ಯಾಯ ವಿಚಾರಣೆ ಬಯುಸುವೆ.

"ಬಹಳ ತೊಂದರೆ. ಈಗ ನನಗೆ ವಿಚಾರಣೆ ನಡೆಸಲು ಹೊತ್ತಿಲ್ಲ. ಬ್ರಾಹ್ಮಣರೆ, ನೀವು ಹೊತ್ತಲ್ಲದ ಹೊತ್ತಿನಲ್ಲಿ ಬಂದಿರುವಿರಿ" ಎಂದು ಸೂಜ ಹೇಳಿದ.

ರಘುಪತಿ ಹೇಳಿದ—"ರಾಜಕುಮಾರ, ಸಮಯ ಅಸಮಯ ಎಲ್ಲರಿಗೂ ಉಂಟು. ನೀವು ರಾಜರು, ನಿಮಗೂ ಉಂಟು. ನಾನು ಬಡ ಬ್ರಾಹ್ಮಣ, ನನಗೂ ಉಂಟು. ನಿಮ್ಮ ಸಮಯದಂತೆ ನೀವು ವಿಚಾರ ಮಾಡಲು ಕುಳಿತರೆ ನನಗೆ ಹೊತ್ತೆಲ್ಲಿಯದು?"

ಸೂಜ ಕೆಲಸವನ್ನು ಬಿಟ್ಟು ಹೇಳಿದ—"ಬಹಳ ಕಾಟವಾಯಿತು. ಇಷ್ಟೊಂದು ಮಾತು ಕೇಳುವುದಕ್ಕಿಂತ ನಿಮ್ಮ ದೂರನ್ನು ಕೇಳುವುದೇ ಮೇಲು. ಹೇಳಿಯೇ ಬಿಡಿ—"

ರಘುಪತಿ ಹೇಳಿದ—"ತ್ರಿಪುರದ ರಾಜ ಗೋವಿಂದ ಮಾಣಿಕ್ಯ ತನ್ನ ತಮ್ಮ ನಕ್ಷತ್ರರಾಯನನ್ನು ಯಾವ ತಪ್ಪೂ ಇಲ್ಲದೆ ದೇಶ ಬಿಟ್ಟು ಓಡಿಸಿರುವನು."

ಸೂಜ ಕೋಪದಿಂದ—"ಬ್ರಾಹ್ಮಣರೆ. ನೀವು ಬೇರೊಬ್ಬರ ದೂರು ತಂದು ನನ್ನ ಹೊತ್ತನ್ನೇಕೆ ಹಾಳುಮಾಡುವಿರಿ. ಈಗ ಇವನ್ನೆಲ್ಲ ವಿಚಾರಿಸಲು ನನಗೆ ಹೊತ್ತಿಲ್ಲ" ಎಂದ.

ರಘುಪತಿ ಹೇಳಿದ—"ದೂರು ಕೊಡಬೇಕಾದವನು ರಾಜಧಾನಿಯಲ್ಲೇ ಇರುವನು."

" ಆತ ತಾನಾಗಿ ಬಂದು ತನ್ನ ಬಾಯಿಂದ ದೂರು ಹೇಳಿಕೊಂಡಾಗ ಯೋಚಿಸೋಣ " ಎಂದು ಸೂಜ ಹೇಳಿದ.

ರಘುಪತಿ—" ಅವನನ್ನು ಇಲ್ಲಿಗೆ ಯಾವಾಗ ಕರೆತರಲಿ."

ಸೂಜ—ಬ್ರಾಹ್ಮಣರು ಹೇಗೂ ಬಿಡುವಂತಿಲ್ಲ. ಸರಿ, ಬಂದ ಬಳಿಕ ಕರೆದುಕೊಂಡು ಬನ್ನಿ.

" ನವಾಬರು ಅಪ್ಪಣೆ ಕೊಡುವುದಾದರೆ ಅವನನ್ನು ನಾಳೆಯೇ ಕರೆತರುವೆ " ಎಂದು ರಘುಪತಿ ಹೇಳಿದ.

ಸೂಜ ಬೇಸರದಿಂದ—" ಸರಿ ನಾಳೆಯೇ ಕರೆತನ್ನಿ" ಎಂದು ಅಂದಿನ ಮಟ್ಟಿಗೆ ಬಿಡುಗಡೆ ಪಡೆದ. ರಘುಪತಿ ಬೀಳ್ಕೊಂಡ.

ನಕ್ಷತ್ರರಾಯ ಕೇಳಿದ—" ನವಾಬರ ಸನ್ನಿಧಾನಕ್ಕೆ ಬರುವೆ. ಆದರೆ ' ನಜರ್ ' ಒಪ್ಪಿಸಲು ಏನು ತೆಗೆದುಕೊಳ್ಳಲಿ "

"ಅದಕ್ಕಾಗಿ ನೀನು ಚಿಂತಿಸಬೇಕಾಗಿಲ್ಲ" ಎಂದು ರಘುಪತಿ ಹೇಳಿದ. ನಜರ್ ಒಪ್ಪಿಸಲು ಅವನು ಒಂದೂವರೆ ಲಕ್ಷವರಹಗಳನ್ನು ಹೊರತೆಗೆದ.

ಮರುದಿನ ಬೆಳಗ್ಗೆ ರಘುಪತಿ ಅಳುಕುಮನದ ನಕ್ಷತ್ರರಾಯನನ್ನು ಸೂಜನ ಸಭೆಗೆ ಕರೆತಂದ.

ಒಂದೂವರೆ ಲಕ್ಷವರಹ ನವಾಬನ ಕಾಲಬಳಿ ಸೇರುತ್ತಲೆ ಆತನ ಮುಖಕಾಂತಿ ಅಷ್ಟಾಗಿ ಅಪ್ರಸನ್ನವಾಗಿರುವಂತೆ ತೋರಲಿಲ್ಲ. ನಕ್ಷತ್ರ ರಾಯನ ಬೇಡಿಕೆ ಅತಿ ಸಹಜ ರೀತಿಯಲ್ಲಿ ಆತನ ಮನಮುಟ್ಟಿತು. ಅವನು " ಈಗ ನಿಮ್ಮ ಅಭಿಪ್ರಾಯವೇನೆಂಬುದನ್ನು ನನಗೆ ಹೇಳಿ " ಎಂದ.

ರಘುಪತಿಯೆಂದ—" ಗೋವಿಂದಮಾಣಿಕ್ಯನನ್ನು ದೇಶಬಿಟ್ಟು ಓಡಿಸಿ ಅವನ ಸ್ಥಳದಲ್ಲಿ ನಕ್ಷತ್ರರಾಯನನ್ನು ರಾಜನನ್ನಾಗಿ ಮಾಡಲು ಅಪ್ಪಣೆಯಾಗಲಿ."

ಸೂಜ ಸ್ವತಃ ತಮ್ಮನ ಸಿಂಹಾಸನ ಆಕ್ರಮಿಸಲು ಸ್ವಲ್ಪವೂ ಸಂಕೋಚ ಪಡಲಿಲ್ಲ. ಆದರೂ ಈ ಸ್ಥಳದಲ್ಲಿ ಮನಸ್ಸಿಗೆ ಹೇಗೋ ಆಯಿತು. ಆದರೆ ರಘುಪತಿಯ ಕೋರಿಕೆ ನಡೆಸುವುದೇ ಅವನಿಗೆ ಎಲ್ಲಕ್ಕಿಂತಲೂ

ಸಹಜವೆನಿಸಿತು.-ಇಲ್ಲದಿದ್ದರೆ ರಘುಪತಿ ತುದಿಮೊದಲಿಲ್ಲದೆ ಹರಟುವನೆಂಬ ಹೆದರಿಕೆ. ಅಷ್ಟೇ ಅಲ್ಲದೆ ಒಂದೂವರೆ ಲಕ್ಷವರಹ ಕಾಣಿಕೆ ಇದ್ದೂ ಅತಿಯಾಗಿ ವಿರೋಧಿಸುವದು ಚೆನ್ನಾಗಿರದು-ಎಂದು ಅವನಿಗೆ ತೋರಿತು. ಅವನು ಹೇಳಿದ "ಒಳ್ಳೆಯದು-ಗೋವಿಂದಮಾಣಿಕ್ಯನನ್ನು ದೇಶದಿಂದ ಓಡಿಸುವ ಮತ್ತು ನಕ್ಷತ್ರರಾಯನ ರಾಜ್ಯಗಳಿಕೆಯ ಆಜ್ಞಾಪತ್ರವನ್ನು ನಿಮಗೆ ಕೊಡುವೆ. ನೀವು ತೆಗೆದುಕೊಂಡು ಹೋಗಿ"

"ಬಾದಾಷಹರು ಸ್ವಲ್ಪ ಸೈನ್ಯವನ್ನೂ ಸಂಗಡ ಕೊಡಬೇಕು" ಎಂದು ರಘುಪತಿ ಹೇಳಿದ.

ಸೂಜ ದೃಢ ಸ್ವರದಲ್ಲಿ ಹೇಳಿದ—"ಇಲ್ಲ, ಇಲ್ಲ. ಅದು ಸಾಧ್ಯವಿಲ್ಲ ಯುದ್ಧ-ಕಲಹ ಮಾಡಲು ಸಾಧ್ಯವಿಲ್ಲ."

"ಯುದ್ಧದ ವೆಚ್ಚಕ್ಕಾಗಿ ಇನ್ನೂ ಮೂವತ್ತಾರು ಸಾವಿರ ವರಹಗಳನ್ನು ನಾನು ಇಟ್ಟು ಹೋಗುತ್ತೇನೆ. ತ್ರಿಪುರದಲ್ಲಿ ನಕ್ಷತ್ರರಾಯ ರಾಜನಾಗುತ್ತಲೆ ಒಂದು ವರ್ಷದ ಆದಾಯವನ್ನು ಸೇನಾಪತಿಯ ಕೈಯಲ್ಲಿ ಕೊಟ್ಟು ಕಳುಹಿಸುವೆ." ಎಂದು ರಘುಪತಿ ಹೇಳಿದ.

ಈ ಸಲಹೆ ಸೂಜನಿಗೆ ಬಹಳ ಯುಕ್ತಿಸಂಗತವಾಗಿ ತೋರಿತು. ಮಂತ್ರಿಗಳೂ ಅವನೊಡನೆ ಒಪ್ಪುತ ಸೂಚಿಸಿದರು. ಒಂದು ಗುಂಪು ಮೊಗಲ ಸೈನ್ಯವನ್ನು ಸಂಗಡ ಕರೆದುಕೊಂಡು ರಘುಪತಿಯೂ ನಕ್ಷತ್ರರಾಯನೂ ತ್ರಿಪುರದ ಕಡೆಗೆ ಪಯಣ ಹೊರಟರು.

## ೨೯

ಈ ಕಾದಂಬರಿ ಆರಂಭವಾಗಿ ಈಗ ಎರಡು ವರ್ಷ ಕಳೆದಿರುವದು. ಧ್ರುವ ಆಗ ಎರಡು ವರ್ಷದ ಮಗುವಾಗಿದ್ದ. ಈಗ ಅವನ ವಯಸ್ಸು ನಾಲ್ಕು. ಈಗ ಅವನು ಬಹಳ ಮಾತು ಕಲಿತಿರುವ. ಈಗ ಅವನು ತನ್ನನ್ನು ಬಹಳ ದೊಡ್ಡ ಮನುಷ್ಯನೆಂದು ತಿಳಿದಿರುವನು. ಎಲ್ಲ ಮಾತನ್ನೂ ಸ್ಪಷ್ಟವಾಗಿ ಆಡಲಾರ. ಆದರೂ ಬಹಳ ಗಟ್ಟಿಯಾಗಿ ಮಾತನಾಡುವನು. ರಾಜನಿಗೆ ಆಗಾಗ ಅವನು 'ಗೊಂಬೆ ಕೊಡ್ತೀನಿ' ಎಂದು ಆಶೆತೋರಿ

ತೃಪ್ತಿ ಉಂಟುಮಾಡುವನು. ಒಂದು ವೇಳೆ ರಾಜನಲ್ಲಿ ಯಾವುದಾದರೂ ತುಂಟಾಟದ ಲಕ್ಷಣ ತೋರಿಬಂದರೆ ಧ್ರುವ ಅವನಿಗೆ "ಕೋಣೆಯಲ್ಲಿ ಕೂಡಿ ಬೀಗ ಹಾಕುತ್ತೇನೆ" ಎಂದು ಬಹಳವಾಗಿ ಹೆದರಿಸುವನು. ಈ ರೀತಿಯಲ್ಲಿ ರಾಜ ಈಗ ವಿಶೇಷ ಆಳಿಕೆಯಲ್ಲಿರುವನು.—ಧ್ರುವನಿಗೆ ತಿಳಿಯದೆ ಯಾವ ಕೆಲಸವನ್ನಾದರೂ ಮಾಡುವುದು ಸಾಧ್ಯವೆಂಬ ನಂಬಿಕೆ ಅವನಿಗೆ ಅಷ್ಟಾಗಿ ಇರಲಿಲ್ಲ.

ಈ ನಡುವೆ ಇದ್ದಕ್ಕಿದ್ದಂತೆ ಧ್ರುವನಿಗೆ ಒಬ್ಬಳು ಗೆಳತಿ ದೊರೆತಿರುವಳು. ಒಬ್ಬಳು ನೆರೆಮನೆಯ ಹುಡುಗಿ. ಧ್ರುವನಿಗಿಂತ ಆರು ತಿಂಗಳು ಕಿರಿಯವಳು. ಹತ್ತು ನಿಮಿಷದೊಳಗೆ ಇಬ್ಬರಿಗೂ ಶಾಶ್ವತವಾದ ಸ್ನೇಹ ಉಂಟಾಯಿತು. ನಡುವೆ ಸ್ವಲ್ಪ ಮನಸ್ತಾಪ ಬರುವ ಸಂಭವ ತೋರಿತು. ಧ್ರುವನ ಕೈಯಲ್ಲಿ ಒಂದು ದೊಡ್ಡ ಬತ್ತಾಸು ಇತ್ತು. ಸ್ನೇಹದ ಮೊದಲ ಉಸುರಿನಲ್ಲಿ ಧ್ರುವ ತನ್ನ ಎರಡು ಪುಟ್ಟ ಬೆರಳುಗಳಿಂದ ಬಹಳ ಎಚ್ಚರಿಕೆಯಿಂದ ಸಣ್ಣ ತುಂಡೊಂದನ್ನು ಮುರಿದು ಕೂಡಲೆ ತನ್ನಗೆಳತಿಯ ಬಾಯಿಗೆ ತುರುಕಿ ಬಹಳ ಅನುಗ್ರಹದೊಡನೆ ಕತ್ತಲ್ಲಾಡಿಸಿ "ನೀನು ತಿನ್ನು" ಎಂದ. ಗೆಳತಿ ಮಿಠಾಯಿ ತಿಂದು ತೃಪ್ತಿಹೊಂದಿ "ಇನ್ನೂ ಬೇಕು" ಎಂದಳು.

ಈಗ ಧ್ರುವ ಕಳವಳಗೊಂಡ. ಗೆಳೆತನದ ಆಧಾರ ಮಾಡಿಕೊಂಡು ಇಷ್ಟೊಂದು ಹಕ್ಕು ಸ್ಥಾಪಿಸಲು ಪ್ರಯತ್ನಿಸುವದು ನ್ಯಾಯಸಂಗತವಲ್ಲ ವೆಂದು ಅನಿಸಿತು. ಧ್ರುವ ತನ್ನ ಸ್ವಭಾವಸಹಜ ಗಾಂಭೀರ್ಯದಿಂದಲೂ, ಗೌರವದಿಂದಲೂ ಕತ್ತಲ್ಲಾಡಿಸಿ ಕಣ್ಣರಳಿಸಿಕೊಂಡು—"ಛಿ, ಇನ್ನು ತಿನ್ನ ಬಾರದು. ಮೈಗಾಗೋಲ್ಲ. ಅಪ್ಪ ಹೊಡೀತಾರೆ-" ಎಂದ. ಹೀಗೆ ಹೇಳಿ ಹೆಚ್ಚು ಸಾವಕಾಶಮಾಡದೆ ಬತ್ತಾಸನ್ನೆಲ್ಲ ತನ್ನ ಬಾಯೊಳಕ್ಕೆ ಒಂದೇ ಸಲಕ್ಕೆ ತುರುಕಿಕೊಂಡು ಮುಗಿಸಿಬಿಟ್ಟ. ಕೂಡಲೆ ಹುಡುಗಿಯ ಮುಖದ ಸ್ನಾಯುಗಳಲ್ಲಿ ಪರಿವರ್ತನೆಯಾಗತೊಡಗಿತು ತುಟಿಗಳು ಅರಳಲು ಆರಂಭಿಸಿತು. ಹುಬ್ಬುಗಳು ಮೇಲಕ್ಕೆ ಏಳಲಾರಂಭಿಸಿತು. ಮುಂಬರುವ ಅಳುವಿನ ಲಕ್ಷಣವೆಲ್ಲ ವ್ಯಕ್ತಪಟ್ಟಿತು.

ಧ್ರುವ ಯಾರ ಅಳುವನ್ನೂ ಸಹಿಸಲಾರ. ಕೂಡಲೇ ಗಂಭೀರವಾದ ಸಂತೈಸುವ ಧ್ವನಿಯಲ್ಲಿ "ನಾಳೆ ಕೊಡುತ್ತೇನೆ" ಎಂದ. ರಾಜ ಬರುತ್ತಲೆ

ಧ್ರುವ ಬಹಳ ಬುದ್ಧಿವಂತನಾಗಿ ಹೊಸಗೆಳತಿಯ ಕಡೆ ತೋರಿಸುತ್ತ "ಇವಳನ್ನು ಏನೂ ಅನ್ನಬೇಡ. ಇವಳು ಅಳುತ್ತಾಳೆ. ಛಿ, ಹೊಡೆಯ ಬಾರದು, ಛಿ" ಎಂದ.

ರಾಜನಿಗೆ ಯಾವ ಬಗೆಯ ದುರಭಿಪ್ರಾಯವೂ ಇರಲಿಲ್ಲವೆನ್ನುವುದು ಸತ್ಯ. ಆದರೂ ಮೇಲೆ ಬಿದ್ದು ರಾಜನನ್ನು ಎಚ್ಚರಗೊಳಿಸುವುದು ಆವಶ್ಯಕವೆಂದು ಧ್ರುವ ಆಲೋಚಿಸಿದ. ರಾಜ ಹುಡುಗಿಯನ್ನು ಹೊಡೆಯಲಿಲ್ಲ. ತನ್ನ ಉಪದೇಶ ವ್ಯರ್ಥವಾಗಲಿಲ್ಲ ಎನ್ನುವುದನ್ನು ಧ್ರುವ ಸ್ಪಷ್ಟವಾಗಿ ಕಂಡ.

ಆ ಬಳಿಕ ಧ್ರುವ ರಕ್ಷಕನ ಭಾವ ತಾಳಿ ಯಾವ ಬಗೆಯ ವಿಪತ್ತಿನ ಹೆದರಿಕೆಯೂ ಇಲ್ಲವೆನ್ನುವುದನ್ನು ತಿಳಿಸಿ ಅತಿ ಗಾಂಭೀರ್ಯದೊಡನೆ ಹುಡುಗಿಗೆ ನಂಬಿಕೆಯುಂಟುಮಾಡಲು ಪ್ರಯತ್ನಿಸತೊಡಗಿದ.

ಸ್ವಲ್ಪವಾದರೂ ಅದರ ಆವಶ್ಯಕತೆಯಿರಲಿಲ್ಲ. ಏಕೆಂದರೆ ಹುಡುಗಿ ತಾನಾಗಿಯೇ ನಿರ್ಭಯವಾಗಿ ರಾಜನ ಹತ್ತಿರ ಹೋಗಿ ಅತ್ಯಂತ ಕುತೂಹಲದಿಂದಲೂ ಆಸಕ್ತಿಯಿಂದಲೂ ಅವನ ಕೈಯ ಕಂಕಣ ತಿರುಗಿಸಿ ತಿರುಗಿಸಿ ನೋಡತೊಡಗಿದಳು.

ಈ ರೀತಿ ಧ್ರುವ ಕೇವಲ ತನ್ನ ಪ್ರಯತ್ನದಿಂದಲೂ ಪರಿಶ್ರಮದಿಂದಲೂ ಜಗತ್ತಿನಲ್ಲಿ ಶಾಂತಿಯನ್ನೂ ಪ್ರೀತಿಯನ್ನೂ ಸ್ಥಾಪಿಸಿ ಉಬ್ಬು ಮನದಿಂದ ರಾಜನ ಮುಖದ ಹತ್ತಿರ ಮಲ್ಲಿಗೆ ಹೂವಿನಂತಹ ತನ್ನ ದಪ್ಪ ದುಂಡನೆಯ ಕೋಮಲ ಮುಖವನ್ನು ಮುಂದೆ ನೀಡಿದ. ರಾಜ್ಯದ ಸದ್ವ್ಯವಹಾರದ ಬಹುಮಾನ—ರಾಜ ಮುದ್ದಿಟ್ಟ.

ಆಗ ಧ್ರುವ ತನ್ನ ಗೆಳತಿಯ ಮುಖ ಎತ್ತಿ ಹಿಡಿದು ರಾಜನಿಗೆ ಅಪ್ಪಣೆ ಹಾಗೂ ಬೇಡಿಕೆ ಬೆರೆತ ದನಿಯಲ್ಲಿ "ಇವಳಿಗೂ ಮುತ್ತುಕೊಡು—" ಎಂದ.

ರಾಜ ಧ್ರುವನ ಆಜ್ಞೆಯನ್ನು ಮೀರುವ ಸಾಹಸ ಮಾಡಲಿಲ್ಲ. ಹುಡುಗಿ ಆಗ ಸ್ವಲ್ಪವೂ ಕರೆಯನ್ನು ಎದುರು ನೋಡದೆ ಬಹಳ ಬಳಕೆಯ ಭಾವದಿಂದ ಕಳೆಗುಂದದ ಮುಖದೊಡನೆ ರಾಜನ ಮಡಿಲಲ್ಲಿ ಕುಳಿತಳು.

ಇಷ್ಟು ಹೊತ್ತೂ ಜಗತ್ತಿನಲ್ಲಿ ಯಾವ ಬಗೆಯ ಅಶಾಂತಿ ಅಥವಾ ಸ್ವೇಚ್ಛಾವರ್ತನೆಯ ಲಕ್ಷಣವಿರಲಿಲ್ಲ. ಆದರೆ ಈ ಸಲ ಧ್ರುವನ ಸಿಂಹಾಸನಕ್ಕೆ ಧಕ್ಕೆ ತಗಲುತ್ತಲೆ ಅವನ ಹಿರಿಯ ಪ್ರೇಮ ತಳಮಳಗೊಳ್ಳತೊಡಗಿತು. ರಾಜನ ತೊಡೆಯಮೇಲೆ ಅವನು ತನ್ನ ಏಕಮಾತ್ರ ಹಕ್ಕನ್ನು ಸ್ಥಾಪಿಸುವ ಪ್ರಯತ್ನ ಬಲವಾಯಿತು. ಮುಖ ಬಹಳ ಭಾರವಾಯಿತು. ಹುಡುಗಿಯನ್ನು ಒಂದೆರಡು ಬಾರಿ ಎಳೆದಾಡಿದ. ಅಷ್ಟೇ ಏಕೆ, ತನಗಿಂತಲೂ ವಯಸ್ಸಿನಲ್ಲಿ ಕಿರಿಯವಳಾದ ಹುಡುಗಿಯನ್ನು ಹೊಡೆಯುವುದೂ ಅಷ್ಟು ಅನ್ಯಾಯವಾಗಿ ತೋರಲಿಲ್ಲ. ಆಗ ರಾಜ ಅದನ್ನು ತಡೆಯುವ ಉದ್ದೇಶದಿಂದ ಧ್ರುವನನ್ನು ತನ್ನ ಅರ್ಧ ತೊಡೆಯ ಕಡೆಗೆ ಎಳೆಕೊಂಡ. ಅದರಿಂದಲೂ ಧ್ರುವನ ಅಸಮಾಧಾನ ನೀಗಲಿಲ್ಲ. ಅರ್ಧವನ್ನು ಪಡೆದುಕೊಳ್ಳುವ ಹೊಸ ಆಕ್ರಮಣದ ಪ್ರಯತ್ನ ನಡೆಸಲಾರಂಭಿಸಿದ. ಇಂಥ ಹೊತ್ತಿನಲ್ಲಿ ಹೊಸ ರಾಜಪುರೋಹಿತ ಬಿಲ್ವನ ಠಾಕೂರ ಕೊಠಡಿಯೊಳಕ್ಕೆ ಬಂದು ಸೇರಿದ.

ರಾಜ ಇಬ್ಬರನ್ನೂ ತೊಡೆಯಿಂದ ಇಳಿಸಿ ಆತನಿಗೆ ನಮಸ್ಕಾರ ಮಾಡಿದ. “ಠಾಕೂರರಿಗೆ ನಮಸ್ಕಾರ ಮಾಡು.” ಧ್ರುವನಿಗೆ ಅದು ಆವಶ್ಯಕ ಎಂದೆನಿಸಲಿಲ್ಲ—ಬಾಯಲಿ ಬೆರಳಿಟ್ಟು ವಿರೋಧಭಾವನೆಯಿಂದ ನಿಂತಿದ್ದ. ಹುಡುಗಿ ತಾನಾಗಿಯೇ ರಾಜನ ಇದಿರಿನಲ್ಲಿ ಪುರೋಹಿತನಿಗೆ ನಮಸ್ಕಾರ ಮಾಡಿದಳು.

ಬಿಲ್ವನ್‌ಠಾಕೂರ್—ಧ್ರುವನನ್ನು ಹತ್ತಿರ ಎಳೆದುಕೊಳ್ಳುತ್ತ “ನಿನಗೆ ಈ ಗೆಳತಿ ಎಲ್ಲಿ ಸಿಕ್ಕಿದಳು” ಎಂದು ಪ್ರಶ್ನಿಸಿದ.

ಧ್ರುವ ಕ್ಷಣ ಹೊತ್ತು ಯೋಚಿಸಿ “ನಾನು ಟಕ್ ಟಕ್ ಹತ್ತೇಕು” ಎಂದ. ಟಕ್ ಟಕ್ ಎಂದರೆ ಕುದುರೆ.

“ಶಹಭಾಸ್—ಪ್ರಶ್ನೆಗೂ ಉತ್ತರಕ್ಕೂ ಎಷ್ಟು ಹೊಂದಿಕೆ?” ಎಂದು ಪುರೋಹಿತ ಹೇಳಿದ,

ಇದ್ದಕ್ಕಿದ್ದಂತೆ ಧ್ರುವನ ದೃಷ್ಟಿ ಹುಡುಗಿಯ ಕಡೆ ಬಿತ್ತು. ಅವಳ ವಿಷಯದಲ್ಲಿ ಅತಿ ಸಂಕ್ಷೇಪವಾಗಿ ತನ್ನ ತಿಳುವಳಿಕೆಯನ್ನೂ ಅಭಿಪ್ರಾಯ

ವನ್ನೂ ವ್ಯಕ್ತಪಡಿಸಿ ಹೇಳಿದ. "ಅವಳು ತುಂಟಿ, ಅವಳನ್ನು ಹೊಡೀತಿನಿ" ಎಂದು ಆಕಾಶದಲ್ಲಿ ತನ್ನ ಕ್ಷುದ್ರ ಮುಷ್ಟಿಯನ್ನು ಬೀಸಿದ.

ರಾಜ ಗಂಭೀರ ಭಾವದಿಂದ "ಛಿ ಧ್ರುವ" ಎಂದ.

ಒಂದೇ 'ಉಫ್'ಗೆ ದೀಪ ಆರುವಂತೆ ಕೂಡಲೆ ಧ್ರುವನ ಮುಖ ಕಳೆಗುಂದಿತು. ಮೊದಲು ಅವನು ಕಣ್ಣೀರು ತಡೆಯುವುದಕ್ಕಾಗಿ ಎರಡು ಹಿಡಿಗಳಿಂದಲೂ ತನ್ನ ಕಣ್ಣುಗಳನ್ನು ಉಜ್ಜಿಕೊಳ್ಳತೊಡಗಿದ. ಕಡೆಗೆ ನೋಡ ನೋಡುತ್ತ ಕಿರಿದಾದ ಉಬ್ಬಿದ ಹೃದಯವನ್ನು ತಡೆಯಲಾರದೆ ಅಳತೊಡಗಿದ.

ಬಿಲ್ವನ್‌ಠಾಕೂರ್ ಅವನನ್ನು ಆಡಿಸಿ, ಬಗ್ಗಿಸಿ, ತೊಡೆಗೆತ್ತಿ ಮೇಲೆತ್ತಿ ಕೆಳಗಿಳಿಸಿ ಸಾಕುಸಾಕುಮಾಡಿದ. ಗಟ್ಟಿಯಾಗಿಯೂ ವೇಗವಾಗಿಯೂ ಉಚ್ಚರಿಸುತ್ತ ಹೇಳಿದ—ಕೇಳು, ಕೇಳು ಧ್ರುವ ನಿನಗೊಂದು ಶ್ಲೋಕ ಹೇಳುತ್ತೇನೆ ಕೇಳು —

ಕಲಹ ಕಟಕಟಾಂ ಕಾತ್ ಕಾಠಿನ್ಯ ಕಾರ್ಯಂ |
ಕಟನ ಕಿಟನ ಕೀಟಂ ಕುಟ್ಮಲಂ ಖಟ್ಟ ಮಟ್ಟಂ ||

ಅರ್ಥ ಇಷ್ಟೆ—ಯಾವ ಹುಡುಗ ಅಳುವನೋ ಅವನನ್ನು ಕಲಹ ಕಟಕಟಿಯೊಳಗೆ ಕೂಡಿ ಚೆನ್ನಾಗಿ ಕಾರ್ ಕಾಠಿನ್ಯ ಕಾರ್ಯಂ ಕೊಡಬೇಕು. ಆಮೇಲೆ ಒಂದಿಷ್ಟು ಕಟನ, ಕಿಟನ ಕೀಟಂ ತಂದು ಒಟ್ಟಿಗೆ ಮೂರು ದಿನಗಳು ಕುಟ್ಮಲಂ ಖಟ್ಟ ಮಟ್ಟಂ—

ಪುರೋಹಿತ ಠಾಕೂರ ಹೀಗೆ ನಿಲ್ಲಿಸದೆ ಮಾತು ಮುಂದುವರಿಸುತಿದ್ದ. ಧ್ರುವನ ಅಳುವಿಕೆ ಅಸಂಪೂರ್ಣ ಸ್ಥಿತಿಯಲ್ಲಿ ಸಂಪೂರ್ಣವಾಗಿ ಮುಕ್ತಾಯವಾಯಿತು. ಅವನು ಮೊದಲು ಗದ್ದಲದಿಂದ ಬೆರಗಾಗಿ ಕಕ್ಕುಬಿಕ್ಕಾಗಿ ಬಿಲ್ವನಠಾಕೂರನ ಮುಖದ ಕಡೆ ನೀರು ತುಂಬಿದ ಕಣ್ಣೆತ್ತಿ ನೋಡುತಿದ್ದ. ಆ ಬಳಿಕ ಆತನ ಮುಖ, ಕೈ ಆಡುವುದನ್ನು ನೋಡಿ ಅವನಿಗೆ ಬಹಳ ಆಶ್ಚರ್ಯ ಉಂಟಾಯಿತು.

ಅವನು ಬಹಳ ಖುಷಿಯಾಗಿ–"ಇನ್ನೂ ಹೇಳು" ಎಂದ. ಪುರೋಹಿತ ಮೇಲೂ ಮಾತನಾಡಿದ. ಧ್ರುವ ಅತಿಯಾಗಿ ನಗುತ್ತ ನಗುತ್ತ 'ಇನ್ನೂ ಹೇಳು' ಎಂದ. ರಾಜ ಧ್ರುವನ ಕಣ್ಣೀರು ತುಂಬಿದ ಕೆನ್ನೆಯಲ್ಲೂ, ನಗು ತುಂಬಿದ ತುಟಿಯುಮೇಲೂ ಬಾರಿಬಾರಿಗೆ ಮುತ್ತುಕೊಡತೊಡಗಿದ. ಆಗ ರಾಜ, ರಾಜಪುರೋಹಿತ ಮತ್ತು ಇಬ್ಬರು ಹುಡುಗ ಹುಡುಗಿಯರು ಕಲೆತು ಆಟವಾಡತೊಡಗಿದರು.

ಬಿಲ್ವನ ಠಾಕೂರ ರಾಜನಿಗೆ ಹೇಳಿದ–"ಮಹಾರಾಜ, ಇವರ ಜೊತೆ ಸುಖವಾಗಿರುವಿರಿ. ಹಗಲೂ ರಾತ್ರಿ ಅತಿ ಬುದ್ಧಿವಂತರ ಸಂಗಡ ಇದ್ದರೆ ಬುದ್ಧಿ ಲೋಪವಾಗುವದು. ಕತ್ತಿಯನ್ನು ಒಂದೇ ಸಮನೆ ಸಾಣೆ ಹಿಡಿಯುತ್ತಿದ್ದರೆ ಕತ್ತಿ ಕ್ರಮೇಣ ಸಣ್ಣದಾಗಿ ಕಣ್ಣಿಗೆ ಕಾಣದಾಗುವದು. ಒಂದು ದಪ್ಪ ಹಿಡಿ ಮಾತ್ರ ಉಳಿಯುವದು."

ರಾಜ ನಗುತ್ತ "ನನ್ನ ಸೂಕ್ಷ್ಮ ಬುದ್ಧಿಯ ಲಕ್ಷಣ ಸ್ಪಷ್ಟವಾಗಿಲ್ಲ ವೆಂದು ತೋರುವದು." ಎಂದು ಹೇಳಿದ.

ಬಿಲ್ವನ–ಹಾಗಲ್ಲ, ಸೂಕ್ಷ್ಮ ಬುದ್ಧಿಯ ಒಂದು ಲಕ್ಷಣವೇ ಇದು. ಅದು ಸುಲಭವಾದ ವಸ್ತುವನ್ನು ಕಷ್ಟವಾಗಿ ಪರಿವರ್ತಿಸುವದು. ಪ್ರಪಂಚದಲ್ಲಿ ಹೆಚ್ಚು ಬುದ್ಧಿವಂತರು ಇಲ್ಲದಿದ್ದರೆ ಪ್ರಪಂಚದ ಎಷ್ಟೋ ಕೆಲಸ ಸುಲಭ ವಾದೀತು. ನಾನಾ ಬಗೆಯ ಸೌಕರ್ಯ ಮಾಡಲು ಹೋದರೇನೇ ನಾನಾ ಬಗೆಯ ಅಸೌಕರ್ಯ ಒದಗುವದು. ಹೆಚ್ಚು ಬುದ್ಧಿಪಡೆದು ಮನುಷ್ಯ ಏನು ಮಾಡಬಲ್ಲನೆನ್ನುವದು ಅರ್ಥವಾಗದು.

"ಐದು ಬೆರಳುಗಳಿಂದಲೆ ಕೆಲಸ ಚೆನ್ನಾಗಿ ನಡೆಯುವದು. ಈಗ ದುರದೃಷ್ಟದಿಂದ ಏಳು ಬೆರಳುಗಳಿದ್ದದ್ದೇ ಆದರೆ ಬಯುಸಿಯೋ ಕೆಲಸ ಹೆಚ್ಚಿಸಿ ಕೊಳ್ಳಬೇಕಾಗುವುದು." ಎಂದು ರಾಜ ಹೇಳಿದ.

ರಾಜ ಧ್ರುವನನ್ನು ಕರೆದ. ಧ್ರುವ ತನ್ನ ಗೆಳತಿಯೊಡನೆ ಪುನಃ ಶಾಂತಿ ಸ್ಥಾಪನೆ ಮಾಡಿಕೊಂಡು ಆಟ ಆಡುತ್ತಿದ್ದ. ರಾಜ ಕರೆದದ್ದನ್ನು ಕೇಳಿ ಕೂಡಲೆ ಆಟ ಬಿಟ್ಟು ರಾಜನ ಹತ್ತಿರ ಬಂದು ನಿಂತ.

ರಾಜ ಅವನನ್ನು ಎದುರಿಗೆ ಕೂರಿಸಿಕೊಂಡು "ಧ್ರುವ, ಆ ಹೊಸ ಹಾಡನ್ನು ಠಾಕೂರರಿಗೆ ಹಾಡಿ ತೋರಿಸು" ಎಂದ. ಆದರೆ ಧ್ರುವ ಬಹಳ ಅಸಮ್ಮತಿಯ ಭಾವದಿಂದ ಠಾಕೂರರ ಮುಖ ನಿಟ್ಟಿಸಿದ.

ರಾಜ ಆಸೆ ತೋರಿಸಿ "ನಿನ್ನನ್ನು ಟಕ್‌ಟಕ್ ಮೇಲೆ ಹತ್ತಿಸುತ್ತೇನೆ" ಎಂದ.

ಧ್ರುವ ತನ್ನ ಅರೆಬರೆ ಉಚ್ಚಾರಣೆಯಲ್ಲಿ ಹಾಡತೊಡಗಿದ.—

(ಎನಗೆ) ಆರ್‍ವರು ಕೂಡಿ ಹಾದಿ ತೋರುವೆನೆಂಬರು
ಹೆಜ್ಜೆ ಹೆಜ್ಜೆಗೂ ಹಾದಿ ತಪ್ಪುತಿಹೆನಯ್ಯ

ನಾನಾ ಮಾತಿನ ರೂಪದಿ ನಾನಾಮುನಿಗಳು ಹೇಳಿಹರು
ಅದರಿಂದಲೆ ಸಂದೇಹದಿ ಕೂಗುತಿಹೆನಯ್ಯ

ನಿನ್ನ ಬಳಿ ಸಾರುವೆನೆಂಬ ಬಯಕೆಯಿತ್ತು
ನಿನ್ನ ನುಡಿ ಆಲಿಸಿ ತಪ್ಪನಳಿಸುವೆನೆಂಬೆಣಿಕೆಯಿತ್ತು
ಕಿವಿಯ ಬಳಿ ಎಲ್ಲ ಕೂಡಿ ವಾದಿಸುತಿವೆಯಯ್ಯ
ನೂರು ಜನರ ನೂರು ಮಾತುಗಳಯ್ಯ

ಕಾತರಗೊಂಡ ಎನ್ನ ಜೀವದಿ ನಾ ನಿನ್ನ ಬೇಡುವಾಗ
ಮರೆಸಿ ಅಸ್ತವಾಗಿ ಎಲ್ಲ ನಿಲ್ಲುವರಯ್ಯ

ಬುವಿಯ ಧೂಳಿ ಅದಕೆ ಹೊತ್ತಿಹೆನಯ್ಯ
ನಿನ್ನ ಚರಣಧೂಳಿ ದೊರೆಯುದಿಹುದಯ್ಯ
ನನ್ನ ನೂ ಹೋಳುಗಳು ನೂರು ದಿಕ್ಕಿನಲಿ ಧಾವಿಸುತಿವೆ
ತಮ್ಮೊಳಗೆ ತಾವೆ ವಾದಿಸುತಿವ

ಯಾವುದ ಸಂತೈಸಲಿ, ಏನೀ ಚಿಂತೆ
ಒಂದೆ ಹಲವಾಗಿಹುದಯ್ಯ

ನಿನ್ನ ಪ್ರೇಮದಿ ಕಟ್ಟಿ ನನ್ನನೊಂದು ಮಾಡಯ್ಯ
ಅವಿಚ್ಛೇದ ಮಾರ್ಗವೊಂದೆನಗೆ ತೋರಯ್ಯ

ಸುಳಿಯಲ್ಲಿ ಸಿಕ್ಕಿ ಅದೆಷ್ಟು ಹಲುಬಿ ಸಾಯಲಯ್ಯ
ನಿನ್ನಡಿಗಳಲ್ಲಿ ಎತ್ತಿಕೊಳ್ಳಯ್ಯ—

ಧ್ರುವನ ಬಾಯಿನ ಅರೆಬರೆ ಮಾತಿನಲ್ಲಿ ಈ ಕವಿತೆ ಕೇಳಿ ಬಿಲ್ವನ ಠಾಕೂರ ಬಹಳ ಮರುಕಗೊಂಡ. ಆತ "ಆಶೀರ್ವಾದ ಮಾಡುವೆ. ನೀನು ಚಿರಂಜೀವಿಯಾಗಿರು" ಎಂದು ಹೇಳಿದ. ಧ್ರುವನನ್ನು ತೊಡೆಗೆತ್ತಿಕೊಂಡು "ಇನ್ನೊಮ್ಮೆ ಹಾಡು" ಎಂದ.

ಧ್ರುವ ದೃಢವಾದ ಮೌನದಿಂದ ಅಸಮ್ಮತಿ ತೋರ್ಪಡಿಸಿದ. ಪುರೋಹಿತ ಕಣ್ಣು ಮುಚ್ಚಿಕೊಂಡು "ಹಾಗಾದರೆ ನಾನು ಅಳುತ್ತೇನೆ." ಧ್ರುವ ಸ್ವಲ್ಪ ಹೆದರಿಕೊಂಡು—"ನಾಳೆ ಹೇಳುತ್ತೇನೆ. ಛಿ ಅಳಬಾರದು. ಈಗ ನೀನು ಮಯೆ (ಮನೆ)ಗೆ ಹೋಗು. ಅಪ್ಪ ಹೊಲೀ (ಡೀ)ತಾರೆ" ಎಂದ.

ಬಿಲ್ವನ ನಕ್ಕು "ಮಧುರ ಕಂಠದ ಗದರಿಕೆ" ಎಂದ. ರಾಜನ ಹತ್ತಿರ ಅಪ್ಪಣೆ ಪಡೆದು ಪುರೋಹಿತ ಠಾಕೂರ ಬೀದಿಗೆ ನಡೆದ.

ದಾರಿಯಲ್ಲಿ ದಾರಿಗರಿಬ್ಬರು ಹೋಗುತ್ತಿದ್ದರು. ಒಬ್ಬ ಇನ್ನೊಬ್ಬನಿಗೆ ಹೇಳುತಿದ್ದ. "ಮೂರು ದಿನ ಅವನ ಮನೆ ಬಾಗಿಲಲ್ಲಿ ತಲೆ ಚಚ್ಚಿಕೊಂಡೆ. ಒಂದು ಕಾಸನ್ನೂ ಹೊರಪಡಿಸಲಾಗಲಿಲ್ಲ. ಇನ್ನು ಅವನು ಬೀದಿಗೆ ಬರಲಿ. ಅವನ ತಲೆ ಒಡೆದು ಹಾಕುತ್ತೇನೆ. ಅದರಿಂದೇನಾಗುವದೊ ನೋಡೋಣ."

ಹಿಂದಿನಿಂದ ಬಿಲ್ವನ—"ಅದರಿಂದಲೂ ಯಾವ ಫಲವೂ ಆಗದು. ಅಷ್ಟೂ ಕಾಣದೇನಪ್ಪ. ತಲೆಯಲ್ಲಿ ಏನೇನೂ ಇರದು. ದುರ್ಬುದ್ಧಿ ಮಾತ್ರ ಇರುವುದು. ಅದಕ್ಕಿಂತ ನಿನ್ನ ತಲೆ ಚಚ್ಚಿಕೊಳ್ಳುವುದು ಮೇಲು. ಯಾರಿಗೂ ಸಮಜಾಯಿಷಿ ಕೊಡಬೇಕಾಗಿರದು" ಎಂದ.

ದಾರಿಗರಿಬ್ಬರೂ ಬೆದರಿ ಹೆದರಿ ಠಾಕೂರನಿಗೆ ನಮಸ್ಕಾರ ಮಾಡಿದರು. "ಅಪ್ಪಾ, ನೀವು ಹೇಳುತ್ತಿದ್ದ ಮಾತಿದೆಯಲ್ಲ, ಅದು ಒಳ್ಳೆಯದಲ್ಲ" ಎಂದು ಬಿಲ್ವನ ಹೇಳಿದ.

ದಾರಿಗರಿಬ್ಬರೂ “ ಅಪ್ಪಣೆ, ಠಾಕೂರ್. ಇನ್ನು ಇಂತಹ ಮಾತನ್ನು ಹೇಳುವುದಿಲ್ಲ ” ಎಂದರು.

ಪುರೋಹಿತ ಠಾಕೂರನನ್ನು ದಾರಿಯಲ್ಲಿ ಹುಡುಗರು ಅಡ್ಡಗಟ್ಟಿದರು. ಆತ—“ ಇವತ್ತು ಸಂಜೆಗೆ ನಾನು ಇರುವಲ್ಲಿಗೆ ಬನ್ನಿ. ಕತೆಹೇಳುವೆ ” ಎಂದ.

ಸಂತೋಷದಿಂದ ಹುಡುಗರು ಹಾರಾಟ ಚೀರಾಟ ತೊಡಗಿದರು. ಬಿಲ್ವನ ಠಾಕೂರ ಒಂದೊಂದು ದಿನ ಮಧ್ಯಾಹ್ನ ರಾಜ್ಯದ ಹುಡುಗರನ್ನು ಕಲೆ ಹಾಕಿಕೊಂಡು ಅವರುಗಳಿಗೆ ಸರಳ ಭಾಷೆಯಲ್ಲಿ ರಾಮಾಯಣ, ಮಹಾಭಾರತವನ್ನೂ, ಪೌರಾಣಿಕ ಕಥೆಗಳನ್ನೂ ಹೇಳುತಿದ್ದ. ನಡುನಡುವೆ ಒಂದೆರಡು ನೀರಸ ಸಂಗತಿಗಳನ್ನು ಸಾಧ್ಯವಾದ ಮಟ್ಟಿಗೆ ರಸವತ್ತಾಗಿ ಮಾಡಿ ಹೇಳಲು ಪ್ರಯತ್ನಿಸುವನು. ಆದರೆ ಹುಡುಗರ ನಡುವೆ ಆಕಳಿಕೆಯ ಸಾಂಕ್ರಾಮಿಕ ಹರಡುವುದನ್ನು ಕಂಡಾಗ ಅವರುಗಳನ್ನು ದೇವಾಲಯದ ತೋಟಕ್ಕೆ ಕಳುಹಿಸುವನು. ಅಲ್ಲಿ ಹಣ್ಣಿನ ಮರಗಳು ಹೇರಳವಾಗಿರುವವು. ಹುಡುಗರು ಆಕಾಶ ಬಿರಿಯುವಂತೆ ಕೂಗಾಡುತ್ತ ಮಂಗಗಳಂತೆ ಕೊಂಬೆ ಕೊಂಬೆಯಲ್ಲೂ ಲೂಟಿಮಾಡುವರು. ಬಿಲ್ವನ ಸಂತೋಷದಿಂದ ನೋಡುವನು.

ಬಿಲ್ವನ ಯಾವ ಸೀಮೆಯವ ಎಂಬುದನ್ನು ಯಾರೂ ಅರಿಯರು. ಬ್ರಾಹ್ಮಣ. ಆದರೆ ಜನಿವಾರ ತ್ಯಾಗಮಾಡಿರುವನು. ಬಲಿದಾನ ಮೊದಲಾದುವನ್ನು ಬಿಟ್ಟು ಒಂದು ಬಗೆಯ ಹೊಸ ಪದ್ಧತಿಯಲ್ಲಿ ದೇವಿಯ ಪೂಜೆಯನ್ನು ಮಾಡುತ್ತಿರುವನು—ಮೊದಲುಮೊದಲು ಅದಕ್ಕೆ ಜನ ಸಂದೇಹವನ್ನೂ ವಿರೋಧವನ್ನೂ ತೋರ್ಪಡಿಸುತ್ತಿದ್ದರು. ಆದರೆ ಈ ಎಲ್ಲವೂ ಒಗ್ಗಿಹೋಗಿದೆ. ಎಲ್ಲರೂ ವಿಶೇಷವಾಗಿ ಬಿಲ್ವನನ ಮಾತಿಗೆ ಒಳಪಟ್ಟವರೆ. ಬಿಲ್ವನ ಎಲ್ಲರ ಮನೆ ಮನೆಗೂ ಹೋಗಿ ಎಲ್ಲರ ಗೃಹಕೃತ್ಯದ ಕಷ್ಟಸುಖ ವಿಚಾರಿಸುವ. ರೋಗಿಗಳಿಗೆ ಕೊಡುತ್ತಿದ್ದ ಔಷಧ ಆಶ್ಚರ್ಯ ರೀತಿಯಲ್ಲಿ ಗುಣ ಕೊಡುವದು. ವಿಪತ್ತಿನಲ್ಲೂ ಆಪತ್ತಿನಲ್ಲೂ ಎಲ್ಲರೂ ಆತನ ಮಾತಿನಂತೆ ಕೆಲಸಮಾಡುವರು. ಆತ ಮಧ್ಯಸ್ಥಗಾರನಾಗಿ ಕೆಲವರ ಜಗಳ ಬಗೆ

ಹರಿಸುವನು. ಅಥವ ಯಾವುದಾದರೂ ವಿಷಯ ಹೇಳಿದ್ದೇ ಆದರೆ ಅದರ ಮೇಲೆ ಯಾರೂ ಮಾತನಾಡರು.

## ೩೦

ಆ ವರುಷ ತ್ರಿಪುರದಲ್ಲಿ ಹಿಂದೆಂದೂ ಸಂಭವಿಸದ ಒಂದು ಘಟನೆ ಘಟಿಸಿತು. ಇದ್ದಕ್ಕಿದ್ದಂತೆ ಉತ್ತರ ದಿಕ್ಕಿನಿಂದ ಗುಂಪು ಗುಂಪಾಗಿ ಇಲಿಗಳು ತ್ರಿಪುರದ ಹೊಲ ಗದ್ದೆಗಳಿಗೆ ಬಂದು ಸೇರಿದುವು. ಬೆಳೆಯೆಲ್ಲವನ್ನೂ ಹಾಳು ಮಾಡಿದುವು. ಅಷ್ಟೇಕೆ, ರೈತರ ಮನೆಗಳಲ್ಲಿ ಕೂಡಿಟ್ಟಿದ್ದ ಬೀಜದ ಕಾಳುಗಳನ್ನೂ ಹೆಚ್ಚುಭಾಗ ತಿಂದು ಹಾಕಿದವು. ರಾಜ್ಯದಲ್ಲಿ ಹಾಹಾಕಾರ ತಲೆ ಹಾಕಿತು. ನೋಡನೋಡುತ್ತ ಕ್ಷಾಮ ಉಂಟಾಯಿತು. ಕಾಡಿನಿಂದ ಹಣ್ಣುಹಂಪಲು ತಂದು ಜನ ಪ್ರಾಣ ಧಾರಣೆ ಮಾಡತೊಡಗಿತು. ಕಾಡಿನ ಅಭಾವವಿರಲಿಲ್ಲ. ಅಲ್ಲದೆ ಕಾಡಿನಲ್ಲಿ ನಾನಾ ಬಗೆಯ ಆಹಾರದ ಬೆಳಸೂ ಇದ್ದುವು. ಮೃಗಗಳಿಂದ ದೊರೆತ ಮಾಂಸ ಪೇಟೆಯಲ್ಲಿ ತಗ್ಗಿನ ಬೆಲೆಗೆ ಮಾರಾಟವಾಗ ತೊಡಗಿತು. ಜನ ಕಾಡುಕೋಣ, ಜಿಂಕೆ, ಮೊಲ, ಮುಳ್ಳುಹಂದಿ, ಹಂದಿ, ಅಳಿಲು, ದೊಡ್ಡದೊಡ್ಡ ನೆಲ ಆಮೆ ಮೊದಲಾದು ವನ್ನು ಬೇಟೆಯಾಡಿ ತಿನ್ನಲು ಆರಂಭಿಸಿತು. ಆನೆ ಸಿಕ್ಕಿದರೆ ಆನೆಯನ್ನೇ ತಿನ್ನುವುದು. ಹೆಬ್ಬಾವನ್ನೂ ತಿನ್ನ ತೊಡಗಿತು. ಕಾಡಿನಲ್ಲಿ ಆಹಾರದ ಹಕ್ಕಿಗಳಿಗೆ ಕೊರತೆಯಿರಲಿಲ್ಲ. ಮರದ ಪೊಟ್ಟರೆಗಳಲ್ಲಿ ಜೇನುಗೂಡೂ ಜೇನುತುಪ್ಪವೂ ಸಿಕ್ಕುವುದು. ಅಲ್ಲಲ್ಲಿ ನದಿಯ ನೀರನ್ನು ಅಡ್ಡಗಟ್ಟಿ ಅದರಲ್ಲಿ ಮಾದಕ ದ್ರವ್ಯಗಳನ್ನು ಹಾಕಲು ಮೀನುಗಳು ಜ್ಞಾನತಪ್ಪಿ ಮೇಲೆ ತೇಲುತಿದ್ದುವು. ಅವೆಲ್ಲ ಮೀನುಗಳನ್ನು ಹಿಡಿದು ಜನ ತಿನ್ನ ತೊಡಗಿತು. ಹಾಗೆಯೇ ಒಣಗಿಸಿ ಸಂಗ್ರಹಿಸ ತೊಡಗಿತು. ಆಹಾರದ ಸಮಸ್ಯೆ ಹೇಗೋ ಒಂದು ವಿಧದಲ್ಲಿ ಬಗೆ ಹರಿಯುತಿತ್ತು; ಆದರೆ ಅತಿಯಾಗಿ ಸ್ವೇಚ್ಛಾವೃತ್ತಿ ತಲೆಹಾಕಿ ಬಿಟ್ಟಿತ್ತು. ಅಲ್ಲಲ್ಲಿ ಕಳ್ಳತನ ಕೊಲೆ ಮೊದಲಾಯಿತು. ಪ್ರಜೆಗಳು ದಂಗೆಯ ಲಕ್ಷಣವನ್ನು ಸ್ಪಷ್ಟಗೊಳಿಸಿದರು. ಅವರುಗಳು "ದೇವಿಯ ಬಲಿ ನಿಲ್ಲಿಸಿದ್ದಕ್ಕಾಗಿ ತಾಯಿಯ ಶಾಪದಿಂದ ಈ ಎಲ್ಲ ದುರ್ಘಟನೆ ಗಳೂ ಸಂಭವಿಸ ತೊಡಗಿವೆ" ಎನ್ನತೊಡಗಿದರು. ಬಿಲ್ವನ ಠಾಕೂರ ಆ

ಮಾತನ್ನು ನಕ್ಕು ಹಾರಿಸಿ ಬಿಡುವನು. ಆತ ಹಾಸ್ಯಕ್ಕಾಗಿ “ ಕೈಲಾಸದಲ್ಲಿ ಕಾರ್ತಿಕ, ಗಣೇಶರ ನಡುವೆ ಅಣ್ಣತಮ್ಮಂದಿರ ಜಗಳ ತಲೆಹಾಕಿದೆ. ಕಾರ್ತಿಕ ನವಿಲಿನಮೇಲೆ ದೂರು ಹೇಳಲು ಗಣೇಶನ ಇಲಿಗಳು ತ್ರಿಪುರದ ತ್ರಿಪುರೇಶ್ವರಿಯ ಬಳಿಗೆ ಬಂದಿವೆ” ಎಂದು ಹೇಳಿದ. ಪ್ರಜೆಗಳು ಅವನ ಈ ಮಾತುಗಳನ್ನು ಸಂಪೂರ್ಣವಾಗಿ ಅಲಕ್ಷಿಸಲಿಲ್ಲ. ಬಿಲ್ವನ್ ಠಾಕೂರನ ಮಾತಿನಂತೆಯೇ ಇಲಿಗಳು ಅದೆಷ್ಟುವೇಗವಾಗಿ ಬಂದವೋ ಅಷ್ಟುವೇಗವಾಗಿ ಹಿಂದಿರುಗಿದವು. ಮೂರು ದಿನಗಳಲ್ಲಿ ಅವುಗಳ ಗುರುತೂ ಉಳಿದಿರಲಿಲ್ಲ. ಕೈಲಾಸದಲ್ಲಿನ ಅಣ್ಣತಮ್ಮಂದಿರ ವ್ಯಾಜ್ಯದ ವಿಷಯವಾಗಿ ಕವನಗಳ ರಚನೆಯಾಗಲು ಮೊದಲಾಯಿತು. ಹೆಂಗಸರು, ಹುಡುಗರು, ತಿರುಪೆಯವರು ಆ ಹಾಡನ್ನು ಹಾಡಲಾರಂಭಿಸಿದರು. ಹಾದಿ ಬೀದಿಯಲ್ಲಿ ಆ ಹಾಡುಗಳು ಪ್ರಚಾರವಾದುವು. ಆದರೆ ರಾಜನ ವಿಷಯದಲ್ಲಿ ವಿರೋಧಭಾವ ಅಷ್ಟಾಗಿ ದೂರವಾಗಲಿಲ್ಲ. ಬಿಲ್ವನ ಠಾಕೂರನ ಸಲಹೆಯಂತೆ ಗೋವಿಂದಮಾಣಿಕ್ಯ ಕ್ಷಾಮಕ್ಕೆ ತುತ್ತಾದ ಪ್ರಜೆಗಳಿಗೆ ಒಂದು ವರ್ಷದ ಕಂದಾಯ ಬಿಟ್ಟುಕೊಟ್ಟ. ಅದರಿಂದ ಸ್ವಲ್ಪ ಫಲ ದೊರೆಯಿತು. ಆದರೆ ಆಗಲೂ ಅನೇಕರು ತಾಯಿಯ ಶಾಪದಿಂದ ತಪ್ಪಿಸಿಕೊಳ್ಳಲು ಚಿಟ್ಟಗ್ರಾಮದ ಬೆಟ್ಟದಡಿಗೆ ಓಡಿ ಹೋದರು. ಅಷ್ಟೇಕೆ, ರಾಜನ ಮನದಲ್ಲೂ ಸಂದೇಹ ಮೂಡತೊಡಗಿತು.

ಅವನು ಬಿಲ್ವನನನ್ನು ಕರೆದು—ಠಾಕೂರ್, ರಾಜನ ಪಾಪದಿಂದಲೇ ಪ್ರಜೆಗಳಿಗೆ ಕಷ್ಟ ಬರುವದು. ನಾನು ತಾಯಿಯ ಬಲಿ ನಿಲ್ಲಿಸಿ ಪಾಪ ಮಾಡಿರುವೆನೇನು ? ಅದಕ್ಕೆ ಇದು ಶಿಕ್ಷೆಯೇನು ? ” ಎಂದು ಕೇಳಿದ.

ಬಿಲ್ವನ ಮಾತನ್ನೆಲ್ಲ ಒಮ್ಮೆಗೇ ಮರೆಸಿದ. ಆತ “ ತಾಯ ಬಳಿ ಸಾವಿರಾರು ನರಬಲಿ ಆಗುತಿತ್ತಲ್ಲ ಆಗ ನಿನಗೆ ಹೆಚ್ಚಾಗಿ ಪ್ರಜಾಹಾನಿ ಆಗುತಿರಲಿಲ್ಲವೆ. ಈ ದುರ್ಭಿಕ್ಷದಲ್ಲಿ ಅಷ್ಟು ಆಗಿಲ್ಲ ಅಲ್ಲವೆ—” ಎಂದ.

ರಾಜ ಮಾತಿಲ್ಲದವನಾಗಿದ್ದ. ಆದರೆ ಅವನ ಮನದಿಂದ ಸಂಶಯ ಸಂಪೂರ್ಣವಾಗಿ ದೂರವಾಗಲಿಲ್ಲ. ಪ್ರಜೆಗಳು ಅವನ ವಿಷಯದಲ್ಲಿ ಅಸಂತೋಷಗೊಂಡಿರುವರು. ಅವನ ವಿಷಯದಲ್ಲಿ ಸಂಶಯ ವ್ಯಕ್ತಪಡಿಸಿರುವರು. ಇದರಿಂದ ಅವನ ಮನ ನೋಯತೊಡಗಿತು. ಅವನಿಗೆ

ತನ್ನಲ್ಲಿ ತನಗೆ ಸಂದೇಹ ಹುಟ್ಟಿರುವುದು. ಅವನು ನಿಟ್ಟುಸಿರುಬಿಟ್ಟು "ಯಾವುದೂ ಅರ್ಥವಾಗುವುದಿಲ್ಲ" ಎಂದ.

ಬಿಲ್ವನ ಹೇಳಿದ—"ಅಷ್ಟಾಗಿ ಅರ್ಥಮಾಡಿಕೊಳ್ಳಬೇಕಾದ ಆವಶ್ಯಕತೆಯಾದರೂ ಏನು! ಅಷ್ಟೊಂದು ಇಲಿಗಳು ಬಂದು ಬೆಳೆಗಳನ್ನು ತಿಂದು ಹೋದುದೇಕೆ ಎಂಬುದನ್ನು ಅರಿಯದಿದ್ದರೆ ಆಯಿತು. ನಾನು ಅನ್ಯಾಯ ಮಾಡೆ. ನಾನು ಎಲ್ಲರಿಗೆ ಹಿತವನ್ನೆ ಮಾಡುವೆ ಎಂಬುದಿಷ್ಟನ್ನು ಮಾತ್ರ ಸ್ಪಷ್ಟವಾಗಿ ತಿಳಿದುಕೊಂಡರೆ ಸಾಕು. ಅನಂತರ ವಿಧಾತನ ಕೆಲಸವನ್ನು ವಿಧಾತ ಮಾಡಿಕೊಳ್ಳುವನು. ಆತ ನಮಗೆ ಲೆಖ್ಖ ಒಪ್ಪಿಸಲು ಬಾರ."

"ಠಾಕೂರ್, ನೀವು ಮನೆ ಮನೆಗೆ ತಿರುಗಿ ಬಿಡುವಿಲ್ಲದೆ ಕೆಲಸ ಮಾಡುತ್ತಿರುವಿರಿ. ಜಗತ್ತಿನಲ್ಲಿ ಎಷ್ಟು ಒಳ್ಳೆಯದು ಮಾಡುತ್ತಿರುವಿರೋ ಅಷ್ಟು ನಿಮಗೆ ಪ್ರತಿಫಲ ದೊರೆಯುತ್ತಿರುವುದು. ಈ ಸಂತೋಷದಲ್ಲಿ ನಿಮ್ಮ ಸಂಶಯವೆಲ್ಲ ಮಾಯವಾಗುವದು. ನಾನು ಹಗಲೂ ರಾತ್ರಿ ಒಂದು ಕಿರೀಟವನ್ನು ತಲೆಗೆ ಹಾಕಿಕೊಂಡು ನಾನು ಹಗಲಿರುಳು ಕಿರೀಟವೊಂದನ್ನು ತಲೆಯಮೇಲಿಟ್ಟುಕೊಂಡು ಸಿಂಹಾಸನ ಏರಿ ಕುಳಿತಿರುವೆ. ಬರಿಯ ಚಿಂತೆಗಳು ಕೆಲವೇ ಹೊತ್ತು ಕುಳಿತಿರುವೆ. ನಿಮ್ಮ ಕೆಲಸ ನೋಡಿದರೆ ನನಗೂ ಆಸೆಯಾಗುವುದು" ಎಂದು ರಾಜ ಹೇಳಿದ.

ಬಿಲ್ವನ—"ಮಹಾರಾಜ, ನಾನು ನಿಮ್ಮದೇ ಒಂದು ಅಂಶ. ನೀವು ಈ ಸಿಂಹಾಸನದಲ್ಲಿ ಕುಳಿತಿರದಿದ್ದರೆ ನಾನು ಯಾವ ಕೆಲಸ ತಾನೆ ಮಾಡಬಲ್ಲೆ. ನೀವೂ ನಾನೂ ಸೇರಿ ನಾವಿಬ್ಬರೂ ಸಂಪೂರ್ಣವಾಗಿರುವೆವು."

ಹೀಗೆ ಹೇಳಿ ಬಿಲ್ವನ ಅಪ್ಪಣೆ ತೆಗೆದುಕೊಂಡ. ರಾಜ ತಲೆಗೆ ಕಿರೀಟ ಹಾಕಿಕೊಂಡು ಮನಸಿನಲ್ಲೇ ಯೋಚಿಸತೊಡಗಿದ. "ನನ್ನ ಕೆಲಸ ಬಹಳವಾಗಿರುವದು. ನಾನು ಅದರಲ್ಲಿ ಸ್ವಲ್ಪವೂ ಮಾಡಿಲ್ಲ. ನಾನು ಕೇವಲ ನನ್ನ ಚಿಂತೆ ಹೊತ್ತು ನಿಶ್ಚಿಂತನಾಗಿರುವೆ. ಅದರಿಂದಲೇ ನಾನು ಪ್ರಜೆಗಳ ವಿಶ್ವಾಸಗಳಿಸಲಾರದೆ ಹೋದೆ. ರಾಜ್ಯ ಆಳಲು ನಾನು ತಕ್ಕವನಲ್ಲ" ಎಂದು ಅಂದುಕೊಂಡ.

## ३೧

ಮೊಗಲ ಸೈನ್ಯದ ಅಧಿಪತಿಯಾಗಿ ನಕ್ಷತ್ರರಾಯ ದಾರಿಯಲ್ಲಿ ತೇಂತುಲೆ ಎಂಬ ಕುಗ್ರಾಮವೊಂದರಲ್ಲಿ ವಿಶ್ರಾಂತಿ ಪಡೆಯುತಿದ್ದ. ಬೆಳಗ್ಗೆ ರಘುಪತಿ " ಪ್ರಯಾಣ ಹೊರಡಬೇಕು ಮಹಾರಾಜ, ಸಿದ್ಧರಾಗಿರಿ " ಎಂದು ಹೇಳಿದ—

ಇದ್ದಕ್ಕಿದ್ದಂತೆ ರಘುಪತಿಯ ಬಾಯಿಂದ ಮಹಾರಾಜ ಎಂಬ ಶಬ್ದ ಬಹಳ ಇಂಪಾಗಿ ಕೇಳಿಸಿತು. ನಕ್ಷತ್ರರಾಯ ಸಂತೋಷದಿಂದ ಉಬ್ಬಿ ಹೋದ. ಅವನು ಕಲ್ಪನೆಯಲ್ಲಿ ಪ್ರಪಂಚದ ಎಲ್ಲ ಜನರ ಬಾಯಿಂದಲೂ ಮಹಾರಾಜ ಸಂಬೋಧನೆ ಕೇಳತೊಡಗಿದ. ಅವನು ಮನದಲ್ಲೆ ತ್ರಿಪುರದ ಉನ್ನತ ಸಿಂಹಾಸನ ಏರಿ ಸಭೆಯನ್ನು ಬೆಳಕುಮಾಡಿದ. ಮನಸಿನ ಸಂತೋಷದಿಂದ " ಠಾಕೂರ್, ಎಂದಿಗೂ ನಿಮ್ಮನ್ನು ಬಿಟ್ಟುಬಿಡುವಂತಿಲ್ಲ. ನೀವು ಸಭೆಯಲ್ಲಿ ಇರಲೇಬೇಕು. ನಿಮಗೆ ಇಷ್ಟವಾದದ್ದನ್ನು ನನಗೆ ಹೇಳಿ " ಎಂದ. ನಕ್ಷತ್ರರಾಯ ಮನಸಿನಲ್ಲೆ ಕೂಡಲೆ ರಘುಪತಿಗೆ ದೊಡ್ಡದೊಂದು ಜಹಗೀರನ್ನು ದಾನಮಾಡಿದ.

" ನನಗೆ ಏನೇನೂ ಬೇಕಿಲ್ಲ " ಎಂದ ರಘುಪತಿ.

" ಇದೆಂತಹ ಮಾತು, ಇದು ಸಾಧ್ಯವಿಲ್ಲ. ಠಾಕೂರ್, ಏನಾದರೂ ತೆಗೆದುಕೊಳ್ಳಲೇಬೇಕು. ಕೈಲಾಸ ಜಿಲ್ಲೆಯನ್ನು ನಾನು ನಿಮಗೆ ಕೊಟ್ಟಿರುವೆ. ನೀವು ಕಾಗದಪತ್ರ ಬರೆಸಿ ತೆಗೆದುಕೊಳ್ಳಿರಿ " ಎಂದು ನಕ್ಷತ್ರರಾಯ ಹೇಳಿದ.

ರಘುಪತಿ—" ಅದೆಲ್ಲ ಆಮೇಲೆ ನೋಡೋಣ " ಎಂದ.

ನಕ್ಷತ್ರರಾಯನೆಂದ—" ಆಮೇಲೆ ಏಕೆ, ನಾನು ಈಗಲೆ ಕೊಡುವೆ. ಕೈಲಾಸ ಜಿಲ್ಲೆಯೆಲ್ಲ ನಿಮ್ಮದೆ ಆದಂತೆ. ನಾನು ಒಂದು ಕಾಸು ಕಂದಾಯವನ್ನೂ ತೆಗೆದುಕೊಳ್ಳುವುದಿಲ್ಲ " ಎಂದು ಹೇಳಿ ನಕ್ಷತ್ರರಾಯ ತಲೆಯೆತ್ತಿ ನೆಟ್ಟಗೆ ಕುಳಿತ.

ರಘುಪತಿಯೆಂದ—" ನಾಯುಲು ಮೂರು ಮೊಳ ಭೂಮಿ ಸಿಕ್ಕಿದರೆ ಸುಖಿಯಾಗುವೆ. ನನಗೆ ಬೇರೆಯೇನು ಬೇಕು." ಇಷ್ಟು ಹೇಳಿ ರಘುಪತಿ

ಹೊರಟುಹೋದ. ಅವನಿಗೆ ಜಯಸಿಂಹನ ನೆನಪಾಯಿತು. ಜಯಸಿಂಹ ಇದ್ದಿದ್ದರೆ ಬಹುಮಾನ ರೂಪದಲ್ಲಿ ಏನನ್ನಾದರೂ ತೆಗೆದುಕೊಳ್ಳುತ್ತಿದ್ದ. ಜಯಸಿಂಹ ಇಲ್ಲದಮೇಲೆ ಇಡೀ ತ್ರಿಪುರಾರಾಜ್ಯ ಮಣ್ಣಿನ ರಾಶಿಯಲ್ಲದೆ ಬೇರೆಯಾಗಿ ತೋರಲಿಲ್ಲ.

ರಘುಪತಿ ಈಗ ನಕ್ಷತ್ರರಾಯನನ್ನು ರಾಜ ಅಭಿಮಾನದಲ್ಲಿ ಮೈ ಮರೆಸಲು ಪ್ರಯತ್ನಿಸುತ್ತಿರುವನು. ಅವನ ಮನದಲ್ಲಿ ಭಯ ಇದ್ದದ್ದೇ ಆದರೆ ಇಷ್ಟೊಂದು ಸಿದ್ಧತೆಯೆಲ್ಲ ವ್ಯರ್ಥವಾದರೂ ಆದೀತು. ದುರ್ಬಲ ಸ್ವಭಾವದ ನಕ್ಷತ್ರರಾಯ ತ್ರಿಪುರಕ್ಕೆ ಹೋಗಿ ಯುದ್ಧವಿಲ್ಲದೆ ರಾಜನ ಕೈಗೆ ಸಿಕ್ಕಿದರೂ ಸಿಕ್ಕಿಯಾನು. ಆದರೆ ದುರ್ಬಲ ಹೃದಯದಲ್ಲಿ ಒಮ್ಮೆ ರಾಜ್ಯ ಮದ ನೆಲಸಿದರೆ ಆ ಬಳಿಕ ಯೋಚನೆಯಿರದು. ಈಗ ರಘುಪತಿ ನಕ್ಷತ್ರ ರಾಯನ ವಿಷಯದಲ್ಲಿ ತಿರಸ್ಕಾರ ತೋರ್ಪಡಿಸುವುದಿಲ್ಲ. ಮಾತು ಮಾತಿನಲ್ಲೂ ಅವನನ್ನು ಗೌರವಿಸುವನು. ಎಲ್ಲ ವಿಷಯದಲ್ಲೂ ಅವನ ಮಾತಿನ ಅಪ್ಪಣೆ ಪಡೆಯುವನು. ಮೊಗಲ ಸೈನಿಕರು ಅವನನ್ನು ಮಹಾರಾಜಾ—ಸಾಹಬ್ ಎನ್ನುವರು. ಅವನನ್ನು ಕಂಡರೆ ಹೆದರುವರು. ಗಾಳಿ ಬೀಸಿದರೆ ಹೊಲ ಗದ್ದೆಗಳ ಬೆಳೆಯೆಲ್ಲ ಬಾಗುವಂತೆ ನಕ್ಷತ್ರರಾಯ ಬಂದು ನಿಂತರೆ ಮೊಗಲ ಸೈನ್ಯ ಒಟ್ಟಿಗೆ ತಲೆಬಾಗಿ ನಮಸ್ಕರಿಸುವದು. ಸೇನಾಪತಿ ಸಡಗರ ದಿಂದ ಅವನಿಗೆ ನಮಸ್ಕಾರಮಾಡುವನು. ನೂರಾರು ಹಿರಿದ ಕತ್ತಿಗಳ ಬೆಳಕಿನಲ್ಲಿ ದೊಡ್ಡ ಆನೆಯಮೇಲೆ ರಾಜ ಚಿಹ್ನೆ ಅಂಕಿತವಾದ ಅಂಬಾರಿಯಲ್ಲಿ ಕುಳಿತು ಅವನು ಪ್ರಯಾಣಮಾಡುವನು. ಜೊತೆಯಲ್ಲಿ ಮನಸ್ಸನ್ನು ಸಂತಸಗೊಳಿಸುವ ವಾದ್ಯ ನುಡಿಯುತಿರುವುದು. ಸಂಗಡಲೆ ನಿಶಾನೆ ಹೊರುವವರು ರಾಜ ನಿಶಾನಿ ಹಿಡಿದು ಹೋಗುವರು. ಅವನು ಹೋದೆಡೆಯಲ್ಲಿ ಹಳ್ಳಿಯ ಜನ ಸೈನ್ಯದ ಭಯದಿಂದ ಮನೆ ಮಠ ಬಿಟ್ಟು ಓಡಿಹೋಗುವದು. ಅವರ ಕಷ್ಟ ನೋಡಿ ನಕ್ಷತ್ರರಾಯನ ಮನದಲ್ಲಿ ಅಹಂಕಾರ ಹುಟ್ಟುವದು. ಅವನ ಮನಸಿಗೆ "ನಾನು ದಿಗ್ವಿಜಯ ಮಾಡಲು ಹೊರಟಿರುವೆ" ಎಂದೆನಿಸುವದು. ಸಣ್ಣ ಪುಟ್ಟ ಜಮಿಾನುದಾರರು—ಬಗೆ ಬಗೆಯ ಕಾಣಿಕೆ ಹೊತ್ತು ಬಂದು ಅವನಿಗೆ ನಮಸ್ಕಾರಮಾಡಿ ಹೋಗು

ವರು. ಅವರುಗಳನ್ನು ಸೋತ ರಾಜರೆಂದು ತಿಳಿಯುವನು. ಮಹಾಭಾರತದ ದಿಗ್ವಿಜಯಿ ಪಾಂಡವರ ಕಥೆ ನೆನಪಾಗುವದು.

ಒಂದು ದಿನ ಸೈನಿಕರು ಬಂದು ಸಲಾಂಮಾಡಿ—“ ಮಹಾರಾಜಾ ಸಾಹಬ್—ಎಂದರು. ನಕ್ಷತ್ರರಾಯ ನೆಟ್ಟಗೆ ಕುಳಿತುಕೊಂಡ.” “ ನಾವು ಮಹಾರಾಜರಿಗಾಗಿ ಜೀವ ಒಪ್ಪಿಸಲು ಬಂದಿರುವೆವು. ನಾವು ಪ್ರಾಣವನ್ನು ಲಕ್ಷಿಸುವುದಿಲ್ಲ. ಹಿಂದಿನಕಾಲದಿಂದಲೂ ನಮ್ಮಲ್ಲಿ ಒಂದು ಪದ್ಧತಿಯಿರುವುದು—ಯುದ್ಧಕ್ಕಾಗಿ ಹೋಗುವ ದಾರಿಯಲ್ಲಿ ನಾವುಗಳು ಹಳ್ಳಿಗಳನ್ನು ಕೊಳ್ಳೆಹೊಡೆಯುತ್ತ ಹೋಗುವೆವು. ಇದನ್ನು ದೋಷವೆಂದು ಯಾವ ಶಾಸ್ತ್ರದಲ್ಲೂ ಬರೆದಿಲ್ಲ ” ಎಂದರು.

ನಕ್ಷತ್ರರಾಯ ತಲೆಯಾಡಿಸಿ “ ಸರಿಯಾದ ಮಾತು, ಸರಿಯಾದ ಮಾತು ” ಎಂದ.

ಸೈನಿಕರು “ ಬ್ರಾಹ್ಮಣ ಠಾಕೂರರು ನಾವು ಕೊಳ್ಳೆ ಹೊಡೆಯುವುದನ್ನು ಅಡ್ಡಿಮಾಡುತ್ತಿರುವರು. ನಾವು ಜೀವ ತೆರಲು ಹೋಗುತಿರುವೆವು. ಆಗಲೂ ಕೊಳ್ಳೆಹೊಡೆಯಲು ಅಪ್ಪಣೆಯಿಲ್ಲದಿರುವುದು ಬಹಳ ಅನ್ಯಾಯ ” ಎಂದು ಹೇಳಿದರು.

ನಕ್ಷತ್ರರಾಯ ಪುನಃ ತಲೆಯಾಡಿಸಿ “ ಸರಿಯಾದ ಮಾತು, ಸರಿಯಾದ ಮಾತು —” ಎಂದ.

“ ಮಹರಾಜರು ಅಪ್ಪಣೆ ಕೊಟ್ಟರೆ ನಾವುಗಳು ಬ್ರಾಹ್ಮಣ ಠಾಕೂರರ ಮಾತನ್ನು ಗಮನಿಸದೆ ಕೊಳ್ಳೆಹೊಡೆಯಲು ಹೋಗುವೆವು.”

ನಕ್ಷತ್ರರಾಯ ಅತಿಯಾದ ದರ್ಪದೊಡನೆ “ ಬ್ರಾಹ್ಮಣ ಠಾಕೂರ ಯಾರು ? ಬ್ರಾಹ್ಮಣ ಠಾಕೂರನಿಗೆ ಏನು ಗೊತ್ತು. ನಾನು ನಿಮ್ಮಗಳಿಗೆ ಅಪ್ಪಣೆ ಕೊಡುತ್ತೇನೆ. ನೀವುಗಳು ಕೊಳ್ಳೆಹೊಡೆಯಲು ಹೋಗಿರಿ ” ಎಂದ. ಹೀಗೆ ಹೇಳಿ ಒಮ್ಮೆ ಅತ್ತಿತ್ತ ನಿಟ್ಟಿಸಿ ನೋಡಿದ. ಎಲ್ಲೂ ರಘುಪತಿಯನ್ನು ಕಾಣದೆ ನಿಶ್ಚಿಂತನಾದ.

ಆದರೆ ರಘುಪತಿಯನ್ನು ಹೀಗೆ ಧೈರ್ಯದಿಂದ ದೂರಿ ಅವನು ತನ್ನೊಳಗೆ ಬಹಳ ಸಂತೋಷ ಅನುಭವಿಸಿದ. ಸಾಮರ್ಥ್ಯದ ಮದ

ಹೆಂಡದಂತೆ ಅವನ ನರನರಗಳಲ್ಲೂ ಸಂಚರಿಸತೊಡಗಿತು. ಪ್ರಪಂಚವನ್ನು ಹೊಸ ನೋಟದಿಂದ ನೋಡಲಾರಂಭಿಸಿದ. ಕಾಲ್ಪನಿಕ ಬೆಲೂನಿನ ಮೇಲೆ ಏರಿ ಜಗತ್ತು ಬಹಳ ಕೆಳಗೆ ಮಂಜಿನಲ್ಲಿ ಮರೆಯಾಗಿರುವಂತೆ ಭಾಸವಾಯಿತು. ಅಷ್ಟೇಕೆ. ಒಮ್ಮೊಮ್ಮೆ ರಘುಪತಿ ನಗಣ್ಯನೆಂದು ತೋರತೊಡಗಿತು. ಕೂಡಲೆ ಬಲವಂತವಾಗಿ ಗೋವಿಂದಮಾಣಿಕ್ಯನ ಮೇಲೆ ಮಿತಿಮಾರಿ ಕೋಪಗೊಂಡ. ಮನಸಿನಲ್ಲೇ ಹಲವುಬಾರಿ ಹೇಳಿಕೊಳ್ಳತೊಡಗಿದ. "ನನ್ನನ್ನು ಓಡಿಸುವುದು! ಒಬ್ಬ ಸಾಮಾನ್ಯ ಪ್ರಜೆಯಂತೆ ನನ್ನನ್ನು ವಿಚಾರಣೆಸಭೆಗೆ ಬರಮಾಡುವುದು. ಈಗ ಯಾರು ಯಾರನ್ನು ಓಡಿಸುವರೆಂಬುದನ್ನು ನೋಡೋಣ. ಈ ಸಲ ತ್ರಿಪುರದ ಜನಕ್ಕೆಲ್ಲ ನಕ್ಷತ್ರರಾಯನ ಪರಾಕ್ರಮದ ಪರಿಚಯ ದೊರಕೀತು—" ನಕ್ಷತ್ರರಾಯ ಅತಿ ಸಂತೋಷದಿಂದ ಉಬ್ಬಿಹೋದ.

ಸಾಧುಗಳಾದ ಹಳ್ಳಿಗರಮೇಲೆ ಕಾರಣವಿಲ್ಲದೆ ಹಿಂಸೆ ಮತ್ತು ಕೊಳ್ಳೆ ಹೇರುವ ವಿಷಯದಲ್ಲಿ ರಘುಪತಿಗೆ ಅಷ್ಟಾಗಿ ಒಪ್ಪಿಗೆ ಇರಲಿಲ್ಲ. ಅವನ್ನು ತಡೆಯುವ ಸಲುವಾಗಿ ಆತ ಹಲವು ಪ್ರಯತ್ನಗಳನ್ನು ಮಾಡಿದ್ದನು. ಆದರೆ ಸೈನಿಕರು ನಕ್ಷತ್ರರಾಯನ ಅನುಮತಿ ಪಡೆದು ಅವನನ್ನು ಅಲಕ್ಷಿಸಿದರು. ಆತ ನಕ್ಷತ್ರರಾಯನ ಬಳಿ—"ಅಸಹಾಯ ಹಳ್ಳಿಗರ ಮೇಲೆ ಈ ಅತ್ಯಾಚಾರವೇಕೆ" ಎಂದು ಕೇಳಿದನು.

ನಕ್ಷತ್ರರಾಯನೆಂದ—"ಠಾಕೂರ್, ಈ ಸಂಗತಿಗಳನ್ನೆಲ್ಲ ನೀವು ಚೆನ್ನಾಗಿ ಅರಿಯಲಾರಿರಿ. ಯುದ್ಧವಿಗ್ರಹಗಳ ಸಮಯದಲ್ಲಿ ಸೈನಿಕರು ಲೂಟಿಗೀಟಿ ಮಾಡುವುದನ್ನು ನಿಷೇಧಿಸಿ ಉತ್ಸಾಹಹೀನರನ್ನಾಗಿ ಮಾಡುವುದು ಉಚಿತವಲ್ಲ."

ನಕ್ಷತ್ರರಾಯನ ಮಾತು ಕೇಳಿ ರಘುಪತಿ ಸ್ವಲ್ಪ ವಿಸ್ಮಿತನಾದ. ಹಠಾತ್ತಾಗಿ ನಕ್ಷತ್ರರಾಯನ ಹಿರಿತನದ ಹೆಮ್ಮೆ ಕಂಡು ಆತ ಒಳಗೊಳಗೆ ನಕ್ಕನು. "ಈ ಲೂಟಿಮಾಡಲು ಎಡೆಗೊಟ್ಟರೆ ಅನಂತರ ಇವರನ್ನು ಹದ್ದಿನಲ್ಲಿಟ್ಟುಕೊಳ್ಳುವುದು ಕಷ್ಟವಾಗುವದು. ಸಂಪೂರ್ಣ ತ್ರಿಪುರಾವನ್ನು ಲೂಟಿಮಾಡಿಬಿಡುವರು" ಎಂದ.

ನಕ್ಷತ್ರರಾಯನೆಂದ—"ಅದರಿಂದ ನಷ್ಟವೇನು, ನಾನಂತೂ ಅದನ್ನೇ ಬಯಸುವೆ. ನಕ್ಷತ್ರರಾಯನನ್ನು ಗಡೀಪಾರು ಮಾಡುವುದರ ಫಲ ಏನು ಎಂಬುದನ್ನು ತ್ರಿಪುರ ಒಮ್ಮೆ ಅರಿಯಲಿ. ಠಾಕೂರ್ ಇವೆಲ್ಲ ವಿಷಯಗಳನ್ನು ನೀವೇನೂ ಅರಿಯಲಾರಿರಿ.–ನೀವಂತೂ ಎಂದೂ ಯುದ್ಧಮಾಡಿದವರಲ್ಲ–"

ರಘುಪತಿ ಮನದಲ್ಲೇ ಬಹಳ ನಕ್ಕನು. ಏನೂ ಉತ್ತರ ಹೇಳದೆ ಹೊರಟುಹೋದನು. ನಕ್ಷತ್ರರಾಯ ಸಂಪೂರ್ಣ ಬೊಂಬೆಯಂತಿರದೆ ಸ್ವಲ್ಪ ಕಠಿಣನಾಗಲೆಂಬುದೇ ಅವನ ಬಯಕೆಯಾಗಿತ್ತು.

೩೨

ತ್ರಿಪುರದಲ್ಲಿ ಇಲಿಗಳ ಹಾವಳಿ ಆರಂಭವಾಯಿತಲ್ಲ ಆಗ ಶ್ರಾವಣ ಮಾಸ. ಆಗ ಹೊಲಗಳಲ್ಲಿ ಕೇವಲ ಮುಸುಕಿನ ಜೋಳ ಬೆಳೆದಿತ್ತು. ಬೆಟ್ಟದ ಬಯಲಿನಲ್ಲೂ, ಗದ್ದೆಗಳಲ್ಲೂ ತೆನೆ ಕೂಡಲು ಮೊದಲಾಗಿತ್ತು. ಮೂರು ತಿಂಗಳು ಹೇಗೋ ಸಾಗಿತು. ಮಾರ್ಗಶಿರ ಮಾಸದಲ್ಲಿ ಕೆಳ ಜಮೀನುಗಳಲ್ಲಿ ಧಾನ್ಯ ಕೊಯ್ಲಿಗೆ ಬಂತು. ಆಗ ದೇಶದಲ್ಲಿ ಆನಂದ ಮೂಡಿತು. ರೈತರ ಹೆಂಗಸರೂ ಮಕ್ಕಳೂ ಹುಡುಗರೂ ಮುದುಕರೂ ಸೇರಿ ಕೈಯಲ್ಲಿ ಕುಡುಗೋಲು ಹಿಡಿದು ಹೊಲಗಳಿಗೆ ಹೋದರು. 'ಹೊಯೊ–ಹೊಯೊ' ಎಂದು ಶಬ್ದಮಾಡುತ್ತ ಒಬ್ಬರನ್ನೊಬ್ಬರು ಕರೆಯ ತೊಡಗಿದರು. ಜುಮಿಯಾ* ಹೆಂಗಸರ ಹಾಡು ಮೈದಾನದಲ್ಲೂ ಬೆಟ್ಟ ಗುಡ್ಡಗಳಲ್ಲೂ ಮಾರ್ದನಿಗೊಟ್ಟಿತು. ರಾಜನ ವಿಷಯದಲ್ಲಿದ್ದ ಅಸಂತೋಷ ದೂರವಾಯಿತು. ರಾಜ್ಯದಲ್ಲಿ ಶಾಂತಿಸ್ಥಾಪನೆಯಾಯಿತು. ಇಂತಹ ಸಮಯದಲ್ಲಿ ನಕ್ಷತ್ರರಾಯ ರಾಜ್ಯವನ್ನು ಆಕ್ರಮಿಸುವ ಉದ್ದೇಶದಿಂದ ಅಸಂಖ್ಯ ಸೈನ್ಯದೊಡನೆ ತ್ರಿಪುರ ರಾಜ್ಯದ ಎಲ್ಲೆಗೆ ಬಂದಿರುವನೆಂದೂ ಅತಿಯಾಗಿ ಕೊಳ್ಳೆ ಸುಲಿಗೆಯ ಕಾಟ ಆರಂಭವಾಗಿದೆಯೆಂದೂ ಸುದ್ದಿ ಬಂದಿತು. ಈ ಸುದ್ದಿಯಿಂದ ರಾಜ್ಯವೆಲ್ಲ ಹೆದರಿಕೊಂಡಿತು.

---

*** ಜುಮಿಯಾ—ಕಾಡನ್ನು ಸುಟ್ಟು ಮಳೆ ಬಿದ್ದಾಗ ಬೀಜ ನೆಟ್ಟು ಬೆಳೆ ತೆಗೆಯುವ ರೈತರು. ಇವರು ಕ್ರಮಬದ್ಧವಾದ ರೈತರಲ್ಲ. ಆದರಿಂದ ಇವರನ್ನು ಜುಮಿಯಾ ಎನ್ನುವರು.**

ಈ ಸುದ್ದಿ ರಾಜನ ಹೃದಯದಲ್ಲಿ ಕತ್ತಿಯಂತೆ ನಾಟಿತು. ದಿನವೆಲ್ಲ ಅವನನ್ನು ಇರಿಯತೊಡಗಿತು. ನಿಂತು ನಿಂತು ಪ್ರತಿಬಾರಿ ಅವನ ಮನಸ್ಸನ್ನು ನೋಯಿಸತೊಡಗಿತು. ನಕ್ಷತ್ರರಾಯ ಅವನನ್ನು ಆಕ್ರಮಿಸಲು ಬರುತ್ತಿರುವನು. ನಕ್ಷತ್ರರಾಯನ ಸರಳ ಸುಂದರ ಮುಖವನ್ನು ಅವನು ನೂರಾರು ಬಾರಿ ಸ್ನೇಹದೃಷ್ಟಿಯು ಎದುರಿಗೆ ನೋಡತೊಡಗಿದ. ಅದರೊಡನೆಯೇ ನಕ್ಷತ್ರರಾಯ ಲೆಕ್ಕವಿಲ್ಲದಷ್ಟು ಸೈನ್ಯ ಕೂಡಿಸಿಕೊಂಡು ಕತ್ತಿ ಹಿಡಿದು ತನ್ನನ್ನು ಆಕ್ರಮಿಸಲು ಬರುತ್ತಿರುವನೆನ್ನುವದು ನೆನಪಾಯಿತು. ಒಮ್ಮೊಮ್ಮೆ ಅವನ ಮನಸ್ಸು ಆಶಿಸತೊಡಗಿತು. ಯಾವ ಸೈನ್ಯವನ್ನೂ ಕರೆದುಕೊಂಡು ಹೋಗದೆ ನಕ್ಷತ್ರರಾಯನ ಎದುರಿಗೆ ವಿಸ್ತಾರವಾದ ರಣರಂಗದಲ್ಲಿ ಒಬ್ಬೊಂಟಿಗನಾಗಿ ನಿಂತು ಎದೆಯನ್ನು ಸಂಪೂರ್ಣವಾಗಿ ತೆರೆದುಕೊಂಡು ನಕ್ಷತ್ರರಾಯನ ಸಹಸ್ರಾರು ಸೈನಿಕರ ಕತ್ತಿಗಳನ್ನು ತನ್ನ ಹೃದಯದಲ್ಲಿ ಒಂದೇ ಸಾರಿ ಗ್ರಹಿಸಿಕೊಳ್ಳಬೇಕು—ಎಂದು.

ಅವನು ಧ್ರುವನನ್ನು ಹತ್ತಿರಕ್ಕೆ ಎಳೆದುಕೊಂಡು—"ಧ್ರುವ, ನೀನೂ ಈ ಕಿರೀಟಕ್ಕಾಗಿ ನನ್ನೊಡನೆ ಜಗಳವಾಡುವೆಯಾ!" ಎಂದು ಹೇಳಿ ಕಿರೀಟವನ್ನು ನೆಲಕ್ಕೆ ಎಸೆದ. ಒಂದು ದೊಡ್ಡ ಮುತ್ತು ಒಡೆದು ಚೂರಾಯಿತು.

ಧ್ರುವ ಕೋಪದಿಂದ ಕೈಚಾಚಿ "ನಾನು ತೊಗೋತೀನಿ" ಎಂದ. ರಾಜ ಧ್ರುವನ ತಲೆಗೆ ಕಿರೀಟ ಹಾಕಿ ಅವನನ್ನು ತೊಡೆಗೆತ್ತಿಕೊಂಡು "ಇದೊ ತೆಗೆದುಕೊ, ನಾನು ಯಾರೊಡನೆಯೂ ಜಗಳವಾಡಲಾರೆ" ಎಂದ.

ಆ ಬಳಿಕ ದಿನವೆಲ್ಲ "ಇದು ಕೇವಲ ನನ್ನ ಪಾಪಕ್ಕೆ ಶಾಸ್ತಿ. ಹಾಗಿಲ್ಲವಾದರೆ ತಮ್ಮ ಎಂದೂ ಅಣ್ಣನನ್ನು ಆಕ್ರಮಿಸಲಾರ." ಎಂದು ರಾಜ ತನ್ನೊಡನೆ ತರ್ಕಮಾಡತೊಡಗಿದ. ಇದನ್ನು ನೆನೆದು ಅವನಿಗೆ ಸ್ವಲ್ಪ ಸಮಾಧಾನ ಆಯಿತು. "ಇದು ದೇವರ ನಿಯಮ. ಜಗದೊಡೆಯನ ದರ್ಬಾರಿನಿಂದ ಅಪ್ಪಣೆ ಬಂದಿರುವದು. ಸಾಮಾನ್ಯ ನಕ್ಷತ್ರರಾಯ ಅವನ ಮಾನವ ಹೃದಯದ ಉಪದೇಶದಿಂದ ಅದನ್ನು ಮೀರಲಾರ" ಎಂದು

ಮನಸಿನಲ್ಲಿ ಅಂದುಕೊಂಡ. ಹೀಗೆ ಭಾವಿಸಿ ಅವನ ನೊಂದ ಹೃದಯ ಸ್ವಲ್ಪ ಶಾಂತಿಯನ್ನು ಹೊಂದಿತು. ಪಾಪವನ್ನು ಅವನು ತನ್ನ ಹೆಗಲಮೇಲೆ ಹೊರಲು ಸಿದ್ಧನಾಗಿರುವನು. ಅದರಿಂದ ನಕ್ಷತ್ರರಾಯನ ಪಾಪದ ಹೊರೆ ಬಹಳವಾಗಿ ಕಡಮೆಯಾದಂತೆ ತೋರುವುದು.

ಬಿಲ್ವನ ಬಂದು ಹೇಳಿದ—" ಮಹಾರಾಜ, ಇದು ಆಕಾಶದ ಕಡೆ ನೋಡುತ್ತ ಯೋಚಿಸುವ ಹೊತ್ತೇನು "

ರಾಜ " ಠಾಕೂರ್, ಇವೆಲ್ಲ ನನ್ನದೇ ಪಾಪದ ಫಲ " ಎಂದ.

ಬಿಲ್ವನ ಸ್ವಲ್ಪ ಕೋಪಗೊಂಡು ಹೇಳಿದ. " ಮಹಾರಾಜ ಈ ಮಾತುಗಳಿಂದೆಲ್ಲ ನನ್ನ ಧೈರ್ಯ ಉಳಿಯದು. ದುಃಖ ಪಾಪದ ಫಲವೆಂದು ಯಾರು ಹೇಳಿದರು. ಪುಣ್ಯದ ಫಲವಿದ್ದರೂ ಇರಬಹುದು. ಅದೆಷ್ಟು ಮಂದಿ ಧರ್ಮಾತ್ಮರು ಸಾಯುವವರೆಗೆ ದುಃಖ ಅನುಭವಿಸಿರುವರು."

ರಾಜ ನಿರುತ್ತರನಾಗಿದ್ದ.

" ಮಹಾರಾಜರು ಯಾವ ಪಾಪ ಮಾಡಿದ್ದರ ಫಲವಾಗಿ ಈ ಘಟನೆ ಘಟಿಸಿರುವದು" ಎಂದು ಬಿಲ್ವನ ಪ್ರಶ್ನಿಸಿದ.

ರಾಜ—"ನನ್ನ ತಮ್ಮನನ್ನು ದೇಶಭ್ರಷ್ಟನನ್ನಾಗಿ ಮಾಡಿದುದರಿಂದ" ಎಂದು ಹೇಳಿದ.

ಬಿಲ್ವನ ಹೇಳಿದ—" ನೀವು ತಮ್ಮನನ್ನು ದೇಶಭ್ರಷ್ಟನನ್ನಾಗಿ ಮಾಡಲಿಲ್ಲ, ಅಪರಾಧಿಯನ್ನು ದೇಶಭ್ರಷ್ಟನನ್ನಾಗಿ ಮಾಡಿದಿರಿ."

ರಾಜನೆಂದ—" ಅಪರಾಧಿಯಾಗಿದ್ದರೂ ತಮ್ಮನನ್ನು ದೇಶಭ್ರಷ್ಟನನ್ನಾಗಿ ಮಾಡಿದ ಪಾಪ ಇದ್ದೇ ಇದೆ. ಅದರ ಫಲದಿಂದ ತಪ್ಪಿಸಿಕೊಳ್ಳುವಂತಿಲ್ಲ. ಕೌರವರು ದುರಾಚಾರಿಗಳಾಗಿದ್ದರೂ ಪಾಂಡವರು ಅವರುಗಳನ್ನು ಕೊಂದು ಸಂತೋಷದಿಂದ ರಾಜ್ಯ ಸುಖ ಅನುಭವಿಸಲಾಗಲಿಲ್ಲ. ಯಜ್ಞ ಮಾಡಿ ಪ್ರಾಯಶ್ಚಿತ್ತಮಾಡಿಕೊಂಡರು. ಪಾಂಡವರು ಕೌರವರ ಬಳಿಯಿಂದ ರಾಜ್ಯ ಅಪಹರಿಸಿದರು. ಕೌರವರು ಸತ್ತು ಪಾಂಡವರ ರಾಜ್ಯವನ್ನು ಅಪಹರಿಸಿದರು. ನಾನು ನಕ್ಷತ್ರನನ್ನು ದೇಶಭ್ರಷ್ಟನನ್ನಾಗಿಮಾಡಿದೆ. ನಕ್ಷತ್ರ ನನ್ನನ್ನು ದೇಶಭ್ರಷ್ಟನನ್ನಾಗಿ ಮಾಡಲು ಬಂದಿರುವನು."

ಬಿಲ್ವನನೆಂದ—ಪಾಂಡವರು ಪಾಪಕ್ಕೆ ಶಾಸ್ತಿ ಕೊಡುವ ಸಲುವಾಗಿ ಕೌರವರೊಡನೆ ಯುದ್ಧ ಮಾಡಲಿಲ್ಲ. ರಾಜ್ಯಗಳಿಸಬೇಕೆಂದು ಮಾಡಿದ್ದರು. ಆದರೆ ಮಹಾರಾಜರು ಪಾಪಕ್ಕೆ ಶಾಸ್ತಿಕೊಟ್ಟು ಸ್ವಂತ ಸುಖದುಃಖಗಳನ್ನು ಕಡೆಗಣಿಸಿ ಧರ್ಮಪಾಲನೆ ಮಾಡಿರುವಿರಿ. ಇವರಲ್ಲಿ ನಾನಂತೂ ಅಣು ಮಾತ್ರವೂ ಪಾಪ ಕಾಣಲಾರೆ. ಆದರೆ ಪ್ರಾಯಶ್ಚಿತ್ತದ ವಿಧಿಹೇಳಲು ನನಗೆ ಎಷ್ಟುಮಾತ್ರವೂ ಆಕ್ಷೇಪಣೆಯಿಲ್ಲ. ಇದೊ ಬ್ರಾಹ್ಮಣ ನಿಂತಿರುವೆ. ನನ್ನನ್ನು ತೃಪ್ತಿಪಡಿಸಿದರೇನೆ ಪ್ರಾಯಶ್ಚಿತ್ತವಾಯಿತು."

ರಾಜ ನಸುನಕ್ಕು ತೆಪ್ಪನಿದ್ದನು.

ಬಿಲ್ವನನೆಂದ—ಅದೆಲ್ಲ ಹೇಗಾದರೂ ಇರಲಿ. ಈಗ ಯುದ್ಧದ ಏರ್ಪಾಡುಮಾಡಿರಿ. ಇನ್ನು ಸಾವಕಾಶಮಾಡಿದರಾಗದು.

ರಾಜನೆಂದ—ನಾನು ಯುದ್ಧ ಮಾಡೆನು.

ಬಿಲ್ವನನೆಂದ—ಅದು ಸಾಧ್ಯವೇ ಇಲ್ಲ. ನೀವು ಕುಳಿತು ಕುಳಿತು ಯೋಚಿಸಿರಿ. ನಾನು ಈ ನಡುವೆ ಸೈನ್ಯ ಕೂಡಿಸುವ ಪ್ರಯತ್ನಮಾಡುವೆ. ಎಲ್ಲರೂ ಈಗ ಜೂಮಕ್ಕೆ ಹೋಗಿರುವರು. ಹೆಚ್ಚು ಸೈನ್ಯ ಶೇಖರಿಸುವುದು ಕಷ್ಟ.

ಇಷ್ಟು ಹೇಳಿ ಮಾರ್ನುಡಿ ನಿರೀಕ್ಷಿಸದೆ ಬಿಲ್ವನ ಹೊರಟುಹೋದ.

ಧ್ರುವನಿಗೆ ಇದ್ದಕ್ಕಿದ್ದಂತೆ ಏನು ತೋರಿತೋ ಏನೊ. ಅವನು ರಾಜನ ಹತ್ತಿರ ಬಂದು ಅವನ ಮುಖದ ಕಡೆ ನೋಡುತ್ತ "ಚಿಕ್ಕಪ್ಪ ಎಲ್ಲಿ" ಎಂದು ಕೇಳಿದ. ನಕ್ಷತ್ರರಾಯನನ್ನು ಧ್ರುವ "ಚಿಕ್ಕಪ್ಪ" ಎಂದು ಕರೆಯುವ.

ರಾಜ—"ಚಿಕ್ಕಪ್ಪ ಬರುತ್ತಿದ್ದಾನೆ ಧ್ರುವ" ಎಂದ. ಅವನ ಕಣ್ಣೆವೆ ಸ್ವಲ್ಪ ಒದ್ದೆಯಾಯಿತು.

## ೩೩

ಬಿಲ್ವನ ಠಾಕೂರನ ಕೆಲಸ ಬಹಳ ಹೆಚ್ಚಿತು. ಆತ ಚಟ್ಟಗ್ರಾಮದ ಬೆಟ್ಟದ ಬಯಲಿಗೆ ಹಲವು ಉಪಹಾರಗಳೊಡನೆ ವೇಗವಾಗಿ ಹೋಗುವ ದೂತರನ್ನು ಕಳುಹಿಸಿ ಕೊಟ್ಟ. ಅಲ್ಲಿ ಕೂಕಿ ಪಂಗಡ ಮುಖಂಡರ ಬಳಿ

ಕೂಕಿ ಸೈನ್ಯದ ಸಹಾಯ ಬೇಡಿದ. ಯುದ್ಧದ ಸುದ್ದಿ ಕೇಳಿ ಅವರುಗಳು ಕುಣಿದು ಕುಪ್ಪಳಿಸಿದರು. ಕೂಕಿಗಳ ಗ್ರಾಮಪತಿಗಳಷ್ಟು ಮಂದಿಯೂ ಯುದ್ಧದ ಸುದ್ದಿಯಾಗಿ ಕೆಂಪು ಬಟ್ಟೆ ಸುತ್ತಿದ ಮಚ್ಚುಕತ್ತಿಯನ್ನು ದೂತರ ಮೂಲಕ ಹಾಡಿಗಳಿಗೆ ಕಳುಹಿಸಿದರು. ನೋಡ ನೋಡುತ್ತ ಕಾಡು ಜನರ ಹೊಳೆ ಚಟ್ಟಗ್ರಾಮದ ಬೆಟ್ಟಗಳ ಮೇಲಿಂದ ತ್ರಿಪುರದ ಬೆಟ್ಟಕ್ಕೆ ಬಂದು ಸೇರಿತು. ಅವರುಗಳನ್ನು ಯಾವುದಾದರೂ ನಿಯಮಕ್ಕೆ ಒಳಪಡಿಸುವುದೆನ್ನುವುದು ಅಸಾಧ್ಯ. ಬಿಲ್ವನ ಸ್ವತಃ ತ್ರಿಪುರದ ಹಳ್ಳಿ ಹಳ್ಳಿಗೆ ಹೋಗಿ ಜುಮುಗಳಲ್ಲಿ ಆಯ್ದು ಆಯ್ದು ಸಾಹಸಿಗಳಾದ ಯುವಕ ಸೈನಿಕರನ್ನು ಕರೆತಂದ. ಮುನ್ನುಗ್ಗಿ ಹೋಗಿ ಮೊಗಲ ಸೈನ್ಯದ ಮೇಲೆ ಬೀಳುವದು ಅಷ್ಟು ಸರಿಯಲ್ಲವೆಂದು ಬಿಲ್ವನ ನಿರ್ಧರಿಸಿದ. ಅವರುಗಳು ಮಟ್ಟವಾದ ಪ್ರದೇಶವನ್ನು ದಾಟಿ ಬಹಳಮಟ್ಟಿಗೆ ಪ್ರಯಾಣಕ್ಕೆ ಕಷ್ಟವಾದ ಬೆಟ್ಟದ ಪ್ರದೇಶಕ್ಕೆ ಬಂದಾಗ ಕಾಡಿನಿಂದ, ಬೆಟ್ಟದಿಂದ ಮತ್ತು ಹೋಗಲಸಾಧ್ಯವಾದ ಗುಪ್ತ ಸ್ಥಳಗಳಿಂದ ಇದ್ದಕ್ಕಿದ್ದಂತೆ ಅವರನ್ನು ಮುತ್ತಿ ಚದುರಿಸುವುದೆಂದು ನಿಶ್ಚಯಿಸಿದ. ದೊಡ್ಡ ದೊಡ್ಡ ಬಂಡೆಗಳಿಂದ ಗೋಮತಿ ನದಿಯ ನೀರನ್ನು ತಡೆದಿಡಲಾಯಿತು. ಸಂಪೂರ್ಣವಾಗಿ ಸೋಲುವ ಸೂಚನೆ ಕಂಡರೆ ಆ ಕಟ್ಟೆಯನ್ನು ಒಡೆದುಹಾಕಿ ಜಲಪ್ರವಾಹದ ಮೂಲಕ ಮೊಗಲರನ್ನು ಮುಳುಗಿಸಬಹುದೆಂದು ತೀರ್ಮಾನಿಸಿದ.

ಇತ್ತ ನಕ್ಷತ್ರರಾಯ ದೇಶವನ್ನು ಸುಲಿಯುತ್ತ ತ್ರಿಪುರದ ಬೆಟ್ಟಗಾಡಿಗೆ ಬಂದು ತಲುಪಿದ. ಆಗ ಜುಮುವ ಕೊಯ್ಲು ಮುಗಿದಿತ್ತು. ಜುಮಿಯರೆಲ್ಲರೂ ಮಚ್ಚು, ಬಿಲ್ಲು ಬಾಣಗಳನ್ನು ಹಿಡಿದು ಯುದ್ಧಕ್ಕೆ ಸಿದ್ಧರಾಗಿರುವರು. ಕಾಡು ಜನರ ಸೈನ್ಯ ಮೇಲೆ ಹಾಯುವ ಹುಚ್ಚು ಹೊಳೆಯಂತೆ ತಡೆಗೆ ಅಡಗಿಸಲಾರದುದಾಗಿತ್ತು.

ಗೋವಿಂದಮಾಣಿಕ್ಯ—" ನಾನು ಯುದ್ಧ ಮಾಡೆನು " ಎಂದ.

ಬಿಲ್ವನ—" ಅದಂತೂ ಕೆಲಸಕ್ಕೆ ಒದಗುವ ಮಾತೇ ಅಲ್ಲ " ಎಂದ.

ರಾಜನೆಂದ—" ನಾನು ರಾಜ್ಯ ಆಳಲು ಯೋಗ್ಯನಲ್ಲ. ಅದರ ಎಲ್ಲ ಲಕ್ಷಣವೂ ಸ್ಪಷ್ಟವಾಗುತಿರುವುದು. ಅದರಿಂದಲೇ ನನ್ನ ವಿಷಯದಲ್ಲಿ

ಪ್ರಜೆಗಳಿಗೆ ಮಮತೆಯಿಲ್ಲದಿರುವದು. ಅದರಿಂದಲೇ ದುರ್ಭಿಕ್ಷ, ಅದಕ್ಕೆ ಮತ್ತೆ ಈ ಯುದ್ಧ. ರಾಜ್ಯ ಬಿಟ್ಟುಬಿಡಲು ಇವೆಲ್ಲ ಭಗವಂತನ ಆದೇಶ."

ಬಿಲ್ವನನೆಂದ–"ಇದು ಎಂದಿಗೂ ಭಗವಂತನ ಅಪ್ಪಣೆಯಾಗಲಾರದು. ಈಶ್ವರ ನಿಮ್ಮ ಮೇಲೆ ರಾಜ್ಯ ಆಳುವ ಹೊಣೆ ಹೊರಿಸಿರುವನು. ರಾಜ ಕಾರ್ಯ ತೊಡಕಿಲ್ಲದಿದ್ದವರೆಗೂ ನಿಮ್ಮ ಕರ್ತವ್ಯವನ್ನು ಸರಿಯಾಗಿ ನಡೆಸಿ ಕೊಂಡು ಬಂದಿರುವಿರಿ. ಅದರಲ್ಲಿ ಕಷ್ಟ ಕಂಡೊಡನೆ ಅದನ್ನು ದೂರ ಕ್ಕೆ ಬಿಟ್ಟು ಸ್ವತಂತ್ರನಾಗ ಬಯಸುವಿರಿ ಮತ್ತು ಈಶ್ವರನ ಅಪ್ಪಣೆ ಎಂದು ಹೇಳಿ ಕೊಂಡು ನಿಮ್ಮನ್ನು ವಂಚಿಸಿಕೊಂಡು ಸುಖಿಯಾಗ ಬಯಸುವಿರಿ."

ಮಾತು ಗೋವಿಂದಮಾಣಿಕ್ಯನ ಎದೆಯಲ್ಲಿ ನಾಟಿತು. ಆತ ಮಾತಿ ಲ್ಲದೆ ಸ್ವಲ್ಪ ಹೊತ್ತು ಕುಳಿತಿದ್ದನು. ಕೊನೆಗೆ ಸಂಪೂರ್ಣ ಕಾತರನಾಗಿ— "ಠಾಕೂರ್, ನನಗೆ ಸೋಲಾಯಿತು. ನಕ್ಷತ್ರ ನನ್ನನ್ನು ಕೊಂದು ರಾಜ ನಾಗಿರುವನೆಂದು ಎಣಿಸಿಕೊಳ್ಳಿ" ಎಂದನು.

ಬಿಲ್ವನನೆಂದ—"ವಾಸ್ತವವಾಗಿಯೂ ಹಾಗೆ ನಡೆದರೆ ನಾನು ಮಹಾ ರಾಜರಿಗಾಗಿ ದುಃಖಿಸೆ. ಆದರೆ ಮಹಾರಾಜರು ತಮ್ಮ ಕರ್ತವ್ಯ ಮರೆತು ಓಡಿದ್ದಾದರೆ ಆಗಲೀಗ ನನ್ನ ದುಃಖಕ್ಕೆ ಕಾರಣವುಂಟಾಗುವದು—"

ರಾಜ ಸ್ವಲ್ಪ ಅಳುಕಿ—"ಸ್ವಂತ ತಮ್ಮನ ರಕ್ತ ಸುರಿಸಲೆ" ಎಂದ.

ಬಿಲ್ವನನೆಂದ—"ಕರ್ತವ್ಯದ ಇದಿರಿನಲ್ಲಿ ಒಡ ಹುಟ್ಟಿದವ, ನೆಂಟರು ಯಾರೂ ಇಲ್ಲ. ಕುರುಕ್ಷೇತ್ರದ ಯುದ್ಧದ ಸಮಯದಲ್ಲಿ ಶ್ರೀಕೃಷ್ಣ ಅರ್ಜು ನನಿಗೆ ಏನು ಉಪದೇಶಕೊಟ್ಟಿದ್ದ ನೆನಪು ಮಾಡಿಕೊಂಡು ನೋಡಿ."

ರಾಜನೆಂದ—"ಠಾಕೂರ್, ನಾನು ನನ್ನ ಕೈಯಾರ ಕತ್ತಿ ಎತ್ತಿ ತಮ್ಮನನ್ನು ಗಾಯಗೊಳಿಸಬೇಕೆನ್ನುವಿರೇನು?"

ಬಿಲ್ವನ—ಹೌದು—ಎಂದ.

ಹಠಾತ್ತಾಗಿ ಧ್ರುವ ಬಂದು ಗಂಭೀರ ಭಾವದಿಂದ—"ಛಿಃ ಅಂತಹ ಮಾತು ಆಡಬಾರದು" ಎಂದ.

ಧ್ರುವ ಆಟವಾಡುತ್ತಿದ್ದ. ಇಬ್ಬರ ನಡುವೆ ವಾಗ್ವಾದ ಕೇಳಿ ಇಬ್ಬರೂ ಏನೋ ತುಂಟುತನ ಮಾಡುತ್ತಿರುವರು ಎಂದು ಥಟ್ಟನೆ ಎಣಿಸಿದ. ಆದ್ದರಿಂದ ಸಕಾಲದಲ್ಲಿ ಇಬ್ಬರಿಗೂ ಸ್ವಲ್ಪ ಬುದ್ಧಿ ಹೇಳುವುದು ಅವಶ್ಯಕ ವೆಂದು ನಿರ್ಧರಿಸಿ ಹಠಾತ್ತಾಗಿ ಬಂದು ಮೈ ಕೊಂಕಿಸಿ 'ಛಿ—ಅಂತಹ ಮಾತು ಆಡಬಾರದು—' ಎಂದ.

ಪುರೋಹಿತ ಠಾಕೂರನಿಗೆ ಬಹಳ ಮೋಜೆನಿಸಿತು. ಆತ ನಗ ತೊಡಗಿದ. ಧ್ರುವನನ್ನು ಎತ್ತಿಕೊಂಡು ಮುತ್ತಿಡತೊಡಗಿದ. ಆದರೆ ರಾಜ ನಗಲಿಲ್ಲ. ಅವನ ಮನದಲ್ಲಿ ಹುಡುಗನ ಬಾಯಿಂದ ತಾನು ದೈವ ವಾಣಿ ಕೇಳಿದೆನೆಂದು ಅನಿಸಿತು.

ಆತ ದೃಢಸ್ವರದಿಂದ "ಠಾಕೂರ್, ಈ ರಕ್ತಪಾತಕ್ಕೆ ಎಡೆಗೊಡೆ ನೆಂದು ನಾನು ನಿರ್ಧರಿಸಿರುವೆ. ನಾನು ಯುದ್ಧ ಮಾಡೆನು" ಎಂದ.

ಬಿಲ್ವನ ಠಾಕೂರ ಸ್ವಲ್ಪಹೊತ್ತು ತೆಪ್ಪನಿದ್ದ. ಕೊನೆಗೆ "ಮಹಾ ರಾಜರಿಗೆ ಯುದ್ಧಮಾಡಲು ಆಕ್ಷೇಪಣೆಯಿರುವುದಾದರೆ ಮತ್ತೊಂದು ಕೆಲಸ ಮಾಡಿರಿ. ತಾವು ನಕ್ಷತ್ರರಾಯನನ್ನು ಭೇಟಿಮಾಡಿ ಅವನನ್ನು ಯುದ್ಧ ದಿಂದ ವಿಮುಖನನ್ನಾಗಿ ಮಾಡಿ" ಎಂದ.

ಗೋವಿಂದಮಾಣಿಕ್ಯ—"ಇದು ನನಗೆ ಸಮ್ಮತ—"

ಬಿಲ್ವನನೆಂದ– ಹಾಗಾದರೆ ಅದೇ ಸಲಹೆ ಬರೆದು ನಕ್ಷತ್ರರಾಯನ ಬಳಿಗೆ ಕಳುಹಿಸೋಣಾಗಲಿ" ಎಂದ. ಕೊನೆಗೆ ಅದೇ ನಿರ್ಧಾರವಾಯಿತು.

## ೩೪

ನಕ್ಷತ್ರರಾಯ ಸೈನ್ಯದೊಡನೆ ಮುಂದುವರಿದ. ಎಲ್ಲೂ ಎಳ್ಳಷ್ಟೂ ಅಡ್ಡಿಯಾಗಲಿಲ್ಲ. ತ್ರಿಪುರದ ಯಾವ ಹಳ್ಳಿಯಲ್ಲಿ ಕಾಲಿಟ್ಟರೂ ಆ ಹಳ್ಳಿ ಅವನನ್ನು ರಾಜನೆಂದು ಒಪ್ಪಿಕೊಳ್ಳತೊಡಗಿತು. ಹೆಜ್ಜೆಹೆಜ್ಜೆಗೂ ಧೊರೆತನದ ಸವಿ ಸವಿಯ ತೊಡಗಿದ. ಹಸಿವೆ ಮೇಲಿಂದ ಮೇಲೆ ಹೆಚ್ಚಾಗ ತೊಡಗಿತು. ನಾಲ್ಕುದಿಕ್ಕಿನ ವಿಶಾಲವಾದ ಹೊಲಗದ್ದೆ, ಹಳ್ಳಿಗಳು, ಬೆಟ್ಟಸಾಲು, ನದಿ ಎಲ್ಲವೂ ನನ್ನವೆ ಎಂದು ಮನಸ್ಸಿಗೆ ಭಾಸವಾಗ ತೊಡಗಿತು. ಆ ಅಧಿಕಾರ

ವ್ಯಾಪ್ತಿಯ ಸಂಗಸಂಗಡಲೇ ಅವನೂ ಬಹಳ ದೂರದವರೆಗೆ ವ್ಯಾಪ್ತನಾಗಿ ಅತಿ ಶ್ರೇಷ್ಠನಂತಾಗುತ್ತ ಬಂದ. ಮೊಗಲ್ ಸೈನಿಕರು ಏನೇ ಬಯಸಲಿ ಅದನ್ನು ಅವರುಗಳು ತೆಗೆದುಕೊಳ್ಳ ಬಹುದೆಂದು 'ಆಲಿ-ಹುಕುಂ' ಚಲಾಯಿಸಿದ. ಮನಸಿನಲ್ಲಿ ಇವೆಲ್ಲ ನನ್ನವು, ಇವರೆಲ್ಲರೂ ನನ್ನ ರಾಜ್ಯಕ್ಕೆ ಬಂದಿರುವರು ಎಂಬ ಭಾವನೆ ತೋರಿತು. ಇವರುಗಳನ್ನು ಯಾವುದೇ ಸುಖದಿಂದ ವಂಚಿಸುವಂತಿಲ್ಲ. ಸ್ವದೇಶಕ್ಕೆ ಹಿಂದಿರುಗಿ ಮೊಗಲರು ತನ್ನ ಆತಿಥ್ಯವನ್ನೂ, ರಾಜೋಚಿತ ಉದಾರತೆ ಮತ್ತು ನೀತಿಯನ್ನು ಬಾಯಿ ತುಂಬ ಹೊಗಳುವರು. 'ತ್ರಿಪುರಾದ ರಾಜನೇನೂ ಸಾಮಾನ್ಯನಲ್ಲ' ಎನ್ನುವರು ಎಂದೆಣಿಸಿದ. ಮೊಗಲ ಸೈನಿಕರಿಂದ ಕೀರ್ತಿಗಳಿಸಲು ಅವನು ಸತತ ಉತ್ಸುಕನಾಗಿದ್ದ. ಅವರುಗಳು ಅವನೆಡೆ ಕಿವಿಗಿಂಪಾದ ಯಾವ ಮಾತನ್ನು ಆಡಿದರೂ ಬಹಳವಾಗಿ ಹಿಗ್ಗುವನು. ತೆಗಳಿಕೆಗೆ ಯಾವುದಾದರೂ ಕಾರಣ ಘಟಿಸೀತೆಂದು ಸದಾ ಹೆದುರುತಿದ್ದನು.

ರಘುಪತಿ ಬಂದು—"ಯುದ್ಧದ ಸಿದ್ಧತೆಯಾವುದೂ ಕಾಣುತ್ತಿಲ್ಲವಲ್ಲ" ಎಂದ.

ನಕ್ಷತ್ರರಾಯ—"ಇಲ್ಲ ಠಾಕೂರ್. ಹೆದರಿಕೆಯಾಗುತ್ತೆ" ಎಂದು ಹೇಳಿ ಬಿದ್ದು ಬಿದ್ದು ನಗ ತೊಡಗಿದ.

ರಘುಪತಿ ನಗಲು ವಿಶೇಷವಾದ ಕಾರಣ ಯಾವುದನ್ನೂ ಕಾಣದಿದ್ದರೂ ನಕ್ಕ.

"ನಕ್ಷತ್ರರಾಯ. ನವಾಬರ ಸೈನ್ಯ ತಂದಿರುವನು. ಇದೇನೂ ಸಾಮಾನ್ಯ ವಿಷಯವಲ್ಲ" ಎಂದು ನಕ್ಷತ್ರರಾಯ ಹೇಳಿದ.

ರಘುಪತಿಯೆಂದ—"ಈ ಬಾರಿ ಯಾರು ಯಾರನ್ನು ದೇಶ ಭ್ರಷ್ಟರನ್ನಾಗಿ ಮಾಡುವರೋ ನೋಡೋಣ-ಏನು?"

ನಕ್ಷತ್ರರಾಯನೆಂದ—"ನಾನು ಮನಸ್ಸು ಮಾಡಿದರೆ ದೇಶ ಭ್ರಷ್ಟನನ್ನಾಗಿ ಮಾಡಬಲ್ಲೆ, ಸೆರೆಮನೆಯಲ್ಲಿ ಬಂಧಿಸಿಡ ಬಲ್ಲೆ. ಕೊಲ್ಲುವುದಕ್ಕೂ ಅಪ್ಪಣೆಮಾಡಬಲ್ಲೆ. ಆದರೆ ಏನು ಮಾಡುವುದೆಂದು ಇನ್ನೂ

ನಿರ್ಧರಮಾಡಿಲ್ಲ." ಹೀಗೆಂದು ಅತಿ ಬುದ್ಧಿವಂತನಂತೆ ಬಹಳವಾಗಿ ಆಲೋಚಿಸ ತೊಡಗಿದ.

"ಅಷ್ಟೊಂದು ಆಲೋಚಿಸಬೇಡಿ ಮಹಾರಾಜ, ಇನ್ನೂ ಬೇಕಾದಷ್ಟು ಅವಕಾಶವಿದೆ. ಆದರೆ ಗೋವಿಂದಮಾಣಿಕ್ಯ ಯುದ್ಧ ಮಾಡದೆಯೇ ನಿಮ್ಮನ್ನು ಸೋಲಿಸಿಯಾನು ಎಂಬ ಹೆದರಿಕೆ ನನಗೆ" ಎಂದು ರಘುಪತಿ ಹೇಳಿದ.

ನಕ್ಷತ್ರರಾಯ 'ಅದು ಹೇಗೆ ಸಾಧ್ಯ' ಎಂದು ಕೇಳಿದ.

ರಘುಪತಿಯೆಂದ—ಗೋವಿಂದಮಾಣಿಕ್ಯ ಸೈನ್ಯವನ್ನು ಮರೆಯಲ್ಲಿಟ್ಟು ಅತಿಯಾದ ಸೋದರ ಸ್ನೇಹ ತೋರ್ಪಡಿಸಿಯಾನು. ಕತ್ತಿಗೆ ಕೈಹಾಕಿಕೊಂಡು ನನ್ನ ಚಿಕ್ಕತಮ್ಮಾ, ಬಾ ಮನೆಗೆ ಬಾ, ಹಾಲು–ಸಕ್ಕರೆ ಕೊಟ್ಟೇನು ಎಂದಾನು. ಮಹಾರಾಜ ಅಳುತ್ತ ಅಪ್ಪಣೆಯಾದರೆ ನಾನು ಈಗಲೇ ಹೊರಟೆ ಹೆಚ್ಚು ತಡವಾಗದು–ಎಂದಾನು-ಹೀಗೆಂದು ಸ್ವದೇಶಿ ಮೆಟ್ಟನ್ನುಮೆಟ್ಟಿ ತಮ್ಮನ ಹಿಂದೆ ಹಿಂದೆ ತಲೆತಗ್ಗಿಸಿಕೊಂಡು ಗಿಡ್ಡ ಕುದುರೆಯಂತೆ ನಡೆದಾನು. ಸಾಮ್ರಾಟರ ಮೊಗಲ್ ಸೈನ್ಯ ತಮಾಷೆ ನೋಡಿ ನಕ್ಕು ಮನೆಗೆ ಹಿಂದಿರುಗೀತು.

ನಕ್ಷತ್ರರಾಯ ರಘುಪತಿಯ ಬಾಯಿಂದ ಚುಚ್ಚು ನುಡಿ ಕೇಳಿ ಬಹಳ ವ್ಯಸನಪಟ್ಟ. ಕಿರುನಗೆ ನಗಲು ವ್ಯರ್ಥವಾಗಿ ಪ್ರಯತ್ನಿಸಿ "ನನ್ನನ್ನು ಅರಿಯದ ಮಗು–ಎಂದು ಎಣಿಸಿ ಹೀಗೆ ಹೆದರಿಸುವಿರಾ? ಇದಕ್ಕೆಲ್ಲ ಎಡೆಯಿಲ್ಲ. ಇದು ಖಂಡಿತ ಆಗದು, ಠಾಕೂರ್ ತೋರಿಸುವೆ ನೋಡುವಿರಂತೆ" ಎಂದ.

ಅಂದೇ ಗೋವಿಂದಮಾಣಿಕ್ಯನ ಕಾಗದ ಒಂದು ಸೇರಿತು. ಅದನ್ನು ರಘುಪತಿ ತೆರೆದು ನೋಡಿದ. ರಾಜ ಅತಿಯಾದ ಸ್ನೇಹ ವ್ಯಕ್ತಪಡಿಸಿ ಬೇಟಿಯಾಗಲು ಬೇಡಿರುವನು. ಕಾಗದವನ್ನು ನಕ್ಷತ್ರರಾಯನಿಗೆ ತೋರಿಸಲಿಲ್ಲ. ದೂತನಿಗೆ "ಕಷ್ಟ ಪಟ್ಟುಕೊಂಡು ಗೋವಿಂದಮಾಣಿಕ್ಯ ಇಷ್ಟು ದೂರ ಬರಬೇಕಾದ ಆವಶ್ಯಕತೆ ಇಲ್ಲ. ಸೈನ್ಯವನ್ನೂ ಕತ್ತಿಯನ್ನೂ ತೆಗೆದುಕೊಂಡು ಮಹಾರಾಜ ನಕ್ಷತ್ರಮಾಣಿಕ್ಯರು ಶೀಘ್ರದಲ್ಲೇ ಅವರನ್ನು

ನೋಡಲು ಬರುವರು. ಗೋವಿಂದಮಾಣಿಕ್ಯರು ಈ ಅಲ್ಪಕಾಲ ಸೋದರನ ಅಗಲಿಕೆಯಿಂದ ಅತಿಯಾಗಿ ದುಃಖಿಸದಿರಲಿ. ಎಂಟು ವರ್ಷಕಾಲ ದೇಶ ಬಿಟ್ಟಿರುವುದಾಗಿದ್ದರೆ ಇದಕ್ಕಿಂತಲೂ ಹೆಚ್ಚುಕಾಲ ಅಗಲಿಕೆ ಸಂಭವವಿತ್ತು." ಎಂದು ಹೇಳಿ ಕಳುಹಿಸಿದ.

ರಘುಪತಿ ನಕ್ಷತ್ರರಾಯನ ಬಳಿಗೆ ಹೋಗಿ—"ಗೋವಿಂದಮಾಣಿಕ್ಯ ರಾಜ್ಯದಿಂದ ಓಡಿಸಿದ ತಮ್ಮನಿಗೆ ಅತ್ಯಂತ ಸ್ನೇಹ ಪೂರ್ಣವಾದೊಂದು ಕಾಗದ ಬರೆದಿರುವನು" ಎಂದು ತಿಳಿಸಿದ.

ನಕ್ಷತ್ರರಾಯ ಅತಿ ತಿರಸ್ಕಾರ ಭಾವನೆ ನಟಿಸಿ ನಕ್ಕು ಹೇಳಿದ—"ನಿಜವಾಗಿಯೂ? ಏನು ಕಾಗದ, ಎಲ್ಲಿ ನೋಡೋಣ" ಎಂದು ಕೈ ನೀಡಿದ.

"ಆ ಪತ್ರವನ್ನು ಮಹಾರಾಜರಿಗೆ ತೋರುವುದು ಅವಶ್ಯಕವೆಂದು ನನಗೆ ತೋರಲಿಲ್ಲ. ಆಗಲೇ ಹರಿದು ಹಾಕಿದೆ. ಯುದ್ಧ ಹೊರತು ಇದಕ್ಕೆ ಬೇರೆ ಉತ್ತರವೇ ಇಲ್ಲ" ಎಂದು ರಘುಪತಿ ಹೇಳಿದ.

ನಕ್ಷತ್ರರಾಯ ನಗುತ್ತನಗುತ್ತ ಹೇಳಿದ—"ಒಳ್ಳೆಯದು ಮಾಡಿದಿರಿ. ಯುದ್ಧ ಹೊರತು ಇದಕ್ಕೆ ಬೇರೆ ಉತ್ತರವೇ ಇಲ್ಲ. ಎಂದು ನೀವು ಹೇಳಿರುವಿರಿ. ಸರಿಯಾದ ಉತ್ತರ ಹೇಳಿರುವಿರಿ."

ರಘುಪತಿ "ಉತ್ತರ ಕೇಳಿದಾಗ ಗೋವಿಂದಮಾಣಿಕ್ಯ ದೇಶಬಿಟ್ಟು ಕಳುಹಿಸಿದಾಗ ತಮ್ಮ ಸಹಜವಾಗಿ ಹೋಗಿದ್ದ. ಆದರೆ ಅದೇ ತಮ್ಮ ಮನೆಗೆ ಹಿಂದಿರುಗುವಾಗ ಕಡಿಮೆಯಾಗೇನೂ ಗದ್ದಲ ಎಬ್ಬಿಸುತ್ತಿಲ್ಲ ಎಂದು ಭಾವಿಸಿ ಕೊಳ್ಳುವನು." ಎಂದು ಹೇಳಿದ.

ನಕ್ಷತ್ರರಾಯನೆಂದ—"ತಮ್ಮ ಸಾಮಾನ್ಯ ಮನುಷ್ಯನಲ್ಲ ಎಂದು ಭಾವಿಸುವನು. ಮನಸ್ಸಿಗೆ ಬಂದಾಗ ದೇಶ ಬಿಟ್ಟು ಓಡಿಸುವುದೂ ಮತ್ತು ತೋರಿದಾಗ ಕರೆದುಕೊಳ್ಳುವುದು ಎನ್ನುವುದಕ್ಕೆ ಅವಕಾಶವಿಲ್ಲ." ಇಷ್ಟು ಹೇಳಿ ಅತಿ ಆನಂದದಿಂದ ಮತ್ತೊಮ್ಮೆ ನಗಲಾರಂಭಿಸಿದ.

## ೩೫

ನಕ್ಷತ್ರರಾಯನ ಉತ್ತರ ಓದಿ ಗೋವಿಂದಮಾಣಿಕ್ಯನ ಮನನೊಂದಿತು. ಇನ್ನು ಮಹಾರಾಜರು ತಡೆಹೇಳರು ಎಂದು ಬಿಲ್ವನ ಎಣಿಸಿದ. ಆದರೆ ಗೋವಿಂದಮಾಣಿಕ್ಯ “ ಈ ಮಾತು ಎಂದಿಗೂ ನಕ್ಷತ್ರರಾಯನ ಮಾತಲ್ಲ. ಇದು ಆ ರಘುಪತಿ ಹೇಳಿ ಕಳುಹಿಸಿರುವುದು. ನಕ್ಷತ್ರನ ಬಾಯಿಂದ ಇಂಥ ಮಾತು ಎಂದಿಗೂ ಹೊರಬೀಳದು ” ಎಂದು ಹೇಳಿದ.

ಬಿಲ್ವನ—“ ಮಹಾರಾಜ. ಈಗ ಏನು ಉಪಾಯವನ್ನು ತೀರ್ಮಾನಿಸಿರುವಿರಿ ” ಎಂದ.

ರಾಜನೆಂದ—“ ನಾನು ನಕ್ಷತ್ರನನ್ನು ಹೇಗಾದರೂ ಮಾಡಿ ಒಮ್ಮೆ ಕಾಣಬೇಕು-ಹಾಗೆ ಮಾಡಿದರೆ ಎಲ್ಲ ಗೊಂದಲವೂ ನಿವಾರಣೆ ಯಾಗುವದು.

“ ಕಾಣಲು ಸಾಧ್ಯವಿಲ್ಲದಿದ್ದರೆ ” ಎಂದು ಬಿಲ್ವನ ಕೇಳಿದ.

ರಾಜ—ಹಾಗಾದರೆ ನಾನು ರಾಜ್ಯಬಿಟ್ಟು ಹೋಗಬೇಕಾದೀತು.

ಬಿಲ್ವನ ಹೇಳಿದ—“ ಸರಿ, ನಾನೊಮ್ಮೆ ಪ್ರಯತ್ನಿಸಿ ನೋಡುವೆ.”

ಬೆಟ್ಟದಮೇಲೆ ನಕ್ಷತ್ರರಾಯನ ಶಿಬಿರ. ಕಗ್ಗಾಡು ಬಿದಿರು ಕಾಡು. ಬೆತ್ತದ ಕಾಡು. ನೊದೆಯ ಕಾಡು. ಬಗೆ ಬಗೆಯ ಗಿಡ ಬಳ್ಳಿಗಳಿಂದ ನೆಲ ಮುಚ್ಚಿಕೊಂಡಿತ್ತು. ಸೈನಿಕರು ಕಾಡಾನೆಗಳು ಹೋಗುವ ದಾರಿಹಿಡಿದು ಮೇಲಕ್ಕೆ ಬಂದಿರುವರು. ಆಗ ಮಧ್ಯಾಹ್ನ. ಸೂರ್ಯ ಬೆಟ್ಟದ ಪಶ್ಚಿಮ ಭಾಗದಲ್ಲಿ ಮರೆಯಾಗಿದ್ದ. ಪೂರ್ವಭಾಗದಲ್ಲಿ ಕತ್ತಲೆ ಕವಿದಿತ್ತು. ಗೋಧೂಳಿಯು ನೆರಳೂ ಮರಗಳ ನೆರಳೂ ಒಂದಾಗಿ ಅಕಾಲದಲ್ಲಿ ಸಂಜೆ ದೋರಿತ್ತು. ಶೀತಕಾಲದ ಸಂಜೆಯಲ್ಲಿ ಭೂಮಿಯಿಂದ ಮಂಜಿನಂತೆ ಆವಿ ಏಳು ತ್ತಿತ್ತು. ಜೀರುಂಡೆಯ ಝೇಂಕಾರ ನೀರವವಾದ ಕಾಡನ್ನು ಮಾತನಾಡು ತ್ತಿರುವಂತೆ ಮಾಡಿತ್ತು. ಬಿಲ್ವನ ಶಿಬಿರಕ್ಕೆ ಹೋಗಿ ಸೂರ್ಯ ಪೂರ್ತಿ ಯಾಗಿ ಮುಳುಗಿದ್ದ. ಆದರೆ ಪಡುವಣ ಬಾನಲ್ಲಿ ಹೊಸ ರೇಖೆ ಪೂರ್ತಿಯಾಗಿ ಕಣ್ಮರೆಯಾಗಿರಲಿಲ್ಲ. ಪಶ್ಚಿಮ ದಿಕ್ಕಿನ ಸಮತಲವಾದ ಬೆಟ್ಟದ ತಪ್ಪಲಲ್ಲಿ ಹೊನ್ನೆರಳಿನಿಂದ ಅಲಂಕಾರವಾಗಿದ್ದ ದಟ್ಟವಾದ ಕಾಡು ಹಸರು ಸಮುದ್ರ

ದಂತೆ ಕಾಣಿಸುತ್ತಿತ್ತು. ಸೈನ್ಯ ಮರುದಿನ ಪಯಣ ಮಾಡುವುದಾಗಿ ನಿಶ್ಚಯವಾಗಿತ್ತು. ರಘುಪತಿ ಒಂದು ಗುಂಪು ಸೈನ್ಯವನ್ನೂ ಸೇನಾಪತಿ ಯನ್ನೂ ಸಂಗಡ ಕರೆದುಕೊಂಡು ದಾರಿ ಕಂಡುಹಿಡಿಯಲು ಹೋದವನು ಇನ್ನೂ ಹಿಂದಿರುಗಿ ಬಂದಿರಲಿಲ್ಲ. ರಘುಪತಿಗೆ ತಿಳಿಯದೆ ಯಾರೂ ನಕ್ಷತ್ರ ರಾಯನ ಹತ್ತಿರ ಬರಕೂಡದೆಂಬ ನಿಯಮವಿತ್ತಾದರೂ ಸಂನ್ಯಾಸಿ ವೇಷ ಧಾರಿ ಬಿಲ್ವನನನ್ನು ಯಾರೂ ತಡೆಯಲಿಲ್ಲ.

ಬಿಲ್ವನ ನಕ್ಷತ್ರರಾಯನ ಹತ್ತಿರಕ್ಕೆ ಹೋಗಿ "ಮಹಾರಾಜ ಗೋವಿಂದಮಾಣಿಕ್ಯರು ನಿಮ್ಮನ್ನು ನೆನೆದು ಒಂದು ಪತ್ರ ಬರೆದಿರುವರು" ಎಂದು ಹೇಳಿ ಕಾಗದವನ್ನು ನಕ್ಷತ್ರರಾಯನ ಕೈಗೆ ಕೊಟ್ಟನು. ನಕ್ಷತ್ರ ರಾಯ ನಡುಗುವ ಕೈಯಿಂದ ಪತ್ರ ತೆಗೆದುಕೊಂಡ. ಆ ಪತ್ರ ಬಿಚ್ಚಲು ಅವನಿಗೆ ನಾಚಿಕೆಯೂ ಭಯವೂ ಉಂಟಾಯಿತು. ಗೋವಿಂದಮಾಣಿಕ್ಯ ನಿಗೂ ಅವನಿಗೂ ನಡುವೆ ರಘುಪತಿ ಅಡ್ಡಲಾಗಿರುವವರೆಗೆ ನಕ್ಷತ್ರರಾಯ ನಿಶ್ಚಿಂತನಾಗಿರುವನು. ಅವನು ಯಾವ ಬಗೆಯಲ್ಲೂ ಗೋವಿಂದಮಾಣಿಕ್ಯ ನನ್ನು ನೋಡಲು ಇಷ್ಟಪಡಲಿಲ್ಲ. ಗೋವಿಂದಮಾಣಿಕ್ಯನ ದೂತ ತನ್ನೆದುರಿಗೆ ಬಂದು ನಿಲ್ಲುತ್ತಲೆ ನಕ್ಷತ್ರರಾಯ ಬಹಳ ಕುಗ್ಗಿಹೋದ ಮತ್ತು ಮನದಲ್ಲೇ ಸ್ವಲ್ಪ ಕೋಪಗೊಂಡ. ರಘುಪತಿ ಇದ್ದಿದ್ದರೆ, ಈ ದೂತನನ್ನು ತನ್ನ ಬಳಿಗೆ ಬಿಡದೆ ಇದ್ದಿದ್ದರೆ ಎಂದು ತೋರಿತು. ಮನಸಿನಲ್ಲಿ ಬಗೆ ಬಗೆ ಯಾಗಿ ಯೋಚಿಸಿ ಪತ್ರ ಬಿಚ್ಚಿದ.

ಅದರಲ್ಲಿ ಸ್ವಲ್ಪವಾದರೂ ಹೀಯಾಳಿಕೆ ಇರಲಿಲ್ಲ. ಗೋವಿಂದ ಮಾಣಿಕ್ಯ ಅವನಿಗೆ ನಾಚಿಕೆ ಹುಟ್ಟಿಸುವಂತಹ ಒಂದು ಮಾತನ್ನೂ ಹೇಳಿರ ಲಿಲ್ಲ. ತಮ್ಮನ ವಿಷಯದಲ್ಲಿ ಎಳ್ಳಷ್ಟೂ ಉದ್ರೇಕ ತೋರಿರಲಿಲ್ಲ. ನಕ್ಷತ್ರರಾಯ ಸೈನ್ಯ ಸಾಮಂತರೊಡನೆ ತನ್ನನ್ನು ಆಕ್ರಮಿಸಲು ಬಂದಿರುವನು ಎಂಬ ಮಾತನ್ನೂ ಉಲ್ಲೇಖಿಸಲಿಲ್ಲ. ಇಬ್ಬರ ನಡುವೆ ಹಿಂದೆ ಯಾವ ಭಾವನೆ ಇತ್ತೊ ಈಗಲೂ ಅದೇ ಇರುವುದು. ಇಡೀ ಪತ್ರದಲ್ಲಿ ಒಂದು ಸುಗಭೀರ ಸ್ನೇಹ ಮತ್ತು ವಿಷಾದ ಅಡಗಿತ್ತು. ಅದೂ ಸ್ಪಷ್ಟವಾದ ಮಾತಿನಲ್ಲಿ ವ್ಯಕ್ತ ವಾಗಿಲ್ಲ ಎಂದು ನಕ್ಷತ್ರರಾಯನ ಹೃದಯ ಬಹಳವಾಗಿ ನೊಂದಿತು.

ಪತ್ರ ಓದುತ್ತ ಓದುತ್ತ ಅವನ ಮುಖಭಾವ ಸ್ವಲ್ಪ ಸ್ವಲ್ಪವಾಗಿ ಮಾರ್ಪಡತೊಡಗಿತು. ಹೃದಯದ ಕಲ್ಲುಹೊದಿಕೆ ನೋಡನೋಡುತ್ತ ಬಿರಿಯಿತು. ಪತ್ರ ಅವನ ನಡುಗುವ ಕೈಯಲ್ಲಿ ನಡುಗತೊಡಗಿತು. ಅದನ್ನು ಸ್ವಲ್ಪಕಾಲ ತಲೆಯಮೇಲೆ ಇಟ್ಟುಕೊಂಡನು. ಆ ಪತ್ರದಲ್ಲಿದ್ದ ಅಣ್ಣನ ಆಶಿರ್ವಾದ ತಣ್ಣನೆಯ ಜಲಪಾತದಂತೆ ಅವನ ಬೆಂದ ಹೃದಯದಮೇಲೆ ಹರಿಯಲಾರಂಭಿಸಿತು. ಬಹಳ ಹೊತ್ತಿನ ತನಕ ಅಲುಗಾಡದೆ ದೂರದ ಪಡುವಣ ಸಂಜೆಗೆಂಪಾದ ಕೆಂಪಾದ ಕರ್ರನೆಯ ಕಾಡಿನ ಕಡೆ ನೆಟ್ಟ ನೋಟ ದಿಂದ ನೋಡುತ್ತಿದ್ದ. ನಾಲ್ಕೂ ಕಡೆ ಮೂಕಸಂಧ್ಯೆ ಪಾತಾಳ ಮುಟ್ಟಿರುವ ಶಬ್ದಹೀನ ಶಾಂತ ಸಮುದ್ರದಂತೆ ಎಚ್ಚೆತ್ತು ಕುಳಿತಿತ್ತು. ಕ್ರಮೇಣ ಅವನ ಕಣ್ಣಿನಲ್ಲಿ ನೀರುಕಾಣಿಸಿತು. ಅತಿ ವೇಗದಲ್ಲಿ ನೀರು ಸುರಿಯಲಾರಂಭಿಸಿತು. ಕೂಡಲೆ ನಾಚಿಕೆಯಿಂದಲೂ ಅನುತಾಪದಿಂದಲೂ ನಕ್ಷತ್ರರಾಯ ಎರಡು ಕೈಗಳಿಂದಲೂ ಮುಖ ಮುಚ್ಚಿಕೊಂಡ.

ಅಳುತ್ತ—ನನಗೆ ರಾಜ್ಯ ಬೇಕಿಲ್ಲ. ಅಣ್ಣ ನನ್ನೆಲ್ಲ ತಪ್ಪುಗಳನ್ನೂ ಕ್ಷಮಿಸಿ ನನಗೆ ನಿನ್ನ ಕಾಲಡಿಯಲ್ಲಿ ಸ್ಥಳಕೊಡು. ನನ್ನನ್ನು ನಿನ್ನ ಹತ್ತಿರ ಇರಿಸಿಕೊ. ನನ್ನನ್ನು ದೂರವಾಗಿ ಅಟ್ಟಬೇಡ—

ಬಿಲ್ವನ ಒಂದು ಮಾತನ್ನೂ ಆಡಲಿಲ್ಲ—ಸುಮ್ಮನೆ ಕುಳಿತು ನೋಡ ತೊಡಗಿದ. ಕಡೆಗೆ ನಕ್ಷತ್ರರಾಯ ಶಾಂತನಾದಾಗ ಬಿಲ್ವನ—"ಯುವ ರಾಜ, ಗೋವಿಂದಮಾಣಿಕ್ಯರು ನಿಮ್ಮ ದಾರಿಯನ್ನು ಎದುರುನೋಡುತ್ತ ಕುಳಿತಿರುವರು. ಇನ್ನು ತಡಮಾಡಬೇಡಿ" ಎಂದ.

"ಅವರು ನನ್ನನ್ನು ಕ್ಷಮಿಸುವರೆ?" ಎಂದು ನಕ್ಷತ್ರರಾಯ ಕೇಳಿದ.

ಬಿಲ್ವನ ಹೇಳಿದ—"ಅವರು ಯುವರಾಜರ ವಿಷಯದಲ್ಲಿ ಸ್ವಲ್ಪವೂ ಕೋಪಗೊಂಡಿಲ್ಲ. ರಾತ್ರಿ ಬಹಳ ಹೊತ್ತಾದರೆ ಕಷ್ಟವಾದೀತು. ಬೇಗ ಒಂದು ಕುದುರೆಯನ್ನು ತೆಗೆದುಕೊಳ್ಳಿ. ಬೆಟ್ಟದ ಬುಡದಲ್ಲಿ ಮಹಾರಾಜರ ಕಡೆಯವರು ನಿರೀಕ್ಷಿಸುತ್ತಿರುವರು."

ನಕ್ಷತ್ರರಾಯ—"ನಾನು ಗುಟ್ಟಾಗಿ ಓಡಿಬರುವೆ. ಸೈನಿಕರಿಗೆ ತಿಳಿಸಬೇಕಾದ ಆವಶ್ಯಕತೆಯೇನೂ ಇಲ್ಲ. ಇನ್ನು ಸ್ವಲ್ಪವೂ ಸಾವಕಾಶ

ಮಾಡಬೇಕಾಗಿಲ್ಲ. ಎಷ್ಟು ಬೇಗ ಇಲ್ಲಿಂದ ಹೊರಬಿದ್ದರೆ ಅಷ್ಟು ಒಳ್ಳೆಯದು" ಎಂದ.

"ಸರಿಯಾದ ಮಾತು" ಎಂದು ಬಿಲ್ವನನೆಂದ.

"ತೀನ್‌ಮುಡಾ ಬೆಟ್ಟಕ್ಕೆ ಸಂನ್ಯಾಸಿಯೊಡನೆ ಶಿವಲಿಂಗದ ಪೂಜೆ ಮಾಡಲು ಹೋಗುತ್ತೇನೆ—" ಎಂದು ನಕ್ಷತ್ರರಾಯ ಬಿಲ್ವನನೊಡನೆ ಕುದುರೆಯೇರಿ ಹೊರಟ. ಸೈನಿಕರು ಸಂಗಡ ಹೊರಡಲು ಆಶಿಸಿದರು. ಅವರುಗಳನ್ನು ನಿಷೇಧಪಡಿಸಲಾಯಿತು.

ಇನ್ನೂ ಎಲ್ಲರೂ ಹೊರಗಡೆಗೆ ಮಾತ್ರ ಬಂದಿದ್ದರು. ಅಷ್ಟರಲ್ಲಿ ಕುದುರೆಗಳ ಗೊರಸಿನ ಧ್ವನಿಯೂ, ಸೈನಿಕರ ಕೋಲಾಹಲವೂ ಕೇಳಿ ಬಂದಿತು. ನಕ್ಷತ್ರರಾಯ ಬಹಳವಾಗಿ ಸಂಕುಚಿತನಾದ. ನೋಡುತ್ತ ನೋಡುತ್ತ ರಘುಪತಿ ಸೈನಿಕರೊಡನೆ ಹಿಂದಿರುಗಿ ಬಂದ—ಆಶ್ಚರ್ಯದಿಂದ "ಮಹಾರಾಜರು ಎಲ್ಲಿಗೆ ಹೊರಟಿರುವರು?"—ಎಂದು ಪ್ರಶ್ನಿಸಿದ. ನಕ್ಷತ್ರರಾಯ ಯಾವ ಉತ್ತರವನ್ನೂ ಹೇಳಲಾರದಾದ.

ನಕ್ಷತ್ರರಾಯ ನಿರುತ್ತರನಾಗಿರುವುದನ್ನು ಕಂಡು ಬಿಲ್ವನ "ಮಹಾರಾಜ ಗೋವಿಂದಮಾಣಿಕ್ಯರನ್ನು ನೋಡಲು ಹೊರಟಿರುವರು" ಎಂದ.

ರಘುಪತಿ ಬಿಲ್ವನನನ್ನು ತಲೆಯಿಂದ ಕಾಲವರೆಗೆ ಒಮ್ಮೆ ನಿಟ್ಟಿಸಿ ನೋಡಿದ. ಒಮ್ಮೆ ಹುಬ್ಬುಗಂಟಿಕ್ಕಿದ. ಬಳಿಕ ತನ್ನನ್ನು ತಾನು ಸಮಾಧಾನಪಡಿಸಿಕೊಂಡು "ಇಂದು ಇಂಥ ಅಸಮಯದಲ್ಲಿ ನಾವು ನಮ್ಮ ಮಹಾರಾಜರನ್ನು ಕಳುಹಿಸಲಾರೆವು. ಕೋಪಿಸಿಕೊಳ್ಳಲು ಕಾರಣವೇನೂ ಇಲ್ಲ. ನಾಳೆ ಬೆಳಗ್ಗೆ ಹೊರಟರೆ ಸರಿ. ಏನು ಹೇಳುವಿರಿ ಮಹಾರಾಜ" ಎಂದ.

ನಕ್ಷತ್ರರಾಯ ಮೆಲುದನಿಯಲ್ಲಿ "ನಾಳೆ ಬೆಳಗ್ಗೆಯೇ ಹೋಗೋಣ. ಈಗ ರಾತ್ರಿಯಾಗಿ ಬಿಟ್ಟದೆ"—ಎಂದ.

ಬಿಲ್ವನ ನಿರಾಶೆಯಿಂದ ಆ ರಾತ್ರಿಯನ್ನು ಶಿಬಿರದಲ್ಲೇ ಕಳೆದ. ಮರುದಿನ ಬೆಳಗ್ಗೆ ನಕ್ಷತ್ರರಾಯನ ಬಳಿಗೆ ಹೋಗಲೆತ್ನಿಸಿದ. ಸೈನಿಕರು ಅಡ್ಡಿ ಮಾಡಿದರು. ಸುತ್ತಲೂ ಕಾವಲಿರುವುದನ್ನು ಕಂಡ. ಎತ್ತಲೂ ಕಿಂಡಿ

ಯಿರಲಿಲ್ಲ. ಕಡೆಗೆ ರಘುಪತಿಯ ಬಳಿಗೆಹೋಗಿ "ಹೊರಡುವ ಹೊತ್ತಾಯಿತು, ಯುವರಾಜರಿಗೆ ತಿಳಿಸಿ" ಎಂದ.

ರಘುಪತಿ—"ಮಹಾರಾಜರು ಹೋಗುವುದಿಲ್ಲವೆಂದು ತೀರ್ಮಾನಿಸಿರುವರು" ಎಂದು ಹೇಳಿದ.

ಬಿಲ್ವನ—"ನಾನೊಮ್ಮೆ ಅವರನ್ನು ನೋಡಬೇಕು" ಎಂದ.

ರಘುಪತಿ—"ಅವರು ನೋಡುವುದಿಲ್ಲವೆಂದಿರುವರು."

ಬಿಲ್ವನ—"ಮಹಾರಾಜ ಗೋವಿಂದಮಾಣಿಕ್ಯರ ಪತ್ರಕ್ಕೆ ಉತ್ತರ ಬೇಕು."

ರಘುಪತಿ—ಪತ್ರಕ್ಕೆ ಉತ್ತರವನ್ನು ಒಮ್ಮೆ ಈ ಮೊದಲೆ ಕೊಟ್ಟಿದೆ.

ಬಿಲ್ವನ—"ನಾನು ಅವರ ಬಾಯಿಂದಲೇ ಕೇಳಬೇಕು."

ರಘುಪತಿ—ಅದಕ್ಕೆ ಯಾವ ಮಾರ್ಗವೂ ಇಲ್ಲ.

ವ್ಯರ್ಥಪ್ರಯತ್ನ. ಕೇವಲ ಕಾಲಹರಣ ಮಾತ್ರ ವ್ಯಯವಾಗುವುದೆಂದು ಬಿಲ್ವನ ತಿಳಿದುಕೊಂಡ. ಹೋಗುವಾಗ ರಘುಪತಿಗೆ "ಬ್ರಾಹ್ಮಣಾ, ಇದೆಂತಹ ಸರ್ವನಾಶ ಸಾಧನೆಯಲ್ಲಿ ನೀನು ನಿರತನಾಗಿರುವೆ. ಇದು ಬ್ರಾಹ್ಮಣನ ಕೆಲಸವಲ್ಲ" ಎಂದು ಹೇಳಿ ಹೋದ.

## ೩೬

ಬಿಲ್ವನ ಹಿಂದಿರುಗಿ ಬಂದಾಗ ರಾಜ ಅಷ್ಟರೊಳಗೆ ಕಾಡು ಜನರನ್ನು ಹಿಂದಕ್ಕೆ ಕಳುಹಿಸಿಬಿಟ್ಟಿರುವುದನ್ನು ಕಂಡ. ಅವರುಗಳು ರಾಜ್ಯದಲ್ಲಿ ಹಿಂಸೆಗೆ ಆರಂಭಿಸಿದ್ದರು. ಸೈನಿಕರ ಗುಂಪು ಒಡೆದುಹೋಗಿತ್ತು. ಅಷ್ಟಾಗಿ ಯುದ್ಧದ ಸಿದ್ಧತೆ ಏನೇನೂ ಇಲ್ಲ. ಬಿಲ್ವನ ಹಿಂದಿರುಗಿ ಬಂದು ರಾಜನಿಗೆ ಎಲ್ಲವನ್ನೂ ವಿವರಿಸಿದ.

ರಾಜನೆಂದ—"ಹಾಗಾದರೆ ಠಾಕೂರ್, ನಾನೇ ಹೊರಡುವೆ, ನಕ್ಷತ್ರನಿಗಾಗಿ ರಾಜ್ಯಶ್ರೀಯನ್ನು ಇಟ್ಟುಹೋಗುವೆ."

"ಅಸಹಾಯ ಪ್ರಜೆಗಳನ್ನು ಪರರ ಕೈಗೆ ಒಪ್ಪಿಸಿ ನೀವು ಓಡಿಹೋಗುವಿರಾ. ಇದನ್ನು ನೆನೆದರೆ ನಾನು ಯಾವ ಬಗೆಯಲ್ಲೂ ನೆಮ್ಮದಿಯಿಂದ

ನಿಮ್ಮನ್ನು ಬೀಳ್ಕೊಡಲಾರೆ. ಮಹಾರಾಜ, ಬಲತಾಯಿಯ ಕೈಗೆ ಮಗನನ್ನೊಪ್ಪಿಸಿ ಹೊರೆ ತಪ್ಪಿಸಿಕೊಂಡ ತಾಯಿ ನೆಮ್ಮದಿಯನ್ನು ಅನುಭವಿಸುವಳು ಎನ್ನುವುದನ್ನು ಊಹಿಸಲಾದರೂ ಸಾಧ್ಯವೆ" ಎಂದು ಬಿಲ್ವನ ಕೇಳಿದ.

ರಾಜನೆಂದ—ಠಾಕೂರ್, ನಿಮ್ಮ ಮಾತು ನನ್ನ ಹೃದಯವನ್ನು ಕೊರೆದು ಒಳಹೊಕ್ಕಿರುವದು ಆದರೆ ಈ ಸಲ ನನ್ನನ್ನು ಕ್ಷಮಿಸಿ. ನನಗೆ ಹೆಚ್ಚು ಹೇಳಬೇಡಿ. ನನ್ನನ್ನು ಕದಲಿಸಲು ಪ್ರಯತ್ನಿಸಬೇಡಿ. ನಾನು ರಕ್ತಪಾತಮಾಡೆನೆಂದು ಮನಸ್ಸಿನಲ್ಲೇ ಸಂಕಲ್ಪಿಸಿಕೊಂಡಿದ್ದು ನಿಮಗೆ ತಿಳಿದಿದೆಯಲ್ಲ. ಆ ಸಂಕಲ್ಪವನ್ನು ನಾನು ಮುರಿಯಲಾರೆ.

"ಹಾಗಾದರೆ ಈಗ ಮಹಾರಾಜರು ಮಾಡುವುದೇನು?" ಎಂದು ಬಿಲ್ವನ ಕೇಳಿದ.

ರಾಜ ಹೇಳಿದ—ನಿಮಗೆ ಎಲ್ಲವನ್ನೂ ಹೇಳುತ್ತೇನೆ. ನಾನು ಧ್ರುವನನ್ನು ಕರೆದುಕೊಂಡು ಕಾಡಿಗೆ ಹೋಗುವೆ ಠಾಕೂರ್—ನನ್ನ ಬಾಳು ಅತಿ ಅಸಂಪೂರ್ಣವಾಗಿಹೋಯಿತು. ಏನನ್ನು ಯೋಚಿಸಿದ್ದೆನೋ ಅದರಲ್ಲಿ ಸ್ವಲ್ಪವನ್ನೂ ನೆರವೇರಿಸಲಿಲ್ಲ. ಜೀವನದಲ್ಲಿ ಕಳೆದುಹೋದಷ್ಟನ್ನು ಮರಳಿ ಪಡೆದು ಪುನಃ ಹೊಸದಾಗಿ ಕಟ್ಟಲಾರೆ. ನನಗೆ ತೋರುವುದಿಷ್ಟೆ. ಠಾಕೂರ್, ಅದೃಷ್ಟ ನಮ್ಮಗಳನ್ನು ಅಂಬಿನಂತೆ ಎಸೆದಿರುವದು. ಗುರಿಯಿಂದ ಒಮ್ಮೆ ಸ್ವಲ್ಪ ವಕ್ರವಾಯಿತೆಂದರೆ ಪುನಃ ಸಾವಿರ ಪ್ರಯತ್ನ ಮಾಡಿದರೂ ಗುರಿಗೆ ಹಿಂದಿರುಗದು. ಬಾಳಿನ ಮೊದಲಲ್ಲಿ ನಾನು ಹಾಗೆ ಗುರಿತಪ್ಪಿಹೋಗಿರುವೆ. ಜೀವನದ ಕೊನೆಗಾಲದಲ್ಲಿ ಎಷ್ಟೇ ಪ್ರಯತ್ನಿಸಿದರೂ ಗುರಿಯ ಕೇಂದ್ರವನ್ನು ಪಡೆಯಲಾರೆ. ಏನನ್ನು ಯೋಚಿಸಿದ್ದೆನೋ ಅದು ನಡೆಯಲಿಲ್ಲ. ಯಾವ ವೇಳೆಯಲ್ಲಿ ಎಚ್ಚೆತ್ತಿದ್ದರೆ ಆತ್ಮರಕ್ಷಣೆಮಾಡಿಕೊಳ್ಳಬಹುದಿತ್ತೊ ಆ ಸಮಯದಲ್ಲಿ ಎಚ್ಚರಗೊಳ್ಳಲಿಲ್ಲ. ಯಾವಾಗ ಮುಳುಗಿರುವೆನೊ ಆಗ ಎಚ್ಚೆತ್ತಿರುವೆ. ಸಮುದ್ರದಲ್ಲಿ ಬಿದ್ದವರು ಮರದತುಂಡನ್ನು ಆಶ್ರಯಿಸಿರುವಂತೆ ನಾನು ಹುಡುಗ ಧ್ರುವನನ್ನು ಆಶ್ರಯಿಸಿರುವೆ. ನಾನು ಧ್ರುವನಲ್ಲಿ ನನ್ನನ್ನು ಮುಳುಗಿಸಿಕೊಂಡು ಅವನಲ್ಲಿ ಪುನರ್ಜನ್ಮತಾಳುವೆ. ನಾನು ಪ್ರಾರಂಭದಿಂದ ಧ್ರುವನನ್ನು ಮನುಷ್ಯನನ್ನಾಗಿ ಮಾಡುವೆ. ಧ್ರುವ

ನೊಡನೆ ಕ್ಷಣಕ್ಷಣವೂ ನಾನೂ ಬಳೆಯುವೆ. ನನ್ನ ಮಾನವ ಜನ್ಮವನ್ನು ಸಂಪೂರ್ಣಮಾಡಿಕೊಳ್ಳುವೆ. ಠಾಕೂರ್—ನಾನು ಮಾನವರಂತಿಲ್ಲ. ನಾನು ರಾಜನಾಗಿ ಏನುಮಾಡಲಿ.

ಕಡೆಯ ಮಾತನ್ನು ರಾಜ ಅತಿ ಉದ್ವೇಗದಿಂದ ಉಚ್ಚರಿಸಿದ. ಅದನ್ನು ಕೇಳಿ ಧ್ರುವ ರಾಜನ ಮೊಣಕಾಲಮೇಲೆ ತನ್ನ ತಲೆ ಉಜ್ಜುತ್ತ ಉಜ್ಜುತ್ತ—' ನಾನು ಆಜ ' ಎಂದ.

ಬಿಲ್ವನ ನಕ್ಕು ಧ್ರುವನನ್ನು ಉಡಿಯಲ್ಲಿ ಎತ್ತಿಕೊಂಡನು. ಬಹಳ ಹೊತ್ತು ಅವನ ಮುಖ ನೋಡುತ್ತಿದ್ದು ಕೊನೆಗೆ ರಾಜನೊಡನೆ " ಅಡವಿಯಲ್ಲಿ ಮನುಷ್ಯನನ್ನು ಸೃಷ್ಟಿಸಲು ಸಾಧ್ಯವೇನು. ಅಡವಿಯಲ್ಲಿ ಕೇವಲ ಮರಗಿಡಗಳು ಬೆಳೆಯುವವು. ಮನುಷ್ಯ, ಮನುಷ್ಯ ಸಮಾಜದಲ್ಲೇ ಬೆಳೆಯುವನು " ಎಂದನು.

ರಾಜನೆಂದ—ನಾನು ಪೂರ್ತಿಯಾಗಿ ಅಡವಿಗೆ ಹೊರಟುಹೋಗೆ. ಮಾನವ ಸಮಾಜದಿಂದ ಸ್ವಲ್ಪ ದೂರದಲ್ಲಿರುವೆ. ಆದ್ದರಿಂದ ಸಮಾಜದೊಡನೆ ಸಹವಾಸ ಕತ್ತರಿಸೆ. ಇದು ಕೇವಲ ಸ್ವಲ್ಪ ದಿನಗಳಮಟ್ಟಿನ ವಿಷಯ.

ಇತ್ತ ನಕ್ಷತ್ರರಾಯ ಸೈನ್ಯ ಸಮೇತ ರಾಜಧಾನಿಯನ್ನು ಸಮೀಪಿಸಿದ. ಪ್ರಜೆಗಳ ಧನಧಾನ್ಯ ಸುಲಿಗೆಯಾಗತೊಡಗಿತು. ಪ್ರಜೆಗಳು ಕೇವಲ ಗೋವಿಂದಮಾಣಿಕ್ಯನನ್ನು ಶಪಿಸಲಾರಂಭಿಸಿದರು. " ಇವೆಲ್ಲ ಕೇವಲ ರಾಜನ ಪಾಪದಿಂದ ಬಂದಿರುವದು " ಎಂದರು.

ರಾಜ ಒಮ್ಮೆ ರಘುಪತಿಯೊಡನೆ ಭೇಟಿಮಾಡ ಬಯಸಿದ. ರಘುಪತಿ ಬರುತ್ತಲೆ ಅವನಿಗೆ ಹೇಳಿದ—" ಇನ್ನೂ ಏಕೆ ಪ್ರಜೆಗಳನ್ನು ಹಿಂಸಿಸುವಿರಿ. ನಾನು ನಕ್ಷತ್ರರಾಯನಿಗೆ ರಾಜ್ಯ ಬಿಟ್ಟುಕೊಟ್ಟು ಹೊರಟು ಹೋಗುವೆ. ನಿಮ್ಮ ಮೊಗಲ ಸೈನ್ಯವನ್ನು ಕಳುಹಿಸಿಬಿಡಿ."

ರಘುಪತಿ—" ಅಪ್ಪಣೆಯಾದಂತೆ. ನೀವು ಹೊರಟುಹೋದೊಡನೆ ನಾನು ಮೊಗಲ ಸೈನಿಕರನ್ನು ಹಿಂದಕ್ಕೆ ಕಳುಹಿಸಿಬಿಡುವೆ. ತ್ರಿಪುರ ಕೊಳ್ಳೆ ಹೋಗಲಿ ಎನ್ನುವುದು ನನಗೆ ಇಷ್ಟವಿಲ್ಲ—" ಎಂದ.

ಆ ದಿನವೇ ರಾಜ ರಾಜ್ಯಬಿಟ್ಟು ಹೊರಡಲು ಪ್ರಯತ್ನಿಸಿದ. ತನ್ನ ರಾಜವೇಷವನ್ನು ತ್ಯಜಿಸಿದ. ಕಾವಿಬಟ್ಟೆ ತೊಟ್ಟ. ನಕ್ಷತ್ರರಾಯನಿಗೆ ರಾಜನ ಕರ್ತವ್ಯವನ್ನೆಲ್ಲ ಜ್ಞಾಪಿಸಿ ಒಂದು ದೊಡ್ಡ ಪತ್ರ ಬರೆದ.

ಕೊನೆಗೆ ರಾಜ ಧ್ರುವನನ್ನು ತೊಡೆಗೆತ್ತಿಕೊಂಡು "ಧ್ರುವ, ನನ್ನ ಜೊತೆಗೆ ಕಾಡಿಗೆ ಬರುವೆಯಾ ?" ಎಂದ.

ಕೂಡಲೆ ಧ್ರುವ ರಾಜನ ಕತ್ತಿಗೆ ಕೈಹಾಕಿಕೊಂಡು "ಬರುತ್ತೇನೆ" ಎಂದ.

ಅಷ್ಟರಲ್ಲಿ ರಾಜನ ಮನಸ್ಸಿಗೆ ಧ್ರುವನನ್ನು ಸಂಗಡ ಕರೆದೊಯ್ಯಲು ಅವನ ಚಿಕ್ಕಪ್ಪ ಕೇದಾರೇಶ್ವರನ ಸಮ್ಮತಿ ಆವಶ್ಯಕವೆಂದು ತೋರಿತು. ಕೇದಾರೇಶ್ವರನನ್ನು ಕರೆದು "ಕೇದಾರೇಶ್ವರ, ನೀನು ಸಮ್ಮತಿಸುವುದಾದರೆ ನಾನು ಧ್ರುವನನ್ನು ನನ್ನೊಡನೆ ಕರೆದೊಯ್ಯುವೆ" ಎಂದ.

ಧ್ರುವ ಹಗಲಿರುಳು ರಾಜನೊಡನೆಯೇ ಇರುತ್ತಿದ್ದ. ಚಿಕ್ಕಪ್ಪನೊಡನೆ ಅವನಿಗೆ ಅಷ್ಟಾಗಿ ಸಂಪರ್ಕವಿರಲಿಲ್ಲ. ಇದರಿಂದಲೇ ಧ್ರುವನನ್ನು ಸಂಗಡ ಕರೆದುಕೊಂಡುಹೋದರೆ ಕೇದಾರೇಶ್ವರನಿಗೆ ತೊಂದರೆಯಾಗುವುದೆಂದು ರಾಜ ಎಣಿಸಿರಲಿಲ್ಲ.

ರಾಜನ ಮಾತು ಕೇಳಿ ಕೇದಾರೇಶ್ವರ—'ಅದು ನನ್ನಿಂದ ಸಾಧ್ಯವಿಲ್ಲ' ಎಂದ.

ಇದನ್ನು ಕೇಳಿ ರಾಜನ ಆಶ್ಚರ್ಯ ಎಲ್ಲೆ ಮೀರಿತು. ಇದ್ದಕ್ಕಿದ್ದಂತೆ ಅವನ ತಲೆಗೆ ಸಿಡಿಲು ಬಡಿದಂತಾಯಿತು. ಸ್ವಲ್ಪ ಹೊತ್ತು ಸುಮ್ಮನಿದ್ದು "ಕೇದಾರೇಶ್ವರ, ನೀನೂ ನನ್ನೊಡನೆ ಬಾ—" ಎಂದ.

ಕೇದಾರೇಶ್ವರ—"ಇಲ್ಲ, ಮಹಾರಾಜ, ಕಾಡಿಗೆ ಬರಲಾರೆ."

ರಾಜ ವ್ಯಾಕುಲದಿಂದ ಹೇಳಿದ—"ನಾನು ಕಾಡಿಗೆ ಹೋಗುವುದಿಲ್ಲ. ನಾನು ಧನ ಜನ ತೆಗೆದುಕೊಂಡು ಊರಿನಲ್ಲೇ ವಾಸಿಸುವೆ."

"ನಾನು ದೇಶಬಿಟ್ಟು ಬರಲಾರೆ" ಎಂದು ಕೇದಾರೇಶ್ವರ ಹೇಳಿದ.

ರಾಜ ಏನನ್ನೂ ಹೇಳದೆ ಆಳವಾದ ನಿಟ್ಟುಸಿರುಬಿಟ್ಟ. ಅವನ ಆಸೆಯೆಲ್ಲ ಹುಡಿ ಹುಡಿ ಆಯಿತು. ಎವೆಯಿಕ್ಕುವಷ್ಟರಲ್ಲಿ ಸಮಸ್ತ ಧರಣಿಯ ಮುಖವೇ ಮಾರ್ಪಟ್ಟಿತು. ಧ್ರುವ ತನ್ನ ಮನ ಬಂದಂತೆ ಆಟವಾಡುತ್ತಿದ್ದ. ಅನೇಕ ಕ್ಷಣ ಅವನ ಕಡೆ ನೋಡುತ್ತಿದ್ದನಾದರೂ ಅವನು ಕಣ್ಣಿಗೆ ಕಾಣಲಿಲ್ಲ. ಧ್ರುವ ಅವನ ಬಟ್ಟೆಯ ಕೊನೆ ಹಿಡಿದೆಳೆದು "ಆಟ ಆಡು" ಎಂದ.

ರಾಜನ ಹೃದಯವೆಲ್ಲ ಕರಗಿ ಕಣ್ಣೀರಾಗಿ ಕಣ್ಣಿನ ಬಳಿಗೆ ಬಂದಿತು. ಬಹಳ ಕಷ್ಟದಿಂದ ಕಣ್ಣೀರನ್ನು ತಡೆದುಕೊಂಡ. ಮುಖ ತಿರುಗಿಸಿ ಒಡೆದ ಮನದಿಂದ—"ಹಾಗಾದರೆ ಧ್ರುವ ಇರಲಿ. ನಾನೊಬ್ಬನೇ ಹೋಗುವೆ" ಎಂದ. ಬಾಳಿನ ಉಳಿದಿರುವ ನಿಡಿದಾದ ಮರಳುಗಾಡಿನ ದಾರಿ ಎವೆಯಿಕ್ಕುವುದರೊಳಗೆ ಅವನ ಕಣ್ಣುಗುಡ್ಡೆಯಲ್ಲಿ ಅಂಕಿತವಾಯಿತು.

ಕೇದಾರೇಶ್ವರ ಧ್ರುವನ ಆಟ ಕೆಡಿಸಿ ಅವನನ್ನು "ಬಾ, ನನ್ನೊಡನೆ ಬಾ—" ಎಂದ. ಹೀಗೆಂದು ಅವನ ಕೈ ಹಿಡಿದೆಳೆದ.

ಧ್ರುವ ಅಳುವಿನ ದನಿಯಲ್ಲಿ "ಊಹೂಂ" ಎಂದ.

ರಾಜ ಆಶ್ಚರ್ಯದಿಂದ ಧ್ರುವನ ಕಡೆ ನೋಡಿದ. ಧ್ರುವ ಹಾರಿಬಂದು ರಾಜನನ್ನು ಬಿಗಿದಪ್ಪಿ ಅವಸರ ಅವಸರವಾಗಿ ಅವನ ಎರಡು ಮೊಣಕಾಲುಗಳ ನಡುವೆ ಮುಖ ಮುಚ್ಚಿಕೊಂಡ. ರಾಜ ಧ್ರುವನನ್ನು ಎತ್ತಿಕೊಂಡು ಎದೆಗಪ್ಪಿಕೊಂಡ. ಅವನ ವಿಶಾಲ ಹೃದಯ ಚೂರು ಚೂರಾಗಲು ಬಯಸಿತು. ಪುಟ್ಟ ಧ್ರುವನನ್ನು ಹೃದಯದ ಬಳಿ ಅಪ್ಪಿಕೊಂಡು ಹೃದಯವನ್ನು ಅಡಗಿಸಿದ. ಧ್ರುವನನ್ನು ಅದೇ ಸ್ಥಿತಿಯಲ್ಲಿ ಕಂಕುಳಲ್ಲಿಟ್ಟುಕೊಂಡು ಅವನು ಆ ದೊಡ್ಡ ಕೊಠಡಿಯಲ್ಲಿ ಅತ್ತಿಂದಿತ್ತ ನಡೆದಾಡತೊಡಗಿದ. ಧ್ರುವ ಹೆಗಲಮೇಲೆ ತಲೆ ಇಟ್ಟುಕೊಂಡು ಅಲುಗದೆ ನೆಮ್ಮದಿಯಿಂದಿದ್ದ.

ಕಡೆಗೆ ಹೊರಡುವ ಹೊತ್ತು ಬಂದಿತು. ಧ್ರುವನು ರಾಜನ ಉಡಿಯಲ್ಲಿ ನಿದ್ರೆಮಾಡುತ್ತಿದ್ದ. ನಿದ್ರಿಸುವ ಧ್ರುವನನ್ನು ಕೇದಾರೇಶ್ವರನ ಕೈಗೆ ಒಪ್ಪಿಸಿ ರಾಜ ಹೊರಟ.

೩೭

ಮೂಡಣ ಬಾಗಿಲಿಂದ ನಕ್ಷತ್ರರಾಯ ಸೈನ್ಯಸಾಮಂತರೊಡನೆ ರಾಜಧಾನಿಯೊಳಕ್ಕೆ ಬಂದ. ಸ್ವಲ್ಪ ಹಣವನ್ನೂ ಒಬ್ಬಿಬ್ಬರು ಸೇವಕರನ್ನೂ ಜೊತೆಯಲ್ಲಿ ಕರೆದುಕೊಂಡು ಪಡುವಣ ಬಾಗಿಲಿನಿಂದ ಗೋವಿಂದಮಾಣಿಕ್ಯ ಪಯಣಹೊರಟ. ಪಟ್ಟಣದ ಜನ ಕೊಳಲೂದಿ, ಡೋಲು ನಗಾರಿ ಮೊಳಗಿಸಿ ಹುಲುಧ್ವನಿ ಶಂಖಧ್ವನಿಯೊಡನೆ ನಕ್ಷತ್ರರಾಯನನ್ನು ಸ್ವಾಗತಿಸಿತು. ಗೋವಿಂದಮಾಣಿಕ್ಯ ಯಾವ ದಾರಿಯಲ್ಲಿ ಕುದುರೆ ಏರಿ ಹೋಗುತ್ತಿದ್ದನೋ ಆ ಮಾರ್ಗದಲ್ಲಿ ಬೀಳ್ಕೊಡಬೇಕೆಂದು, ಆತನನ್ನು ಗೌರವದಿಂದ ಬೀಳ್ಕೊಳ್ಳಬೇಕೆಂದು, ಯಾರೂ ಆಲೋಚಿಸಲಿಲ್ಲ. ಇಕ್ಕೆಲದ ಗುಡಿಸಲ ಹೆಂಗಸರು ಅವನ ಕಿವಿಮುಟ್ಟುವಂತೆ ನಿಂದಿಸಲಾರಂಭಿಸಿದರು. ಹಸಿವಿನಿಂದಲೂ ಹಸಿದ ಮಕ್ಕಳ ಅಳುವಿನಿಂದಲೂ ಅವರುಗಳ ನಾಲಗೆ ಹರಿತವಾಗಿತ್ತು.

ಘೋರ ದುರ್ಭಿಕ್ಷದ ಸಮಯದಲ್ಲಿ ಯಾವ ಮುದುಕಿ ಅರಮನೆಯ ಬಾಗಿಲಿಗೆ ಹೋಗಿ ಆಹಾರ ಪಡೆದಿದ್ದಳೊ ಅವಳು ತನ್ನ ಬಡಕಲು ಕೈ ಎತ್ತಿ ರಾಜನನ್ನು ನಿಂದಿಸತೊಡಗಿದಳು. ಮಕ್ಕಳು ತಾಯಂದಿರ ಬಳಿ ಶಿಕ್ಷಣ ಪಡೆದು ತೊಂದರೆ ಕೊಡುತ್ತ ಕೊಡುತ್ತ ರಾಜನ ಹಿಂದೆ ಹಿಂದೆ ಹೊರಟರು.

ಎಡಬಲ ಯಾವ ದಿಕ್ಕಿಗೂ ದೃಷ್ಟಿಬೀರದೆ ನೆಟ್ಟಗೆ ನೋಡುತ್ತ ರಾಜ ಮೆಲ್ಲ ಮೆಲ್ಲನೆ ಹೋಗುತ್ತಿದ್ದ. ಒಬ್ಬ ಜುಮಿಯ ಹೊಲದಿಂದ ಬರುತ್ತಿದ್ದ. ಅವನು ರಾಜನಿಗೆ ಭಕ್ತಿಯಿಂದ ನಮಸ್ಕರಿಸಿದ. ರಾಜನ ಹೃದಯ ನೀರಾಯಿತು. ಆತ ಅವನ ಬಳಿ ಸ್ನೇಹವ್ಯಾಕುಲ ದನಿಯಲ್ಲಿ ಬೀಳ್ಕೊಳ್ಳಲು ಅಪ್ಪಣೆ ಕೇಳಿದ. ಕೇವಲ ಈ ಒಬ್ಬ ಜುಮಿಯ ತನ್ನೆಲ್ಲ ಪ್ರಜೆಗಳ ಪ್ರತಿನಿಧಿಯಾಗಿ ಅವನ ರಾಜತ್ವದ ಕಡೆಗಾಲದಲ್ಲಿ ಅವನನ್ನು ಭಕ್ತಿಯಿಂದ ನೊಂದ ಮನದಿಂದ ಬೀಳ್ಕೊಟ್ಟ. ರಾಜನ ಹಿಂದುಗಡೆ ಹುಡುಗರ ತಂಡ ಕಿರುಚುವುದನ್ನು ಕಂಡ ಅವನು ಬಹಳವಾಗಿ ಕೋಪಗೊಂಡು ಹುಡುಗರನ್ನು ಬೈದು ಓಡಿಸಿದ. ರಾಜ ಅವನನ್ನು ನಿಷೇಧಿಸಿದ.

ಕಡೆಗೆ ರಾಜ ಕೇದಾರೇಶ್ವರನ ಗುಡಿಸಲಿದ್ದಲ್ಲಿಗೆ ಬಂದು ಸೇರಿದ. ಆಗ ಒಮ್ಮೆ ದಕ್ಷಿಣಕ್ಕೆ ತಿರುಗಿನೋಡಿದ. ಹೇಮಂತದ ಬೆಳಗು. ಹಿಮ

ವನ್ನು ಕತ್ತರಿಸಿಹಾಕಿ ಸೂರ್ಯಕಿರಣಗಳು ಕಾಣುತ್ತಿದ್ದುವು. ಗುಡಿಸಲ ಕಡೆ ನೋಡಿ ರಾಜನಿಗೆ ಕಳೆದ ವರ್ಷದ ಆಷಾಢಮಾಸದ ಬೆಳಗೊಂದು ನೆನಪಾಯಿತು. ಆಗ ದಟ್ಟವಾದ ಮೋಡ, ಎಡೆಬಿಡದ ಮಳೆ. ಬಿದಿಗೆಯ ಕ್ಷೀಣ ಚಂದ್ರನಂತೆ ಹುಡುಗಿ ಸಂತೋಷಿ ಪ್ರಜ್ಞೆಯಿಲ್ಲದೆ ಹಾಸಿಗೆಯ ಅರುಗಿನಲ್ಲಿ ಮಲಗಿದ್ದಳು. ಪುಟ್ಟ ತಾನು ಏನನ್ನೂ ಅರಿಯಲಾರದೆ ಒಮ್ಮೊಮ್ಮೆ ಅಕ್ಕನ ಸೆರಗಿನ ಕೊನೆಯಲ್ಲಿ ಮುಖ ಮುಚ್ಚಿಕೊಂಡು ಅಕ್ಕನ ಮುಖದ ಕಡೆಗೆ ನೋಡುತ್ತಿರುವನು. ಒಮ್ಮೊಮ್ಮೆ ತನ್ನ ಗುಂಡನೆಯ ದಪ್ಪ ಪುಟ್ಟಪುಟ್ಟ ಕೈಗಳಿಂದ ಮೆಲ್ಲ ಮೆಲ್ಲನೆ ಅಕ್ಕನ ಮುಖ ಸವರುವನು. ಇಂದಿನ ಈ ಮಾರ್ಗಶಿರಮಾಸದ ಹಿಮ ತುಂಬಿದ ಶುಭ್ರ ಪ್ರಾತಃಕಾಲ ಆ ಆಷಾಢದ ಮೋಡ ಕವಿದ ಬೆಳಗಿನಲ್ಲಿ ಮರೆಯಾಯಿತು. ಯಾವ ಅದೃಷ್ಟ ಇಂದು ತನ್ನನ್ನು ರಾಜ್ಯತ್ಯಾಗಿಯನ್ನಾಗಿಯೂ ಅವಮಾನಿತನಾಗಿ ಮನೆಬಿಟ್ಟು ಹೊರಡುವಂತೆ ಮಾಡಿರುವುದೋ ಅದೇ ಅದೃಷ್ಟ. ಈ ಕ್ಷುದ್ರ ಗುಡಿಸಲಿನ ಬಾಗಿಲಲ್ಲಿ ಆ ಆಷಾಢಮಾಸದ ಕತ್ತಲ ಬೆಳಗ್ಗೆ ತನಗಾಗಿ ಕಾದು ಕುಳಿತಿತ್ತೆಂದು ರಾಜನ ಮನಸಿಗೆ ತೋರಿತು. ಇಲ್ಲೆ ಅದರೊಡನೆ ಆ ಮೊದಲ ಭೇಟಿ. ರಾಜ ಅನ್ಯಮನಸ್ಕನಾಗಿ ಆ ಗುಡಿಸಲ ಎದುರಿಗೆ ಕ್ಷಣ ಕಾಲ ಹಾಗೆಯೇ ನಿಂತಿದ್ದ. ಅವನ ಸೇವಕರನ್ನು ಬಿಟ್ಟರೆ ಆಗ ದಾರಿಯಲ್ಲಿ ಬೇರೆ ಜನ ಇರಲಿಲ್ಲ. ಜುಮಿಯನಿಂದ ಬೈಗಳು ಕೇಳಿ ಹುಡುಗರು ಓಡಿ ಹೋಗಿದ್ದರು. ಆದರೆ ಜುಮಿಯ ದೂರಹೋಗುತ್ತಲೆ ಅವರುಗಳು ಒಂದು ಸೇರಿದರು. ಅವರ ಕೂಗಾಟದಿಂದ ಚೇತನ ಪಡೆದು ರಾಜ ನಿಟ್ಟುಸಿರು ಬಿಟ್ಟು ಪುನಃ ಮೆಲ್ಲ ಮೆಲ್ಲನೆ ಮುಂದುವರಿದ.

ಇದ್ದಕ್ಕಿದ್ದಂತೆ ಹುಡುಗರ ಕೂಗಾಟದ ಮಧ್ಯದಿಂದ ಇಂಪಾದ ಪರಿಚಿತ ಕಂಠ ಅವನ ಕಿವಿಗೆ ಬಿತ್ತು. ಪುಟ್ಟ ಧ್ರುವ ತನ್ನ ಪುಟ್ಟಪುಟ್ಟ ಹೆಜ್ಜೆ ಹಾಕುತ್ತ ಎರಡು ಕೈ ಎತ್ತಿಕೊಂಡು ನಗುನಗುತ್ತ ತನ್ನ ಬಳಿಗೆ ಧಾರಿ ಬರುತ್ತಿರುವುದನ್ನು ನೋಡಿದ. ಕೇದಾರೇಶ್ವರ ಹೊಸ ರಾಜನನ್ನು ಮುಂದಾಗಿ ಗೌರವಿಸಲು ಹೋಗಿದ್ದ. ಗುಡಿಸಲಲ್ಲಿ ಧ್ರುವನೂ ಅಡುಗೆ ಮಾಡುವ ಮುದುಕಿಯೂ ಇದ್ದರು. ಗೋವಿಂದಮಾಣಿಕ್ಯ ಕುಮರೆ ನಿಲ್ಲಿಸಿ

ಕೆಳಗಿಳಿದ. ಧ್ರುವ ನೆಗೆದು ಖಿಲಖಿಲನೆ ನಕ್ಕು ಅವನಮೇಲಕ್ಕೆ ಹಾರಿಬಿದ್ದ. ಧ್ರುವ ಅವನ ಬಟ್ಟೆಯನ್ನು ಹಿಡಿದೆಳೆದು ಅವನ ಮೊಣಕಾಲುಗಳ ನಡುವೆ ಮುಖ ಮುಚ್ಚಿಕೊಂಡು ತನ್ನ ಮೊದಲ ಆನಂದದ ಮೇಲುಸಿರು ಕಡೆ ಗಾಣಲು ಬಳಿಕ ಗಂಭೀರವಾಗಿ "ನಾನು ಟಿಕ್ ಟಿಕ್ ಏರುತ್ತೇನೆ" ಎಂದ.

ರಾಜ ಅವನನ್ನು ಕುದುರೆಯ ಮೇಲೆ ಕೂರಿಸಿದ. ಕುದುರೆ ಏರಿ ಅವನು ರಾಜನ ಕೊರಳನ್ನು ಬಿಗಿದುಕೊಂಡು ತನ್ನ ಕೋಮಲವಾದ ಕೆನ್ನೆಯನ್ನು ರಾಜನ ಕೆನ್ನೆಯ ಮೇಲಿಟ್ಟುಕೊಂಡ. ಧ್ರುವ ತನ್ನ ಅಲ್ಪ ಬುದ್ಧಿಯಿಂದ ರಾಜನಲ್ಲಿ ಯಾವುದೋ ಒಂದು ಮಾರ್ಪಾಟನ್ನು ಅನುಭವಿಸ ತೊಡಗಿದ. ಗಾಢ ನಿದ್ರೆ ಕೆಡಿಸಲು ಜನ ನಾನಾ ಬಗೆಯಲ್ಲಿ ಪ್ರಯತ್ನಿಸುವಂತೆ ಧ್ರುವ ಅವನನ್ನು ಎಳೆದು ಅವನನ್ನು ಬಿಗಿದಪ್ಪಿ, ಅವನಿಗೆ ಮುತ್ತು ಕೊಟ್ಟು ಯಾವ ಬಗೆಯಲ್ಲಾದರೂ ಅವನ ಹಳೆಯ ಭಾವನನ್ನು ಹಿಂದಿರುಗಿಸಲು ಬಹಳವಾಗಿ ಪ್ರಯತ್ನಿಸಿದ. ಕಡೆಗೆ ಕೃತಕಾರ್ಯನಾಗದೆ ಬಾಯಲ್ಲಿ ಬೆರಳು ತುರುಕಿಕೊಂಡು ಸುಮ್ಮನೆ ಕುಳಿತ. ರಾಜ ಧ್ರುವನ ಮನಸಿನ ಭಾವನೆ ತಿಳಿದ. ಅವನನ್ನು ಬಾರಿಬಾರಿಗೂ ಮುದ್ದಿಸಿದ.

ಕಡೆಗೆ, "ಧ್ರುವ ನಾನು ಇನ್ನು ಹೋಗುತ್ತೇನೆ," ಎಂದ. ಧ್ರುವ ರಾಜನ ಮುಖದ ಕಡೆಗೆ ನೋಡುತ್ತ "ನಾನೂ ಬರುತ್ತೇನೆ" ಎಂದ.

"ನೀನೆಲ್ಲಿಗೆ ಬರುತ್ತೀಯೆ, ನೀನು ನಿನ್ನ ಚಿಕ್ಕಪ್ಪನ ಹತ್ತಿರ ಇರು" ಎಂದು ರಾಜ ಹೇಳಿದ.

ಧ್ರುವ—"ಊಹೂಂ, ನಾನೂ ಬರುತ್ತೇನೆ" ಎಂದ. ಇಷ್ಟರಲ್ಲಿ ಗುಡಿಸಲಿನಿಂದ ಅಡುಗೆಯ ಮುದುಕಿ ಸಿಡಿಮಿಡಿಗುಟ್ಟುತ್ತ ಹರಟುತ್ತ ಹರಟುತ್ತ ಬಂದು ಸೇರಿದಳು. ಆತುರದಿಂದ ಧ್ರುವನ ಕೈಹಿಡಿದೆಳೆದು 'ಬಾ' ಎಂದಳು.

ಧ್ರುವ ಬಹಳ ಹೆದರಿಕೆಯಿಂದ ಗಟ್ಟಿಯಾಗಿ ಎರಡು ಕೈಗಳಿಂದಲೂ ರಾಜನನ್ನು ಹಿಡಿದುಕೊಂಡು ರಾಜನ ಎದೆಯಲ್ಲಿ ಮುಖ ಮುಚ್ಚಿಕೊಂಡ. ರಾಜ ದುಃಖದಿಂದ "ಹೃದಯದ ನರಗಳನ್ನು ಎಳೆದು ಕಿತ್ತುಹಾಕಬಹುದು

ಆದರೆ ಈ ಎರಡು ಕೈಗಳ ಬಂಧನವನ್ನು ಹೇಗೆ ಕಿತ್ತುಹಾಕುವುದು" ಎಂದು ಚಿಂತಿಸಿದ. ಆದರೆ ಕೀಳಲೇಬೇಕಾಯಿತು. ಮೆಲ್ಲ ಮೆಲ್ಲನೆ ಧ್ರುವನ ಎರಡು ಕೈಗಳನ್ನೂ ಬಿಡಿಸಿ ಬಲವಂತವಾಗಿ ಧ್ರುವನನ್ನು ಅಡುಗೆಯವಳ ಕೈಗೆ ಕೊಟ್ಟ. ಧ್ರುವ ಜೀವಹೋಗುವಂತೆ ಅಳತೊಡಗಿದ. ಕೈ ಎತ್ತಿಕೊಂಡು "ಅಪ್ಪಾ, ನಾನೂ ಬರುವೆ" ಎಂದ. ರಾಜ ಹಿಂದಿರುಗಿ ನೋಡದೆಯೇ ಕುದುರೆಯೇರಿ ಕುದುರೆಯನ್ನು ವೇಗವಾಗಿ ಓಡಿಸಿದ. ಎಷ್ಟು ದೂರ ಹೋದರೂ ಧ್ರುವನ ಅಳು ಕೇಳಿಸುತ್ತಿತ್ತು. ಧ್ರುವ ತನ್ನೆರಡು ಕೈಗಳನ್ನು ಎತ್ತಿಕೊಂಡು "ಅಪ್ಪಾ, ನಾನೂ ಬರುವೆ" ಎನ್ನುತ್ತಲಿದ್ದ. ಕಡೆಗೆ ರಾಜನ ವಿಶಾಲ ಕಣ್ಣುಗಳಿಂದ ನೀರು ಸುರಿಯಲಾರಂಭಿಸಿತು. ಅವನಿಗೆ ಹಾದಿಬೀದಿ ಯಾವುದೂ ಕಾಣಿಸದಂತಾಯಿತು. ಕಣ್ಣೀರಿನಿಂದ ಸೂರ್ಯ ಬೆಳಕೂ ಸಮಸ್ತ ಜಗತ್ತೂ ಮರೆಯಾಯಿತು. ಕುದುರೆ ಮನ ಬಂದಂತೆ ಓಡತೊಡಗಿತು.

ದಾರಿಯಲ್ಲಿ ಒಂದು ಕಡೆ ಒಂದು ಗುಂಪು ಮೊಗಲಸೈನ್ಯ ಒಂದು ರಾಜನನ್ನು ಕಂಡು ನಗಲಾರಂಭಿಸಿತು. ಅಷ್ಟೇ ಏಕೆ. ಅವನ ಸೇವಕರೊಡನೆ ಸ್ವಲ್ಪ ಕಠೋರ ಹಾಸ್ಯ ಮೊದಲುಮಾಡಿದರು. ರಾಜನ ಸಭಾಸದನೊಬ್ಬ ಕುದುರೆಯೇರಿ ಹೋಗುತ್ತಿದ್ದ. ಅವನು ಈ ದೃಶ್ಯವನ್ನು ಕಂಡು ರಾಜನ ಹತ್ತಿರಕ್ಕೆ ಬಂದು "ಮಹಾರಾಜ, ಈ ಅವಮಾನವನ್ನು ಇನ್ನು ಸಹಿಸುವುದು ಸಾಧ್ಯವಿಲ್ಲ. ಮಹಾರಾಜರ ಈ ದೈನ್ಯವೇಷ ಕಂಡು ಇವರುಗಳು ಹೀಗೆ ಸಾಹಸಿಗಳಾಗಿರುವರು. ಇದೋ ಹಿಡಿಯಿರಿ, ಈ ಕತ್ತಿ, ಈ ರುಮಾಲನ್ನು. ಸ್ವಲ್ಪ ಸಾವಧಾನವಾಗಿರಿ. ನಾನು ನನ್ನ ಅನುಚರರನ್ನು ಈಗಲೇ ಕರೆತರುವೆ. ಈ ಅನಾಗರಿಕರಿಗೆ ಬುದ್ಧಿಗಲಿಸುವೆ" ಎಂದ.

ರಾಜ ಹೇಳಿದ—"ನಯನರಾಯ್, ನನಗೆ ಕತ್ತಿ ಕಬ್ಬಿಣದ ಕುಲಾವಿಯಿಂದ ಪ್ರಯೋಜನವಿಲ್ಲ. ಇವರು ನನ್ನನ್ನು ಏನುಮಾಡಿಯಾರು. ಈಗ ನಾನು ಇದಕ್ಕಿಂತಲೂ ಹಿರಿದಾದ ಅವಮಾನ ಸಹಿಸಬಲ್ಲೆ. ತೆರೆದ ಕತ್ತಿ ಎತ್ತಿ ನಾನು ಜಗತ್ತಿನ ಜನರಿಂದ ಗೌರವ ಸಂಪಾದಿಸಬೇಕಾಗಿಲ್ಲ. ಜಗತ್ತಿನ ಸರ್ವಸಾಧಾರಣರು ಹೇಗೆ ಒಳ್ಳೆಯಕಾಲದಲ್ಲೂ ಕೆಟ್ಟಕಾಲದಲ್ಲೂ ಮಾನ ಅವಮಾನ ಸುಖ ದುಃಖವನ್ನು ಸಹಿಸುತ್ತಿರುವರೋ ನಾನೂ

ದೇವರಕಡೆನೋಡುತ್ತ ಆ ರೀತಿ ಸಹಿಸಿಕೊಳ್ಳುವೆ. ನೆಂಟರು ಎದುರಾಳಿಗಳಾಗುತ್ತಿರುವರು. ಆಶ್ರಿತರು ಉಪಕಾರ ಮರೆಯುತ್ತಿರುವರು. ತಿಳಿದವರು ಅವಿಧೇಯರಾಗುತ್ತಿರುವರು. ಒಂದು ಕಾಲದಲ್ಲಾಗಿದ್ದರೆ ಇದು ನನಗೆ ಸಹಿಸಲಾರದ ವಿಷಯವಾಗಿತ್ತು. ಆದರೆ ಈಗ ಇವನ್ನೆಲ್ಲ ಸಹಿಸಿಯೇ ನಾನು ಹೃದಯದೊಳಗೆ ಆನಂದಗಳಿಸಿಕೊಳ್ಳುತ್ತಿರುವೆ. ಯಾರು ನನ್ನ ಆಪ್ತರು ಎನ್ನುವುದನ್ನು ಅರಿತಿರುವೆ. ಹೊರಡು, ನಯನರಾಯ್, ನೀನು ಹಿಂದಿರುಗಿ ಹೋಗು. ನಕ್ಷತ್ರನನ್ನು ಆದರದಿಂದ ಸ್ವಾಗತಿಸಿ ಬರಮಾಡಿಕೊ. ನನ್ನನ್ನು ಗೌರವಿಸುತಿದ್ದಂತೆ ನಕ್ಷತ್ರನನ್ನೂ ಗೌರವಿಸು. ನೀವೆಲ್ಲರೂ ಸೇರಿ ಸರ್ವದಾ ನಕ್ಷತ್ರನನ್ನು ಒಳ್ಳೆಯದಾರಿಯಲ್ಲಿ ಪ್ರಜೆಗಳ ಹಿತದಲ್ಲಿ ರಕ್ಷಿಸಿರಿ. ನಿಮ್ಮಗಳನ್ನು ನಾನು ಬೀಳ್ಕೊಳ್ಳುವಾಗ ಇದೇ ನನ್ನ ಬೇಡಿಕೆ. ಇದೋ ನೋಡು, ಮರೆತೂಕೂಡ ನನ್ನ ವಿಷಯವೆತ್ತಿ ಅಥವಾ ನನ್ನೊಡನೆ ಹೋಲಿಸಿ ಎಳ್ಳಷ್ಟಾದರೂ ಅವನನ್ನು ನಿಂದಿಸಬೇಡ—ಆದರೆ ನಾನೀಗ ಹೊರಡುವೆ" ಇಷ್ಟು ಹೇಳಿ ರಾಜ ತನ್ನ ಸಭಾಸದನನ್ನು ಅಪ್ಪಿಕೊಂಡು ಮುಂದೆ ನಡೆದನು. ಸಭಾಸದನು ಅವನಿಗೆ ನಮಸ್ಕರಿಸಿ ಕಣ್ಣೀರು ಒರೆಸಿಕೊಂಡು ಹೊರಟುಹೋದನು.

ಗೋಮತಿ ನದೀ ತೀರದ ಎತ್ತರವಾದ ದಿಣ್ಣೆಯ ಬಳಿ ಹೋಗಿ ತಲುಪಿದಾಗ ಬಿಲ್ವನ ಠಾಕೂರನು ಅರಣ್ಯದಿಂದ ಹೊರಗೆ ಬಂದು ಅವನಿದಿರಿನಲ್ಲಿ ನಿಂತು ಕೈ ಎತ್ತಿ "ಜಯವಾಗಲಿ" ಎಂದನು.

ರಾಜನು ಕುದುರೆಯಿಂದ ಇಳಿದು ನಮಸ್ಕರಿಸಿದನು.

ಬಿಲ್ವನನು—"ನಾನು ನಿಮ್ಮ ಬಳಿ ಬೀಳ್ಕೊಳ್ಳಲು ಬಂದಿರುವೆ" ಎಂದನು.

ರಾಜನೆಂದ—ಠಾಕೂರ್—ನೀವು ನಕ್ಷತ್ರರಾಯನ ಬಳಿ ಇದ್ದು ಅವನಿಗೆ ಒಳ್ಳೆಯ ಸಲಹೆಕೊಡಿ. ರಾಜ್ಯದ ಹಿತ ಸಾಧಿಸಿರಿ.

ಬಿಲ್ವನನೆಂದ—ಇಲ್ಲ, ನೀವೆಲ್ಲಿ ರಾಜರಲ್ಲವೊ ಅಲ್ಲಿ ನಾನು ಕೆಲಸಕ್ಕೆ ಬಾರದವ. ಇಲ್ಲಿದ್ದು ನಾನು ಇನ್ನೇನೂ ಕೆಲಸಮಾಡಲಾರೆ.

ರಾಜನೆಂದ—ಹಾಗಾದರೆ ಎಲ್ಲಿಗೆ ಹೋಗುವಿರಿ ಠಾಕೂರ್, ಹಾಗಾದರೆ ನನ್ನಲ್ಲಿ ದಯೆ ತೋರಿರಿ. ನಿಮ್ಮ ಸಹವಾಸ ದೊರೆತಿತಾದರೆ ನನ್ನ ದುರ್ಬಲ ಹೃದಯಕ್ಕೆ ಬಲ ಸಿಕ್ಕುವದು.

ಬಿಲ್ವನನೆಂದ—ನನ್ನ ಕೆಲಸ ಎಲ್ಲಿದೆಯೋ ನಾನದನ್ನು ಅರಸಲು ಹೊರಟೆ. ನಾನು ಹತ್ತಿರದಲ್ಲಿರಲಿ, ದೂರದಲ್ಲಿರಲಿ ನಿಮ್ಮ ವಿಷಯದಲ್ಲಿ ನನ್ನ ಮಮತೆ ಎಂದಿಗೂ ವಿಚ್ಛಿನ್ನವಾಗದು. ಅರಿತಿರಿ. ಆದರೆ ನಿಮ್ಮೊಡನೆ ಅಡವಿಗೆ ಹೋಗಿ ನಾನು ಮಾಡುವುದಾದರೂ ಏನು?

ರಾಜ ಮೆಲುದನಿಯಲ್ಲಿ—"ಹಾಗಾದರೆ ನಾನು ಹೋಗಿಬರುವೆ" ಎಂದು ಹೇಳಿ ಎರಡನೆಯ ಸಲ ನಮಿಸಿದನು. ಬಿಲ್ವನ ಒಂದು ದಿಕ್ಕಿಗೆ ಹೋದನು. ರಾಜ ಮತ್ತೊಂದು ದಿಕ್ಕಿಗೆ ಹೋದನು."

## ೩೮

ನಕ್ಷತ್ರರಾಯ ಛತ್ರಮಾಣಿಕ್ಯನೆಂದು ಹೆಸರಿಟ್ಟುಕೊಂಡು ಅತಿ ವೈಭವದಿಂದ ರಾಜಪದವಿ ಸ್ವೀಕರಿಸಿದ. ರಾಜಕೋಶದಲ್ಲಿ ಹೆಚ್ಚು ಹಣವಿರಲಿಲ್ಲ. ಪ್ರಜೆಗಳ ಸರ್ವಸ್ವವನ್ನೂ ಅಪಹರಿಸಿ ಹೇಳಿದ್ದಷ್ಟು ಹಣಕೊಟ್ಟು ಮೊಗಲ ಸೈನಿಕರನ್ನು ಬೀಳ್ಕೊಟ್ಟ. ಕಡುದುರ್ಭಿಕ್ಷವನ್ನೂ ದಾರಿದ್ರ್ಯವನ್ನೂ ಹೊತ್ತು ಛತ್ರಮಾಣಿಕ್ಯರಾಜತ್ವ ನಡೆಸತೊಡಗಿದ. ನಾಲ್ಕೂ ಕಡೆಯಿಂದ ನಿಂದೆಯೂ ಕಣ್ಣೀರೂ ಸುರಿಯಲಾರಂಭಿಸಿತು.

ಗೋವಿಂದಮಾಣಿಕ್ಯ ಕೂರುತ್ತಿದ್ದ ಪೀಠ, ಗೋವಿಂದಮಾಣಿಕ್ಯ ಮಲಗುತ್ತಿದ್ದ ಹಾಸಿಗೆ, ಗೋವಿಂದಮಾಣಿಕ್ಯನಿಗೆ ಪ್ರೀತಿ ಪಾತ್ರರಾಗಿದ್ದ ಜನ ಎಲ್ಲವೂ ಹಗಲು ರಾತ್ರಿ ನೀರವವಾಗಿ ಛತ್ರಮಾಣಿಕ್ಯನನ್ನು ಹೆದರಿಸಲಾರಂಭಿಸಿತು. ಛತ್ರಮಾಣಿಕ್ಯನ ಅನುಭವದಲ್ಲಿ ಅವು ಅಸಹನೀಯವಾದುವು. ಅವನು ಕಣ್ಣೆದುರಿಗಿದ್ದ ಗೋವಿಂದಮಾಣಿಕ್ಯನ ಚಿಹ್ನೆಗಳನ್ನೆಲ್ಲ ಕಣ್ಮರೆಮಾಡತೊಡಗಿದ. ಗೋವಿಂದಮಾಣಿಕ್ಯ ಉಪಯೋಗಿಸುತ್ತಿದ್ದ ಸಾಮಗ್ರಿಗಳನ್ನು ನಾಶಪಡಿಸಿದ. ಅವನ ಪ್ರೀತಿಯ ಸೇವಕರನ್ನು ದೂರಮಾಡಿದ. ಗೋವಿಂದಮಾಣಿಕ್ಯನ ನಾಮ ಗಂಧವನ್ನೂ ಅವನು ಸಹಿಸಲಾರದವನಾದ.

ಗೋವಿಂದಮಾಣಿಕ್ಯನ ಹೆಸರೆತ್ತಿದರೇನೆ ಎಲ್ಲ ತನ್ನನ್ನು ಉದ್ದೇಶಿಸಿಯೇ ಹೇಳುತ್ತಿರುವಂತೆ ಅವನ ಮನಸ್ಸಿಗೆ ತೋರುತ್ತಿತ್ತು. ಎಲ್ಲರೂ ತನ್ನನ್ನು ರಾಜನೆಂದು ಸಾಕಷ್ಟು ಗೌರವಿಸುತ್ತಿಲ್ಲವೆಂದು ಯಾವಾಗಲೂ ಅವನಿಗನಿಸು ತಿತ್ತು. ಇದರಿಂದ ಇದ್ದಕ್ಕಿದ್ದಂತೆ ಕಾರಣವಿಲ್ಲದೆ ರೇಗುತ್ತಿದ್ದ. ಸಭಾಸದರು ಹೆದರಿಕೆಯಿಂದಿರುತ್ತಿದ್ದರು.

ಅವನಿಗೆ ಸ್ವಲ್ಪವೂ ರಾಜಕಾರ್ಯ ತಿಳಿಯದು. ಆದರೆ ಯಾರಾದರೂ ಸಲಹೆ ಹೇಳಲು ಬಂದರೆ ಅವನು ಸಿಡಿದೆದ್ದು "ನನಗಿನ್ನೂ ಅಷ್ಟೂ ತಿಳಿಯದೇನು? ನೀವು ನನ್ನನ್ನು ಬುದ್ಧಿಯಿಲ್ಲದವನೆಂದು ತಿಳಿದಿರುವಿರೇನು?" ಎನ್ನುವನು.

ಎಲ್ಲರೂ ತನ್ನನ್ನು ಸಿಂಹಾಸನದ ಹಕ್ಕುದಾರನಲ್ಲವೆಂದೂ ರಾಜ್ಯಾ ಪಹಾರಕನೆಂದೂ ಭಾವಿಸಿ ಮನದಲ್ಲೇ ಹೀಯಾಳಿಸುವರೆಂದು ಅವನು ತನ್ನಲ್ಲೆ ಎಣಿಸಿಕೊಂಡ. ಇದರಿಂದ ಬಲಾತ್ಕಾರವಾಗಿ ಅತಿಹೆಚ್ಚಿನ ರಾಜನಾದ. ಮನ ಬಂದಂತೆ ಎಲ್ಲೆಲ್ಲೂ ತನ್ನ ಏಕಾಧಿಕಾರ ನಡೆಸತೊಡಗಿದ. ಉಳಿಸ ಬೇಕಾದರೆ ತಾನೇ ಉಳಿಸಬಲ್ಲವ, ಕೊಲ್ಲಬೇಕಾದರೆ ತಾನೇ ಕೊಲ್ಲಬಲ್ಲವ ಎಂಬುವುದನ್ನು ಪ್ರಮಾಣಪೂರ್ವ ಸ್ಥಿರಗೊಳಿಸಲು ಸೊಂಟಕಟ್ಟಿನಿಂತ. ವಿಶೇಷವೇನೆಂದರೆ ಯಾರನ್ನು ರಕ್ಷಿಸುವುದು ಯುಕ್ತವಲ್ಲವೋ ಅವರನ್ನು ಇಟ್ಟುಕೊಂಡು, ಶಿಕ್ಷೆಗೆ ಪಾತ್ರರಲ್ಲದವರನ್ನು ದಂಡಿಸಿದ. ಪ್ರಜೆಗಳು ಕ್ಷಾಮದಿಂದ ಸಾಯುತ್ತಿದ್ದರು. ಆದರೆ ಹಗಲು ರಾತ್ರಿ ರಾಜನ ಔತಣ, ಉತ್ಸವಗಳಿಗೆ ಕೊನೆಯೇ ಇರಲಿಲ್ಲ. ರಾತ್ರಿಹಗಲೂ ನೃತ್ಯ, ಗೀತ, ವಾದ್ಯ, ಊಟಗಳಿರುತಿತ್ತು. ಇದಕ್ಕೆ ಮುಂಚೆ ಯಾವ ರಾಜನೂ ಗದ್ದುಗೆಯೇರಿ ದೊರೆತನದ ಹೆಮ್ಮೆಯನ್ನೆಲ್ಲ ಹರವಿಕೊಂಡು ಇಂತಹ ಹುಚ್ಚು ಕುಣಿತ ಕುಣಿದಿರಲಿಲ್ಲ.

ಪ್ರಜೆಗಳು ನಾಲ್ಕು ಕಡೆಯೂ ಅಸಮಾಧಾನ ವ್ಯಕ್ತಪಡಿಸತೊಡಗಿ ದರು. ಇದರಿಂದ ಛತ್ರಮಾಣಿಕ್ಯ ಉರಿದೆದ್ದ. ಇದು ಕೇವಲ ರಾಜನ ವಿಷಯದಲ್ಲಿ ಅಗೌರವವಾಗಿ ನಡೆದುಕೊಳ್ಳುವುದೆಂದು ನಿರ್ಧರಿಸಿದ. ಅಸಂತೋಷಕ್ಕೆ ಇಮ್ಮಡಿ ಕಾರಣತೋರಿಸಿಕೊಂಡು ಜನರನ್ನು ಹಿಂಸಿಸಿ ಹೆದರಿಸಿ ಎಲ್ಲರ ಬಾಯಿ ಮುಚ್ಚಿಸಿದ. ಸಮಸ್ತ ರಾಜ್ಯ ನಿದ್ರೆಮಾಡುವ

ನಡುರಾತ್ರಿಯಂತೆ ನೀರವವಾಯಿತು. ಆ ಶಾಂತ ನಕ್ಷತ್ರರಾಯ ಛತ್ರ ಮಾಣಿಕ್ಯನಾಗಿ ಹಠಾತ್ತಾಗಿ ಈ ಬಗೆಯಲ್ಲಿ ಆಚರಿಸುತ್ತಿರುವುದರಲ್ಲಿ ಆಶ್ಚರ್ಯವೇನೇನೂ ಇಲ್ಲ. ಅನೇಕ ಸಮಯಗಳಲ್ಲಿ ದುರ್ಬಲ ಹೃದಯರು ಒಡೆತನ ಸಿಕ್ಕಿದರೆ ಹೀಗೆ ಪ್ರಚಂಡರೂ, ಸ್ವೇಚ್ಛಾಚಾರಿಗಳೂ ಆಗಿಬಿಡುವರು.

ರಘುಪತಿಯ ಕೆಲಸ ಮುಗಿಯಿತು. ಕೊನೆಯವರೆಗೂ ಹಿಂಸಾವೃತ್ತಿ ಅವನ ಹೃದಯದಲ್ಲಿ ಎಚ್ಚೆತ್ತಿದ್ದಿತೆನ್ನಲಾಗುವುದಿಲ್ಲ. ಕ್ರಮೇಣ ಹಿಂಸೆಯ ಭಾವ ಅಳಿಸಿಹೋಗಿ ಯಾವ ಕೆಲಸವನ್ನು ಪ್ರಾರಂಭಿಸಿದನೋ ಅದನ್ನು ಮುಗಿಸುವುದೇ ಅವನ ವ್ರತವಾಯಿತು. ನಾನಾ ಉಪಾಯಗಳಿಂದ ಎಡರು ತೊಡರುಗಳನ್ನೆಲ್ಲ ದಾಟಿ ಹಗಲಿರುಳು ತನ್ನ ಉದ್ದೇಶ ಸಾಧಿಸುವುದೊಂದರಲ್ಲೇ ನಿಯುಕ್ತನಾಗಿರುತ್ತ ಅವನು ಒಂದು ಬಗೆಯ ಮಾದಕಸುಖವನ್ನು ಅನುಭವಿಸುತ್ತಿದ್ದ. ಕಡೆಗೆ ಆ ಉದ್ದೇಶ ಸಿದ್ಧಿಸಿತು. ಜಗದಲ್ಲಿ ಇನ್ನೆಲ್ಲೂ ಸುಖವಿಲ್ಲವಾಯಿತು.

ರಘುಪತಿ ತನ್ನ ದೇವಾಲಯಕ್ಕೆ ಹೋಗಿ ನೋಡಿದ. ಅಲ್ಲಿ ಒಂದು ನರಪಿಳ್ಳೆಯಿರಲಿಲ್ಲ. ಜಯಸಿಂಹನಿಲ್ಲ ಎಂಬುದನ್ನು ಚೆನ್ನಾಗಿ ಅರಿತಿದ್ದೂ ರಘುಪತಿ ದೇವಾಲಯದೊಳಕ್ಕೆಹೋಗಿ ಅಲ್ಲಿ ಜಯಸಿಂಹನಿಲ್ಲವೆಂಬುದನ್ನು ಎರಡನೆಯಬಾರಿ ಹೊಸದಾಗಿ ಮನಗಂಡನು. ಒಮ್ಮೊಮ್ಮೆ ಅವನಿರುವಂತೆ ಮನಸಿಗೆ ಅನಿಸುತ್ತಿತ್ತು, ಮರುಕ್ಷಣ ಅವನಿಲ್ಲವೆಂದು ಅರಿವಾಗುತ್ತಿತ್ತು. ಹಠಾತ್ತಾಗಿ ಗಾಳಿಗೆ ಕದತೆರೆದುಕೊಂಡಿತು. ಅವನು ಹಿಂದಿರುಗಿ ನೋಡಿದನು. ಜಯಸಿಂಹ ಬರಲಿಲ್ಲ. ಜಯಸಿಂಹ ವಾಸಿಸುತ್ತಿದ್ದ ಕೋಣೆಯಿತ್ತಲ್ಲ ಅಲ್ಲಿ ಅವನಿದ್ದರೂ ಇರಬಹುದು ಎಂದು ಅವನಿಗನಿಸಿತು. ಆದರೆ ಬಹಳ ಹೊತ್ತು ಆ ಕೋಣೆಯನ್ನು ಪ್ರವೇಶಿಸಲಾರದಿದ್ದ. ಜಯಸಿಂಹ ಅಲ್ಲಿ ಇರದಿದ್ದರೋ ಎಂದು ಮನಸ್ಸು ಅಳುಕತೊಡಗಿತು.

ಕೊನೆಗೆ ಗೋಧೂಳಿಯ ನಸುಗತ್ತಲೆಯಲ್ಲಿ ತೋಟದ ನೆರಳು ಗಾಢವಾದ ಛಾಯೆಯಲ್ಲಿ ಕಣ್ಮರೆಯಾದಾಗ ರಘುಪತಿ ಮೆಲ್ಲಮೆಲ್ಲನೆ ಜಯಸಿಂಹನ ಕೋಣೆಯನ್ನು ಹೊಕ್ಕನು—ಜನಶೂನ್ಯವಾದ ಆ ಬರಿಯ ಕೊಠಡಿ ಸಮಾಧಿ ಭವನದಂತೆ ನೀರವವಾಗಿತ್ತು. ಕೋಣೆಯಲ್ಲಿ ಒಂದು

ಕಡೆ ಒಂದು ಮರದ ಪೆಟ್ಟಿಗೆಯೂ ಅದರ ಮಗ್ಗುಲಲ್ಲಿ ಧೂಳು ತುಂಬಿದ ಒಂದು ಜತೆ ಪಾದುಕೆಯೂ ಬಿದ್ದಿದ್ದಿತು. ಕೋಣೆಯ ಮೂಡಲ ಮೂಲೆಯಲ್ಲಿ ಹಿತ್ತಾಳೆಯ ಹಣತೆಯೊಂದು ಹಿತ್ತಾಳೆಯ ಕಂಭದಮೇಲಿತ್ತು. ಕಳೆದ ಒಂದು ವರುಷದಿಂದ ಅದನ್ನು ಯಾರೂ ಹಚ್ಚಿರಲಿಲ್ಲ. ಜೇಡನ ಬಲೆ ಅದನ್ನು ಮುಚ್ಚಿತ್ತು. ಮಗ್ಗುಲ ಗೋಡೆಯಮೇಲೆ ದೀಪದ ಮಸಿಯ ಕರಿಯ ಕಲೆಯಿದ್ದಿತು. ಕೋಣೆಯಲ್ಲಿ ಮೇಲೆ ವಿವರಿಸಿರುವ ಕೆಲವು ಸಾಮಾನುಗಳನ್ನು ಬಿಟ್ಟರೆ ಮತ್ತೇನೂ ಇರಲಿಲ್ಲ. ರಘುಪತಿ ಗಭೀರ ವಾಗಿ ನಿಟ್ಟುಸಿರು ಬಿಟ್ಟ. ಆ ನಿಟ್ಟುಸಿರು ಆ ಬರಿದಾದ ಕೋಣೆಯಲ್ಲಿ ಪ್ರತಿಧ್ವನಿಸಿತು. ಕ್ರಮೇಣ ಕತ್ತಲೆಯಲ್ಲಿ ಬೇರೇನೂ ಕಾಣಿಸಲಿಲ್ಲ. ಹಲ್ಲಿಯೊಂದು ಆಗಾಗ ಲೊಚಗುಟ್ಟುತಿತ್ತು. ತೆರೆದ ಬಾಗಿಲಿಂದ ಕೋಣೆ ಯೊಳಕ್ಕೆ ಚಳಿಗಾಳಿ ಬೀಸಲಾರಂಭಿಸಿತು. ರಘುಪತಿ ಪೆಟ್ಟಿಗೆಯ ಮೇಲೆ ಕುಳಿತು ನಡುಗ ತೊಡಗಿದ.

ಈ ರೀತಿಯಲ್ಲಿ ಈ ಜನಶೂನ್ಯ ದೇವಾಲಯದಲ್ಲಿ ಒಂದು ತಿಂಗಳು ಕಳೆದನು, ಆದರೆ ಈ ರೀತಿಯಲ್ಲಿ ದಿನ ಕಳೆಯುವದು ಅಸಾಧ್ಯವಾಯಿತು. ಪೌರೋಹಿತ್ಯ ಬಿಡಬೇಕಾಯಿತು. ರಾಜಸಭೆಗೆ ಹೋದನು. ರಾಜ್ಯದ ಆಡಳಿತದಲ್ಲಿ ಕೈಹಾಕಿದನು. ಅವಿವೇಚನೆ, ಸ್ವೇಚ್ಛಾಚಾರ ಮತ್ತು ಹಿಂಸೆ ಛತ್ರಮಾಣಿಕ್ಯನ ಹೆಸರುತಾಳಿ ದೊರೆತನ ಮಾಡುತ್ತಿದ್ದುದನ್ನು ಕಂಡ. ಆತ ರಾಜ್ಯದಲ್ಲಿ ಶಿಸ್ತುಸ್ಥಾಪಿಸಲು ಪ್ರಯತ್ನಿಸಿದ. ಛತ್ರಮಾಣಿಕ್ಯನಿಗೆ ಸಲಹೆ ಹೇಳಲು ಹೋದ.

ಛತ್ರಮಾಣಿಕ್ಯ ರೇಗಿ—"ಠಾಕೂರ್, ರಾಜ್ಯ ಆಳುವುದನ್ನು ನೀವೇನು ಬಲ್ಲಿರಿ? ಇವೆಲ್ಲ ನಿಮಗೆ ಅರ್ಥವಾಗದು" ಎಂದ.

ರಾಜನ ಪ್ರತಾಪ ಕಂಡು ರಘುಪತಿ ಬೆರಗಾದ. ಹಿಂದಿನ ನಕ್ಷತ್ರರಾಯ ನಲ್ಲವೆಂದು ಅರಿತ. ಕ್ರಮೇಣ ರಘುಪತಿಯೊಡನೆ ರಾಜನ ಮನಸ್ತಾಪ ಪ್ರಾರಂಭಿಸಿತು. ರಘುಪತಿ ತನ್ನನ್ನು ರಾಜನನ್ನಾಗಿ ಮಾಡಿರುವುದಾಗಿ ಭಾವಿಸಿರುವನೆಂದು ಛತ್ರಮಾಣಿಕ್ಯ ಮನದಲ್ಲಿ ನಿರ್ಧರಿಸಿಕೊಂಡ. ಇದರಿಂದ ರಘುಪತಿಯನ್ನು ಕಂಡರೇ ಅವನಿಗೆ ಸಹಿಸದಾಯಿತು.

ಕಡೆಗೆ ಒಂದು ದಿನ ಸ್ಪಷ್ಟವಾಗಿ "ಠಾಕೂರ್, ನೀವು ನಿಮ್ಮ ದೇವಾಲಯದ ಕೆಲಸ ನೋಡಿ, ಹೋಗಿ. ರಾಜಸಭೆಗೆ ನಿಮ್ಮಿಂದ ಏನೂ ಉಪಕಾರವಿಲ್ಲ" ಎಂದ.

ರಘುಪತಿ ಛತ್ರಮಾಣಿಕ್ಯನ ಕಡೆ ಕ್ರೂರ ಉರಿನೋಟ ನೋಡಿದ. ಛತ್ರಮಾಣಿಕ್ಯ ಸ್ವಲ್ಪ ಹೆದರಿದವನಾಗಿ ಮುಖ ತಿರುಗಿಸಿಕೊಂಡು ಹೊರಟು ಹೋದ.

## ೩೯

ನಕ್ಷತ್ರರಾಯ ರಾಜಧಾನಿಗೆ ಬಂದ ದಿನವೆ ಕೇದಾರೇಶ್ವರ ಅವನನ್ನು ಕಾಣಲು ಹೋದ. ಆದರೆ ಬಹಳ ಪ್ರಯತ್ನಿಸಿಯೂ ಅವನು ರಾಜನ ದೃಷ್ಟಿಗೆ ಬೀಳಲಿಲ್ಲ. ಸೈನಿಕರೂ ಕಾವಲುಗಾರರೂ ಅವನನ್ನು ತಳ್ಳಿಹಾಕಿ, ಗದರಿಸಿ ಓಡಿಸಿ ಸಾಕುಸಾಕುಮಾಡಿದರು. ಕಡೆಗೆ ಅವನು ಪ್ರಾಣ ಉಳಿಸಿಕೊಂಡು ಓಡಿಹೋದ. ಗೋವಿಂದಮಾಣಿಕ್ಯನ ಆಳಿಕೆಯಲ್ಲಿ ಅವನು ರಾಜಭೋಗದಿಂದ ಅತಿಸಂತುಷ್ಟನಾಗಿ ಅರಮನೆಯಲ್ಲಿ ವಾಸಿಸುತ್ತಿದ್ದ. ಯುವರಾಜ ನಕ್ಷತ್ರರಾಯನೊಡನೆ ಅವನಿಗೆ ಬಹಳ ಸ್ನೇಹವಿತ್ತು. ಸ್ವಲ್ಪ ಕಾಲದಿಂದ ಅರಮನೆ ತಪ್ಪಿ ಅವನ ಬದುಕು ಸಾಗುವುದೇ ಕಷ್ಟವಾಗಿತ್ತು. ಅವನು ರಾಜನ ನೆರಳಿನಲ್ಲಿದ್ದಾಗ ಎಲ್ಲರೂ ಹೆದರಿಕೆಯಿಂದ ಅವನನ್ನು ಗೌರವಿಸುವರು. ಆದರೆ ಈಗ ಅವನನ್ನು ಕೇಳುವವರೇ ಇಲ್ಲ. ಹಿಂದೆ ರಾಜಸಭೆಯಲ್ಲಿ ಯಾರಿಗಾದರೂ ಏನಾದರೂ ಉಪಕಾರವಾಗಬೇಕಿದ್ದರೆ ಅವನ ಕೈಕಾಲು ಕಟ್ಟುವರು. ಈಗ ದಾರಿಯಲ್ಲಿ ಹೋಗುವಾಗ ಯಾರಿಗೂ ಅವನೊಡನೆ ಒಂದೆರಡು ಮಾತನಾಡಲೂ ಬಿಡುವಿಲ್ಲ. ಇದರ ಜೊತೆಗೆ ಈಗ ಅನ್ನ ಸಂಕಟ ಒದಗಿತ್ತು. ಇಂಥ ಸಮಯದಲ್ಲಿ ಅರಮನೆಯಲ್ಲಿ ಪುನಃ ಪ್ರವೇಶದೊರಕಿದರೆ ಅವನಿಗೆ ಹೆಚ್ಚು ಸೌಕರ್ಯ ಆದೀತು. ಒಂದು ದಿನ ಅವನು ಸಂದರ್ಭಾನುಸಾರ ಸ್ವಲ್ಪ ಕಾಣಿಕೆ ಶೇಖರಿಸಿಕೊಂಡು ರಾಜಸಭೆಯಲ್ಲಿಛತ್ರಮಾಣಿಕ್ಯನನ್ನು ನೋಡಲು ಹೊರಟ. ಅತಿಯಾಗಿ ಸಂತೋಷ ಕೋರುತ್ತ ಅತಿವಿನೀತ ನಗೆ ನಗುತ್ತ ರಾಜನ ಎದುರಿಗೆ ಒಂದು ನಿಂತ.

ರಾಜ ಅವನನ್ನು ನೋಡಿ ಕಿಡಿ ಕಿಡಿಯಾದ—"ನಗು ಏತಕ್ಕಾಗಿ. ನೀನು ನನ್ನೊಡನೆ ಹುಡುಗಾಟಮಾಡುವೆಯಾ. ನೀನು ಏನು ನನ್ನೊಡನೆ ರಸಿಕತೆಯ ಹರಟೆಗೆ ಬಂದಿರುವೆಯೇನು" ಎಂದನು.

ಕೂಡಲೆ ಪಹರೆಯುವರೂ, ಕಾವಲುಗಾರರೂ, ಭಲ್ಯದವರೂ ದಿವಾನ ಎಲ್ಲರೂ ಹೂಂಕರಿಸಿದರು. ಆ ಕ್ಷಣ ಕೇದಾರೇಶ್ವರನ ಅರಳಿದ್ದ ಹಲ್ಲು ಸಾಲಿನಮೇಲೆ ತೆರೆಬಿದ್ದಿತು.

ಛತ್ರಮಾಣಿಕ್ಯನೆಂದ—"ನೀನು ಹೇಳಬೇಕಾದದ್ದನ್ನು ಹೇಳಿಹೋಗು"

ಕೇದಾರೇಶ್ವರನಿಗೆ ಹೇಳಬೇಕೆಂದಿದ್ದದು ಮರೆತುಹೋಯಿತು. ಬಹಳ ಕಷ್ಟದಿಂದ ಅವನು ಮನಸ್ಸಿನಲ್ಲೇ ಜೋಡಿಸಿಕೊಂಡಿದ್ದವಾತು ಹೊಟ್ಟೆಯಲ್ಲೇ ಪುಡಿಪುಡಿಯಾಯಿತು.

ಕಡೆಗೆ ರಾಜ "ನೀನು ಹೇಳಬೇಕಾದ್ದು ಏನೂ ಇಲ್ಲದಿದ್ದರೆ ಹೊರಟು ಹೋಗು" ಎಂದಾಗ ಕೇದಾರೇಶ್ವರ ಕೂಡಲೆ ಏನನ್ನಾದರೂ ಹೇಳುವುದು ಆವಶ್ಯಕವೆಂದು ಭಾವಿಸಿದ.

ಕಣ್ಣುಮುಖ ಧ್ವನಿಯಲ್ಲೆಲ್ಲ ಒಡನೆ ಅತಿ ಕರುಣರಸ ಬರಮಾಡಿ ಕೊಂಡು "ಮಹಾರಾಜ, ಧ್ರುವನನ್ನು ಮರೆತುಬಿಟ್ಟರೇನು ?" ಎಂದ.

ಛತ್ರಮಾಣಿಕ್ಯ ಉರಿಯುವ ಬೆಂಕಿಯಾದ. ಮೂರ್ಖ ಕೇದಾರೇಶ್ವರ ಏನೂ ತೋರದವನಾಗಿ "ಧ್ರುವ ಮಹಾರಾಜರಿಗಾಗಿ ಚಿಕ್ಕಪ್ಪ, ಚಿಕ್ಕಪ್ಪ, ಎಂದು ಅತ್ತು ಗೋಳಾಡುತ್ತಿರುವನು" ಎಂದ.

ಛತ್ರಮಾಣಿಕ್ಯನೆಂದ—"ನಿನ್ನ ಎದೆಗಾರಿಕೆ ಕಡಿಮೆಯಾದದ್ದೇನೂ ಅಲ್ಲ. ನಿನ್ನ ಅಣ್ಣನ ಮಗ ನನ್ನನ್ನು ಚಿಕ್ಕಪ್ಪ ಎನ್ನುವದೆ? ನೀನು ಅವನಿಗೆ ಹಾಗೆ ಹೇಳಿಕೊಟ್ಟಿರುವೆಯಾ ?"

ಕೇದಾರೇಶ್ವರ ಅತ್ಯಂತ ವ್ಯಾಕುಲದಿಂದ ಕೈಮುಗಿದುಕೊಂಡು 'ಮಹಾರಾಜ—' ಎಂದ.

ಛತ್ರಮಾಣಿಕ್ಯ—"ಯಾರಿರುವಿರಿ, ಇವನನ್ನೂ ಆ ಹುಡುಗನನ್ನೂ ರಾಜ್ಯದಿಂದ ದೂರ ಓಡಿಸಿರಿ" ಎಂದ.

ಕೂಡಲೆ ಕೇದಾರೇಶ್ವರನ ಹೆಗಲಮೇಲೆ ಅದೆಷ್ಟು ಜನ ಕಾವಲುಗಾರರ ಕೈ ಬಿದ್ದಿತೆಂದರೆ, ಕೇದಾರೇಶ್ವರ ಬಾಣದಂತೆ ಒಮ್ಮೆಗೆ ಹೊರಗೆ ಹೋಗಿ ಬಿದ್ದ. ಅವನ ಕೈಯಿಂದ ಅವನು ತಂದಿದ್ದ ಕಾಣಿಕೆಯನ್ನು ಕಿತ್ತುಕೊಂಡು ಕಾವಲಿನವರು ಹಂಚಿಕೊಂಡರು. ಧ್ರುವನನ್ನು ಕರೆದುಕೊಂಡು ಕೇದಾರೇಶ್ವರ ತ್ರಿಪುರ ಬಿಟ್ಟು ಹೊರಟ.

## ೪೦

ರಘುಪತಿ ಪುನಃ ದೇವಾಲಯಕ್ಕೆ ಹಿಂದಿರುಗಿದ. ಹಿಂದಿರುಗಿ ನೋಡಿದ. ಯಾರೂ ಪ್ರೇಮ ತುಂಬಿದ ಹೃದಯದಿಂದ ಒಟ್ಟಿ ಹಿಡಿದು ತನಗಾಗಿ ಕಾದು ನಿಂತಿಲ್ಲ. ಕಲ್ಲಿನ ದೇವಾಲಯ ನಿಂತಿರುವದು. ಅದರಲ್ಲಿ ಎಲ್ಲೂ ಎಳ್ಳಷ್ಟೂ ಹೃದಯ ಎನ್ನುವದಿಲ್ಲ. ಅವನು ಗೋಮತಿ ತೀರದ ಬಿಳಿಯ ಹಾಸುಗಲ್ಲಿನಮೇಲೆ ಕುಳಿತ. ಮೆಟ್ಟಲಿನ ಎಡಭಾಗದಲ್ಲಿ ಜಯಸಿಂಹ ಕೈಯಾರ ನೆಟ್ಟಿದ್ದ ಬಾಗೇಮರದಲ್ಲಿ ಲೆಖ್ಖವಿಲ್ಲದಷ್ಟು ಹೂ ಅರಳಿರುವದು. ಆ ಹೂವುಗಳನ್ನು ನೋಡಿ ಜಯಸಿಂಹನ ಸುಂದರ ಮುಖ, ಸರಳ ಹೃದಯ, ಸರಳ ಜೀವನ ಹಾಗೂ ಅತ್ಯಂತ ಸಹಜ ಶುದ್ಧ ಉನ್ನತಭಾವ ಅವನ ಮನಸ್ಸಿಗೆ ಸ್ಪಷ್ಟವಾಗತೊಡಗಿತು. ಸಿಂಹದಂತೆ ಸರಳ ತೇಜಸ್ವಿಯೂ ಜಿಂಕೆಯ ಮರಿಯಂತೆ ಸುಕುಮಾರನೂ ಆದ ಜಯಸಿಂಹ ರಘುಪತಿಯ ಹೃದಯದಲ್ಲಿ ಸಂಪೂರ್ಣವಾಗಿ ಕಾಣಿಸಿಕೊಂಡ. ಅವನ ಹೃದಯವನ್ನೆಲ್ಲ ಆಕ್ರಮಿಸಿಕೊಂಡ. ಇದಕ್ಕೆ ಮೊದಲು ತಾನು ಜಯಸಿಂಹನಿಗಿಂತಲೂ ಅತಿ ದೊಡ್ಡವನು ಎಂದು ಭಾವಿಸುತಿದ್ದನು. ಈಗ ಜಯಸಿಂಹನನ್ನು ತನಗಿಂತಲೂ ಅತಿ ದೊಡ್ಡವನೆಂದು ಭಾವಿಸತೊಡಗಿದನು. ತನ್ನಲ್ಲಿ ಜಯಸಿಂಹನಿಗಿದ್ದ ಆ ಸರಳ ಭಕ್ತಿ ನೆನೆದು ಅವನಿಗೆ ಜಯಸಿಂಹನ ವಿಷಯದಲ್ಲಿ ಅತ್ಯಂತ ಭಕ್ತಿ ಮೂಡಿತು, ಮತ್ತು ತನ್ನ ವಿಷಯದಲ್ಲಿ ಅವನಿಗೆ ಅಗೌರವ ಹುಟ್ಟಿತು. ಜಯಸಿಂಹನಿಗೆ ಮಾಡಿದ್ದ ಎಲ್ಲ ಅನ್ಯಾಯ ತಿರಸ್ಕಾರಗಳನ್ನು ನೆನೆದು ಅವನ ಮನ ಚೂರುಚೂರಾಯಿತು. ಅವನು ತನ್ನಲ್ಲೆ ಹೇಳಿಕೊಂಡ— ಜಯಸಿಂಹನನ್ನು ನಿಂದಿಸಲು ನನಗೆ ಅಧಿಕಾರವಿಲ್ಲ. ಜಯಸಿಂಹನೊಡನೆ ಒಂದು ಕ್ಷಣಕಾಲ ಒಮ್ಮೆ ನೋಡಲು ಎಡೆ ಸಿಕ್ಕಿದರೆ ಆಗ ನಾನು ನನ್ನ ಹೀನತ್ವವನ್ನು ಒಪ್ಪಿಕೊಂಡು ಅವನ ಬಳಿ ಒಮ್ಮೆ ಕ್ಷಮೆ ಬೇಡುವೆ. ಜಯ

ಸಿಂಹ ಹೇಳಿದ್ದೆಲ್ಲ, ಮಾಡಿದ್ದೆಲ್ಲ ಅವನ ನೆನಪಿಗೆ ಬರತೊಡಗಿತು. ಜಯಸಿಂಹನ ಇಡೀ ಜೀವನ ಸಂಕ್ಷೇಪವಾಗಿ ಅವನ ಮನಸಿನಲ್ಲಿ ಸ್ಪಷ್ಟವಾಗತೊಡಗಿತು. ಅವನು ಈ ರೀತಿ ಒಂದು ಮಹತ್ವ ಚರಿತ್ರೆಯಲ್ಲಿ ತನ್ನನ್ನು ತಾನು ಮರೆತು ಎಲ್ಲ ವಿವಾದ ವಿದ್ವೇಷಗಳನ್ನೂ ಮರೆತುಬಿಟ್ಟ. ನಾಲ್ಕೂ ದಿಕ್ಕಿನ ಹಿರಿಯ ಪ್ರಪಂಚ ಕಿರಿದಾಗಿ ಅವನನ್ನು ಹಿಂಸಿಸತೊಡಗಿರುವದು. ಯಾವ ನಕ್ಷತ್ರಮಾಣಿಕ್ಯನನ್ನು ಅವನು ರಾಜನನ್ನಾಗಿಮಾಡಿದನೋ, ಅವನು ರಾಜನಾಗಿ ತನ್ನನ್ನು ಅವಮಾನಮಾಡಿರುವನು. ಇದನ್ನು ನೆನಸಿಕೊಂಡಾಗ ಅವನಿಗೆ ಸ್ವಲ್ಪವೂ ರೋಷ ಹುಟ್ಟಲಿಲ್ಲ. ಈ ಮಾನ—ಅವಮಾನವೆಲ್ಲ ಸಾಮಾನ್ಯ ಎಂದು ತಿಳಿದಾಗ ಅವನಿಗೆ ಸ್ವಲ್ಪ ನಗುಬಂದಿತು. ಜಯಸಿಂಹನಿಗೆ ವಾಸ್ತವವಾಗಿ ಪೂರ್ಣ ತೃಪ್ತಿ ಉಂಟಾಗುವಂತಹದು ಯಾವುದನ್ನಾದರೂ ಮಾಡಬೇಕೆಂದು ಅವನಿಗನಿಸಿತು. ಆದರೆ ನಾಲ್ಕು ದಿಕ್ಕಿನಲ್ಲಿ ಎಲ್ಲೂ ಯಾವ ಕೆಲಸವೂ ಕಂಡುಬರಲಿಲ್ಲ—ನಾಲ್ಕೂ ಕಡೆ ಶೂನ್ಯ ಹಾಹಾಕಾರ ತಾಂಡವವಾಡುತ್ತಿರುವದು. ಆ ಜನಹೀನ ದೇವಾಲಯ ಅವನನ್ನು ಅದುಮಿ ಹಿಡಿದಂತೆ ಆಯಿತು. ಅವನ ಉಸಿರು ತಡೆದಂತೆ ಆಯಿತು. ಯಾವುದಾದರೊಂದು ಮಹತ್ವದ ಕೆಲಸಮಾಡಿದರೆ ಅವನ ಹೃದಯ ವೇದನೆ ಶಾಂತವಾದೀತು. ಆದರೆ ಆ ಎಲ್ಲ ನಿಸ್ತಬ್ಧ ನಿರುದ್ಯಮ ನಿರಾಲಯ ದೇವಾಲಯದ ಕಡೆ ನೋಡಿ ಪಂಜರದಲ್ಲಿರುವ ಹಕ್ಕಿಯಂತೆ ಅವನ ಮನಸ್ಸು ಅಳುಕಿತು. ಅವನು ಎದ್ದು ಹೂದೋಟದ ನಡುವೆ ಅಧೀರ ಭಾವದಿಂದ ನಡೆದಾಡತೊಡಗಿದ. ದೇವಾಲಯದ ಒಳಭಾಗದ ಚಟುವಟಿಕೆಯಿಲ್ಲದ, ಚೇತನವಿಲ್ಲದ, ಕೆಲಸವಿಲ್ಲದ ಜಡ ಪ್ರತಿಮೆಗಳಮೇಲೆ ಅವನಿಗೆ ಅತಿಯಾದ ತಿರಸ್ಕಾರ ಉಂಟಾಯಿತು. ಹೃದಯದ ವೇಗ ಹೆಚ್ಚಾಗಿರುವಾಗ ಕೆಲವಾರು ಕೆಲಸವಿಲ್ಲದ ಸ್ಥೂಲಕಲ್ಲು ವಿಗ್ರಹಗಳ ಕೆಲಸವಿಲ್ಲದ ಸಂಗಡಿಗನಾಗಿ ಶಾಶ್ವತವಾಗಿ ಕಾಲ ಕಳೆಯುವದು ಅವನಿಗೆ ಅಸಹ್ಯವೆನಿಸಿತು. ರಾತ್ರಿ ಎರಡು ಜಾವ ಆದಾಗ ರಘುಪತಿ ಚಕಮುಕಿ ಕುಟ್ಟಿ ಒಂದು ದೀಪ ಹೊತ್ತಿಸಿದ. ಹದಿನಾಲ್ಕು ದೇವತೆಗಳಿದ್ದ ದೇವಾಲಯಕ್ಕೆ ಪ್ರವೇಶಮಾಡಿದ. ಹೋಗಿ ನೋಡಿದ, ಹದಿನಾಲ್ಕು ದೇವತೆಗಳೂ ಸಮಾನ ಭಾವದಿಂದಲೇ ನಿಂತಿರುವವು. ಕಳೆದವರ್ಷ ಆಷಾಢದ ಕಾಳರಾತ್ರಿಯಲ್ಲಿ

ಮಂಕಾದ ದೀಪದ ಬೆಳಕಿನಲ್ಲಿ ಭಕ್ತನ ಜೀವಹೋದ ದೇಹದ ಎದುರಿಗೆ ರಕ್ತಪ್ರವಾಹದ ಮಧ್ಯದಲ್ಲಿ ಹೇಗೆ ಬುದ್ಧಿಹೀನ ಹೃದಯ ಹೀನವಾಗಿ ನಿಂತಿತ್ತೋ ಇಂದೂ ಹಾಗೆಯೇ ನಿಂತಿರುವದು. ರಘುಪತಿ ಚೀತ್ಕಾರ ಮಾಡುತ್ತ ಹೇಳತೊಡಗಿದ. "ಸುಳ್ಳು, ಎಲ್ಲ ಸುಳ್ಳು ಓ ಮಗನೆ, ಜಯ ಸಿಂಹ, ನಿನ್ನ ಅಮೂಲ್ಯ ಹೃದಯದ ರಕ್ತವನ್ನು ಯಾರಿಗೆ ಕೊಟ್ಟೆ. ಇಲ್ಲಿ ಯಾವ ದೇವತೆಯೂ ಇಲ್ಲ, ಯಾವ ದೇವತೆಯೂ ಇಲ್ಲ, ಪಿಶಾಚ ರಘುಪತಿ ಆ ರಕ್ತವನ್ನು ಕುಡಿದಿರುವನು" ಹೀಗೆಂದು ಕಾಳಿಯ ವಿಗ್ರಹ ವನ್ನು ರಘುಪತಿ ಪೀಠದಿಂದ ಕಿತ್ತೊಗೆದ. ದೇವಾಲಯದ ಬಾಗಿಲಲ್ಲಿ ನಿಂತು ವಿಗ್ರಹವನ್ನು ಬಲಪೂರ್ವಕವಾಗಿ ದೂರ ಒಗೆದ. ಕತ್ತಲೆಯಲ್ಲಿ ಕಲ್ಲಿನ ಸೋಪಾನದ ಮೇಲಿನಿಂದ ಕಲ್ಲಿನ ವಿಗ್ರಹ ಸದ್ದುಮಾಡುತ್ತ ಉರು ಳುತ್ತ ಉರುಳುತ್ತ ಗೋಮತಿಯ ನೀರಿನೊಳಕ್ಕೆ ಹೋಗಿಬಿದ್ದಿತು. ಅಜ್ಞಾನ ರಾಕ್ಷಸಿ ಕಲ್ಲಿನ ಆಕಾರ ತಾಳಿ ಇಷ್ಟು ದಿನ ರಕ್ತಪಾನಮಾಡುತ್ತಿದ್ದಳು. ಅದು ಇಂದು ಗೋಮತಿಯ ಗರ್ಭದ ಸಾವಿರಾರು ಕಲ್ಲುಗಳ ನಡುವೆ ಅದೃಶ್ಯವಾಯಿತು. ಆದರೆ ಮಾನವರ ಕಠಿಣ ಹೃದಯ ಪೀಠವನ್ನು ಯಾವ ಒಗೆಯುಲ್ಲೂ ಬಿಟ್ಟುಹೋಗಿಲ್ಲ. ರಘುಪತಿ ದೀಪ ಆರಿಸಿ ಬೀದಿಗೆ ಬಂದ. ಆ ರಾತ್ರಿಯಲ್ಲೆ ರಾಜಧಾನಿ ಬಿಟ್ಟು ಹೊರಟುಹೋದ.

## ೪೧

ನೊಯಾಖಾಲಿಯ ನಿಜಾಮತ್‌ಪುರದಲ್ಲಿ ಬಿಲ್ವನ ಠಾಕೂರ ಕೆಲವು ಕಾಲದಿಂದ ವಾಸಮಾಡುತ್ತಿರುವನು. ಅಲ್ಲಿ ಭಯಂಕರ ಕಾಲರಾವ್ಯಾಧಿ ತಲೆಹಾಕಿತ್ತು.

ಫಾಲ್ಗುಣಮಾಸದ ಕಡೆ ಕಡೆಯಲ್ಲಿ ಒಂದು ದಿನ ಹಗಲೆಲ್ಲ ಮೋಡ ಕವಿದಿತ್ತು. ನಡು ನಡುವೆ ಅಷ್ಟಿಷ್ಟು ಮಳೆಯೂ ಬೀಳುತ್ತಿತ್ತು, ಕಡೆಗೆ ಸಂಜೆಯ ಹೊತ್ತಿಗೆ ಪದ್ಧತಿಯಂತೆ ಮಳೆಯುಗಾಳಿಗೂ ಆರಂಭವಾಯಿತು. ಮೊದಲು ಪೂರ್ವ ದಿಕ್ಕಿನಿಂದ ಗಾಳಿ ಬೀಸುತ್ತಿತ್ತು. ರಾತ್ರಿ ಎರಡನೆಯ ಜಾವದವೇಳೆಗೆ ಉತ್ತರದಿಂದಲೂ ಉತ್ತರಪೂರ್ವದಿಂದಲೂ ಅತಿವೇಗವಾಗಿ ಮಳೆಗಾಳಿ ಬೀಸಲು ಆರಂಭಿಸಿತು. ಕಡೆಗೆ ಮಳೆ ಬರಲು ಮೊದಲಾಗಿ

ಮಳೆಗಾಳಿಯ ವೇಗ ಕಡಮೆಯಾಯಿತು. ಅಷ್ಟರಲ್ಲಿ ಪ್ರವಾಹ ಬರುವ ಸುದ್ದಿ ಹರಡಿತು. ಕೆಲವರು ಮನೆಯ ಛಾವಣಿ ಏರಿದರು. ಕೆಲವರು ಕೊಳದ ಏರಿಯಮೇಲೆ ನಿಂತರು. ಕೆಲವರು ಮರದ ಕೊಂಬೆಯಲ್ಲಿ, ಕೆಲವರು ದೇವಾಲಯದ ಗೋಪುರದಲ್ಲಿ ಆಶ್ರಯಪಡೆದರು. ಕತ್ತಲರಾತ್ರಿ. ಎಡೆಬಿಡದ ಮಳೆ ಪ್ರವಾಹದ ಗರ್ಜನೆ ಕ್ರಮವಾಗಿ ಸಮೀಪಿಸಿತು. ಹೆದರಿಕೆಯಿಂದ ಹಳ್ಳಿಯಜನ ದಿಕ್ಕುಗೆಟ್ಟು ಓಡಿದರು. ಅಷ್ಟರಲ್ಲಿ ಪ್ರವಾಹವೂ ಬಂದಿತು. ಮೇಲೆ ಮೇಲೆ ಒಂದೆರಡುಸಲ ಅಲೆ ಬಂದಿತು. ಎರಡನೆಯ ಸಲದ ಬಳಿಕ ಹಳ್ಳಿಯಲ್ಲಿ ಎಂಟುಮೊಳದುದ್ದ ನೀರು ನಿಂತಿತು. ಮರುದಿನ ಸೂರ್ಯ ಹುಟ್ಟಿದಾಗ, ನೀರು ಕಡಮೆಯಾದಾಗ ಹಳ್ಳಿಯಲ್ಲಿ ಕೆಲವೇ ಮನೆಗಳು ಉಳಿದಿದ್ದವು. ಜನರಿಲ್ಲ. ಬೇರೆ ಬೇರೆ ಹಳ್ಳಿಗಳಿಂದ ಮನುಷ್ಯರು, ದನಗಳು, ಎಮ್ಮೆ ಆಡು ಹಾಗೂ ನರಿನಾಯಿಗಳ ಮೃತದೇಹ ತೇಲಿಬಂದಿರುವದು. ಅಡಕೆಯ ಮರ ಮುರಿದು ತೇಲಿಹೋಗಿರುವದು. ಬುಡದ ಸ್ವಲ್ಪಭಾಗ ಮಾತ್ರ ಉಳಿದಿರುವುದು. ದೊಡ್ಡ ದೊಡ್ಡ ಮಾವು ಹಲಸು ಮರಗಳು ಬೇರುಸಹಿತ ಕಿತ್ತು ಬಿದ್ದಿರುವವು. ಇತರ ಹಳ್ಳಿಗಳ ಮನೆಗಳ ಛಾವಣಿ ತೇಲಿಬಂದು ಗೋಡೆಗಾಗಿ ಅಲ್ಲಲ್ಲಿ ಬೋರಲಾಗಿ ಬಿದ್ದಿರುವವು. ಹೇರಳವಾದ ಕುಡಿಕೆಮಡಕೆಗಳು ಚೂರು ಚೂರಾಗಿರುವವು. ಅನೇಕ ಕುಟೀರಗಳು ಬೊಂಬು, ಮಾವು, ಹಲಸು, ಗೊಬ್ಬಳಿ ಮೊದಲಾದ ಮರಗಳಿಂದ ಮರೆಯಾಗಿದ್ದುವು. ಇದರಿಂದ ಅನೇಕರು ತೇಲಿಹೋಗದೆ ಮರಕ್ಕೆ ಸಿಕ್ಕಿಕೊಂಡಿದ್ದರು. ಕೆಲವರು ರಾತ್ರಿಯೆಲ್ಲ ಪ್ರವಾಹದ ವೇಗದಿಂದ ಅಲ್ಲಾಡುವ ಬೊಂಬಿನ ಮೆಳೆಯಲ್ಲಿ ತೂಗಾಡುತ್ತಿದ್ದರು. ಕೆಲವರು ಗೊಬ್ಬಳಿ ಮುಳ್ಳಿನಿಂದ ಗಾಯಗೊಂಡಿದ್ದರು. ಕೆಲವರು ಕಿತ್ತು ಬಿದ್ದ ಮರದೊಡನೆ ತೇಲಿಹೋದರು. ನೀರಿಳಿಯಲು ಜೀವವಿದ್ದವರು ಇಳಿದು ಬಂದು ಸತ್ತವರ ನಡುವೆ ಅಲೆದಾಡಿ ತಮ್ಮವರನ್ನು ಹುಡುಕಾಡತೊಡಗಿದರು. ಹೆಚ್ಚು ಸಂಖ್ಯೆಯ ಮೃತದೇಹಗಳು ಅಪರಿಚಿತವಾದುವು. ಬೇರೆ ಗ್ರಾಮದಿಂದ ಬಂದವು. ಯಾರೂ ಅವಕ್ಕೆ ಸಂಸ್ಕಾರಮಾಡಲಿಲ್ಲ. ಗುಂಪುಗುಂಪಾಗಿ ರಣಹದ್ದುಗಳು ಬಂದು ಹೆಣಗಳನ್ನು ತಿನ್ನತೊಡಗಿದವು. ನಾಯಿ–ನರಿಗಳೊಡನೆ ಅವಕ್ಕೆ ಹೋರಾಟವಿಲ್ಲ. ಏಕೆಂದರೆ ನಾಯಿನರಿಗಳೂ ಸತ್ತು

ಹೋಗಿದ್ದವು. ಹಳ್ಳಿಯ ಹನ್ನೆರಡು ಮನೆಗಳಲ್ಲೂ ಪಠಾಣರು ವಾಸಿಸುತ್ತಿದ್ದರು. ಅವರು ಎತ್ತರವಾದ ಸ್ಥಳದಲ್ಲಿ ವಾಸಮಾಡುತ್ತಿದ್ದುದರಿಂದ ಅವರಿಗೆ ಯಾವ ರೀತಿಯ ನಷ್ಟವೂ ಉಂಟಾಗಲಿಲ್ಲ. ಬದುಕಿ ಉಳಿದಿದ್ದವರಲ್ಲಿ ಮನೆ ಇದ್ದವರು ಮನೆಯಲ್ಲಿ ಆಶ್ರಯಪಡೆದರು. ಇಲ್ಲದವರು ಆಶ್ರಯ ಹುಡುಕಿಕೊಂಡು ಬೇರೆಲ್ಲಿಗೋ ಹೋದರು. ಬೇರೆ ಊರಿನಲ್ಲಿದ್ದವರು ಊರಿಗೆ ಹಿಂದಿರುಗಿ ಒಂದು ಹೊಸದಾಗಿ ಮನೆಕಟ್ಟಿಕೊಂಡರು. ಕ್ರಮೇಣ ಸ್ವಲ್ಪ ಸ್ವಲ್ಪವಾಗಿ ಪುನಃ ಜನರ ವಾಸ ಆರಂಭವಾಯಿತು. ಇಂತಹ ಸಮಯದಲ್ಲಿ ಹೆಣಗಳಿಂದ ಕೊಳದ ನೀರು ಕೆಟ್ಟುಹೋಗಿದ್ದುದರಿಂದಲೂ ಇತರ ಬೇರೆ ಬೇರೆ ಕಾರಣಗಳಿಂದಲೂ ಹಳ್ಳಿಯಲ್ಲಿ ಕಾಲರಾ ಆರಂಭವಾಯಿತು. ಪಠಾಣರ ಕೇರಿಯಲ್ಲಿ ಕಾಲರಾ ಮೊದಲಾಯಿತು. ಹೆಣ ಹೂಳಲು ಅಥವಾ ಇತರರಿಗೆ ಸೇವೆಮಾಡಲು ಯಾರಿಗೂ ಅವಕಾಶ ಉಳಿಯಲಿಲ್ಲ. ಮುಸಲ್ಮಾನರು ಗೋಹತ್ಯೆಯ ಪಾಪದ ಫಲ ಅನುಭವಿಸುತ್ತಿರುವರು ಎಂದು ಹಿಂದೂಗಳು ಹೇಳಿದರು. ಜಾತಿವೈರದಿಂದಲೂ ಸ್ಪೃಶ್ಯಾಸ್ಪೃಶ್ಯತೆಯ ಹೆದರಿಕೆಯಿಂದಲೂ ಯಾವ ಹಿಂದುವೂ ಅವರುಗಳಿಗೆ ನೀರುಕೊಡಲಿಲ್ಲ. ಅಥವಾ ಯಾವ ರೀತಿಯ ಸಹಾಯವನ್ನೂ ಮಾಡಲಿಲ್ಲ. ಬಿಲ್ವನಠಾಕೂರ ಹಳ್ಳಿಗೆ ಬಂದಾಗ ಹಳ್ಳಿಯಸ್ಥಿತಿ ಹೀಗಿತ್ತು. ಬಿಲ್ವನನಿಗೆ ಕೆಲವರು ಶಿಷ್ಯರು ಸೇರಿದ್ದರು. ಕಾಲರಾ ಭಯದಿಂದ ಅವರುಗಳು ಓಡಿಹೋಗಲು ಪ್ರಯತ್ನಿಸಿದರು. ಬಿಲ್ವನ ಹೆದರಿಕೆ ತೋರಿಸಿ ಅವರ ಪ್ರಯತ್ನವನ್ನು ನಿಲ್ಲಿಸಿದ. ಆತ ಪೀಡಿತ ಪಠಾಣರಿಗೆ ಸೇವೆಮಾಡತೊಡಗಿದ. ಅವರಿಗೆ ಪಥ್ಯ ಪಾನೀಯ ಔಷಧ ಕೊಡುವನು. ಮತ್ತು ಅವರ ಹೆಣಗಳನ್ನು ಹೂಳುವನು. ಹಿಂದುಗಳು ಹಿಂದೂ ಸಂನ್ಯಾಸಿಯ ಅನಾಚಾರಕಂಡು ಆಶ್ಚರ್ಯಪಟ್ಟರು. ಬಿಲ್ವನನೆಂದ—ನಾನು ಸಂನ್ಯಾಸಿ, ನನಗೆ ಯಾವ ಜಾತಿಯೂ ಇಲ್ಲ. ನನ್ನದು ಮನುಷ್ಯ ಜಾತಿ. ಮನುಷ್ಯ ಸಾಯುತ್ತಿರುವಾಗ ಜಾತಿಯಾವುದು—ಭಗವಂತನಿಂದ ಸೃಷ್ಟಿಯಾದ ಮನುಷ್ಯ ಮನುಷ್ಯನ ಪ್ರೇಮ ಬಯಸಿದಾಗ ಜಾತಿ ಏತರದು ? ಹಿಂದುಗಳು ಬಿಲ್ವನನ ಅನಾಸಕ್ತ ಪರೋಪಕಾರವನ್ನು ಕಂಡು ಆತನನ್ನು ತಿರಸ್ಕಾರ ಅಥವಾ ನಿಂದೆಮಾಡುವಷ್ಟು ಸಾಹಸಿಗಳಾಗಲಿಲ್ಲ. ಬಿಲ್ವನನ ಕೆಲಸ ಹೊಗಳುವುದೇ ಅಥವಾ ತೆಗಳುವುದೇ ಎಂಬುದನ್ನು

ಅವರುಗಳು ನಿರ್ಧರಿಸಲಾರದೆಹೋದರು. ಆದರೆ ಅವರುಗಳ ಹೃದಯದಲ್ಲಿ ವಾಸಿಸುತ್ತಿದ್ದ 'ಮನುಷ್ಯ' ಅವನ ಕೆಲಸವನ್ನು ಶ್ಲಾಘಿಸಿದ. ಏನೇ ಆಗಲಿ ಬಿಲ್ವನ ಇತರರ ಒಳ್ಳೆಯದು, ಕೆಟ್ಟದರ ಕಡೆ ಗಮನಿಸದೆ ಕೆಲಸಮಾಡುತ್ತ ಬಂದ. ನರಳುತ್ತಿದ್ದ ಪಠಾಣರು ಆತನನ್ನು ದೇವತೆಯೆಂದು ಭಾವಿಸ ತೊಡಗಿದರು. ಪಠಾಣರ ಸಣ್ಣ ಸಣ್ಣ ಮಕ್ಕಳನ್ನು ಆತ ಕಾಲರಾದಿಂದ ದೂರ ಇರಿಸಲು ಹಿಂದುಗಳ ಹತ್ತಿರ ಹೋಗಿ ನೋಡಿದ. ಹಿಂದುಗಳು ಅತಿಯಾಗಿ ಕೋಪಿಸಿಕೊಂಡರು. ಅವರಿಗೆ ಆಶ್ರಯ ಕೊಡಲಿಲ್ಲ. ಆಗ ಬಿಲ್ವನ ದೊಡ್ಡದೊಂದು ಪಾಳುಗುಡಿಯನ್ನು ಆಶ್ರಯವಾಗಿ ಮಾಡಿಕೊಂಡ. ತನ್ನ ಹುಡುಗರ ಗುಂಪನ್ನು ಅಲ್ಲಿ ಇರಿಸಿದ. ಬೆಳಗ್ಗೆ ಎದ್ದು ಬಿಲ್ವನ ಆ ಮಕ್ಕಳಿಗಾಗಿ ಭಿಕ್ಷೆ ಎತ್ತಲು ಹೊರಟ. ಆದರೆ ಭಿಕ್ಷೆ ನೀಡುವವರು ಯಾರು? ದೇಶದಲ್ಲಿ ಧ್ಯಾನವೆಲ್ಲಿ? ಆಹಾರವಿಲ್ಲದ ಎಷ್ಟೋ ಜನ ಸಾಯಲು ಪ್ರಯತ್ನಿ ಸುತ್ತಿದ್ದರು. ಹಳ್ಳಿಯ ಮುಸಲ್ಮಾನ ಜಮೀನ್ದಾರರು ಬಹಳ ದೂರದಲ್ಲಿ ವಾಸಿಸುತ್ತಿದ್ದರು. ಬಿಲ್ವನ ಅವರ ಬಳಿಗೆ ಹೋದ. ಬಹಳ ಕಷ್ಟದಿಂದ ಅವರನ್ನು ಒಪ್ಪಿಸಿ ಢಾಕಾದಿಂದ ಅಕ್ಕಿ ತರಿಸಲು ಆರಂಭಿಸಿದ. ಆತ ನೊಂದ ವರ ಸೇವೆಮಾಡುವನು. ಆತನ ಶಿಷ್ಯರು ಅಕ್ಕಿ ಹಂಚುವರು. ನಡು ನಡುವೆ ಬಿಲ್ವನ ಹುಡುಗರೊಡನೆ ಆಟ ಆಡುವನು. ಅವರುಗಳು ಆತನನ್ನು ಕಂಡರೆ ಬಹಳ ಕೋಲಾಹಲ ಮಾಡುವರು. ಸಂಜೆಯ ಹೊತ್ತಿನಲ್ಲಿ ದೇವಾಲಯದ ಕಡೆಗೆ ಹೋದರೆ ಅಲ್ಲಿ ಸಾವಿರಾರು ಗಿಣಿಗಳು ವಾಸಮಾಡು ತ್ತಿರುವಂತೆ ಮನಸ್ಸಿಗೆ ಭಾಸವಾಗುವದು. ಬಿಲ್ವನನ ಬಳಿ ಏಸ್‌ರಾಜನ ಆಕಾರದ ಒಂದು ಬಗೆಯ ವಾದ್ಯವಿತ್ತು. ಹುಡುಗರು ಆತನನ್ನು ಸುತ್ತು ಗಟ್ಟಿಕೊಂಡು ಕೆಲವರು ಹಾಡು ಕೇಳುವರು, ಕೆಲವರು ವಾದ್ಯದ ತಂತಿ ಎಳೆಯುವರು, ಕೆಲವರು ಆತನನ್ನು ಅನುಕರಿಸಿ ಹಾಡಲು ಪ್ರಯತ್ನಿಸಿ ಬಲವಾಗಿ ಚೀತ್ಕಾರಮಾಡುವರು.

ಕಡೆಗೆ ಕಾಲರಾ ಮುಸಲ್ಮಾನರ ಕೇರಿಯಿಂದ ಹಿಂದುಗಳ ಕೇರಿಗೆ ಬಂದಿತು. ಹಳ್ಳಿಯಲ್ಲಿ ಒಂದು ರೀತಿಯ ಅನಾಯಕತ್ವ ತಲೆ ಹಾಕಿತು. ಕಳವು ದರೋಡೆಗೆ ಕೊನೆಯಿಲ್ಲದಾಯಿತು. ಸಿಕ್ಕಿದವರು ಸಿಕ್ಕಿದ್ದನ್ನು ಕೊಳ್ಳೆ ಹೊಡೆಯುವರು. ಮುಸಲ್ಮಾನರು ಗುಂಪುಗಟ್ಟಿಕೊಂಡು ದರೋಡೆಗೆ

ಮೊದಲು ಮಾಡಿದರು. ಅವರುಗಳು ನರಳುವವರನ್ನು ಹಾಸಿಗೆಯಿಂದ ತಳ್ಳಿ ಮಂಚ ಚಾಪೆ ಹಾಸಿಗೆ ಮೊದಲಾದುವನ್ನು ದೋಚಿಕೊಂಡು ಹೋಗುವರು. ಬಿಲ್ವನ ಜೀವ ಬಿಟ್ಟು ಅವರನ್ನು ತಡೆಯುತ್ತಿದ್ದ. ಬಿಲ್ವನನ ಮಾತನ್ನು ಅವರುಗಳು ಬಹಳವಾಗಿ ಗೌರವಿಸುವರು. ಬಿಲ್ವನ ಸಾಧ್ಯ ವಾದಷ್ಟು ಹಳ್ಳಿಯಲ್ಲಿ ಶಾಂತಿ ಕಾಪಾಡಿದ.

ಒಂದು ದಿನ ಬೆಳಗ್ಗೆ ಬಿಲ್ವನನ ಶಿಷ್ಯನೊಬ್ಬ ಬಂದು, ಒಬ್ಬ ಹುಡುಗ ನೊಡನೆ ವಿದೇಶಿಯೊಬ್ಬ ಹಳ್ಳಿಯ ಅರಳಿಯ ಕಟ್ಟೆಯ ಮೇಲಿರುವನು. ಅವನಿಗೆ ಕಾಲರಾ ತಗಲಿರುವದು. ಅವನಿನ್ನು ಉಳಿಯುವಂತಿಲ್ಲ ಎಂದು ಆತನಿಗೆ ಸುದ್ದಿ ಕೊಟ್ಟನು. ಬಿಲ್ವನ ನೋಡಿದ, ಕೇದಾರೇಶ್ವರ ಪ್ರಜ್ಞೆಯಿಲ್ಲದೆ ಬಿದ್ದಿದ್ದ. ಧ್ರುವ ಧೂಳಿನಲ್ಲಿ ಮಲಗಿ ನಿದ್ರಿಸುತ್ತಿರುವನು. ಕೇದಾರೇಶ್ವರನಿಗೆ ಪ್ರಾಣ ಹೋಗುವ ಸ್ಥಿತಿ. ದಾರಿಯ ಕಷ್ಟದಿಂದಲೂ ಹೊಟ್ಟೆಗಿಲ್ಲದ್ದರಿಂದಲೂ ಅವನು ಬಲಹೀನನಾಗಿದ್ದ. ಇದರಿಂದ ರೋಗ ಅವನನ್ನು ಬಲವಾಗಿ ಆಕ್ರಮಿಸಿರುವದು. ಯಾವ ಔಷಧಿಯಿಂದಲೂ ಏನೂ ಪ್ರಯೋಜನ ವಾಗಲಿಲ್ಲ. ಆ ಮರದಡಿಯಲ್ಲೆ ಅವನ ಪ್ರಾಣ ಹೋಯಿತು. ಧ್ರುವನನ್ನು ನೋಡಿದರೆ ಬಹಳ ಹೊತ್ತಿನಿಂದ ಆಹಾರವಿಲ್ಲದೆ ಹಸಿವಿನಿಂದ ಅತ್ತುಅತ್ತು ನಿದ್ರೆಹೋಗಿರುವಂತೆ ಕಾಣಿಸಿತು. ಬಿಲ್ವನ ಬಹಳ ಜಾಗರೂಕತೆಯಿಂದ ಅವನನ್ನು ಎತ್ತಿಕೊಂಡು ತನ್ನ ಶಿಬಿರನಿವಾಸಕ್ಕೆ ಕೊಂಡುಹೋದ.

## ೪೨

ಚಟ್ಟಗ್ರಾಮ ಈಗ ಅರಕಾನ್ ರಾಜ್ಯದ ಅಧೀನ. ಗೋವಿಂದ ಮಾಣಿಕ್ಯ ದೇಶಭ್ರಷ್ಟನಂತೆ ಚಟ್ಟಗ್ರಾಮಕ್ಕೆ ಬಂದಿರುವುದನ್ನು ಕೇಳಿ ಅರ ಕಾನಿನ ರಾಜ ಬಹಳ ಗೌರವದಿಂದ ಅವನ ಬಳಿಗೆ ದೂತನನ್ನು ಕಳುಹಿಸಿದ. ಸಿಂಹಾಸನವನ್ನು ಮರಳಿ ಪಡೆಯಬೇಕಾದರೆ ಅರಕಾನಿನ ರಾಜ ನಿಮಗೆ ಸಹಾಯಮಾಡುವನು ಎಂದು ಹೇಳಿ ಕಳುಹಿಸಿದ.

ಗೋವಿಂದಮಾಣಿಕ್ಯ—'ಇಲ್ಲ' ನನಗೆ ಸಿಂಹಾಸನ ಬೇಕಿಲ್ಲ ಎಂದು ಹೇಳಿದ.

ದೂತನೆಂದ—“ ಹಾಗಾದರೆ ಅರಕಾನಿನ ರಾಜಸಭೆಯಲ್ಲಿ ಪೂಜನೀಯ ಅತಿಥಿಗಳಾಗಿ ಮಹಾರಾಜರು ಸ್ವಲ್ಪಕಾಲ ಇರಬೇಕು.”

ರಾಜ—“ ನಾನು ರಾಜಸಭೆಯಲ್ಲಿರಲಾರೆ. ಚಟ್ಟಗ್ರಾಮದ ಒಂದು ಕಡೆಯಲ್ಲಿ ನನಗೆ ಸ್ಥಳ ದಾನ ಮಾಡಿದರೆ ನಾನು ಅರಕಾನ ರಾಜನಲ್ಲಿ ಚಿರಋಣಿಯಾಗಿರುವೆ ” ಎಂದ.

“ ಮಹಾರಾಜರಿಗೆ ಎಲ್ಲಿ ಇಷ್ಟವೋ ಅಲ್ಲಿ ಇರಬಹುದು. ಇವೆಲ್ಲ ನಿಮ್ಮ ರಾಜ್ಯ ಎಂದು ತಿಳಿದುಕೊಳ್ಳಬೇಕು ” ಎಂದು ದೂತ ಹೇಳಿದ.

ಅರಕಾನ್ ರಾಜನ ಕೆಲವು ಅನುಚರರು ರಾಜನೊಡನೆಯೇ ಇದ್ದರು. ಗೋವಿಂದಮಾಣಿಕ್ಯ ಅವರನ್ನು ಅಡ್ಡಿಮಾಡಲಿಲ್ಲ. ಅರಕಾನಿನ ರಾಜ ತನ್ನ ಮೇಲೆ ಸಂದೇಹಪಟ್ಟು ತನ್ನ ಹತ್ತಿರ ಜನರನ್ನು ಇಟ್ಟಿದ್ದರೂ ಇಟ್ಟಿರಬಹುದು ಎಂದು ಭಾವಿಸಿಕೊಂಡ.

ಮಯಾನಿ ನದೀ ತೀರದಲ್ಲಿ ಮಹಾರಾಜ ಕುಟೀರ ಕಟ್ಟಿಕೊಂಡಿರುವನು. ಶುದ್ಧವಾದ ನೀರುಳ್ಳ ಸಣ್ಣ ನದಿ ಚಿಕ್ಕದೊಡ್ಡ ಬಂಡೆಗಳ ಮೇಲಿಂದ ಅತಿವೇಗವಾಗಿ ಹರಿಯುತ್ತಿರುವುದು. ಇಕ್ಕೆಲದಲ್ಲೂ ಕರಿಯ ಬಣ್ಣದ ಬೆಟ್ಟ ನಿಂತಿರುವುದು. ಕರಿಯಕಲ್ಲಿನಮೇಲೆ ವಿಚಿತ್ರವರ್ಣದ ಪಾಚಿ ಜೋಲಾಡುತ್ತಿರುವುದು. ನಡುನಡುವೆ ಸಣ್ಣಸಣ್ಣಗವಿಗಳಿರುವವು. ಅವುಗಳಲ್ಲಿ ಹಕ್ಕಿ ವಾಸಮಾಡುತ್ತಿರುವವು. ಅಲ್ಲಲ್ಲಿ ಇಕ್ಕೆಲದ ಬೆಟ್ಟಗಳೂ ಅವೆಷ್ಟು ಎತ್ತರವಾಗಿರುವುವೆಂದರೆ, ಬಹಳ ಹೊತ್ತಾದ ಬಳಿಕ ಸೂರ್ಯನ ಒಂದೆರಡು ಕಿರಣಗಳು ನದಿಯ ನೀರಿಗೆ ಬಂದು ಮುಟ್ಟುವವು. ದೊಡ್ಡದೊಡ್ಡ ಪೊದರುಗಳು ವಿವಿಧ ಆಕಾರದ ಬಳ್ಳಿಗಳನ್ನು ಹರಡಿಕೊಂಡು ಬೆಟ್ಟದ ಮೈಯಲ್ಲಿ ತೂಗಾಡುತ್ತಿರುವುವು. ಅಲ್ಲಲ್ಲಿ ನದಿಯ ಇಕ್ಕೆಲದಲ್ಲಿ ದಟ್ಟವಾದ ಕಾಡಿನ ತೋಳುಗಳು ಬಹಳ ದೂರದವರೆಗೂ ಚಾಚಿಕೊಂಡಿರುವುವು. ಒಂದು ಎತ್ತರವಾದ ಕೊಂಬೆಯಿಲ್ಲದ ಬಿಳಿಯ ಮರವೊಂದು ಬೆಟ್ಟದಮೇಲೆ ತೂಗಾಡುತ್ತಿರುವದು. ಕೆಳಗೆ ನದಿಯ ಚಂಚಲ ನೀರಿನಲ್ಲಿ ಅದರ ನೆರಳು ಕುಣಿಯುತ್ತಿರುವುದು. ದೊಡ್ಡದೊಡ್ಡ ಬಳ್ಳಿಗಳು ಅದನ್ನು ಮರೆಮಾಡಿ ನೇತಾಡುತ್ತಿರುವವು. ದಟ್ಟವಾದ ಹಸರು ಕಾಡಿನ ನಡುನಡುವೆ ಕೋಮಲ

ವಾದ ಶ್ಯಾಮಲವಾದ ಬಾಳೆಯ ತೋಟ. ಅಲ್ಲಲ್ಲಿ ಎರಡು ದಡಗಳನ್ನು ಸೀಳಿಕೊಂಡು ಸಣ್ಣಸಣ್ಣ ಜಲಪಾತಗಳು ಮಕ್ಕಳಂತೆ ವ್ಯಾಕುಲ ಕೈ, ಚಂಚಲ ಉದ್ವೇಗ ಮತ್ತು ಕಲಕಲ ಶುಭ್ರನಗೆಯೊಡನೆ ನದಿಯಲ್ಲಿ ಬಂದು ಬೀಳುವವು. ನದಿ ಸ್ವಲ್ಪದೂರ ಸನ್ನಿಭಾವದಿಂದ ಹೋಗಿ ಅಲ್ಲಲ್ಲಿ ಕಲ್ಲು ಸೋಪಾನಗಳನ್ನು ಮುಳುಗಿಸಿ ನೊರೆಮಾಡಿ ಕೆಳಮುಖವಾಗಿ ಹರಿದು ಹೋಗುವದು. ಆ ಬಿಡುವಿಲ್ಲದ ಜರ್ ಜರ್ ಶಬ್ದ ನಿಶ್ಶಬ್ದ ಕಲ್ಲುಗೋಡೆಯಲ್ಲಿ ಮಾರ್ನುಡಿಯುತ್ತಿರುವುದು.

ಈ ಛಾಯಾಶೀತಳ ಪ್ರವಾಹದ ಇಂಪಾದ ಜರಜರ ಶಬ್ದದಲ್ಲಿ ಜನರೆಯಿಲ್ಲದ ಬೆಟ್ಟದಡಿಯಲ್ಲಿ ಗೋವಿಂದಮಾಣಿಕ್ಯ ವಾಸಿಸತೊಡಗಿದ. ಹೃದಯವನ್ನು ವಿಶಾಲ ಮಾಡಿಕೊಂಡು ಹೃದಯದಲ್ಲಿ ಶಾಂತಿ ಸಂಗ್ರಹಿಸಲು ಆರಂಭಿಸಿದ. ನಿರ್ಜನ ಪ್ರಕೃತಿಯ ಸಂತೈಸುವಂಥ ಆಳವಾದ ಪ್ರೇಮ ನಾನಾ ದಿಕ್ಕುಗಳಿಂದ ಸಾವಿರಾರು ಜಲಪಾತಗಳಂತೆ ಅವನ ಹೃದಯದೊಳಕ್ಕೆ ಬೀಳತೊಡಗಿತು. ಅವನು ತನ್ನ ಹೃದಯದ ಗುಹೆಯಲ್ಲಿ ಪ್ರವೇಶಿಸಿ ಅಲ್ಲಿಂದ ಕ್ಷುದ್ರ ಅಭಿಮಾನವನ್ನೆಲ್ಲ ತೊಳೆದುಹಾಕತೊಡಗಿದ. ಬಾಗಿಲು ತೆರೆದು ತನ್ನೊಳಗೆ ಪರಿಶುದ್ಧವಾದ ಗಾಳಿಯನ್ನೂ ಬೆಳಕನ್ನೂ ಸಂಗ್ರಹಿಸತೊಡಗಿದ. ತನಗೆ ಸುಖ ಕೊಟ್ಟವರು ಯಾರು, ವ್ಯಥೆ ಕೊಟ್ಟವರು ಯಾರು, ತನ್ನ ಸ್ನೇಹಕ್ಕೆ ಪ್ರತಿ ಸ್ನೇಹ ಕೊಟ್ಟವರು ಯಾರು, ತನ್ನ ಬಳಿ ಒಂದು ಕೈಯಿಂದ ಉಪಕಾರ ಪಡೆದು ಮತ್ತೊಂದು ಕೈಯಿಂದ ಅಪಕಾರ ಮಾಡಿದವರು ಯಾರು, ತನ್ನಿಂದ ಗೌರವ ಹೊಂದಿ ತನ್ನನ್ನು ಅವಮಾನ ಪಡಿಸಿದವರು ಯಾರು ಎಂಬುದನ್ನೆಲ್ಲ ಅವನು ಮರೆತುಬಿಟ್ಟ. ಈ ಶೈಲಾಸನವಾಸಿನಿ ಪುರಾತನ ಪ್ರಕೃತಿಯ ಎಡೆಬಿಡದ ಕಾರ್ಯಶೀಲತೆ ಮತ್ತು ಚಿರನಿಶ್ಚಿಂತ ಪ್ರಶಾಂತ ನವೀನತೆಯನ್ನು ಕಂಡು ಅವನು ಸ್ವತಃ ಆ ರೀತಿ ಪ್ರಶಾಂತನೂ ಆದ. ಅವನು ಜಗತ್ತಿನ ಬಹುದೂರದವರೆಗೆ ತನ್ನ ಆಸೆಯಿಲ್ಲದ ಪ್ರೇಮವನ್ನು ಹರಡಿದ. ಎಲ್ಲ ಆಸೆಗಳನ್ನೂ ದೂರಮಾಡಿ ಕೈಮುಗಿದುಕೊಂಡು ಹೇಳಿದ, " ಓ, ದೇವ—ಪತನೋನ್ಮುಖ ಸಂಪತ್ತಿನ ಶಿಖರದಿಂದ ನಿನ್ನ ಮಡಿಲಿಗೆತ್ತಿಕೊಂಡು ನನ್ನ ಈ ಪಯಣವನ್ನು ಕಾಯ್ದೆ. ಸಾಯುವುದರಲ್ಲಿದ್ದೆ, ನಾನು ಬದುಕಿದೆ. ರಾಜನಾಗಿದ್ದಾಗ ನಾನು ನನ್ನ

ಹಿರಿಮೆ ಅರಿತಿರಲಿಲ್ಲ. ಇಂದು ಇಡೀ ಜಗತ್ತಿನಲ್ಲಿ ನನ್ನ ಮಹತ್ವವನ್ನು ಅನುಭವಿಸಿರುವೆ." ಕಡೆಗೆ ಎರಡು ಕಣ್ಣುಗಳಿಂದಲೂ ನೀರು ಸುರಿಯಲು ಮೊದಲಾಯಿತು. "ಒಡೆಯನೆ ನೀನು ನನ್ನ ಪ್ರೀತಿಯ ಧ್ರುವನನ್ನು ಕಸಿದುಕೊಂಡೆ. ಆ ನೋವು ಇನ್ನೂ ಸಂಪೂರ್ಣವಾಗಿ ಹೋಗಿಲ್ಲ. ನೀನು ಒಳ್ಳೆಯದನ್ನು ಮಾಡಿರುವೆಯೆಂದು ಈಗ ನನಗೆ ಅರಿವಾಗುವದು. ನಾನು ಆ ಬಾಲಕನ ವಿಷಯದಲ್ಲಿ ಸ್ವಾರ್ಥಪರ ಮಮತೆಯಿಂದ ನನ್ನೆಲ್ಲ ಕರ್ತವ್ಯ ವನ್ನೂ ನನ್ನ ಬಾಳುವೆಯನ್ನೂ ವಿಸರ್ಜಿಸಿದ್ದೆ. ನೀನು ನನ್ನನ್ನು ವಿಪತ್ತಿ ನಿಂದ ರಕ್ಷಿಸಿದೆ. ನಾನು ಧ್ರುವ ನನ್ನ ಸಮಸ್ತ ಪುಣ್ಯದ ಉಪಹಾರ ಎಂದು ಎಣಿಸಿದ್ದೆ. ನೀನು ಅವನನ್ನು ಕಸಿದುಕೊಂಡು ಪುಣ್ಯಕ್ಕೆ ಉಪಹಾರ ಪುಣ್ಯ ಎಂದು ಪಾಠ ಕಲಿಸಿದೆ. ಅದರಿಂದಲೆ ಇಂದು ಧ್ರುವನ ಪವಿತ್ರ ಅಗಲಿಕೆಯ ದುಃಖವನ್ನು ಸುಖವೆಂದು, ನಿನ್ನ ಪ್ರಸಾದವೆಂದು ಅನುಭವಿಸುತ್ತಿರುವೆ. ನಾನು ಸಂಬಳ ಪಡೆದು ಸೇವಕನಂತೆ ಕೆಲಸಮಾಡಲಾರೆ ಪ್ರಭು, ನಾನು ನಿನ್ನ ಪ್ರೇಮಕ್ಕೆ ವಶನಾಗಿ ನಿನ್ನ ಸೇವೆ ಮಾಡುವೆ" ಎಂದು ಹೇಳಿದ.

ಗೋವಿಂದಮಾಣಿಕ್ಯ ನೋಡಿದ—ಜನವಿಲ್ಲದೆಡೆ ಧ್ಯಾನಪರಾಯಣೆ ಪ್ರಕೃತಿ ಯಾವ ಸ್ನೇಹಧಾರೆಯನ್ನು ಶೇಖರಿಸಿಕೊಳ್ಳುವುದೊ ಅದನ್ನು ಜನವಿರುವೆಡೆ ನದಿಯರೂಪದಲ್ಲಿ ಪ್ರೇರೇಪಿಸುವದು—ಯಾರು ಅದನ್ನು ಸ್ವೀಕರಿಸುವರೊ ಅವರ ದಾಹ ಅಡಗುವದು. ಯಾರು ಅಂಗೀಕರಿಸರೋ ಅವರ ವಿಷಯದಲ್ಲಿ ಪ್ರಕೃತಿಗೆ ಯಾವ ಬೇಸರವೂ ಇಲ್ಲ. ನಾನೂ ನನ್ನ ಈ ಏಕಾಂತವಾಸದಲ್ಲಿ ಶೇಖರಿಸಿದ ಪ್ರೇಮವನ್ನು ಜನರಲ್ಲಿ ಹರಡುವುದಕ್ಕಾಗಿ ಹೊರಹೊರಡುವೆ. ಹೀಗೆಂದು ತನ್ನ ಬೆಟ್ಟದ ಕುಟೀರವನ್ನು ಬಿಟ್ಟು ಅವನು ಹೊರಹೊರಟ.

ಇದ್ದಕ್ಕಿದ್ದಂತೆ ರಾಜ್ಯವನ್ನು ಬಿಟ್ಟು ಅನ್ಯಮನಸ್ಕನಾಗುವುದು ಬರವಣಿಗೆ ಯಲ್ಲಿ ಎಷ್ಟು ಸಹಜವೋ ವಸ್ತುತಃ ಅಷ್ಟು ಸಹಜವಲ್ಲ. ರಾಜ ವೇಷ ತ್ಯಜಿಸಿ ಕಾವಿಯುಬಟ್ಟೆ ಉಡುವುದು ಅಷ್ಟು ಸುಲಭವಾದ ಸಂಗತಿಯಲ್ಲ. ರಾಜ್ಯ ಪರಿತ್ಯಾಗಮಾಡುವುದು ಸುಲಭವಾದರೂ ನಮ್ಮ ಜನ್ಮಾರಭ್ಯ ಬಂದ ಸಣ್ಣ ಸಣ್ಣ ಅಭ್ಯಾಸಗಳನ್ನು ನಾವು ಸುಲಭವಾಗಿ ಬಿಡಲಾರೆವು. ಅವು

ತಮ್ಮ ಅತಿಯಾದ ಹಸಿವು–ದಾಹಗಳೊಡನೆ ನಮ್ಮ ಮೂಳೆಮಾಂಸಗಳೊಡನೆ ಅಂಟಿಕೊಂಡಿರುವವು. ಅವಕ್ಕೆ ನಿಯಮಿತ ಆಹಾರ ಒದಗಿಸದಿದ್ದರೆ ಅವು ನಮ್ಮ ರಕ್ತ ಹೀರತೊಡಗುವವು. ಗೋವಿಂದಮಾಣಿಕ್ಯ ತನ್ನ ಏಕಾಂತ ಕುಟೀರದಲ್ಲಿ ಇದ್ದಷ್ಟು ದಿನವೂ ಕೇವಲ ಅವಿಚಲಿತ ಚಿತ್ತದಿಂದ ಸ್ಥಾಣುವಿನಂತೆ ವಾಸಮಾಡುತ್ತಿದ್ದನೆಂದು ಯಾರೂ ಭಾವಿಸಬಾರದು. ಅವನು ಹೆಜ್ಜೆ ಹೆಜ್ಜೆಗೂ ಸಾವಿರಾರು ಕೀಳು ಅಭ್ಯಾಸಗಳೊಡನೆ ಹೋರಾಡುತ್ತಿದ್ದ. ಯಾವುದಾದರೂ ಅಭಾವದಿಂದ ಅವನ ಮನಸ್ಸು ವ್ಯಾಕುಲಗೊಂಡಾಗ ಅವನು ಅದನ್ನು ಹಿಸುಕಿಹಾಕುವನು.

ಅವನು ತನ್ನ ಮನಸ್ಸಿನ ಸಹಸ್ರಮುಖಿಯಾದ ಹಸಿವಿಗೆ ಯಾವ ಆಹಾರವನ್ನೂ ಒದಗಿಸದೆ ವಿನಾಶಗೊಳಿಸುವನು. ಹೆಜ್ಜೆ ಹೆಜ್ಜೆಗೂ ನೂರಾರು ಅಭಾವಗಳನ್ನು ಜಯಿಸಿ ಅವನು ಸುಖಪಡೆಯುವನು. ಹಿಡಿಯಲಸಾಧ್ಯವಾದ ಕುದುರೆಯನ್ನು ಅತಿ ವೇಗವಾಗಿ ಓಡಿಸಿ ಶಾಂತಪಡಿಸುವಂತೆ ಅವನು ಅಭಾವದಿಂದ ವ್ಯಾಕುಲಗೊಂಡ ತನ್ನ ಅಶಾಂತ ಹೃದಯವನ್ನು ಅಭಾವದ ಮರಳುಗಾಡಿನಲ್ಲಿ ಒಂದೇ ಸಮನೆ ಓಡಿಸಿ ಶಾಂತಗೊಳಿಸುವನು. ಬಹಳ ದಿನಸಗಳವರೆಗೆ ಒಂದು ಕ್ಷಣಕಾಲವೂ ಅವನಿಗೆ ಬಿಡುವಿರಲಿಲ್ಲ.

ಬೆಟ್ಟಪ್ರದೇಶವನ್ನು ಬಿಟ್ಟು ಗೋವಿಂದಮಾಣಿಕ್ಯ ದಕ್ಷಿಣದ ಸಮುದ್ರದ ಕಡೆಗೆ ನಡೆಯತೊಡಗಿದ. ಸಮಸ್ತ ಆಶಾದ್ರವ್ಯಗಳನ್ನೂ ವಿಸರ್ಜಿಸಿ ಅವನು ಹೃದಯದಲ್ಲಿ ಆಶ್ಚರ್ಯಕರವಾದ ಸ್ವಾತಂತ್ರ್ಯವನ್ನು ಅನುಭವಿಸಲು ಆರಂಭಿಸಿದ. ಇನ್ನು ಯಾರೂ ಅವನನ್ನು ಹಿಡಿದಿಡಲಾರರು. ಮುಂದು ವರಿದುಹೋಗುವಾಗ ಯಾರೂ ಅವನನ್ನು ಅಡ್ಡಿಪಡಿಸದಾದರು.

ಪ್ರಕೃತಿಯನ್ನು ಅತ್ಯಂತ ಅದ್ಭುತದಂತೆ ನೋಡಿದ ಮತ್ತು ತನ್ನನ್ನೂ ಅವರೊಡನೆ ಒಂದೆಂದು ಭಾವಿಸಿಕೊಂಡ. ಅವನು ಮರದ ಎಲೆಗಳಲ್ಲಿ ಒಂದು ಹೊಸ ಶ್ಯಾಮಲವರ್ಣವನ್ನು ಸೂರ್ಯನಲ್ಲಿ ಒಂದು ಹೊಸ ಹೊಂಗಿರಣವನ್ನು ಪ್ರಕೃತಿಯಲ್ಲಿ ಒಂದು ಹೊಸ ಸೌಂದರ್ಯವನ್ನು ಕಾಣತೊಡಗಿದ. ಹಳ್ಳಿಗೆಹೋಗಿ ಮಾನವರ ಪ್ರತಿಯೊಂದು ಕೆಲಸದಲ್ಲೂ ಅವನು

ಒಂದು ಹೊಸ ಚೆಲುವನ್ನು ಕಾಣತೊಡಗಿದ. ಮಾನವರ ನಗೆಮಾತು, ಏಳು–ಬೀಳು, ನಡೆನುಡಿಗಳಲ್ಲಿ ಅವನು ಒಂದು ಅಪೂರ್ವ ನೃತ್ಯಗೀತದ ಮಾಧುರ್ಯವನ್ನು ಅನುಭವಿಸತೊಡಗಿದ.

ಕಣ್ಣಿಗೆ ಕಂಡವರನ್ನು ಬಳಿಗೆ ಕರೆದು ಮಾತನಾಡಿಸಿ ಸುಖಪಡೆ ಯುವನು—ಯಾರು ತನ್ನನ್ನು ತಿರಸ್ಕರಿಸುವರೊ ಅವರ ಬಳಿಯಿಂದಲೂ ಅವನ ಹೃದಯ ದೂರ ಹೋಗುತ್ತಿರಲಿಲ್ಲ. ಯಾವಾಗಲೂ ದುರ್ಬಲರಿಗೆ ಸಹಾಯಮಾಡುವನು ಮತ್ತು ದುಃಖಿಗಳನ್ನು ಸಂತೈಸಲು ಹಾ ತೊರೆಯು ವನು. "ನನ್ನ ಸ್ವಂತ ಬಲವನ್ನೆಲ್ಲ, ಸುಖವನ್ನೆಲ್ಲ ನಾನು ಇತರರಿಗೆ ಅರ್ಪಿ ಸಿರುವೆ. ಏಕೆಂದರೆ ನನಗೆ ನನ್ನ ಕೆಲಸ ಏನೇನೂ ಇಲ್ಲ" ಎಂದು ಅವನ ಮನಸ್ಸಿಗೆ ತೋರಿತು. ಜಗತ್ತಿನಲ್ಲಿ ಯಾವ ದೃಶ್ಯ ಯಾರ ಕಣ್ಣಿಗೂ ಬೀಳದೊ ಅದು ಹೊಸರೂಪ ತಾಳಿ ಅವನ ಕಣ್ಣಿಗೆ ಕಾಣಿಸತೊಡಗಿತು. ಇಬ್ಬರು ಹುಡುಗರು ದಾರಿಯಲ್ಲಿ ಕುಳಿತು ಆಡುವುದನ್ನು ಕಂಡಾಗ ಅವರು ಧೂಳಿನಿಂದ ತುಂಬಿರಲಿ, ದರಿದ್ರರಾಗಿರಲಿ, ಕೊಳಕಾಗಿರಲಿ ಅವನು ಅವರ ನಡುವೆ ಹೋಗಿ ದೂರ ದೂರಾಂತರ ವ್ಯಾಪಿ ಮಾನವಹೃದಯ ಸಮುದ್ರದ ಅನಂತವಾದ ಗಂಭೀರಪ್ರೇಮವನ್ನು ಕಾಣುವನು. ಮಗುವೊಂದನ್ನು ಮಡಿಲಲ್ಲಿಟ್ಟುಕೊಂಡಿರುವ ತಾಯಲ್ಲಿ ಅವನು ಭೂತ ಮತ್ತು ಭವಿಷ್ಯತ್ತಿನ ಎಲ್ಲ ಮಾನವ ಶಿಶುಗಳ ತಾಯಂದಿರನ್ನು ಕಾಣುವನು. ಇಬ್ಬರು ಆಪ್ತರನ್ನು ಒಂದೆಡೆ ಕಂಡಾಗ ಸಮಸ್ತ ಮಾನವ ಜಾತಿಯ ಆಪ್ತಪ್ರೇಮದಲ್ಲಿ ಸಹಾಯ ಕರು ಎಂದು ಅನುಭವಹೊಂದುವನು. ಹಿಂದೆ ಯಾವ ಜಗತ್ತನ್ನು ಆಗಾಗ ತಾಯಿಯಿಲ್ಲದುವೆಂದು ತಿಳಿಯುವನೋ ಅದೇ ಜಗತ್ತನ್ನು ಅತಿ ಮುಚ್ಚಿದ ನೋಟದೊಡನೆ ಚಿರಜಾಗ್ರತ ತಾಯಿಯ ಉಡಿಯಲ್ಲಿ ನೋಡುವನು. ಪ್ರಪಂಚದ ದುಃಖ ಶೋಕ ದಾರಿದ್ರ್ಯ ವಿವಾದ ವಿದ್ವೇಷಗಳನ್ನು ಕಂಡರೆ ಅವನ ಮನದಲ್ಲಿ ನಿರಾಸೆ ಹುಟ್ಟುತ್ತಿರಲಿಲ್ಲ. ಒಂದೇ ಒಂದು ಶುಭ ಸೂಚನೆ ಯನ್ನು ಕಂಡರೇನೆ ಅವನ ಆಸೆ ಅಶುಭವನ್ನು ಭೇದಿಸಿಕೊಂಡು ಸ್ವರ್ಗಕ್ಕೆದು ರಾಗಿ ಅರಳಿ ಮುಂದುವರಿಯುತಿತ್ತು. ನಮ್ಮೆಲ್ಲರ ಬಾಳುವೆಯಲ್ಲೂ ಒಂದಲ್ಲ ಒಂದು ದಿನ ಇಂಥದೊಂದು ಅಭೂತಪೂರ್ವ ನೂತನಪ್ರೇಮ ಮತ್ತು ಹೊಸ ಸ್ವಾತಂತ್ರ್ಯದ ಪ್ರಭಾವ ಹುಟ್ಟಿರಲಿಲ್ಲವೊ, ಇದ್ದಕ್ಕಿದ್ದಂತೆ

ಎಂದು ಈ ನಗು–ಅಳುವಿನಿಂದ ಕೂಡಿದ ಜಗತ್ತನ್ನು ಒಂದು ಸುಕೋಮಲ ನವಕುಮಾರನಂತೆ ಒಂದು ಅಪೂರ್ವ ಸೌಂದರ್ಯ ಪ್ರೇಮದ ಹಾಗೂ ಮಂಗಳದ ಮಡಿಲಲ್ಲಿ ಅರಳಿದಂತೆ ಕಾಣುವುದೋ—ಎಂದು ಯಾರೂ ನಮ್ಮನ್ನು ಉದ್ರೇಕಗೊಳಿಸಲಾರರೊ, ಯಾರೂ ನಮ್ಮಗಳನ್ನು ಯಾವ ಆವರಣದಲ್ಲೂ ತಡೆದಿಡಲಾರರೊ—ಯಾವ ದಿನ ಒಂದು ಅಪೂರ್ವ ಕೊಳಲು ನುಡಿಯುವದೊ—ಒಂದು ಅಪೂರ್ವ ವಸಂತ ಎಚ್ಚರಗೊಳ್ಳು ವುದೊ—ಎಂದು ಎಲ್ಲ ದುಃಖ–ದಾರಿದ್ರ್ಯವಿಪತ್ತುಗಳು ಮನಕ್ಕೆ ಬಾರವೋ ಹೊಸ ಸ್ವಾತಂತ್ರ್ಯದ ಆನಂದದಲ್ಲಿ ವಿಶಾಲವಾದ ಮನಸ್ಸಿನ ಗೋವಿಂದ ಮಾಣಿಕ್ಯನ ಜೀವನದಲ್ಲಿ ಆ ದಿನ ಬಂದೊದಗಿರುವುದು.

ದಕ್ಷಿಣ ಚಟ್ಟಗ್ರಾಮದ ರಾಮನಗರ ಇನ್ನೂ ಹತ್ತು ಹರಿದಾರಿ ದೂರ ದಲ್ಲಿದೆ. ಸಂಜೆಗೆ ಸ್ವಲ್ಪ ಮೊದಲು ಗೋವಿಂದಮಾಣಿಕ್ಯ ಆಲಂಬಾಲ್ ಎಂಬ ಹೆಸರಿನ ಕುಗ್ರಾಮಕ್ಕೆ ಹೋಗಿ ಸೇರಿದನು. ಆಗ ಹಳ್ಳಿಯ ಕೊನೆ ಯಲ್ಲಿದ್ದ ಒಂದು ಗುಡಿಸಲಿನಿಂದ ಕ್ಷೀಣಕಂಠದ ಹುಡುಗನ ಅಳುವಿನ ದನಿ ಕೇಳಿಸಿತು. ಕೂಡಲೆ ಗೋವಿಂದಮಾಣಿಕ್ಯನ ಮನಸ್ಸು ಅತಿ ಚಂಚಲ ವಾಯಿತು. ಆ ಕ್ಷಣ ಅವನು ಆ ಗುಡಿಸಲಿಗೆ ಹೋಗಿ ಸೇರಿದ, ನೋಡಿದ. ಎಳೆಹರೆಯದ ಗುಡಿಸುವ ಕೃಶನಾದ ಹುಡುಗನೊಬ್ಬನನ್ನು ಸೊಂಟಕ್ಕೆ ಎತ್ತಿ ಕೊಂಡು ಮನೆಯೊಳಗೆ ಅಡ್ಡಾಡುತ್ತಿದ್ದ. ಹುಡುಗ ಥರಥರನೆ ನಡಗುತ್ತಿದ್ದ. ನಿಂತು ನಿಂತು ಕ್ಷೀಣಸ್ವರದಲ್ಲಿ ಅಳುತ್ತಿದ್ದ. ಗುಡಿಸಲ ಒಡೆಯ ಅವನನ್ನು ಎದೆಗೊತ್ತಿಕೊಂಡು ನಿದ್ರೆಹೋಗಿಸಲು ಪ್ರಯತ್ನಿಸುತ್ತಿದ. ಸಂನ್ಯಾಸಿ ವೇಷದ ಗೋವಿಂದಮಾಣಿಕ್ಯನನ್ನು ಕಂಡು ಅವನು ಬೆರಗಾದ. ವ್ಯಾಕುಲ ಸ್ವರದಲ್ಲಿ "ಠಾಕೂರ್, ಇವನಿಗೆ ಆಶೀರ್ವದಿಸಿ" ಎಂದ. ಗೋವಿಂದ ಮಾಣಿಕ್ಯ ತನ್ನ ಕಂಬಳಿ ಹೊರತೆಗೆದು ನಡುಗುವ ಹುಡುಗನ ಸುತ್ತಲೂ ಸುತ್ತಿದ. ಹುಡುಗ ಒಮ್ಮೆ ಕೇವಲ ತನ್ನ ಕೃಶವಾದ ಮುಖವನ್ನೆತ್ತಿ ಗೋವಿಂದಮಾಣಿಕ್ಯನ ಕಡೆ ನೋಡಿದ. ಅವನ ಕಣ್ಣಿನ ಕೆಳಗೆ ಕಪ್ಪು ಹುಟ್ಟಿರುವುದು ; ಅವನ ಕೃಶವಾದ ಮುಖದಲ್ಲಿ ಎರಡು ಕಣ್ಣು ಹೊರತು ಬೇರೇನೂ ಇಲ್ಲ. ಒಮ್ಮೆ ಗೋವಿಂದಮಾಣಿಕ್ಯನನ್ನು ನೋಡುತ್ತಲೆ ಎರಡು ಬೆಳ್ಳನೆಯ ತೆಳ್ಳನೆಯ ತುಟಿ ಅಲುಗಿಸಿ ಕ್ಷೀಣ ಅಸ್ಪಷ್ಟ ಸದ್ದುಮಾಡಿದ.

ಪುನಃ ಹಾಗೆಯೇ ತನ್ನ ತಂದೆಯ ಹೆಗಲಮೇಲೆ ಮುಖ ಇಟ್ಟು ತೆಪ್ಪನೆ ಮಲಗಿಕೊಂಡ. ಅವನ ತಂದೆ ಅವನನ್ನು ಕಂಬಳಿಯ ಸಮೇತ ನೆಲದ ಮೇಲೆ ಮಲಗಿಸಿ ರಾಜನಿಗೆ ನಮಸ್ಕಾರಮಾಡಿದ. ರಾಜನ ಪಾದಧೂಳಿ ಯನ್ನು ಹುಡುಗನ ಮೈಗೆ ಸವರಿದ. ರಾಜ ಹುಡುಗನನ್ನು ಎತ್ತಿಕೊಂಡು "ಹುಡುಗನ ತಂದೆಯ ಹೆಸರೇನು?" ಎಂದು ಪ್ರಶ್ನಿಸಿದ. ಗುಡಿಸಲ ಒಡೆಯ ಹೇಳಿದ—"ನಾನೇ ಇವನ ತಂದೆ. ನನ್ನ ಹೆಸರು ಯಾದವ. ಭಗವಂತ ಒಂದೊಂದಾಗಿ ನನ್ನೆಲ್ಲ ಮಕ್ಕಳನ್ನು ಕಿತ್ತುಕೊಂಡ. ಇವ ನೊಬ್ಬನೆ ಈಗ ಉಳಿದಿರುವನು" ಇಷ್ಟು ಹೇಳಿ ಆಳವಾದ ನಿಟ್ಟುಸಿರು ಬಿಟ್ಟ. ರಾಜ ಗುಡಿಸಲ ಒಡೆಯನಿಗೆ—"ಇಂದು ರಾತ್ರಿ ನಾನು ನಿನ್ನ ಅತಿಥಿ. ನಾನು ಏನನ್ನೂ ತಿನ್ನುವುದಿಲ್ಲ" ಎಂದ. ಹೀಗೆಂದು ರಾತ್ರಿ ಅಲ್ಲಿಯೇ ತಂಗಿದ. ಅನುಚರರು ಹಣವಂತ ಕಾಯಸ್ಥನೊಬ್ಬನ ಮನೆ ಯಲ್ಲಿ ಆತಿಥ್ಯ ಸ್ವೀಕರಿಸಿದರು. ಕ್ರಮಕ್ರಮವಾಗಿ ಸಂಜೆ ಆಗುತ್ತಬಂದಿತು. ಸಮೀಪದಲ್ಲೇ ಒಂದು ಅಂತರಗಂಗೆ ತುಂಬಿದ ಕೊಳ ಇತ್ತು. ಅದರ ಮೇಲಿಂದ ಹಬೆ ಏಳಲು ತೊಡಗಿತು. ದನದ ಕೊಟ್ಟಿಗೆಯಲ್ಲಿ ಎಂಜಲು ಕಡ್ಡಿ ಮತ್ತು ತರಗಿನ ಉರಿಯ ಅತಿಯಾದ ಹೊಗೆ ಆಕಾಶಕ್ಕೆ ಏರಲಾರದೆ ಸುಳಿಸುಳಿಯಾಗಿ ಎದುರಿಗಿದ್ದ ವಿಶಾಲವಾದ ನೀರು ನೆಲವನ್ನು ಮರೆ ಮಾಡಿತು. ಕಾಡುಮರಗಳ ಬೇಲಿಯಿಂದ ಕರ್ಕಶ ಸ್ವರದಲ್ಲಿ ಜೀರುಂಡೆ ಕೂಗತೊಡಗಿತು. ಅಷ್ಟಾಗಿ ಗಾಳಿ ಬೀಸುತ್ತಿರಲಿಲ್ಲ. ಮರದ ಎಲೆಗಳೂ ಅಲುಗುತ್ತಿರಲಿಲ್ಲ. ಆಚೆಯ ದಡದಲ್ಲಿ ದಟ್ಟವಾದ ಬಿದಿರು ಮೆಳೆಯ ನಡು ವಣಿಂದ ಹಕ್ಕಿಯೊಂದು ಟಿ. ಟಿ. ಎಂದು ಕೂಗುತ್ತಿತ್ತು. ಮಸಕು ಬೆಳಕಿ ನಲ್ಲಿ ಗೋವಿಂದಮಾಣಿಕ್ಯ ಆ ರೋಗಿಷ್ಠ ಹುಡುಗ ಬಣ್ಣಗೆಟ್ಟ ಬಡಕಲು ಮುಖ ನೋಡುತ್ತಿದ್ದ. ಅವನು ಅವನಿಗೆ ಸರಿಯಾಗಿ ಕಂಬಳಿ ಸುತ್ತಿ ಅವನ ಹಾಸಿಗೆಯ ಮಗ್ಗುಲಲ್ಲಿ ಕುಳಿತು ಅವನಿಗೆ ನಾನಾ ರೀತಿಯ ಕತೆ ಹೇಳ ತೊಡಗಿದ. ಹುಡುಗ ಕತೆ ಕೇಳುತ್ತ ಕೇಳುತ್ತ ರೋಗದ ಕಷ್ಟವನ್ನು ಮರೆತು ನಿದ್ರೆಹೋದ. ರಾಜ ಮಗ್ಗುಲ ಕೊಠಡಿಗೆ ಬಂದು ಮಲಗಿ ಕೊಂಡ. ರಾತ್ರಿ ಅವನಿಗೆ ನಿದ್ರೆ ಹತ್ತಲಿಲ್ಲ. ಧ್ರುವನ ನೆನಪಾಗತೊಡ ಗಿತು. "ಧ್ರುವನನ್ನು ಕಳೆದುಕೊಂಡು ಎಲ್ಲ ಹುಡುಗರೂ ನನಗೆ ಧ್ರುವ ನಂತೆ ತೋರುವರು" ಎಂದು ರಾಜ ಅಂದುಕೊಂಡ.

ರಾತ್ರಿ ಸ್ವಲ್ಪ ಹೊತ್ತಾದ ಬಳಿಕ ಪಕ್ಕದ ಕೊಠಡಿಯಲ್ಲಿ ಹುಡುಗ ಎದ್ದುಕುಳಿತು ತನ್ನ ತಂದೆಯನ್ನು "ಅಪ್ಪಾ, ಅದೇನು ಸದ್ದು" ಎಂದು ಪ್ರಶ್ನಿಸಿದುದು ಕೇಳಿಸಿತು.

"ಕೊಳಲೂದುತ್ತಿದೆ" ಎಂದು ತಂದೆ ಹೇಳಿದ.

ಮಗ—ಕೊಳಲೂದುವುದೇಕೆ.

ತಂದೆ—"ನಾಳೆ ಪೂಜೆ ನನ್ನ ಚಿನ್ನ."

ಮಗ—"ನಾಳೆ ಪೂಜೆಯೆ? ಪೂಜೆಯ ದಿನ ನನಗೆ ಏನೂ ಕೊಡುವುದಿಲ್ಲವೆ?"

ತಂದೆ—"ಏನು ಕೊಡಲಿ, ಮಗು."

ಮಗ—"ನನಗೊಂದು ಕೆಂಪು ಶಾಲು ತಂದುಕೊಡುತ್ತೀಯಾ?"

ತಂದೆ—ನನಗೆ ಶಾಲು ಎಲ್ಲಿಂದ ಬರುತ್ತೆ. ನನ್ನಲ್ಲಿ ಏನೂ ಇಲ್ಲವಲ್ಲ ನನ್ನ ಮಾಣಿಕ್ಯ.

ಮಗ—ಅಪ್ಪ, ನಿನ್ನ ಹತ್ತಿರ ಏನೂ ಇಲ್ಲವೇನಪ್ಪ?

ತಂದೆ—ಏನೂ ಇಲ್ಲ ಮಗು, ನೀನೊಬ್ಬ ಇದ್ದೀಯೆ.

ನೊಂದ ಮನದ ತಂದೆಯ ಆಳವಾದ ನಿಟ್ಟುಸಿರು ಪಕ್ಕದ ಕೊಠಡಿಯಿಂದ ಕೇಳಿಸಿತು.

ಮಗ ಇನ್ನೇನೂ ಹೇಳಲಿಲ್ಲ. ತಂದೆಯನ್ನು ಅಪ್ಪಿಕೊಂಡು ಪುನಃ ನಿದ್ರೆಹೋದನೆಂದು ತೋರುವುದು.

ರಾತ್ರಿ ಮುಗಿದೂಮುಗಿಯದಿರುವಾಗಲೆ ಗೋವಿಂದಮಾಣಿಕ್ಯ ಮನೆಯ ಯಜಮಾನನ ಹತ್ತಿರ ಅಪ್ಪಣೆಯನ್ನು ತೆಗೆದುಕೊಳ್ಳದೆ ಕುದುರೆ ಏರಿ ರಾಮನಗರದ ಕಡೆಗೆ ಹೊರಟ. ಆಹಾರ ತೆಗೆದುಕೊಳ್ಳಲಿಲ್ಲ. ವಿಶ್ರಾಂತಿ ತೆಗೆದುಕೊಳ್ಳಲಿಲ್ಲ. ಕುದುರೆಯ ಸಮೇತ ಹೊಳೆ ದಾಟಿದ. ಬಿಸಿಲ ಬೇಗೆಯ ಹೊತ್ತಿಗೆ ರಾಮನಗರವನ್ನು ಸೇರಿದ. ಅಲ್ಲಿ ಹೆಚ್ಚು ತಡಮಾಡಲಿಲ್ಲ. ಪುನಃ ಸಂಜೆಗೆ ಮೊದಲು ಯಾದವನ ಗುಡಿಸಲಿಗೆ ಬಂದು ಸೇರಿದ. ಯಾದವನನ್ನು ಗುಟ್ಟಾಗಿ ಕರೆದು ತನ್ನ ಜೋಳಿಗೆಯಿಂದ ಒಂದು ಕೆಂಪು ಶಾಲನ್ನು ಹೊರಗೆ

ತೆಗೆದು ಯಾದವನ ಕೈಗೆ ಕೊಟ್ಟು "ಇಂದಿನ ಪೂಜೆಯ ದಿನದಲ್ಲಿ ಈ ಶಾಲನ್ನು ನಿನ್ನ ಮಗನಿಗೆ ಕೊಡು" ಎಂದ.

ಯಾದವ ಅಳುತ್ತ ಗೋವಿಂದಮಾಣಿಕ್ಯನ ಕಾಲು ಹಿಡಿದುಕೊಂಡು "ಸ್ವಾಮಿ, ನೀವು ತಂದಿರುವಿರಿ. ನೀವೆ ಕೊಡಿ" ಎಂದ.

"ಇಲ್ಲ, ನಾನು ಕೊಡುವುದಿಲ್ಲ. ನಾನು ಕೊಟ್ಟರೆ ಯಾವ ಫಲವೂ ಇಲ್ಲ. ನನ್ನ ಹೆಸರನ್ನೂ ಹೇಳಬೇಡ. ಕೇವಲ ನಿನ್ನ ಮಗನ ಮುಖದಲ್ಲಿ ಸಂತೋಷದ ನಗು ನೋಡಿ ನಾನು ಹೊರಟುಹೋಗುವೆ." ಎಂದು ರಾಜ ಹೇಳಿದ.

ನರಳುವ ಹುಡುಗನ ಅತಿಕೃಶವಾದ ಬಾಡಿದ ಮುಖ ಅರಳಿದ್ದನ್ನು ಕಂಡು ರಾಜ ಹೊರಟುಹೋದ. ರಾಜ ದುಃಖದಿಂದ "ನಾನು ಯಾವ ಕೆಲಸವನ್ನೂ ಮಾಡಲಾರೆ. ನಾನು ಸುಮ್ಮನೆ ಅಷ್ಟೊಂದು ವರ್ಷ ರಾಜ್ಯ ಆಳಿದೆ. ಏನನ್ನೂ ಕಲಿಯಲಿಲ್ಲ. ಏನು ಮಾಡಿದರೆ ಸಣ್ಣ ಹುಡುಗನೊಬ್ಬನ ರೋಗದಕಷ್ಟ ಸ್ವಲ್ಪ ಕಡಿಮೆಯಾದೀತೋ ಅದು ತಿಳಿಯದು. ನಾನು ಅಸಹಾಯಕ ಅಕರ್ಮಣ್ಯಭಾವದಿಂದ ದುಃಖಿಸಬಲ್ಲೆ. ಬಿಲ್ವನ ಠಾಕೂರ ಇದ್ದಿದ್ದರೆ ಇವರಿಗೆ ಏನಾದರೂ ಉಪಕಾರ ಮಾಡುತ್ತಿದ್ದರು. ನಾನು ಬಿಲ್ವನಠಾಕೂರರಂತೆ ಇದ್ದಿದ್ದರೆ...." ಎಂದು ತನ್ನಲ್ಲಿ ಅಂದು ಕೊಂಡ.

ಗೋವಿಂದಮಾಣಿಕ್ಯ—ಇನ್ನು ನಾನು ತಿರುಗಿ ತಿರುಗಿ ಅಲೆದಾಡುವುದಿಲ್ಲ—ಜನರಗುಂಪಿನಲ್ಲಿದ್ದು ಕೆಲಸ ಮಾಡಲು ಕಲಿಯುವೆ" ಎಂದು ಅಂದು ಕೊಂಡ.

ರಾಮ್‌ನಗರದ ದಕ್ಷಿಣದಲ್ಲಿ ರಾಜಾಕೂಲ್‌ನ ಹತ್ತಿರ ಮಗ್‌ಜನರ ದುರ್ಗವೊಂದಿತ್ತಲ್ಲ—ಅರಕಾನ್ ರಾಜನ ಅಪ್ಪಣೆ ಪಡೆದು ಅಲ್ಲಿ ವಾಸಿಸ ತೊಡಗಿದ.

ಹಳ್ಳಿಯಲ್ಲಿ ಹುಡುಗ ಹುಡುಗಿಯರೆಲ್ಲ ಗೋವಿಂದಮಾಣಿಕ್ಯನ ಹತ್ತಿರಕ್ಕೆ ಬಂದು ಸೇರಿದರು. ಗೋವಿಂದಮಾಣಿಕ್ಯ ಅವರಿಗಾಗಿ ದೊಡ್ಡದೊಂದು ಶಾಲೆ ಪ್ರಾರಂಭಿಸಿದ. ಅವನು ಅವರುಗಳಿಗೆ ಓದು ಬರಹ ಕಲಿಸುವನು. ಅವರುಗಳೊಡನೆ ಆಟವಾಡುವನು. ಅವರ ಮನೆಗಳಿಗೆ

ಹೋಗಿ ಅವರುಗಳೊಡನೆ ವಾಸಿಸುವನು. ಖಾಯಿಲೆ ಬಿದ್ದರೆ ಅವರುಗಳನ್ನು ನೋಡಲು ಹೋಗುವನು. ಮಕ್ಕಳು ಸಾಧಾರಣವಾಗಿ ನೆಟ್ಟಗೆ ಸ್ವರ್ಗ ದಿಂದಲೇ ಬಂದಿರುವವರು ಹಾಗೂ ಅವರೆಲ್ಲ ದೇವಶಿಶುಗಳು ಎನ್ನುವಂತಿಲ್ಲ. ಅವರುಗಳ ನಡುವೆ ಮಾನವ ಮತ್ತು ದಾನವ ಭಾವನೆಗೆ ಲೇಶಮಾತ್ರವೂ ಕೊರತೆಯಿಲ್ಲ. ಸ್ವಾರ್ಥಪರತೆ, ಕೋಪ, ಆಸೆ, ದ್ವೇಷ, ಹಿಂಸೆ ಅವರಲ್ಲಿ ಅತಿಶಕ್ತಿಯುತವಾಗಿರುವದು. ಅಷ್ಟೆ ಅಲ್ಲದೆ ಮನೆಯಲ್ಲಿ ತಂದೆ ತಾಯಿಗಳ ಹತ್ತಿರ ಎಲ್ಲ ಸಮಯದಲ್ಲಿ ಒಳ್ಳೆಯ ಶಿಕ್ಷಣ ದೊರೆಯುವದು ಎನ್ನುವಂತಿಲ್ಲ. ಇದರಿಂದ ಅರಕಾನರ ದುರ್ಗದಲ್ಲಿ ನಾಲ್ವತ್ತೊಂಬತ್ತು ಗಾಳಿಯೂ ಅರವತ್ತು ನಾಲ್ಕು ಭೂತವೂ ಒಟ್ಟಿಗೆ ವಾಸಿಸುತ್ತಿದ್ದುವಂತೆ. ಗೋವಿಂದಮಾಣಿಕ್ಯ ಈ ಎಲ್ಲ ಉಪಕರಣಗಳನ್ನಿಟ್ಟುಕೊಂಡು ದೃಢಮನಸ್ಕನಾಗಿ ಮನುಷ್ಯರನ್ನು ಸೃಷ್ಟಿಸಲು ಮೊದಲು ಮಾಡಿದನು. ಮಾನವನೊಬ್ಬನ ಬಾಳುವೆ ಅದೆಷ್ಟು ಮಹತ್ವಪೂರ್ಣ ಮತ್ತು ಅದೆಷ್ಟು ಎಚ್ಚರಿಕೆಯಿಂದ ಸಾಕಿ ಸಲಹಬೇಕಾದುದು ಎನ್ನುವ ವಿಷಯ ಗೋವಿಂದಮಾಣಿಕ್ಯನ ಹೃದಯದಲ್ಲಿ ಸದಾಎಚ್ಚೆತ್ತಿರು ವದು. ಅವನ ಸುತ್ತಲಿನ ಅನಂತ ಫಲ ಪರಿಪೂರ್ಣ ಮನುಷ್ಯ ಜನ್ಮ ಸಾರ್ಥಕವಾಯಿತು. ಇದನ್ನು ಕಂಡು ಮತ್ತು ಸ್ವಪ್ರಯತ್ನದಿಂದ ಇದನ್ನು ಸಾಧಿಸಲು ಗೋವಿಂದಮಾಣಿಕ್ಯ ತನ್ನ ಅಸಂಪೂರ್ಣ ಜೀವನವನ್ನು ವಿಸರ್ಜಿಸಬಯಸಿದ. ಇದಕ್ಕಾಗಿ ಆತ ಎಲ್ಲ ಕಷ್ಟವನ್ನೂ ಎಲ್ಲಕಾಟವನ್ನೂ ಸಹಿಸಿಕೊಂಡ. ಕೇವಲ ಆಗಾಗ ಒಮ್ಮೊಮ್ಮೆ ನಿರಾಶನಾಗಿ ದುಃಖಿಸುವನು. ನನ್ನ ಕೆಲಸವನ್ನು ನಾನು ಕೌಶಲ್ಯದಿಂದ ಮುಗಿಸಲಾರೆ. ಬಿಲ್ವನ ಇದ್ದಿದ್ದರೆ ಚೆನ್ನಾಗಿತ್ತು" ಎಂದು ಅಂದುಕೊಳ್ಳುತ್ತಿದ್ದ.

ಈ ರೀತಿ ಗೋವಿಂದಮಾಣಿಕ್ಯ ಒಂದು ನೂರು ಧ್ರುವನನ್ನು ಪಡೆದು ದಿನ ಕಳೆಯತೊಡಗಿದ.

## ೪೩

(ಸ್ಟ್ಯುಯರ್ಟ್‌ರು ಬರೆದಿರುವ ವಂಗಚರಿತ್ರೆಯಿಂದ ಈ ಅಧ್ಯಾಯ ವನ್ನು ಸಂಗ್ರಹಿಸಿದೆಯೆಂದು ಮೂಲದಲ್ಲಿ ಬರೆದಿದೆ.)

ಇತ್ತ ಶಾಸೂಜ ತನ್ನ ಸೋದರ ಔರಂಗಜೇಬನ ಸೈನ್ಯದಿಂದ ಪೆಟ್ಟು ತಿಂದು ಓಡಿಹೋಗುತ್ತಿರುವನು. ಅಲಹಾಬಾದಿನ ಹತ್ತಿರ ಯುದ್ಧ ಕ್ಷೇತ್ರ

ದಲ್ಲಿ ಅವನಿಗೆ ಸೋಲಾಯಿತು. ಎದುರಾಳಿಗಳು ಬಲಿಷ್ಠರು, ಮತ್ತು ಈ ಸಮಯದಲ್ಲಿ ಸೂಜನು ತನ್ನವರನ್ನೂ ನಂಬಲು ಸಾಧ್ಯವಿಲ್ಲದವನಾಗಿದ್ದ. ಅವನ ಅವಮಾನದಿಂದಲೂ ಹೆದರಿಕೆಯಿಂದಲೂ ವೇಷ ಮರೆಸಿಕೊಂಡು ಸಾಮಾನ್ಯ ಮನುಷ್ಯನಂತೆ ಒಬ್ಬಂಟಿಗನಾಗಿ ಓಡಿಹೋಗತೊಡಗಿದ. ಎಲ್ಲಿ ಹೋದರೂ ಅವನ ಹಿಂದೆಯೇ ಶತ್ರು ಸೈನ್ಯದ ಧೂಳಿನ ಧ್ವಜ ಮತ್ತು ಕುದುರೆಗಳ ಗೊರಸಿನ ಧ್ವನಿ ಅವನನ್ನು ಹಿಂಬಾಲಿಸುತ್ತಿತ್ತು. ಕೊನೆಗೆ ಪಾಟ್ನಾ ತಲಪಿ ಅವನು ಮತ್ತು ನವಾಬನ ವೇಷದಲ್ಲಿ ತನ್ನ ಪರಿವಾರ . ಪರಿ ಜನರ ಬಳಿ ತಾನು ಬಂದಿರುವ ಸುದ್ದಿ ತಿಳಿಸಿದನು. ಆತ ಪಾಟ್ನಾಕ್ಕೆ ತಲುಪಿದ ಕೆಲವು ದಿನಗಳಲ್ಲೇ ಔರಂಗಜೇಬನ ಮಗ ಕುಮಾರ ಮಹಮ್ಮದ ಸೇನೆಯೊಡನೆ ಪಾಟ್ನಾನಗರದ ಬಾಗಿಲಿಗೆ ಬಂದು ತಲುಪಿದನು. ಸೂಜಾ ಪಾಟ್ನಾ ಬಿಟ್ಟು ಮಾಂಘೀರ್‌ಗೆ ಓಡಿಹೋದನು.

ಮಾಂಘೀರಿನಲ್ಲಿ ಅವನ ಚದುರಿಹೋಗಿದ್ದ ಸೈನ್ಯ ಅಷ್ಟಿಷ್ಟು ಅವನಲ್ಲಿಗೆ ಬಂದು ಸೇರಿತು. ಹಾಗೂ ಅಲ್ಲಿ ಅವನು ಹೊಸ ಸೈನ್ಯವನ್ನು ಸಂಗ್ರಹಿಸಿದ. ತೇರಿಯಾಗಡಿ ಮತ್ತು ಶಿಕಲಿಗಲಿಯ ದುರ್ಗಗಳನ್ನು ದುರಸ್ತುಮಾಡಿ ನದೀ ತೀರದಲ್ಲಿ ಬೆಟ್ಟದಮೇಲೆ ಗೋಡೆ ಕಟ್ಟಿಸಿ ಅವನು ನೆಮ್ಮದಿಯಿಂದ ನೆಲೆ ಗೊಂಡ.

ಇತ್ತ ಔರಂಗಜೇಬ ತನ್ನ ದಕ್ಷನಾದ ಸೇನಾಪತಿ ಮೀರ್ ಜುಮುಲ ನನ್ನು ಕುಮಾರ ಮಹಮ್ಮದನ ಸಹಾಯಕ್ಕೆ ಕಳುಹಿಸಿಕೊಟ್ಟ. ಕುಮಾರ ಮಹಮ್ಮದ ಬಹಿರಂಗವಾಗಿ ಬಂದು ಮಾಂಘೀರ್ ದುರ್ಗದ ಸಮೀಪದಲ್ಲಿ ಶಿಬಿರ ಸ್ಥಾಪಿಸಿದ. ಮೀರ್ ಜುಮುಲ ಬೇರೆ ಗುಪ್ತಮಾರ್ಗದಿಂದ ಮಾಂಘೀ ರಿನ ಕಡೆ ಹೊರಟ. ಸೂಜ ಕುಮಾರ ಮಹಮ್ಮದನೊಡನೆ ಸಣ್ಣ ಪುಟ್ಟ ಕದನ ನಡೆಸುತ್ತಿರುವಾಗ್ಗೆ ಇದ್ದಕ್ಕಿದ್ದಂತೆ ಮೀರ ಜುಮುಲ ದೊಡ್ಡ ಸೈನ್ಯ ದೊಡನೆ ವಸಂತಪುರಕ್ಕೆ ಬಂದಿರುವನೆಂದು ಸುದ್ದಿ ತಿಳಿಯಿತು. ಸೂಜ ಹೆದರಿಕೆಯಿಂದ ಆ ಕ್ಷಣ ತನ್ನ ಸೈನ್ಯವನ್ನೆಲ್ಲ ಕರೆದುಕೊಂಡು ಮಾಂಘೀರ್ ಬಿಟ್ಟು ರಾಜಮಹಲಿಗೆ ಓಡಿಹೋದ. ಅಲ್ಲಿ ಅವನ ಕುಟುಂಬದವರೆಲ್ಲ ಇದ್ದರು. ಸಾಮ್ರಾಟನ ಸೈನ್ಯ ಸಾವಕಾಶಮಾಡದೆ ಅಲ್ಲಿಗೂ ಅವನನ್ನು ಹಿಂಬಾಲಿಸಿತು. ಆರುದಿನಗಳಕಾಲ ಸೂಜ ಸಾಧ್ಯವಾದಷ್ಟು ಯುದ್ಧ

ಮಾಡಿ ಎದುರಾಳಿಗಳನ್ನು ಮುಂದೆ ಬರಗೊಡಲಿಲ್ಲ. ಆದರೆ ಇನ್ನು ಸಾಧ್ಯವಿಲ್ಲವೆಂದು ಅರಿವಾದಾಗ ಹಣಕಾಸನ್ನೆಲ್ಲ ಎತ್ತಿಕೊಂಡು ಪರಿವಾರ ಸಹಿತನಾಗಿ ಹೊಳೆದಾಟಿ ತೊಂಡಕ್ಕೆ ಹೋಗಿ ಅಲ್ಲಿನ ದುರ್ಗವನ್ನು ಸಂಪಡಿಸತೊಡಗಿದ.

ಅಷ್ಟರಲ್ಲಿ ಜಡಿಮಳೆ ಹಿಡಿಯಿತು. ನದಿ ಅತಿಯಾಗಿ ತುಂಬಿ ದಾರಿ ದುರ್ಗಮವಾಯಿತು. ಸಾಮ್ರಾಟನ ಸೈನಿಕರು ಮುಂದುವರಿದು ಬರಲು ಸಾಧ್ಯವಾಗಲಿಲ್ಲ.

ಈ ಯುದ್ಧಕ್ಕೆ ಮುಂಚೆ ಕುಮಾರ ಮಹಮ್ಮದನೊಡನೆ ಸೂಜನ ಮಗಳ ಮದುವೆಯ ಮಾತು ಕತೆಯೆಲ್ಲ ನಿಶ್ಚಯವಾಗಿತ್ತು. ಆದರೆ ಯುದ್ಧದ ಕಾಟದಿಂದ ಆ ಮಾತು ಎರಡು ಕಡೆಯೂ ಮರೆತು ಹೋಗಿತ್ತು.

ಮಳೆಯ ಸಲುವಾಗಿ ಯುದ್ಧಕ್ಕೆ ಅಡ್ಡಿಯೊದಗಲು ಮಿಾರ್ ಜುಮುಲ ರಾಜಮಹಲಿಗೆ ಸ್ವಲ್ಪ ದೂರವಾಗಿ ತನ್ನ ಶಿಬಿರ ಹಾಕಿದ್ದ. ಆ ವೇಳೆಯಲ್ಲಿ ಸೂಜನ ಸೈನಿಕನೊಬ್ಬ ತೊಂಡದ ಶಿಬಿರದಿಂದ ಬಂದು ಗುಟ್ಟಾಗಿ ಕುಮಾರ ಮಹಮ್ಮದನ ಕೈಗೆ ಒಂದು ಕಾಗದವನ್ನು ಕೊಟ್ಟ. ಕುಮಾರ ಬಿಚ್ಚಿ ನೋಡಿದ. ಸೂಜನ ಮಗಳು ಬರೆದಿದ್ದಳು. “ಕುಮಾರ, ನನ್ನ ಅದೃಷ್ಟದಲ್ಲಿದ್ದುದು ಇದೇ ಏನು. ಯಾರನ್ನು ಮನದಲ್ಲಿ ಗಂಡನೆಂದು ವರಿಸಿ ನನ್ನ ಹೃದಯವನ್ನೆಲ್ಲ ಅರ್ಪಿಸಿರುವೆನೊ, ಯಾರು ಉಂಗುರ ಬದಲಾಯಿಸಿ ನನ್ನನ್ನು ಮದುವೆಯಾಗುವರೆಂದು ತಿಳಿದಿದ್ದೆನೋ ಅವರು ಇಂದು ಕಠಿಣವಾದ ಕತ್ತಿ ಹಿಡಿದು ನಮ್ಮ ತಂದೆಯ ಜೀವ ತೆಗೆಯಲು ಬಂದಿರುವರು. ನಾನು ಕಾಣಬೇಕಾಗಿದ್ದುದು ಇದೆಯೇನು. ಕುಮಾರ ಇದು ನನ್ನ ವಿವಾಹ ವೈಭವವೆ? ಅದಕ್ಕಾಗಿಯೆ ಇಷ್ಟೊಂದು ಸಡಗರ. ಅದಕ್ಕಾಗಿಯೇನು ನಮ್ಮ ರಾಜಮಹಲ್ ಇಂದು ರಕ್ತವರ್ಣವಾಗಿದೆ. ಕುಮಾರ ದೆಹಲಿಯಿಂದ ಕಬ್ಬಿಣದ ಸಂಕೋಲೆ ಹಿಡಿದು ಬಂದಿರುವುದು ಅದಕ್ಕಾಗಿಯೆ. ಇದು ಪ್ರೇಮದ ಸಂಕೋಲೆಯೆ?”

ಈ ಕಾಗದ ಓದಿದ ಕೂಡಲೆ ಭಯಂಕರ ಭೂಕಂಪದಿಂದಲೋ ಎನ್ನುವಂತೆ ಕುಮಾರನ ಎದೆಯೊಡೆಯಿತು. ಅವನು ಒಂದು ಘಳಿಗೆಯೂ

ಸಾವಕಾಶಮಾಡಲಾರದಾದ. ಕೂಡಲೆ ಸಾಮ್ರಾಟನ ಆಸೆ, ಸಾಮ್ರಾಟನ ಅನುಗ್ರಹ, ಎಲ್ಲವನ್ನೂ ತೃಣವಾಗಿ ಭಾವಿಸಿದ. ಪ್ರಥಮ ಯೌವನದ ಉರಿಬೆಂಕಿಯಲ್ಲಿ ಅವನು ಲಾಭ ನಷ್ಟದ ವಿವೇಚನೆಯನ್ನೆಲ್ಲ ವಿಸರ್ಜಿಸಿದ. ತನ್ನ ತಂದೆಯ ಕೆಲಸವೆಲ್ಲ ಅವನಿಗೆ ಅತ್ಯಂತ ಅನ್ಯಾಯವಾಗಿಯೂ ಕ್ರೂರವಾಗಿಯೂ ಕಾಣಿಸಿತು. ತಂದೆಯ ಅನ್ಯಾಯರೂಪವ ಕಠಿಣನೀತಿಗೆ ವಿರುದ್ಧವಾಗಿ ಇದಕ್ಕೆ ಮುಂಚೆ ತಂದೆಯ ಎದುರಿನಲ್ಲಿ ಅವನು ತನ್ನ ಅಭಿಪ್ರಾಯವನ್ನು ಸ್ಪಷ್ಟಪಡಿಸಿದ್ದ. ಒಮ್ಮೊಮ್ಮೆ ಸಮ್ರಾಟನ ಕೋಪಕ್ಕೂ ಪಾತ್ರನಾಗಿದ್ದ. ಇಂದು ಅವನು ತನ್ನ ಸೇನಾಧ್ಯಕ್ಷರಲ್ಲಿ ಮುಖ್ಯರಾದ ಕೆಲವರನ್ನು ಕರೆದು ಸಮ್ರಾಟನ ಕ್ರೌರ್ಯ, ಮೋಸ ಮತ್ತು ಅತ್ಯಾಚಾರಗಳನ್ನು ಕುರಿತು ಕೋಪತೋರಿ "ನಾನು ತೊಂಡದಲ್ಲಿ ನಮ್ಮ ದೊಡ್ಡಪ್ಪನಿಗೆ ಸಹಾಯಮಾಡಲುಹೋಗುವೆ. ನಿಮ್ಮಲ್ಲಿ ಯಾರು ನನ್ನನ್ನು ಪ್ರೀತಿಸುವಿರೋ ಅವರು ನನ್ನನ್ನು ಹಿಂಬಾಲಿಸಿರಿ" ಎಂದು ಹೇಳಿದ. ಅವರುಗಳು ದೊಡ್ಡ ಸಲಾಂಹಾಕಿ ಆಕ್ಷಣ "ರಾಜಕುಮಾರ ಹೇಳುವುದೆಲ್ಲ ಸರಿ, ನಾಳೆಯೆ ಅರ್ಧ ಸೈನ್ಯ ತೊಂಡದ ಶಿಬಿರದಲ್ಲಿ ರಾಜಕುಮಾರನೊಡನೆ ಸೇರಿಯೇ ಸೇರುವುದು" ಎಂದರು. ಮಹಮ್ಮದ ಅಂದೇ ನದಿ ದಾಟಿ ಸೂಜನ ಶಿಬಿರಕ್ಕೆ ಹೋಗಿ ಸೇರಿದ.

ತೊಂಡದಲ್ಲಿ ಸಡಗರವೆದ್ದಿತು. ಯುದ್ಧ ವಿಗ್ರಹದ ಸುದ್ದಿಯನ್ನೇ ಎಲ್ಲರೂ ಸಂಪೂರ್ಣವಾಗಿ ಮರೆತರು. ಇದುವರೆಗೆ ಕೇವಲ ಗಂಡಸರು ಮಾತ್ರವೆ ಬಿಡುವಿಲ್ಲದವರಾಗಿದ್ದರು. ಈ ಸೂಜನ ಪರಿವಾರದಲ್ಲಿ ಹೆಸ್ಮಕ್ಕಳಿಗೂ ಕೆಲಸಕ್ಕೆ ಕೊನೆಯಿಲ್ಲದಾಯಿತು. ಸೂಜ ಅತ್ಯಂತ ಪ್ರೀತ್ಯಾನಂದಗಳೊಡನೆ ಮಹಮ್ಮದನನ್ನು ಬರಮಾಡಿಕೊಂಡ. ಎಡೆಬಿಡದ ರಕ್ತಪಾತದ ಅನಂತರ ರಕ್ತಸಂಬಂಧದ ಎಳೆತ ಅತಿ ವೇಗವಾಯಿತು. ನೃತ್ಯಗೀತವಾದ್ಯಗಳೊಡನೆ ವಿವಾಹ ನೆರವೇರಿತು. ನೃತ್ಯಗೀತ ಕೊನೆಗೊಂಡಿತೊ ಇಲ್ಲವೊ ಸಮ್ರಾಟನ ಸೈನ್ಯ ಹತ್ತಿರ ಬಂದಿತೆಂದು ಸುದ್ದಿಬಂದಿತು.

ಮಹಮ್ಮದ ಸೂಜನ ಶಿಬಿರಕ್ಕೆ ಹೋದ ದಿನವೇ ಸೈನಿಕರು ಮಿರ್ ಜುಮುಲನ ಹತ್ತಿರ ದೂರು ಹೇಳಿದರು. ಒಬ್ಬ ಸೈನಿಕನೂ ಮಹಮ್ಮದನಿಗೆ ಸಹಾಯಕನಾಗಿ ಬರಲಿಲ್ಲ. ಮಹಮ್ಮದ ಸ್ವೇಚ್ಛೆಯಿಂದ ವಿಪತ್ತಿನೊಳಕ್ಕೆ

ಕಾಲಿಕ್ಕುತಿರುವನು. ಅಲ್ಲಿ ತಾವು ಸೇರುವುದು ಹುಚ್ಚುತನ ಎಂದು ಅವರು ಭಾವಿಸಿಕೊಂಡರು.

ಸಾಮ್ರಾಟನ ಸೈನ್ಯ ಹೆಚ್ಚಿನ ಸಂಖ್ಯೆಯಲ್ಲಿ ಯುದ್ಧ ಕ್ಷೇತ್ರದಲ್ಲಿ ಕುಮಾರ ಮಹಮ್ಮದನಿಗೆ ನೆರವಾಗುವದು ಎಂದು ಸೂಜನೂ ಮಹಮ್ಮದನೂ ನಂಬಿದ್ದರು. ಆ ಆಸೆಯಿಂದ ಮಹಮ್ಮದ ತನ್ನ ಧ್ವಜ ಹಾರಿಸುತ್ತ ಯುದ್ಧ ಕ್ಷೇತ್ರದಲ್ಲಿ ಕಾಲಿಟ್ಟ. ಸಾಮ್ರಾಟ ಸೈನ್ಯದ ದೊಡ್ಡ ಗುಂಪೊಂದು ಅವನ ಕಡೆಗೆ ಮುಂದುವರಿಯಿತು. ಮಹಮ್ಮದ ಸಂತೋಷದಿಂದ ಹಿಗ್ಗಿದ. ಹತ್ತಿರ ಬರುತ್ತಲೆ ಅವರು ಮಹಮ್ಮದನ ಸೈನಿಕರಮೇಲೆ ಗುಂಡು ಹಾರಿಸಿದರು. ಆಗ ಮಹಮ್ಮದನಿಗೆ ನಿಜಸ್ಥಿತಿ ಅರಿವಾಯಿತು. ಆದರೆ ಆಗ ಅವಕಾಶವಿರಲಿಲ್ಲ. ಸೈನಿಕರು ಓಡುವುದರಲ್ಲಿ ನಿರತರಾದರು. ಸೂಜನ ಹಿರಿಯ ಮಗ ಯುದ್ಧದಲ್ಲಿ ಸತ್ತುಬಿದ್ದ.

ಆ ರಾತ್ರಿಯೆ ನಿರ್ಭಾಗ್ಯ ಸೂಜನೂ ಅವನ ಅಳಿಯನೂ ಕುಟುಂಬ ಸಹಿತ ವೇಗವಾಗಿ ಹೋಗುವ ದೋಣಿಯಲ್ಲಿ ಡಾಕಾನಗರಕ್ಕೆ ಓಡಿ ಹೋದರು. ಮೀರ್ ಜುಮುಲ ಡಾಕಾದವರೆಗೆ ಸೂಜನ ಬೆನ್ನಟ್ಟುವದು ಅವಶ್ಯಕವೆಂದು ಭಾವಿಸಲಿಲ್ಲ. ಅವನ ಗೆದ್ದ ಪ್ರದೇಶವಲ್ಲಿ ಶಿಸ್ತಿನ ಆಡಳಿತ ನೆಲೆಗೊಳಿಸಲು ತೊಡಗಿದ.

ದುರದೃಷ್ಟದ ದಿನಗಳಲ್ಲಿ, ವಿಪತ್ತಿನ ಸಮಯದಲ್ಲಿ, ನೆಂಟರಿಷ್ಟರು ಒಬ್ಬೊಬ್ಬರಾಗಿ ಮುಖ ತಿರುಗಿಸಿಕೊಂಡಿದ್ದಾಗ ಮಹಮದ ಹಣ ಪ್ರಾಣ ಮಾನಗಳನ್ನು ಕಡೆಗಣಿಸಿ ಸೂಜನ ಪಕ್ಷವಹಿಸಿದ್ದುದರಿಂದ ಸೂಜನ ಮನ ಕರಗಿ ನೀರಾಯಿತು. ಇಂಥ ವೇಳೆಯಲ್ಲಿ ಢಾಕಾನಗರದಲ್ಲಿ ಔರಂಗಜೇಬನ ದೂತನೊಬ್ಬ ಓಲೆಕಾರ ಸಿಕ್ಕಿಬಿದ್ದ. ಅವನ ಕೈಯಲ್ಲಿದ್ದ ಕಾಗದ ಸೂಜನ ಕೈಸೇರಿತು. ಔರಂಗಜೇಬ ಮಹಮ್ಮದನಿಗೆ ಬರೆದಿದ್ದ—"ಪ್ರಿಯ ಪುತ್ರ ಮಹಮ್ಮದ, ನೀನು ನಿನ್ನ ಕರ್ತವ್ಯವನ್ನು ಕಡೆಗಣಿಸಿ ತಂದೆಗೆ ಎದುರಾಳಿಯಾಗಿರುವೆ. ನಿನ್ನ ಅಕಳಂಕ ಯಶಸ್ಸಿನಲ್ಲಿ ಕಳಂಕ ಕೂಡಿಸಿರುವೆ. ಹೆಂಗಸರ ಮೋಸದ ನಗೆಗೆ ಮರುಳಾಗಿ ನಿನ್ನ ಧರ್ಮವನ್ನು ಬಿಟ್ಟಿರುವೆ. ಮುಂದೆ ಸಮಸ್ತ ಮೊಗಲ ಸಾಮ್ರಾಜ್ಯದ ಆಡಳಿತದ ಹೊರೆ ಯಾರ ಕೈಯಲ್ಲೊ ಅವನು ಇಂದು ಹೆಂಗಸೊಬ್ಬಳ ದಾಸನಾಗಿರುವನು. ಈಗ ಏನೇ

ಆಗಲಿ. ದೇವರ ಹೆಸರಿನಲ್ಲಿ ಪ್ರತಿಜ್ಞೆಮಾಡಿ ಮುಹಮ್ಮದ ಪಶ್ಚಾತ್ತಾಪ ವ್ಯಕ್ತಪಡಿಸಿರುವಾಗ ಅವನನ್ನು ಕ್ಷಮಿಸಿರುವೆ. ಆದರೆ ಯಾವ ಕೆಲಸಕ್ಕಾಗಿ ಹೋಗಿರುವನೋ ಅದನ್ನು ನಿರ್ವಹಿಸಿಕೊಂಡು ಬಂದರೆ ಅವನು ನನ್ನ ಅನುಗ್ರಹಕ್ಕೆ ಪಾತ್ರನಾಗುವನು."

ಸೂಜ ಈ ಪತ್ರವನ್ನು ಓದಿ ಸಿಡಿಲು ಬಡಿದವನಂತೆ ಆದ. ತಾನು ಎಂದೂ ತಂದೆಯ ಬಳಿ ಪಶ್ಚಾತ್ತಾಪ ವ್ಯಕ್ತಪಡಿಸಿಲ್ಲ. ಇವೆಲ್ಲ ನನ್ನ ತಂದೆಯ ಕುಟಿಲತೆ ಎಂದು ಕುಮಾರ ಮುಹಮ್ಮದ ಒಂದೇ ಸಮನಾಗಿ ಹೇಳಿದ. ಆದರೆ ಸೂಜನ ಸಂದೇಹ ದೂರವಾಗಲಿಲ್ಲ. ಮೂರು ದಿನಗಳ ಕಾಲ ಸೂಜ ಯೋಚನೆ ಮಾಡಿದ. ಕಡೆಗೆ ನಾಲ್ಕನೆಯ ದಿನ "ಕುಮಾರ, ನಮ್ಮ ನಡುವೆ ನಂಬಿಕೆಯ ಬಂಧನ ಶಿಥಿಲವಾಗಿದೆ. ಆದರಿಂದಲೆ ನಾನು ಬೇಡಿಕೊಳ್ಳುವುದು. ನೀನು ನಿನ್ನ ಹೆಂಡತಿಯನ್ನು ಕರೆದುಕೊಂಡು ಹೊರಟು ಹೋಗು ಇಲ್ಲವಾದರೆ ನನ್ನಮನಸಿಗೆ ನೆಮ್ಮದಿಯಿರದು. ನನ್ನ ಬೊಕ್ಕಸದ ಬಾಗಿಲನ್ನು ತೆರೆದಿರುವೆ. ಮಾವನ ಉಡುಗೊರೆಯ ರೂಪದಲ್ಲಿ ಮನಸಿಗೆ ಬೇಕಾದಷ್ಟು ಹಣ ತೆಗೆದುಕೊಂಡು ಹೋಗು" ಎಂದು ಹೇಳಿದ.

ಮುಹಮ್ಮದ ಕಣ್ಣೀರು ಸುರಿಸಿ ಬೀಳ್ಕೊಂಡ. ಅವನ ಹೆಂಡತಿ ಅವನ ಸಂಗಡಲೆ ಹೋದಳು.

ಸೂಜ ಹೇಳಿದ—"ಇನ್ನು ಯುದ್ಧ ಮಾಡೆ. ಚಟ್ಟಗ್ರಾಮದ ರೇವಿನಿಂದ ಹಡಗು ಹತ್ತಿ ಮಕ್ಕಾವಿಗೆ ಹೋಗುವೆ" ಹೀಗೆಂದು ಢಾಕಾ ಬಿಟ್ಟು ವೇಷ ಮರೆಸಿಕೊಂಡು ಹೊರಟು ಹೋದ.

## ೪೪

ಯಾವ ದುರ್ಗದಲ್ಲಿ ಗೋವಿಂದಮಾಣಿಕ್ಯ ವಾಸಮಾಡುತ್ತಿದ್ದನೊ ಒಂದು ದಿನ ಮಧ್ಯಾಹ್ನ ಮಳೆಯಲ್ಲಿ ಅದೇ ದುರ್ಗದ ಹಾದಿಯಲ್ಲಿ ಫಕೀರನೊಬ್ಬ ಸಂಗಡ ಮೂವರು ಹುಡುಗರನ್ನೂ, ವಯಸ್ಕನಾದ ಹಚ್ಚಡದವನೊಬ್ಬನನ್ನೂ ಕರೆದುಕೊಂಡು ನಡೆದು ಬರುತ್ತಿದ್ದ. ಹುಡುಗರು ಅತಿಯಾಗಿ ದಣಿದವರಂತೆ ಕಾಣುತ್ತಿದ್ದರು. ಗಾಳಿ ವೇಗವಾಗಿ ಬೀಸುತಿತ್ತು. ಎಡೆಬಿಡದೆ ಮಳೆಯೂ ಸುರಿಯುತಿತ್ತು. ಎಲ್ಲರಿಗಿಂತ ಕಿರಿಯ ಹುಡುಗನ ವಯಸ್ಸು

ಹದಿನಾಲ್ಕಕ್ಕೆ ಮೀರಿರಲಿಲ್ಲ. ಅವನು ಚಳಿಗೆ ನಡುಗುತ್ತ ನಡುಗುತ್ತ ವ್ಯಾಕುಲ ಸ್ವರದಲ್ಲಿ—" ಅಪ್ಪಾ, ಇನ್ನು ಸಾಧ್ಯವಿಲ್ಲ " ಎಂದ. ಹೀಗೆ ಹೇಳಿ ದೈನ್ಯಭಾವದಿಂದ ಅಳತೊಡಗಿದ. ಫಕೀರ ಏನೂ ಹೇಳದೆ ಅವನನ್ನು ಎಳೆದು ಅಪ್ಪಿಕೊಂಡ.

ದೊಡ್ಡ ಹುಡುಗ ಚಿಕ್ಕವನನ್ನು ಹೀಯಾಳಿಸುತ್ತ " ದಾರಿಯಲ್ಲಿ ಹೀಗೆ ಅತ್ತರೆ ಏನು ಉಪಯೋಗ. ಸುಮ್ಮನಿರು. ಸುಮ್ಮನೆ ಅಪ್ಪನನ್ನು ಹಿಂಸಿಸಬೇಡ " ಎಂದ.

ನಡುಕಲು ಹುಡುಗ—" ಅಪ್ಪಾ, ನಾವು ಎಲ್ಲಿಗೆ ಹೋಗುತ್ತಿದೇವೆ." ಎಂದು ಫಕೀರನನ್ನು ಕೇಳಿದ.

ಫಕೀರ—" ಅದೋ ಕಾಣುವುದಲ್ಲ, ದುರ್ಗದ ಶಿಖರ. ಆ ದುರ್ಗಕ್ಕೆ ಹೋಗುತ್ತಿದೇವೆ " ಎಂದು ಹೇಳಿದ.

" ಅಪ್ಪ, ಅಲ್ಲಿ ಯಾರಿರುವರು ? "

" ಎಲ್ಲಿಯವನೋ ಒಬ್ಬ ರಾಜಸಂನ್ಯಾಸಿ ಅಲ್ಲಿ ವಾಸಮಾಡುತ್ತಿರುವನೆಂದು ಕೇಳಿದೆ."

" ರಾಜ ಸಂನ್ಯಾಸಿಯಾಗುವದು ಏಕೆ ಅಪ್ಪಾ ! "

ಫಕೀರನೆಂದ—" ಗೊತ್ತಿಲ್ಲ, ಮಗು. ಒಂದು ವೇಳೆ ಅವನ ಒಡಹುಟ್ಟಿದವ ಸೈನ್ಯ ತೆಗೆದುಕೊಂಡು ಅವನನ್ನು ಒಂದು ಹಳ್ಳಿಯ ನಾಯಿಯಂತೆ ಸೀಮೆಯಿಂದ ಸೀಮೆಗೆ ಅಟ್ಟಿರಬಹುದು. ರಾಜ್ಯ ಮತ್ತು ಸುಖಸಂಪತ್ತಿನಿಂದ ಅವನನ್ನು ಬೀದಿಗೆ ಓಡಿಸಿರಬಹುದು. ಈಗ ಕೇವಲ ಬಡತನದ ಕಗ್ಗತ್ತಲೆಯ ಕ್ಷುದ್ರ ಗವಿಯೂ ಸಂನ್ಯಾಸಿಯ ಕಾವಿಯ ಬಟ್ಟೆಯೂ ಜಗತ್ತಿನಲ್ಲಿ ಅವನು ಅಡಗಿಕೊಳ್ಳುವ ಏಕಮಾತ್ರ ಆಶ್ರಯವಾಗಿರಬಹುದು." ಹೀಗೆಂದು ಫಕೀರ ಬಲವಾಗಿ ತನ್ನ ತುಟಿ ಕಚ್ಚಿಕೊಂಡು ಹೃದಯದ ಉದ್ವೇಗವನ್ನು ಅಡಗಿಸಿಕೊಂಡ.

ದೊಡ್ಡ ಹುಡುಗ—" ಅಪ್ಪಾ, ಈ ಸಂನ್ಯಾಸಿ ಯಾವ ದೇಶದ ರಾಜನಾಗಿದ್ದ ? "

"ಅದು ಗೊತ್ತಿಲ್ಲ ಮಗು."

"ಅವನು ನಮಗೆ ಆಶ್ರಯ ಕೊಡದಿದ್ದರೆ?"

"ಆಗ ನಾವು ಮರದಡಿಯಲ್ಲಿ ಮಲಗೋಣ, ನಮಗೆ ಸ್ಥಳವಾದರೂ ಇನ್ನೆಲ್ಲಿ?"

ಸಂಜೆಗೆ ಸ್ವಲ್ಪ ಮುಂಚೆಯೆ ದುರ್ಗದಲ್ಲಿ ಸಂನ್ಯಾಸಿಯೂ ಫಕೀರನೂ ಪರಸ್ಪರ ಸಂಧಿಸಿದರು. ಇಬ್ಬರೂ ಒಬ್ಬರು ಮತ್ತೊಬ್ಬರನ್ನು ನೋಡಿ ಆಶ್ಚರ್ಯ ಪಟ್ಟರು. ಗೋವಿಂದಮಾಣಿಕ್ಯ ನಿಟ್ಟಿಸಿ ನೋಡಿದ. ಫಕೀರ ಫಕೀರನಂತೆ ಕಾಣಿಸಲಿಲ್ಲ. ಸಣ್ಣ ಸಣ್ಣ ಸ್ವಾರ್ಥಪರ ಆಸೆಗಳಿಂದ ಹೃದಯವನ್ನು ಸಂಯಮಿಸಿಕೊಂಡು ಒಂದೇ ಒಂದು ಹಿರಿಯ ಉದ್ದೇಶ ಹೊತ್ತಿದ್ದರೆ ಮುಖದಲ್ಲಿ ಯಾವ ಬಗೆಯ ಒಂದು ಉರಿಯಿಲ್ಲದ ಪವಿತ್ರ ಜ್ಯೋತಿ ಬೆಳಗುವುದೋ ಅದು ಫಕೀರನ ಮುಖದಲ್ಲಿ ಕಂಡುಬರಲಿಲ್ಲ. ಫಕೀರ ಯಾವಾಗಲೂ ಜಾಗರೂಕನಾಗಿರುವ, ಅಂಜುತ್ತಲಿರುವ. ಅವನ ಮನಸಿನ ಹಸಿದ ಬಯಕೆಗಳೆಲ್ಲ ಅವನ ಎರಡು ಉರಿಯುವ ಕಣ್ಣುಗಳಿಂದ ಬೆಂಕಿ ಕಾರುವಂತೆ ಇತ್ತು. ಚಂಚಲ ಹಿಂಸೆ ಅವನ ಬಿಗಿಯಾಗಿ ಕಚ್ಚಿದ್ದ ತುಟಿಗಳಲ್ಲೂ ಬಿಗಿಯಾಗಿ ಸೇರಿದ್ದ ಹಲ್ಲು ಸಂದಿನಲ್ಲೂ ಉಪಯೋಗವಿಲ್ಲದೆ ಪೆಟ್ಟುತಿಂದು ಪುನಃ ಹೃದಯದ ಕಗ್ಗತ್ತಲ ಗವಿಯಲ್ಲಿ ಹೊಕ್ಕು ತನ್ನನ್ನು ತಾನು ಕಚ್ಚಾಡುತ್ತಿರುವುದು. ಸಂಗಡ ಮೂವರು ಹುಡುಗರು. ಅವರುಗಳ ಅತ್ಯಂತ ಸುಕುಮಾರ ಸುಂದರ ದಣಿದು ಕುಂದಿದ ದೇಹವನ್ನೂ ಒಂದು ಬಗೆಯ ಗರ್ವಿತ ಸಂಕೋಚವನ್ನೂ ನೋಡಿದರೆ ಅವರುಗಳು ಹುಟ್ಟಿದ ಮೊದಲು ವಿಶೇಷ ಸೌಕರ್ಯದೊಡನೆ ಗೌರವದ ಶಿಖರದಲ್ಲಿ ನಲಿದಾಡಿದವರಂತೆಯೂ ಅವರುಗಳು ನೆಲದಮೇಲೆ ಕಾಲಿಡುವುದು ಇದೇ ಮೊದಲು ಎನ್ನುವಂತೆಯೂ ಕಾಣಿಸುತ್ತಿದ್ದರು. ನಡೆದರೆ ಕಾಲಿಗೆ ಧೂಳು ಮೆತ್ತಿಕೊಳ್ಳುವುದಲ್ಲವೆ. ಅದು ಇದುವರೆಗೆ ಅವರುಗಳಿಗೆ ಸ್ವತಃ ಅನುಭವವಿಲ್ಲದಂತೆ ಇತ್ತು. ಜಗದ ಈ ಧೂಳು ತುಂಬಿದ ಮಲಿನ ಬಡತನದಲ್ಲಿ ಹೆಜ್ಜೆಹೆಜ್ಜೆಗೂ ಪ್ರಪಂಚದಮೇಲೆ ಅವರುಗಳಿಗೆ ತಿರಸ್ಕಾರ ಉಂಟಾಗುತ್ತಿತ್ತು. ರತ್ನಕಂಬಳಿ ಮತ್ತು ನೆಲದ ಅಂತರನೋಡಿ ಪ್ರತಿಹೆಜ್ಜೆಗೂ ಅವರುಗಳು ಪ್ರಪಂಚವನ್ನು ತಿರಸ್ಕರಿಸುವರು. ಜಗತ್ತು ಅವರುಗಳಿಗೆ ಬಹಳ ಮೋಸಮಾಡಿ ಅವರ ಅಮೂಲ್ಯ ರತ್ನಗಂಬಳಿ

ಯನ್ನು ಕಿತ್ತುಕೊಂಡಿದೆ. ಎಲ್ಲವೂ ಅವರ ಬಳಿ ತಪ್ಪುಮಾಡುತ್ತಿರುವವು. ಬಡತನ ಭಿಕ್ಷೆಬೇಡುವುದಕ್ಕಾಗಿ ತನ್ನ ಕೊಳಕು ಬಟ್ಟೆಯನ್ನು ಹಿಡಿದು ಅವರ ಬೆನ್ನುಹತ್ತಲು ಸಾಹಸಪಡುತ್ತಿದೆ. ಇದು ಕೇವಲ ಅದರ ಎದೆಗಾರಿಕೆ. ಕೀಳು ನಾಯಿ ಬಳಿಗೆ ಬಂದೀತೆಂದು ಜನ ದೂರದಿಂದಲೆ ಆಹಾರ ಎಸೆಯುವರು. ಅದೇರೀತಿಯಲ್ಲಿ ಹಸಿದು ಕೊಳಕು ತುಂಬಿದ ಭಿಕ್ಷುಕನನ್ನು ಕಂಡರೆ ದೂರದಿಂದಲೆ ಮುಖ ತಿರುಗಿಸಿಕೊಂಡು ಒಂದು ಹಿಡಿ ಹೊನ್ನನ್ನು ಕಷ್ಟವಿಲ್ಲದೆ ಎಸೆಯಬಲ್ಲರು. ಅವರ ಕಣ್ಣಿಗೆ ಜಗತ್ತಿನ ಹೆಚ್ಚುಭಾಗ ಒಂದು ರೀತಿಯ ಕೀಳು ಮನೋಭಾವದಿಂದಲೂ ಚಿಂದಿ ಬಟ್ಟೆಯ ಬುದ್ಧಿಹೀನ ಹಿರಿಯ ಅವಿಧೇಯನಂತೆಯೂ ಕಾಣಿಸಿತು. ತಾವು ಜಗತ್ತಿನಲ್ಲಿ ಸುಖಿಗಳೂ ಮಾನ್ಯರೂ ಆಗದಿದ್ದುದು ಜಗತ್ತಿನ ತಪ್ಪು—

ಗೋವಿಂದಮಾಣಿಕ್ಯ ಇಷ್ಟೆಲ್ಲ ಯೋಚಿಸಿದ್ದ ಎನ್ನುವಂತಿಲ್ಲ. ಅವನು ಲಕ್ಷಣನೋಡಿಯೇ ತಿಳಿದುಕೊಂಡ. ಈ ಫಕೀರ ಆಸೆ ಆಕಾಂಕ್ಷೆಗಳನ್ನೆಲ್ಲ ತ್ಯಜಿಸಿ ಸ್ವತಂತ್ರನೂ ಸುಖಿಯೂ ಆಗಿ ಜಗತ್ತಿನ ಸೇವೆಮಾಡಲು ಹೊರಗೆ ಬಂದಿರುವನು ಎನ್ನುವಂತಿಲ್ಲ. ಇವನು ಕೇವಲ ತನ್ನ ಇಷ್ಟಾರ್ಥ ಈಡೇರಲಿಲ್ಲ ಎಂದು ರೇಗಿ ಜಗತ್ತಿನ ವಿಷಯದಲ್ಲಿ ದೂರವಾಗಿರುವನು. ತಾನು ಬಯಸಿದ್ದು ಈಡೇರಬೇಕು. ಜಗತ್ತು ತನ್ನ ಬಳಿ ಏನು ಬಯಸುವುದೊ ಅದನ್ನು ಅನುಕೂಲ ಅನುಸರಿಸಿ ಕೊಟ್ಟರೂ ಆಯಿತು, ಕೊಡದಿದ್ದರೂ ಯಾವ ನಷ್ಟವೂ ಇರದು ಎನ್ನುವುದು ಫಕೀರನ ನಂಬಿಕೆ. ಈ ನಂಬಿಕೆಯ ಅನುಸಾರ ಕೆಲಸ ನಡೆಯಲಿಲ್ಲವೆಂದು ಅವನು ಜಗತ್ತನ್ನು ಒಂದು ಬದಿಗಿಟ್ಟು ಹೊರಬಿದ್ದಿರುವನು.

ಗೋವಿಂದಮಾಣಿಕ್ಯನನ್ನು ನೋಡಿ ಫಕೀರನಿಗೆ ರಾಜನಂತೆಯೂ ಸಂನ್ಯಾಸಿಯಂತೆಯೂ ತೋರಿತು. ಅವನು ಈ ರೀತಿಯಲ್ಲಿ ನಿರೀಕ್ಷಿಸಿರಲಿಲ್ಲ. ಹೊಟ್ಟೆಡುಬ್ಬನೊಬ್ಬ ರುಮಾಲು ಸುತ್ತಿಕೊಂಡು ಉಬ್ಬಿದ ಮಾಂಸಖಂಡಗಳನ್ನು ತೋರಿಸಿಯಾನು. ಇಲ್ಲವೆ ದೈನ್ಯವೇಷ ಧರಿಸಿದ ಒಬ್ಬ ಮಲಿನ ಸಂನ್ಯಾಸಿ ಅಂದರೆ ಬೂದಿ ಬಳಿದುಕೊಂಡು ಧೂಳಿನ ಹಾಸಿಗೆಯಲ್ಲಿ ಮಲಗುವ ವಿಲಕ್ಷಣ ಎದೆಗಾರಿಕೆಯವನು ಕಂಡು ಬಂದಾನು ಎಂದು ಅವನು ಭಾವಿಸಿದ್ದ. ಆದರೆ ಎರಡರಲ್ಲಿ ಯಾವುದೂ ಕಂಡುಬರಲಿಲ್ಲ. ಗೋವಿಂದಮಾಣಿಕ್ಯನನ್ನು

ನೋಡಿ ಅವನು ಎಲ್ಲವನ್ನೂ ತ್ಯಾಗಮಾಡಿರುವನು ಆದರೆ ಎಲ್ಲವೂ ಅವನದೆ. ಅವನಿಗೆ ಏನೂ ಬೇಕಿಲ್ಲವಾದ್ದರಿಂದ ಎಲ್ಲವನ್ನೂ ಪಡೆದಿರುವನು. ಅವನು ಆತ್ಮಸಮರ್ಪಣೆ ಮಾಡಿರುವಂತೆಯೇ ಸಮಸ್ತ ಜಗವೂ ತಾನಾಗಿ ಅವನಿಗೆ ಅಧೀನವಾಗಿರುವುದು. ಯಾವ ಆಡಂಬರವೂ ಇಲ್ಲದ್ದರಿಂದಲೆ ಅವನು ರಾಜ. ಜಗತ್ತಿಗೆ ಅತಿ ಹತ್ತಿರದವನಾಗಿರುವುದರಿಂದ ಅವನು ಸಂನ್ಯಾಸಿ. ಇದರಿಂದ ರಾಜನ ವೇಷ ಹಾಕಬೇಕಾಗಿಲ್ಲ, ಸಂನ್ಯಾಸಿಯ ವೇಷವನ್ನೂ ಹಾಕಬೇಕಾಗಿಲ್ಲ—ಎಂದು ಅನಿಸಿತು.

ರಾಜ ತನ್ನ ಅತಿಥಿಗಳನ್ನು ಆದರದಿಂದ ಸ್ವಾಗತಿಸಿ ಸತ್ಕರಿಸಿದನು. ಅವರುಗಳು ಅವನ ಸೇವೆಯನ್ನು ಅತಿ ಅಲಕ್ಷ್ಯವಾಗಿ ಸ್ವೀಕರಿಸಿದರು. ಅದಕ್ಕೆ ಅವರಿಗೆ ಪೂರ್ಣ ಹಕ್ಕುಇದ್ದಂತೆ ನಡೆದುಕೊಂಡರು. ಅವರ ವಿಶ್ರಾಂತಿಗೆ ಏನೇನು ಸಾಮಗ್ರಿಗಳು ಆವಶ್ಯಕ ಎನ್ನುವುದನ್ನೂ ರಾಜನಿಗೆ ತಿಳಿಸಿದರು. ರಾಜ ದೊಡ್ಡ ಹುಡುಗನನ್ನು ಸ್ನೇಹದಿಂದ “ದಾರಿಯ ಕಷ್ಟದಿಂದ ಬಹಳ ದಣಿವಾಗುತ್ತಿದೆಯೆ” ಎಂದು ವಿಚಾರಿಸಿದ.

ಹುಡುಗ ಅದಕ್ಕೆ ಸರಿಯಾದ ಉತ್ತರ ಹೇಳದೆ ಫಕೀರನಿಗೆ ಅಂಟಿಕೊಂಡಂತೆ ಕುಳಿತುಕೊಂಡ. ರಾಜ ಅವರುಗಳ ಕಡೆ ನೋಡಿ ನಸುನಕ್ಕು “ನಿಮ್ಮಗಳ ಈ ಸುಕುಮಾರ ದೇಹ ದಾರಿಯಲ್ಲಿ ನಡೆಯುವುದಕ್ಕಾಗಲ್ಲ; ನೀವುಗಳು ನಮ್ಮ ಈ ದುರ್ಗದಲ್ಲೇ ವಾಸಮಾಡಿರಿ. ನಾನು ನಿಮಗೆ ಎಲ್ಲ ಅನುಕೂಲಗಳನ್ನು ಒದಗಿಸುವೆ” ಎಂದ.

ರಾಜನ ಈ ಮಾತಿಗೆ ಉತ್ತರ ಕೊಡಬೇಕೆ ಬೇಡವೆ; ಹಾಗೂ ಈ ಜನರೊಡನೆ ಯಾವ ಭಾವನೆಯಿಂದ ವ್ಯವಹರಿಸಬೇಕು ಎನ್ನುವುದು ಹುಡುಗರಿಗೆ ತಿಳಿಯಲಿಲ್ಲ. ಅವರುಗಳು ಫಕೀರನಿಗೆ ಅತಿ ಹತ್ತಿರದಲ್ಲಿ ಸೇರಿ ಕುಳಿತರು. ಎಲ್ಲಿಯವನೊ ಆದ ಇವನು ಕೊಳಕು ಕೈ ಚಾಚಿ ತಮ್ಮನ್ನು ತನ್ನವರನ್ನಾಗಿ ಮಾಡಿಕೊಳ್ಳಲು ಬಂದಿರುವನು ಎಂದು ಭಾವಿಸಿದರು.

ಫಕೀರ ಗಂಭೀರನಾಗಿ ಹೇಳಿದ—“ಒಳ್ಳೆಯದು, ನಾವು ಸ್ವಲ್ಪಕಾಲ ನಿಮ್ಮ ಈ ದುರ್ಗದಲ್ಲಿ ವಾಸಮಾಡಬಲ್ಲೆವು.” ರಾಜನಮೇಲೆ ಅನುಗ್ರಹ ತೋರಿದಂತೆ ನಡವಳಿಕೆ. “ನಾನು ಯಾರು ಎಂದು ತಿಳಿದರೆ ಈ

ಅನುಗ್ರಹಕ್ಕೂ ನಿಮ್ಮ ಆನಂದಕ್ಕೂ ಎಲ್ಲಿಯೋ ಇರದು" ಎಂದು ಮನಸ್ಸಿನಲ್ಲೇ ಹೇಳಿಕೊಂಡ.

ರಾಜನಿಗೆ ಆ ಮೂವರು ಹುಡುಗರನ್ನು ಒಗ್ಗಿಸಿಕೊಳ್ಳುವುದು ಯಾವ ಬಗೆಯಲ್ಲೂ ಸಾಧ್ಯವಾಗಲಿಲ್ಲ. ಫಕೀರ ಸಂಪೂರ್ಣ ನಿರ್ಲಿಪ್ತತೆಯಿಂದಿದ್ದ.

ಫಕೀರ ಗೋವಿಂದಮಾಣಿಕ್ಯನನ್ನು ವಿಚಾರಿಸಿದ, "ನೀವು ಒಂದು ಕಾಲದಲ್ಲಿ ರಾಜರಾಗಿದ್ದಿರೆಂದು ಕೇಳಿ ದ್ದೆ. ಎಲ್ಲಿಯ ರಾಜರು?"

"ತ್ರಿಪುರ" ಎಂದು ಗೋವಿಂದಮಾಣಿಕ್ಯನೆಂದ. ಇದನ್ನು ಕೇಳಿ ಹುಡುಗರು ಇವನು ಅತಿ ಸಾಮಾನ್ಯನಾದವನು ಎಂದು ಭಾವಿಸಿದರು. ಅವರು ಎಂದೂ ತ್ರಿಪುರದ ಹೆಸರು ಕೇಳಿರಲಿಲ್ಲ. ಆದರೆ ಫಕೀರ ಸ್ವಲ್ಪ ಚಂಚಲನಾದ. "ನಿಮ್ಮ ರಾಜ್ಯಹೋದದ್ದು ಹೇಗೆ?" ಎಂದು ಮತ್ತೆ ಪ್ರಶ್ನಿಸಿದ.

ಗೋವಿಂದಮಾಣಿಕ್ಯ ಕ್ಷಣಹೊತ್ತು ಸುಮ್ಮನಿದ್ದ—ಕಡೆಗೆ "ಬಂಗಾಳದ ನವಾಬ ಶಾಸೂಜ ನನ್ನನ್ನು ರಾಜ್ಯಬಿಟ್ಟು ಓಡಿಸಿದ" ಎಂದ. ನಕ್ಷತ್ರರಾಯನ ವಿಷಯವನ್ನೇ ಹೇಳಲಿಲ್ಲ.

ಈ ಮಾತನ್ನು ಕೇಳಿ ಹುಡುಗರೆಲ್ಲ ಬೆಚ್ಚಿಬಿದ್ದು ಫಕೀರನ ಮುಖದ ಕಡೆ ನೋಡಿದರು. ಫಕೀರನ ಮುಖ ಬಣ್ಣಗೆಟ್ಟಿತು. ಅವನು ಕೂಡಲೆ ಇವೆಲ್ಲ ನಿಮ್ಮ ತಮ್ಮನ ಕೆಲಸ ಇರಬಹುದು. ನಿಮ್ಮ ತಮ್ಮ ನಿಮ್ಮನ್ನು ರಾಜ್ಯದಿಂದ ಓಡಿಸಿ ಸಂನ್ಯಾಸಿಯನ್ನಾಗಿ ಮಾಡಿರಬಹುದು.

ರಾಜನಿಗೆ ಆಶ್ಚರ್ಯವಾಯಿತು—"ನಿಮಗೆ ಇಷ್ಟು ಸಂಗತಿ ಎಲ್ಲಿ ತಿಳಿಯಿತು. ಸಾಹೆಬ್" ಎಂದ. ಬಳಿಕ ಆಶ್ಚರ್ಯವೇನೂ ಇಲ್ಲ. ಯಾರಿಂದಲಾದರೂ ಕೇಳಿರಬಹುದು ಎಂದು ಭಾವಿಸಿಕೊಂಡ.

ಕೂಡಲೆ ಫಕೀರ—"ನನಗೆ ಏನೇನೂ ಗೊತ್ತಿಲ್ಲ. ನಾನು ಕೇವಲ ಊಹಿಸಿದೆ" ಎಂದ.

ರಾತ್ರಿಯಾಗಲು ಎಲ್ಲರೂ ಮಲಗಲು ಹೋದರು. ಆ ರಾತ್ರಿ ಫಕೀರನಿಗೆ ನಿದ್ರೆಹತ್ತಲಿಲ್ಲ. ಎಚ್ಚರವಾಗಿಯೇ ಇದ್ದು ಕೆಟ್ಟಕನಸು ಕಾಣುತಲಿದ್ದ. ಒಂದೊಂದು ಸದ್ದಿಗೂ ಹೆದರಿಕೊಳ್ಳುವನು.

ಮರುದಿನ ಫಕೀರ ಗೋವಿಂದಮಾಣಿಕ್ಯನೊಡನೆ "ವಿಶೇಷವಾದ ಕೆಲಸವಿರುವುದರಿಂದ ಇನ್ನು ಇಲ್ಲಿರಲು ಸಾಧ್ಯವಿಲ್ಲ. ಇಂದು ನಾವು ಹೊರಡುವೆವು" ಎಂದ.

"ಹುಡುಗರು ದಾರಿಯ ಕಷ್ಟದಿಂದ ದಣಿದುಹೋಗಿರುವರು. ಅವರಿಗೆ ಇನ್ನೂ ಸ್ವಲ್ಪ ವಿಶ್ರಾಂತಿ ಕೊಟ್ಟರೆ ಒಳ್ಳೆಯದು" ಎಂದು ಗೋವಿಂದ ಮಾಣಿಕ್ಯ ಹೇಳಿದ.

ಹುಡುಗರು ಸ್ವಲ್ಪ ಬೇಸರಗೊಂಡರು. ಅವರಲ್ಲಿ ಹಿರಿಯವ ಫಕೀರನ ಕಡೆ ನೋಡುತ್ತ "ನಾವು ಏನೂ ಅರಿಯದ ಮಕ್ಕಳಲ್ಲ. ಸಮಯ ಬಿದ್ದಾಗ ಆಯಾಸವಿಲ್ಲದೆ ಕಷ್ಟವನ್ನು ಸಹಿಸಬಲ್ಲೆವು" ಎಂದ. ಗೋವಿಂದಮಾಣಿಕ್ಯನ ಹತ್ತಿರ ಅವರು ಸ್ನೇಹ ಸ್ವೀಕರಿಸಲು ಸಿದ್ಧರಾಗಿರಲಿಲ್ಲ. ಗೋವಿಂದಮಾಣಿಕ್ಯ ಬೇರೆ ಏನೂ ಹೇಳಲಿಲ್ಲ.

ಫಕೀರ ಹೊರಡಲು ಸಿದ್ಧನಾಗುತ್ತಿರುವಾಗ, ದುರ್ಗಕ್ಕೆ ಇನ್ನೊಬ್ಬ ಅತಿಥಿ ಬಂದು ಸೇರಿದ. ಅವನನ್ನು ನೋಡಿ ರಾಜನೂ ಫಕೀರನೂ ಆಶ್ಚರ್ಯಗೊಂಡರು. ಏನು ಮಾಡುವುದು ಎನ್ನುವುದು ಫಕೀರನಿಗೆ ಹೊಳೆಯಲಿಲ್ಲ. ರಾಜ ತನ್ನ ಅತಿಥಿಗೆ ನಮಸ್ಕಾರ ಮಾಡಿದ. ಅತಿಥಿ ಬೇರೆ ಯಾರೂ ಅಲ್ಲ. ರಘುಪತಿ—ರಘುಪತಿ ರಾಜನ ನಮಸ್ಕಾರ ಸ್ವೀಕರಿಸಿ "ಜಯವಾಗಲಿ" ಎಂದ. ರಾಜ ಸ್ವಲ್ಪಹೆದರಿಕೆಯಿಂದ ನಕ್ಷತ್ರನ "ಹತ್ತಿರದಿಂದ ಬರುತ್ತಿರುವಿರಾ ಠಾಕೂರ್? ಏನಾದರೂ ವಿಶೇಷ ಉಂಟೇ?" ಎಂದು ಕೇಳಿದ.

"ನಕ್ಷತ್ರರಾಯ ಚೆನ್ನಾಗಿರುವನು. ಅವನಿಗಾಗಿ ಚಿಂತಿಸಬೇಡಿ" ಎಂದು ರಘುಪತಿ ಹೇಳಿದ. ಆಕಾಶದ ಕಡೆ ಕೈಎತ್ತಿ "ನನ್ನನ್ನು ಜಯಸಿಂಹ ನಿಮ್ಮ ಬಳಿಗೆ ಕಳುಹಿಸಿರುವನು. ಅವನು ಬದುಕಿಲ್ಲ. ಅವನ ಇಷ್ಟವನ್ನು ನಾನು ಈಡೇರಿಸಿರುವೆ. ಇಲ್ಲದಿದ್ದರೆ ನನಗೆ ಶಾಂತಿ ಇಲ್ಲ. ನಿಮ್ಮ ಬಳಿ ಇದ್ದು ನಿಮ್ಮ ಸಂಗಡಿಗನಾಗಿ ನಿಮ್ಮ ಎಲ್ಲ ಕೆಲಸಗಳಲ್ಲೂ ನೆರವಾಗುವೆ" ಎಂದು ಹೇಳಿದ.

ರಾಜನಿಗೆ ಮೊದಲು ರಘುಪತಿಯ ಭಾವ ಅರ್ಥವಾಗಲಿಲ್ಲ. ಅವನು ರಘುಪತಿ ಹುಚ್ಚನಾಗಿರಬಹುದು ಎಂದು ಮನದಲ್ಲಿ ಭಾವಿಸಿದ. ತೆಪ್ಪನಿದ್ದ.

ರಘುಪತಿ—“ ನಾನು ಎಲ್ಲವನ್ನೂ ನೋಡಿರುವೆ. ಯಾವುದರಲ್ಲೂ ಸುಖವಿಲ್ಲ. ಹಿಂಸೆ ಮಾಡಿದರೆ ಸುಖವಿಲ್ಲ. ಆಡಳಿತ ನಡೆಸಿದರೆ ಸುಖವಿಲ್ಲ. ನೀವು ಯಾವ ದಾರಿ ಹಿಡಿದಿರುವಿರೊ ಅದರಲ್ಲಿ ಸುಖ. ನಾನು ನಿಮ್ಮೊಡನೆ ಅತಿಯಾಗಿ ಹಗೆತನ ಸಾಧಿಸಿರುವೆ. ನಿಮ್ಮನ್ನು ಹಿಂಸಿಸಿರುವೆ. ನನ್ನಿದಿರಿನಲ್ಲಿ ನಿಮ್ಮನ್ನು ಬಲಿಕೊಡಿಸಲು ಪ್ರಯತ್ನಿಸಿರುವೆನು. ಇಂದು ನಿಮ್ಮ ಬಳಿ ನನ್ನನ್ನು ಸಂಪೂರ್ಣವಾಗಿ ಅರ್ಪಿಸಿಕೊಳ್ಳಲು ಬಂದಿರುವೆ ” ಎಂದು ಹೇಳಿದ.

ಗೋವಿಂದಮಾಣಿಕ್ಯನೆಂದ—“ ಠಾಕೂರ್, ನೀವು ನನಗೆ ಮಹದುಪಕಾರ ಮಾಡಿರುವಿರಿ. ನನ್ನ ಶತ್ರು ನನ್ನ ನೆರಳಿನಂತೆ ನನ್ನೊಡನೆಯೇ ಅಂಟಿಕೊಂಡಿತ್ತು. ಅದರ ಕೈಯಿಂದ ನೀವು ನನಗೆ ಬಿಡುಗಡೆ ಕೊಡಿಸಿದಿರಿ.”

ರಘುಪತಿ ರಾಜನಮಾತಿಗೆ ಅಷ್ಟಾಗಿ ಕಿವಿಗೊಡದೆ “ ಮಹಾರಾಜ, ನಾನು ಜಗದ ರಕ್ತಸುರಿದು ಯಾವ ಪಿಶಾಚಿಯನ್ನು ಇಷ್ಟು ದಿನ ಸೇವಿಸುತ್ತ ಬಂದಿರುವೆನೊ ಅದು ಕೊನೆಯಲ್ಲಿ ನನ್ನ ಹೃದಯದ ರಕ್ತವನ್ನೇ ಸಂಪೂರ್ಣವಾಗಿ ಶೋಷಿಸಿ ಪಾನಮಾಡಿರುವುದು. ಆ ರಕ್ತದಾಹಗೊಂಡಿರುವ ಜಡತಾ ಮೂಢತ್ವವನ್ನು ನಾನು ತೊಲಗಿಸಿ ಬಂದಿರುವೆ. ಅದು ಇಂದು ಮಹಾರಾಜರ ದೇವಾಲಯದಲ್ಲಿಲ್ಲ. ಈಗ ಅದು ರಾಜ ಸಭೆಯನ್ನು ಪ್ರವೇಶಿಸಿ ಸಿಂಹಾಸನ ಹತ್ತಿ ಕುಳಿತಿರುವುದು—” ಎಂದು ಹೇಳಿದ.

ರಾಜನೆಂದ —“ ದೇವಾಲಯದಿಂದ ದೂರವಾಗಿದ್ದರೆ ಕ್ರಮೇಣ ಮಾನವರ ಹೃದಯದಿಂದಲೂ ದೂರವಾದೀತು ”

ಹಿಂದುಗಡೆಯಿಂದ ಒಂದು ಪರಿಚಿತ ಸ್ವರ—ಇಲ್ಲ, ಮಹಾರಾಜ, ಮಾನವರ ಹೃದಯವೇ ಈಗ ದೇವಾಲಯ, ಅಲ್ಲೇ ನೂರಾರು ಸಾವಿರಾರು ನರಬಲಿ ನಡೆಯುವುದು—ಎಂದು ಹೇಳಿತು.

ರಾಜ ಆಶ್ಚರ್ಯದಿಂದ ತಿರುಗಿ ನೋಡಿದರೆ—ಸಹಾಸ್ಯ ಸೌಮ್ಯ ಮೂರ್ತಿ ಬಿಲ್ವನ—ಆತನಿಗೆ ನಮಸ್ಕಾರ ಮಾಡಿ ಬಿಗಿದ ದನಿಯಲ್ಲಿ “ ಇದು ನನಗೆ ಆದೆಷ್ಟು ಆನಂದ ” ಎಂದ.

ಬಿಲ್ವನನೆಂದ—" ಮಹಾರಾಜ, ನಿಮ್ಮನ್ನು ಜಯಿಸಿರುವುದರಿಂದಲೇ ನೀವು ಎಲ್ಲರನ್ನೂ ಜಯಿಸಿರುವಿರಿ. ಅದರಿಂದಲೆ ಇಂದು ನೀವು ನಿಮ್ಮ ಬಾಗಿಲಲ್ಲಿ ಶತ್ರು ಮಿತ್ರರೆಲ್ಲ ಒಂದಾಗಿರುವರು "

ಫಕೀರ ಮುಂದೆ ಬಂದು ಹೇಳಿದ—" ಮಹಾರಾಜ, ನಾನೂ ನಿಮ್ಮ ಶತ್ರು. ನಾನೂ ನಿಮ್ಮ ಕೈಗೆ ಸಿಕ್ಕಿಬಿದ್ದಿರುವೆ." ರಘುಪತಿಯ ಕಡೆಗೆ ಬೆರಳು ತೋರಿಸುತ್ತ " " ಈ ಬ್ರಾಹ್ಮಣ ಠಾಕೂರರು ನನ್ನನ್ನು ಬಲ್ಲರು. ನಾನೇ ಸೂಜ. ಬಂಗಾಳದ ನವಾಬ. ನಾನೆ ನಿಮ್ಮನ್ನು ತಪ್ಪಿಲ್ಲದೆ ದೇಶಭ್ರಷ್ಟ ನನ್ನಾಗಿ ಮಾಡಿದೆ. ಆ ಪಾಪಕ್ಕೆ ಶಿಕ್ಷೆಯನ್ನು ಪಡೆದಿರುವೆ.—ನನ್ನ ತಮ್ಮನ ಹಿಂಸೆ ಇಂದು ದಾರಿ ದಾರಿಯಲ್ಲಿ ನನ್ನನ್ನು ಬೆನ್ನಟ್ಟುತ್ತಿರುವುದು. ನನ್ನ ರಾಜ್ಯದಲ್ಲಿ ಇನ್ನು ನನಗೆ ನಿಲ್ಲಲು ಸ್ಥಳವಿಲ್ಲ. ನಾನು ಇನ್ನು ವೇಷ ಮರೆಸಿ ಕೊಂಡು ಇರಲಾರೆ. ನಿಮ್ಮ ಬಳಿ ಸಂಪೂರ್ಣವಾಗಿ ಆತ್ಮಸಮರ್ಪಣೆ ಮಾಡಿಕೊಂಡು ನಾನು ಬದುಕುವೆ " ಎಂದ.

ಆಗ ನವಾಬ ಸಂನ್ಯಾಸಿ ಇಬ್ಬರೂ ಪರಸ್ಪರ ಆಲಿಂಗಿಸಿಕೊಂಡರು. ರಾಜ—ಅದೆಷ್ಟು ಅದೃಷ್ಟ ನನ್ನದು—ಎಂದಿಷ್ಟು ಮಾತ್ರ ಹೇಳಿದ.

ರಘುಪತಿಯೆಂದ—" ಮಹಾರಾಜ ನಿಮ್ಮೊಡನೆ ಹಗೆತನ ಮಾಡಿದ್ದ ರಲ್ಲೂ ಲಾಭ ಇದೆ. ನಿಮ್ಮೊಡನೆ ಹಗೆತನ ಮಾಡಿದ್ದರಿಂದಲೇ ನಿಮ್ಮ ಬಳಿ ಸಿಕ್ಕಿಬಿದ್ದೆ. ಇಲ್ಲವಾದರೆ ಯಾವ ಕಾಲಕ್ಕೂ ನಿಮ್ಮನ್ನು ಅರ್ಥಮಾಡಿಕೊಳ್ಳು ತ್ತಿರಲಿಲ್ಲ."

ಬಿಲ್ವನ ನಕ್ಕು—" ನೇಣಿಗೆ ಸಿಕ್ಕಿ ನೇಣು ಕೀಳಲು ಹೋದರೆ ಮತ್ತಷ್ಟು ಬಲವಾಗಿ ಬೀರಿಕೊಳ್ಳುವುದು.

ರಘುಪತಿ—" ಇನ್ನು ನನಗೆ ದುಃಖವಿಲ್ಲ. ನನಗೆ ಶಾಂತಿ ಲಭಿಸಿತು " ಎಂದ.

" ಶಾಂತಿ–ಸುಖ ನಮ್ಮಲ್ಲೇ ಇರುವದು. ತಿಳಿಯುವುದಿಲ್ಲ ಮಾತ್ರ. ಭಗವಂತ ಮಣ್ಣಿನ ಮಡಕೆಯಲ್ಲಿ ಅಮೃತ ಇಟ್ಟಿರುವನು. ಆದರೆ ಅಮೃತ ಇದೆಯೆಂದು ಯಾರಿಗೂ ನಂಬಿಕೆಯಿರದು. ಪೆಟ್ಟು ತಗಲಿ ಮಡಕೆ ಒಡೆದು

ಹೋದಾಗ ಅಮೃತದ ರುಚಿ ತಿಳಿಯುವದು. ಅಯ್ಯೋ, ಅಯ್ಯೋ, ಇಂತಹ ವಸ್ತುವೂ ಇಂತಹ ಎಡೆಯಲ್ಲಿ ಇದ್ದಿತೆ ಎಂದು ಅರಿವಾಗುವದು."

ಈ ಸಮಯದಲ್ಲಿ ಆಕಾಶ ಸೀಳುವಂಥ "ಹೊ ಹೋ" ಎಂದು ಕೋಲಾಹಲವುಂಟಾಯಿತು. ನೋಡುತ್ತನೋಡುತ್ತ ದುರ್ಗದಲ್ಲಿ ಚಿಕ್ಕ ದೊಡ್ಡ ನಾನಾ ಬಗೆಯ ಮಕ್ಕಳು ಬಂದು ಸೇರಿದರು. ರಾಜ ಬಿಲ್ವನ ನೊಡನೆ "ಠಾಕೂರ್, ಇದೋ ನೋಡಿ ನನ್ನ ಧ್ರುವ" ಎಂದು ಹೇಳಿ ಹುಡುಗರನ್ನು ತೋರಿಸಿದನು.

ಬಿಲ್ವನ—"ಯಾರ ಪ್ರಸಾದದಿಂದ ನೀವು ಇಷ್ಟೊಂದು ಹುಡುಗರನ್ನು ಪಡೆದಿರೊ ಅವನೂ ನಿಮ್ಮನ್ನು ಮರೆತಿಲ್ಲ. ಅವನನ್ನು ಕರೆತರುವೆ" ಎಂದು ಹೇಳಿ ಹೊರಗೆ ಹೋದ. ಸ್ವಲ್ಪಹೊತ್ತಿನಲ್ಲೇ ಧ್ರುವನನ್ನು ಎತ್ತಿಕೊಂಡು ಬಂದು ರಾಜನ ಮಡಿಲಿಗೆ ಕೊಟ್ಟ.

ರಾಜ—ಅವನನ್ನು ಎದೆಗೆ ಅಪ್ಪಿಕೊಂಡು 'ಧ್ರುವ' ಎಂದು ಕರೆದ.

ಧ್ರುವ ಏನೂ ಹೇಳಲಿಲ್ಲ. ಗಂಭೀರವಾಗಿ ಮಾತಿಲ್ಲದೆ ರಾಜನ ಹೆಗಲಮೇಲೆ ತಲೆಯಿಟ್ಟು ಕುಳಿತ. ಬಹಳ ದಿವಸಗಳ ಅನಂತರ ಮೊದಲ ಭೇಟಿಯಲ್ಲಿ ಬಾಲಕನ ಕ್ಷುದ್ರ ಹೃದಯದಲ್ಲಿ ಒಂದು ರೀತಿಯ ಅವ್ಯಕ್ತ ದುಗುಡ ಮತ್ತು ನಾಚಿಕೆ ಇವುಗಳ ಹೃದಯವಾದಂತಿತ್ತು. ರಾಜನನ್ನು ಅಪ್ಪಿಕೊಂಡು ಮುಖ ಮುಚ್ಚಿಕೊಂಡಿದ್ದನು.

ರಾಜ—"ಎಲ್ಲವೂ ಆಯಿತು. ಕೇವಲ ನಕ್ಷತ್ರನೊಬ್ಬ ಮಟ್ಟಿಗೆ ನನ್ನನ್ನು ಅಣ್ಣ ಎನ್ನಲಿಲ್ಲ" ಎಂದ.

ಸೂಜ ತೀವ್ರಭಾವದಿಂದ—"ಮಹಾರಾಜ, ಎಲ್ಲರೂ ಅತಿಸಹಜದಲ್ಲಿ ಒಡಹುಟ್ಟಿದವರಂತೆ ನಡೆದುಕೊಳ್ಳುವರು. ಕೇವಲ ಸ್ವಂತ ಸೋದರರು ಮಾತ್ರ ಹಾಗೆ ಮಾಡರು" ಎಂದ.

ಸೂಜನ ಹೃದಯದಿಂದ ಇನ್ನೂ ಭಾರ ಹೊರಬಿದ್ದಿರಲಿಲ್ಲ.

# ಉಪಸಂಹಾರ

ಮೂವರು ಹುಡುಗರೂ ಸೂಜನ ವೇಷಮರೆಸಿಕೊಂಡಿದ್ದ ಮೂವರು ಹುಡುಗಿಯರು ಎನ್ನುವ ಅಂಶವನ್ನು ಇಲ್ಲಿ ಹೇಳುವುದು ಆವಶ್ಯಕ. ಸೂಜನು ಮಕ್ಕಾಕ್ಕೆಹೋಗುವ ಉದ್ದೇಶದಿಂದ ಚಟ್ಟಗ್ರಾಮದ ಬಂದರಿಗೆ ಹೋಗಿದ್ದನು. ಆದರೆ ದುರದೃಷ್ಟವಶಾತ್ ಅತಿವೃಷ್ಟಿಯ ಫಲವಾಗಿ ಒಂದು ಹಡಗೂ ಸಿಗಲಿಲ್ಲ. ಕೊನೆಗೆ ಹತಾಶನಾಗಿ ಹಿಂದಿರುಗುವಾಗ ದುರ್ಗದಲ್ಲಿ ಗೋವಿಂದಮಾಣಿಕ್ಯನೊಡನೆ ಭೇಟಿಯಾಯಿತು. ಕೆಲವು ದಿನಗಳು ದುರ್ಗದಲ್ಲಿ ವಾಸಿಸಿ ಸಮ್ರಾಟನ ಸೈನ್ಯ ಇನ್ನೂ ತನ್ನನ್ನು ಹುಡುಕುತ್ತಿದೆಯೆಂದು ಸುದ್ದಿ ತಿಳಿದನು. ಗೋವಿಂದಮಾಣಿಕ್ಯ ವಾಹನಗಳು ಮತ್ತು ಹಲವು ಅನುಚರರೊಡನೆ ಅವನನ್ನು ತನ್ನ ಸ್ನೇಹಿತ ಅರಕಾನ್‌ರಾಜನ ಬಳಿಗೆ ಕಳುಹಿಸಿಕೊಟ್ಟನು. ಹೋಗುವ ಸಮಯದಲ್ಲಿ ಸೂಜ ಅವನಿಗೆ ಬಹಳ ಬೆಲೆ ಬಾಳುವ ಕತ್ತಿಯೊಂದನ್ನು ಬಹುಮಾನವಾಗಿ ಕೊಟ್ಟನು.

ಈ ನಡುವೆ ರಾಜ, ರಘುಪತಿ ಮತ್ತು ಬಿಲ್ವನ ಎಲ್ಲರೂ ಕಲೆತು ಇಡೀ ಗ್ರಾಮವನ್ನು ಎಚ್ಚರಗೊಳಿಸಿದರು. ರಾಜನ ದುರ್ಗ ಇಡೀ ಗ್ರಾಮದ ಜೀವಾಳವಾಯಿತು.

ಈ ರೀತಿಯಲ್ಲಿ ಆರು ವರ್ಷ ಕಳೆಯಲು ಛತ್ರಮಾಣಿಕ್ಯ ಮೃತನಾದ. ಗೋವಿಂದಮಾಣಿಕ್ಯನನ್ನು ಸಿಂಹಾಸನಕ್ಕೆ ಹಿಂದಿರುಗಿಸಿ ಕರೆದೊಯ್ಯಲು ತ್ರಿಪುರದಿಂದ ದೂತ ಬಂದ.

ಗೋವಿಂದಮಾಣಿಕ್ಯ ಮೊದಲು "ನಾನು ರಾಜ್ಯಕ್ಕೆ ಹಿಂದಿರುಗೆನು" ಎಂದ.

ಬಿಲ್ವನನೆಂದ—"ಹಾಗೆ ಆಗುವುದಿಲ್ಲ ಮಹಾರಾಜ. ಧರ್ಮ ಯಾವಾಗ ತಾನಾಗಿ ಬಾಗಿಲಿಗೆ ಬಂದು ಕರೆಯುವದೊ ಆಗ ಅದನ್ನು ಅಲಕ್ಷ್ಯಮಾಡಬಾರದು."

ರಾಜ ತನ್ನ ವಿದ್ಯಾರ್ಥಿಗಳ ಕಡೆ ತಿರುಗಿ—"ನನ್ನ ಇಷ್ಟು ದಿನಗಳ ಆಶೆ ನೆರವೇರಿಲ್ಲ. ಇಷ್ಟು ದಿನಗಳ ಕಾರ್ಯ ಅಸಂಪೂರ್ಣವಾಗಿರಬೇಕೇನು ?" ಎಂದ.

ಬಿಲ್ವನ—"ಇಲ್ಲಿ ನಿಮ್ಮ ಕೆಲಸವನ್ನು ನಾನು ಮಾಡುವೆ" ಎಂದ.

ರಾಜನೆಂದ—"ನೀವು ಇಲ್ಲಿರುವುದಾದರೆ ಅಲ್ಲಿಯ ನನ್ನ ಕಾರ್ಯ ಅಸಂಪೂರ್ಣವಾಗಿಯೇ ಇರುವುದು."

ಬಿಲ್ವನನೆಂದ—"ಇಲ್ಲ ಮಹಾರಾಜ. ಈಗ ನಿಮಗೆ ನನ್ನ ಆವಶ್ಯಕತೆಯಿಲ್ಲ. ನೀವು ಈಗ ಸಂಪೂರ್ಣವಾಗಿ ನಿಮ್ಮ ಕೆಲಸ ಮಾಡಿಕೊಳ್ಳಬಲ್ಲಿರಿ. ಅವಕಾಶವಾದಾಗ ನಾನು ಆಗಾಗ ನಿಮ್ಮನ್ನು ಕಾಣಲು ಬರುವೆ."

ರಾಜ ಧ್ರುವನನ್ನು ಸಂಗಡ ಕರೆದುಕೊಂಡು ರಾಜ್ಯಕ್ಕೆ ಹಿಂದಿರುಗಿದ. ಧ್ರುವ ಈಗ ಎಳೆಯ ಹುಡುಗನಲ್ಲ. ಅವನು ಬಿಲ್ವನನ ದಯದಿಂದ ಸಂಸ್ಕೃತ ಕಲಿತು ಶಾಸ್ತ್ರ ವ್ಯಾಸಂಗಕ್ಕೆ ಮನಗೊಟ್ಟಿರುವನು. ರಘುಪತಿ ಮರಳಿ ಪೌರೋಹಿತ್ಯ ಸ್ವೀಕರಿಸಿರುವನು. ಈ ಸಲ ದೇವಾಲಯಕ್ಕೆ ಬಂದು ಸತ್ತ ಜಯಸಿಂಹನನ್ನು ಮರಳಿ ಜೀವಂತ ಭಾವದಲ್ಲಿ ಪಡೆದುಕೊಂಡಂತೆ ಆಯಿತು.

ಇತ್ತ ವಿಶ್ವಾಸಘಾತಕ ಅರಕಾನಿನ ರಾಜ ಸೂಜನನ್ನು ಕೊಂದು ಅವನ ಕಿರಿಯ ಮಗಳನ್ನು ಮದುವೆಯಾದ.

ನಿರ್ಭಾಗ್ಯ ಸೂಜನ ವಿಷಯದಲ್ಲಿ ಅರಕಾನ್ ರಾಜನ ದ್ರೋಹವನ್ನು ನೆನೆದು ಗೋವಿಂದಮಾಣಿಕ್ಯ ದುಃಖಿಸಿದ. ಸೂಜನ ಹೆಸರು ಎಂದೆಂದಿಗೂ ನೆನಪಿನಲ್ಲಿರಲು ಅವನು ಕೊಟ್ಟ ಕತ್ತಿಗೆ ಬದಲಾಗಿ ಬಹಳ ಹಣದಿಂದ ಕುಮಿಲ್ಲಾನಗರದಲ್ಲಿ ಒಂದು ಶ್ರೇಷ್ಠವಾದ ಮಸೀದಿ ಕಟ್ಟಿಸಿದ. ಅದು ಇಂದಿಗೂ ಸೂಜನ ಮಸೀದಿ ಎಂದು ಹೆಸರಾಗಿದೆ.

ಗೋವಿಂದಮಾಣಿಕ್ಯನ ಪ್ರಯತ್ನದಿಂದ ಮೆಹರ್‌ಕೂಲ್ ಜನಭರಿತವಾಗಿ ಏಳಿಗೆಗೆ ಬಂದಿತ್ತು. ಅವನು ಬ್ರಾಹ್ಮಣರಿಗೆ ವಿಶಾಲವಾದ ಭೂಮಿಯನ್ನು ತಾಮ್ರಶಾಸನ ಬರೆದು ದಾನಮಾಡಿದ. ಮಹಾರಾಜ ಗೋವಿಂದಮಾಣಿಕ್ಯ ಕುಮಿಲ್ಲದ ದಕ್ಷಿಣದಲ್ಲಿ ವಾತಿಸಾ ಎಂಬ ಹಳ್ಳಿಯಲ್ಲಿ ಒಂದು ಕೊಳ ತೋಡಿಸಿದ್ದ. ಅವನು ಅನೇಕ ಸತ್ಕಾರ್ಯಗಳನ್ನು ಆರಂಭಿಸಿದ. ಆದರೆ ಮುಗಿಸಲು ಆಗಲಿಲ್ಲ. ಇದರಿಂದ ದುಃಖಪಟ್ಟು ಕ್ರಿ.ಶ. ೧೬೬೯ ರಲ್ಲಿ ಮಾನವಲೀಲೆ ಮುಗಿಸಿದ—

(ಕಡೆಯ ಎರಡು ವಾಕ್ಯವೃಂದಗಳು ಶ್ರೀಯುತ ಬಾಬು ಕೈಲಾಸಚಂದ್ರ ಸಿಂಹರು ರಚಿಸಿದ ತ್ರಿಪುರದ ಚರಿತ್ರೆಯಿಂದ ತೆಗೆದದ್ದು—ಎಂದು ಮೂಲದಲ್ಲಿ ಬರೆದಿದೆ).

ದಿ ಜ್ಯೂಪಿಟರ್ ಪ್ರೆಸ್, ಬಳೇಪೇಟೆ ಬೆಂಗಳೂರು-೨.